
ರಂಜನೆ ಬೋಧನೆ ಪ್ರಚೋದನೆ


ಲಂಕೇಶ್

ಡಿಸೆಂಬರ್ 18, 2013 ಪುಟ 20 ರೂ. 15/-

ಸಂದರ್ಶನ




ನಾ. ಡಿಸೋಜ



ಗೊರವನಹಳ್ಳಿ ಮಹಾಲಕ್ಷ್ಮಿಗೆ ಶ್ರೀ ಶ್ರೀ ಗಡ್ಡಾ ಆನಂದನ ಕಾಟ

ಕರಾವಳಿ ಸ್ವರ್ಣವಲ್ಲಿ ಸ್ವಾಮಿಯ ಗೀತಾಗಾಯನ ಗಲಾಟೆ





ನಟಿ ಸೌಂದರ್ಯ ಕೊನೆಗೂ ಪಾಲಾದ ಆಸ್ತಿ

ನಾಗಮಂಗಲ ಇಸ್ಪೀಟ್ ದಂಧೆಕೋರರಿಗೆ ಮಂಡ್ಯ ಎಸ್ಪಿ ಗುನ್ನ




ಸಾರಿಗೆ ನೌಕರರ ಆತ್ಮಹತ್ಯೆಗಳು

“ಓದುಗರ ಅನುಭವ ವಿಸ್ತರಣೆಗಾಗಿ ಸಾಹಿತ್ಯ” ನಾ.ಡಿಸೋಜ

ಖ್ಯಾತ ಸಾಹಿತಿ ನಾ. ಡಿಸೋಜ ಅವರು ಮಡಿಕೇರಿಯಲ್ಲಿ ನಡೆಯಲಿರುವ 80ನೇ ಅಖಿಲ ಭಾರತ ಕನ್ನಡ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಜನಪರ ಮತ್ತು ಜನಪ್ರಿಯ ಲೇಖಕರಾದ ಡಿಸೋಜ ಅವರಿಗೆ ಲಂಕೇಶ್ ಬಳಗದ ಅಭಿನಂದನೆಗಳು. ಮಾರ್ಚ್ 1, 1995ರಲ್ಲಿ ಬಿ.ಎಸ್. ವೆಂಕಟಲಕ್ಷ್ಮಿ ಅವರು ಡಿಸೋಜ ಅವರೊಂದಿಗೆ ನಡೆಸಿದ್ದ ಸಂದರ್ಶನವನ್ನು ಇಲ್ಲಿ ನಮ್ಮ ಓದುಗರಿಗೆ ನೀಡುತ್ತಿದ್ದೇವೆ.

ಸಂದರ್ಶನ

ಸಂದರ್ಶಕಿ: ಬಿ.ಎಸ್.ವೆಂಕಟಲಕ್ಷ್ಮಿ



ಕನ್ನಡದಲ್ಲಿ ಸೃಜನಶೀಲ ಕೃತಿಗಳನ್ನು ಬರೆಯುತ್ತಿರುವ ಕ್ರಿಶ್ಚಿಯನ್ನರೇ ಅಪರೂಪ. ಹಿಂದೆ ಕೆಲವರು ಕನ್ನಡ ಭಾಷೆಗೆ ಕಾಣಿಕೆ ನೀಡಿದ್ದಾರಾದರೂ ಅವರು ಆರಿಸಿಕೊಂಡಿದ್ದ ಆಯಾಮವೇ ಬೇರೆ. ನಾ.ಡಿಸೋಜ - ನೊರ್ಬರ್ಟ್ ಡಿಸೋಜ- ಅವರನ್ನು ಭೇಟಿ ಮಾಡಬೇಕೆನ್ನಿಸುವುದು ಇದೊಂದೇ ಕಾರಣಕ್ಕಲ್ಲ, ಇವರು ಹೊಸ ಬಗೆಯ ವಸ್ತುವನ್ನು ಆಯ್ದುಕೊಂಡು ಬರೆಯಬಲ್ಲ ಸಾಮರ್ಥ್ಯವಿರುವ ಕನ್ನಡದ ಕೆಲವೇ ಬರಹಗಾರರಲ್ಲೊಬ್ಬರು ಎಂಬ ಕಾರಣಕ್ಕಾಗಿಯೂ ಸಹ. ಡಿಸೋಜ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತರು. ಹಲವಾರು ಸಂದರ್ಭಗಳಲ್ಲಿ ಪುರಸ್ಕೃತರು. ಅನೇಕ ಪ್ರತಿಭಾವಂತ ಲೇಖಕರನ್ನು ಹುಟ್ಟಿಸಿರುವ ಶಿವಮೊಗ್ಗ ಜಿಲ್ಲೆ ನಾ.ಡಿಸೋಜ ಅವರಿಗೂ ಜನ್ಮ ನೀಡಿದೆ. ಸಾಗರದಲ್ಲಿ ಶಾಲಾ ಮಾಸ್ತರಾಗಿದ್ದ ಫಿಲಿಪ್ ಡಿಸೋಜರ ನಾಲ್ವರು ಮಕ್ಕಳಲ್ಲೊಬ್ಬರಾದ ನೊರ್ಬರ್ಟ್ ಚಿಕ್ಕಂದಿನಲ್ಲೇ ತಂದೆಯಿಂದ ಕೇಳಿದ ಪದ್ಯಗಳು, ಸಾಗರದ ಹೈಸ್ಕೂಲಿನಲ್ಲಿ ಪಾಠ ಹೇಳುತ್ತಿದ್ದ ಗೊರೂರು ನರಸಿಂಹಾಚಾರ್ ತರಗತಿಯ ಕೊನೆಯ ಹತ್ತು ನಿಮಿಷಗಳ ಕಾಲ ಓದಿ ಹೇಳುತ್ತಿದ್ದ ಕಥೆ, ಕಾದಂಬರಿಗಳು ಇವುಗಳಿಂದಾದ ಪ್ರಭಾವ, ಸಾಹಿತ್ಯಾಸಕ್ತಿಗೆ ನರಸಿಂಹಾಚಾರ್ ಪ್ರತಿದಿನ ಮಕ್ಕಳಿಂದ ಹೇಳಿಸುತ್ತಿದ್ದ ಪ್ರಾರ್ಥನಾ ಗೀತೆಗಳು, ಈ ಮಾಸ್ತರ ಸಮ್ಮುಖದಲ್ಲಿ ಹುಡುಗರು ಬುಧವಾರ ಬಸವಣ್ಣನ ಬಗ್ಗೆ ಓದಬೇಕಾಗಿತ್ತು. ಹಾಗೆಯೇ ಗುರುವಾರ ಭಗವದ್ಗೀತೆ, ಶುಕ್ರವಾರ ಕುರಾನ್, ಶನಿವಾರ ಬೈಬಲ್ ಇವನ್ನು ಪಠಿಸಬೇಕಾಗಿತ್ತು. ತನ್ನ ಅಪ್ಪನಂತೆಯೇ ಡಿಸೋಜ ಎಂದೂ ಚರ್ಚ್‌ಗೆ ಹೋಗಲಿಲ್ಲ, ಪಾದ್ರಿಗಳ ಹಿಂದೆ ಅಡ್ಡಾಡಲಿಲ್ಲ. ಪಾದ್ರಿ ಇವರನ್ನು ಕರೆದು ಮೆಲ್ಲಗೆ “ನೊರ್ಬರ್ಟ್, ನೀನು ಕ್ರಿಶ್ಚಿಯನ್ ಹುಡುಗಾಪ್ಪಾ, ನಿನ್ನ ಶಾಲೆಯಲ್ಲಿ ಬೇರೆ ಧರ್ಮಗಳಿಗೆ ಸಂಬಂಧಿಸಿದ ಪ್ರಾರ್ಥನೆನ ಮಾಡ್ತಿರುವಾಗ ನೀನು ದೂರಹೋಗಿ ನಿಂತು ಬೈಬಲ್ ಮಾತ್ರ ಓದಬೇಕು” ಅಂತ ಉಪದೇಶ ನೀಡಿದಾಗ ಡಿಸೋಜ ಪಾದ್ರಿಗೆ ಎದುರು ಬಿದ್ದಿದ್ದರು. ವಿಧಿಗಳ ವಿರುದ್ಧ ಮಾತಾಡಿದ್ದರು. “ಕ್ರಿಸ್ತನ ಬಗ್ಗೆ ನಂಗೆ ಗೌರವವಿದೆ, ಆದರೆ ಇದೊಂದೇ ನಿಜವಾದ ಧರ್ಮವಲ್ಲ” ಅಂದಿದ್ದರು. ಪರಿಣಾಮ, ಚರ್ಚ್ ಇವರನ್ನು ಸಂಕೀರ್ತನೆಗಳಿಂದ ಹೊರಗಿಟ್ಟು ಇವರಿಗೆ ದಿವ್ಯಪ್ರಸಾದ ಕೊಡೋದನ್ನು ನಿಲ್ಲಿಸಿತು.

“ದೇವರ ಬಗ್ಗೆ ನಮ್ಮಲ್ಲಿ ಸುಂದರವಾದ ಕಲ್ಪನೆಗಳು ಇರೋದೇನೋ ಸರಿ. ನಾಣ್ಯಕ್ಕೆ ಲಕ್ಷ್ಮಿ, ಬುದ್ಧಿಗೆ ಸರಸ್ವತಿ, ನೀರಿಗೆ ಗಂಗೆ ಇಂಥ ರೂಪನ್ನು ಕೊಟ್ಟಾಗ ಭಾವುಕತೆ ಉಕ್ಕಬಹುದು. ಆದರೆ ಈ ಭಾವುಕತೇನೇ ಮನಸ್ಸಿನ ವೈಶಾಲ್ಯಕ್ಕೆ ಅಡ್ಡಿಯಾಗಕೂಡದು. ಜನರನ್ನು ಉತ್ತಮ ಮಾರ್ಗಕ್ಕೆ ಕೊಂಡೊಯ್ಯೋಕ್ಕೆ ಮಾತ್ರ ದೇವರು ಅಗತ್ಯವಾದರೆ ಅಡ್ಡಿಯಿಲ್ಲ,” ಡಿಸೋಜ ಸ್ಪಷ್ಟವಾಗಿ ಹೇಳ್ತಾರೆ.

* ಸರಿ. ನಿಮ್ಮ ಧರ್ಮದ ಬಗ್ಗೆ ನೀವು ನಿಖರವಾದ ನಿಲುವನ್ನು ಬೆಳೆಸಿಕೊಂಡಿರಿ. ಸಾಹಿತಿಯಾಗಬೇಕು ಎಂಬ ಹಂಬಲ ಗಟ್ಟಿಗೊಂಡಿದ್ದು ಹೇಗೆ?

ಶಿವಮೊಗ್ಗೆಯಲ್ಲಿ ಇಂಟರ್‌ಮೀಡಿಯಟ್ ಓದ್ತಿದ್ದಾಗ ಜಿಎಸ್‌ಎಸ್ ಮೇಷ್ಟ್ರಾಗಿದ್ದರು. ‘ಯಶೋಧರಾ’ ನಾಟಕವನ್ನು ಸೊಗಸಾಗಿ ಮಾಡೋರು. ಫಸ್ಟ್‌ಟರ್ಮ್ ಪರೀಕ್ಷೇಲಿ ಗ... ಗುಡ್ ಅನ್ನಿಸಿಕೊಂಡರೂ, ಕಥೆ, ಕಾದಂಬರಿ ಓ... ಚಟದಿಂದಾಗಿ ಪಾಠ ಹತ್ತಲಿಲ್ಲ. ಕನ್ನಡದಲ್ಲಿ ಪಾಸಾ... ಮಿಕ್ಕವುಗಳಲ್ಲಿ ನಂಬರು ಬರದೆ ಫೇಲಾದೆ. ನ... ಮೈಸೂರಲ್ಲಿ ನೆಲೆಸಿದಾಗ ಇಡೀದಿನ ಪಬ್ಲಿಕ್ ಲೈಬ್ರ... ಕೂತು ಕುವೆಂಪು, ಗೋಕಾಕ್, ಅನಕೃ, ತ.ರಾ.ಸು, ವಿ... ಅಣ್ಣಾರಾಯ, ಗೊರೂರು, ಪರ್ಲ್ ಎಸ್. ... ಸಾಮರ್‌ಸೆಟ್ ಮಾಂ, ಡಿಕನ್ಸ್ ಇವರ ಕಾದಂಬರಿಗ... ಓದ್ತಾ ಕಾಲ ಕಳೆದೆ. ನಾನು ಸಮಯ ಪೋಲು ಮಾಡ್ತಿ... ಅಂತ ಮನೆಯವರಿಗೆ ಗಾಬರಿಯಾದಾಗ ಅಣ್ಣ ಮುಂಬ... ಕರ್ಕೊಂಡು ಹೋಗಿ ಮಾತುಂಗಾದಲ್ಲಿನ ಕನ್ನಡ ಕಾಲೆ... ಸೇರಿಸೋ ಪ್ರಯತ್ನ ಮಾಡಿದ. ನಾನು ಒಲ್ಲೆ ... ಮತ್ತೆ ಮೈಸೂರಿಗೆ ವಾಪಾಸಾಗಿ ಟೈಪಿಂಗ್, ಶಾರ್ಟ್‌ಹ... ಕಲಿತೆ. 1956-57ರಲ್ಲಿ ನಿರುದ್ಯೋಗಿಯಾಗಿದ್ದಾಗ ‘ಪ್ರ... ಪತ್ರಿಕೆಗೆ ಬರೆದದ್ದೂ ಬರೆದದ್ದೇ. ಕಾದಂಬರಿಗಳಿಗಿಂತ... ಕಥೆ ಬರೆಯೋದ್ರಿಂದ ಖುಷಿ ಸಿಕ್ತಿತ್ತು. 195... ಲೋಕೋಪಯೋಗಿ ಇಲಾಖೆ ಸೇರಿದೆ. ಶರ... ಪ್ರಾಜೆಕ್ಟ್‌ನಲ್ಲಿ ಕೆಲಸ. ಪ್ರವಾಸ ಮಾಡೋದನ್ನು ಬ... ಬೇರೆ ಹವ್ಯಾಸವೇ ಇರ್ಲಿಲ್ಲ. ಪ್ರಹ್ಲಾದ ಕೊನೇರಿ ... ಫೋಟೋಗ್ರಾಫರಿದ್ದರು. ಅವರ ಜತೇಲಿ ಕರ್ನಾ... ಅಷ್ಟೂ ಪ್ರದೇಶಗಳನ್ನು ಸುತ್ತುತ್ತಿದ್ದೆ. ಬರವಣಿಗೆಯ ಪ್ರಾ... ವರ್ಷಗಳಲ್ಲಂತೂ ನಾನು ಓದಿದ್ದು ಬರೀ ಪ್ರಾಚ... ಸಂಗ್ರಹಾಲಯದ ವರದಿಗಳು.

* ನಿಮ್ಮ ಕೃತಿಗಳನ್ನು ಓದಿದಾಗ ಮೊ... ಅನ್ನಿಸೋದು ಕಲ್ಪನೆಗಿಂತಲೂ ಹೆಚ್ಚಾಗಿ ಅವು ಘಟನೆ... ಆಧರಿಸಿವೆ ಎಂದು. ನಿಮ್ಮ ‘ಮಹಾಕೂಟದ ದಾರಿ... ಅಂತ ಕಥೆಯೇ ಆಗಲಿ ಅಥವಾ ‘ದ್ವೀಪ’, ‘ಮುಳ... ‘ಒಡ್ಡು’, ‘ಗುಣವಂತೆ’ ಇಂಥ ಕಾದಂಬರಿಗಳೇ ... ಅವು ಒಂದು ನಿರ್ದಿಷ್ಟ ಸನ್ನಿವೇಶವನ್ನು ಪರಿಚ... ಕೊಡುತ್ತವೆ. ನಿಮ್ಮ ಬರವಣಿಗೆಯ ಕ್ರಮ ಎಂಥದ...

ಗಮನಿಸಿದ ವಿಷಯಾನ ಪುನರ್‌ಸೃಷ್ಟಿ ಮಾಡೋ... ಕ್ಯಾರೆಕ್ಟರ್ ಹಾಗೂ ಶಬ್ದಗಳನ್ನು ಸೃಷ್ಟಿಸೋದು ನಂಗೆ ತ... ಸಂತೋಷ ಕೊಡುತ್ತೆ. ಹಾಗೆಯೇ ಸನ್ನಿವೇಶದ ಮ... ವಿಷಯಾನ ಹೇಳೋದು ಸಹ. ಉದಾಹರಣೆಗೆ ಈಗ... ‘ಮಹಾಕೂಟದ ದಾರಿಯಲ್ಲಿ’ ಕಥೇನೇ ತಗೊಳ್ಳಿ. ... ಹಿನ್ನೆಲೆಗೆ ಒಂದು ರೋಮಾಂಚಕಾರಿ ಘಟನೆಯೇ ... ಒಮ್ಮೆ ಬಾದಾಮಿ, ಐಹೊಳೆ, ಪಟ್ಟದಕಲ್ಲು ... ತಿರುಗಾಡ್ತಿದ್ದಾಗ ಮಹಾಕೂಟ ದೇವಾಲಯಕ್ಕೆ ಹೊರ... ಬಾದಾಮಿ ರಸ್ತೆ ಎರಡಾಗಿ ಕವಲೊಡೆದು ಒಂದು ಬಾ... ರೈಲ್ವೆ ಸ್ಟೇಷನ್ನಿಗೆ, ಇನ್ನೊಂದು ಮಹಾಕೂಟಕ್ಕೆ ಕರೆದೊ... ನಾವು ಜಟಕಾ ಹತ್ತುತ್ತಿದ್ದ ಹಾಗೇ ಅಲ್ಲಿದ್ದವನೊಬ್ಬ... ಸಾಹೇಬ್ರೇ, ಅದು ಸ್ಟೇಷನ್ ಕುದುರೇರೀ... ... ಕುದುರಿ ಅಲ್ಲ, ಹತ್ಬೇಡೀ...” ಅಂತ ಕೂಗ್ತಲೇ ... ನಾವು ಲಕ್ಷ್ಯ ಮಾಡಲೇ ಇಲ್ಲ. ಕುದುರಿ ಎಂಥಾ ಸ್ಪೀ... ಸ್ಟೇಷನ್ ಕಡೆಗೆ ಓಡ್ಲಿಕ್ಕೆ ಶುರುಮಾಡ್ತು ಅಂದ್ರೆ, ... ಚಾಲಕ ಹೊಡೆದರೂ ಬಡಿದರೂ ಅದೆಲ್ಲೂ ನಿ... ಇಲ್ಲ. ಗಾಡಿಯವನು ಪಟ್ಟುಬಿಡಲಿಲ್ಲ. ... ಬೇಡಬೇಡವೆಂದರೂ ಕುದರೀಗೆ ಚಚ್ಚಿ ನಿಲ್ಲಿಸಿ ... ಕಣ್ಣಿಗೆ ದಪ್ಪನೆಯ ಬಟ್ಟೆ ಬಿಗಿದು ಅದನ್ನು ಮಹಾಕೂ... ಓಡಿಸಿದ. ಆಮೇಲೆ ನಮಗೆ ಗೊತ್ತಾಯ್ತು... ಮೂಕಪ್ರಾಣಿಗಳಲ್ಲಿ ಕೆಲವಕ್ಕೆ ಪ್ರವಾಸಿಗರನ್ನು ರೈಲ್ವೇ ಸ್ಟೇ... ಕೊಂಡೊಯ್ಯೋ ಹಾದಿ ಮಾತ್ರ ಅಭ್ಯಾಸವಾಗಿರುತ್ತೆ... ‘ಸ್ಟೇಷನ್ ಕುದುರಿ’. ಮಿಕ್ಕವಕ್ಕೆ ಪ್ರವಾಸಿತಾಣಗಳ ... ಗೊತ್ತು, ಇವು ‘ರೌಂಡ್ ಕುದುರಿ’. ಗಾಡಿಯವನು ... ಆಸೆಯಿಂದ ಸ್ಟೇಷನ್ ಕುದುರೀನ ಮಹಾಕೂಟಕ್ಕೆ ಓ... ಪ್ರಯತ್ನ ಮಾಡಿದ್ದಾಗ ಅದು ಪ್ರತಿಭಟಿಸಿತ್ತು. ಮಹಾ... ತಲುಪಿದಾಗ ಅಲ್ಲಿ ಆಗ್ತಾನೇ ವಿವಾಹವಾಗಿದ್ದ ... ದಂಪತಿಗಳಿಬ್ಬರು ದೇವಾಲಯದ ಶಿಲ್ಪ ವಿನ್ಯಾ... ಅಧ್ಯಯನ ಮಾಡ್ತಾ ಅಲ್ಲೇ ನೆಲೆಯೂರಿದ್ದು ಕ... ನಮ್ಮ ಪ್ರಯಾಣದ ಸಾಹಸ, ನಮ್ಮ ಹಾಗೂ ... ದಂಪತಿಗಳಲ್ಲಿನ ಸಾಮ್ಯ ವ್ಯತ್ಯಾಸಗಳು ಇವನ್ನೆಲ್ಲ ... ಬರೆದೆ.

ಇಂಥದ್ದೇ ಮತ್ತೊಂದು. 1959ರಲ್ಲಿ ಶಿವಮೊ... ಲಿಂಗನಮಕ್ಕಿ ಜಲಾಶಯ ನಿರ್ಮಾಣವಾಗ್ತಿದ್ದಾಗ ನಾ... ಸುಮಾರು 248 ಹಳ್ಳಿಗಳು ಮುಳುಗಿಹೋಗ... ದನಕರುಗಳನ್ನು ಸಾಕಿ ಜೀವನ ಮಾಡ್ತಿದ್ದ ಜನ ಸ್ವಸ್ಥ... ಕಾಲುಕೀಳಬೇಕಾದಾಗ ದಾರುಣ ದುಃಖ ಅನುಭವಿ...

⏭

ಸಾಗರದ ಚೇತನ ನಾ.ಡಿಸೋಜ

ಕೆಲವರು ಒಳನಾಡಿನಲ್ಲಿ ಎಲ್ಲೋ ಮೂಲೆಯಲ್ಲಿ ಕುಳಿತು ತಮ್ಮಷ್ಟಕ್ಕೆ ಸಾಹಿತ್ಯ ಕೃಷಿ ಮಾಡುತ್ತ ಇರುತ್ತಾರೆ. ಅಂಥವರಲ್ಲಿ ಪರಿಸರ ಕಾಳಜಿಯುಳ್ಳ ಮಹತ್ವದ ಕಥೆಗಾರ ನಾ. ಡಿಸೋಜ ಒಬ್ಬರು. ಮಕ್ಕಳ ಸಾಹಿತ್ಯ ಸೇರಿದಂತೆ ಹೊಸಗನ್ನಡದ ಹಲವು ಪ್ರಕಾರಗಳಲ್ಲಿ ಸಾಹಿತ್ಯ ಕೃಷಿ ಮಾಡಿದ್ದು ನಾ.ಡಿಸೋಜರ ವೈಶಿಷ್ಟ್ಯ.

ಶಿವಮೊಗ್ಗ ಜಿಲ್ಲೆಯ ಸಾಗರದಲ್ಲಿ 1937ರ ಜೂನ್ 6ರಂದು ಜನಿಸಿದ ನಾರ್ಬರ್ಟ್ ಡಿಸೋಜ ಅವರು ಓದಿನ ನಿಮಿತ್ತ ಶಿವಮೊಗ್ಗ, ಮೈಸೂರು ನಗರಗಳಲ್ಲಿ ಕೆಲವು ವರ್ಷ ಕಳೆದರೂ ಅವರ ವೃತ್ತಿ ಮತ್ತು ಪ್ರವೃತ್ತಿಗಳ ಕಾರ್ಯಕ್ಷೇತ್ರ ಸಾಗರ ಸುತ್ತಮುತ್ತಲ ಪ್ರದೇಶ.

ನಾರ್ಬರ್ಟ್ ಅವರ ತಂದೆ ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯ ಎಫ್.ಪಿ. ಡಿಸೋಜ, ತಾಯಿ ರೂಪೀನಾ ಡಿಸೋಜ. ತಂದೆ ಶಾಲಾಮಕ್ಕಳಿಗೆ ಕಲಿಸಲು ಬರೆದುಕೊಂಡಿದ್ದ ಪುಸ್ತಕಗಳಲ್ಲಿನ ಪದ್ಯಗಳನ್ನು ಕಲಿಯುವುದರ ಮೂಲಕ ಡಿಸೋಜ ಅವರ ಸಾಹಿತ್ಯಾಸಕ್ತಿ ಮೊಳಕೆ ಒಡೆದಿತ್ತು. ತಾಯಿ ಹೇಳುತ್ತಿದ್ದ ಜನಪದ ಗೀತೆಗಳು, ಕಥೆಗಳು ಡಿಸೋಜರ ಮನಸ್ಸಿನ ಮೇಲೆ ಪ್ರಭಾವ ಬೀರಿದ್ದವು. ಹೈಸ್ಕೂಲಿನಲ್ಲಿದ್ದಾಗಲೇ ಇವರ ಸಾಹಿತ್ಯಾಸಕ್ತಿ ಬೆಳಕಿಗೆ ಬಂದಿತ್ತು.

ಶಿವಮೊಗ್ಗದಲ್ಲಿ ಇಂಟರ್‌ಮೀಡಿಯೇಟ್ ಕಾಲೇಜು (ಈಗಿನ ಸಹ್ಯಾದ್ರಿ ಕಾಲೇಜು), ಮುಂದಿನ ಅಧ್ಯಯನಕ್ಕೆ ಮೈಸೂರಿಗೆ ಹೋದರೂ ಅಲ್ಲಿ ಸಾರ್ವಜನಿಕ ಪುಸ್ತಕ ಭಂಡಾರಗಳಲ್ಲಿ ಮಾಸ್ತಿ, ಕುವೆಂಪು, ಅ.ನ.ಕೃ., ಕಾರಂತ, ಗೋಕಾಕ್, ಗೊರೂರು ಇವರುಗಳ ಸಾಹಿತ್ಯ ಪರಿಚಯ ಮಾಡಿಕೊಂಡರು. ಬೆರಳಚ್ಚು ಮತ್ತು ಶೀಘ್ರಲಿಪಿ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿದ್ದು ಅವರ ವೃತ್ತಿಬದುಕಿಗೆ ಆಸರೆಯಾಯಿತು. ಲೋಕೋಪಯೋಗಿ ಇಲಾಖೆಯಲ್ಲಿ ಬೆರಳಚ್ಚುಗಾರ ಮತ್ತು ದ್ವಿತೀಯ ದರ್ಜೆ ಗುಮಾಸ್ತರಾಗಿ ಕೆಲಸ ಪಡೆದರು. ನಂತರ ಪ್ರಥಮ ದರ್ಜೆ ಗುಮಾಸ್ತರಾಗಿ ಬಡ್ತಿ ಪಡೆದು ಶರಾವತಿ ಯೋಜನೆಯ ಕಾರ್ಗಲ್, ಮಾಸ್ತಿಕಟ್ಟೆ, ತೀರ್ಥಹಳ್ಳಿ ಮುಂತಾದೆಡೆಗಳಲ್ಲಿ ಕಾರ್ಯ ನಿರ್ವಹಿಸಿ ನಿವೃತ್ತಿ ಹೊಂದಿದರು.

ಶರಾವತಿ ವಿದ್ಯುತ್ ಯೋಜನೆ ಅನುಷ್ಠಾನದ ಸಂದರ್ಭದಲ್ಲಿ ಗದ್ದೆ ತೋಟಗಳನ್ನು ಕಳೆದುಕೊಂಡ ರೈತ ಸಮುದಾಯ, ಸರ್ಕಾರದ ಯೋಜನೆಗೆ ಭೂಮಿಯನ್ನು ಬಿಟ್ಟು ಕೊಟ್ಟು ಪರಿಹಾರಕ್ಕಾಗಿ ಕಚೇರಿಗಳನ್ನು ಅಲೆದು ಜನತೆ ಪಡುತ್ತಿದ್ದ ಬವಣೆ, ಅಧಿಕಾರಶಾಹಿಯ ನಿರಂಕುಶ ವರ್ತನೆ ಮತ್ತು ಅಮಾನವೀಯ ನಡವಳಿಕೆಗಳನ್ನು ಸರ್ಕಾರಿ ಕಚೇರಿಯಲ್ಲಿದ್ದು ಕಣ್ಣಾರೆ ಕಂಡವರು ನಾ. ಡಿಸೋಜ. ಅವರ ಕಥೆ, ಕಾದಂಬರಿಗಳ ಜೀವದ್ರವ್ಯ ಅಲ್ಲಿನ ಬದುಕು ಮತ್ತು ಬವಣೆ.

ನಾ. ಡಿಸೋಜ ಮೊದಲಿಗೆ ‘ಪ್ರಪಂಚ’ ಪತ್ರಿಕೆಗೆ ಕಥೆಗಳನ್ನು ಬರೆಯತೊಡಗಿದರು. ನಂತರ ಎಲ್ಲ ಪ್ರಮುಖ ಪತ್ರಿಕೆಗಳಲ್ಲೂ ಇವರ ಕಥೆಗಳು ಪ್ರಕಟವಾಗತೊಡಗಿದವು. ಡಿಸೋಜರ ಮೊದಲ ಕಾದಂಬರಿ ‘ಬಂಜೆ ಬೆಂಕಿ’ ಪ್ರಕಟವಾದದ್ದು 1964ರಲ್ಲಿ, ನಂತರ ‘ಮಂಜಿನ ಕಾನು’, ‘ಈ ನೆಲ ಈ ಜಲ’, ‘ಕೆಂಪು ತ್ರಿಕೋನ’, ‘ನೆಲೆ’, ‘ಮಾನವ’ ಹೀಗೆ ಇವರು ಬರೆದಿರುವ ಕಾದಂಬರಿಗಳು ಸುಮಾರು 40. ಪರಿಸರ ನಾಶ, ಕ್ರೈಸ್ತ ಜನಾಂಗದ ಹಿನ್ನೆಲೆ, ಭ್ರಷ್ಟಾಚಾರದ ವಸ್ತು, ಹಿಂದುಳಿದ ಬುಡಕಟ್ಟು ಜನಾಂಗದ ಚಿತ್ರಣ ಹೀಗೆ ಹಲವು ಹತ್ತು ವಿಷಯಗಳನ್ನೊಳಗೊಂಡ ಅವರ ಕಾದಂಬರಿಗಳು ತಮ್ಮದೇ ಓದುಗರ ಬಳಗವನ್ನು ಸೃಷ್ಟಿಸಿಕೊಂಡಿವೆ. ಪತ್ರಿಕೆಗಳಿಗೆ ಇವರು ಬರೆದ ಸಣ್ಣ ಕಥೆಗಳ ಒಂಬತ್ತು ಸಂಕಲನಗಳು ಹೊರಬಂದಿವೆ. ಸಮಗ್ರ ಕಥೆಗಳ ಎರಡು ಸಂಪುಟಗಳು ಪ್ರಕಟವಾಗಿವೆ.

ನಾಡಿಗೆ ಬೆಳಕನ್ನು ನೀಡಲು ಪ್ರಾರಂಭಿಸಿದ ವಿದ್ಯುಚ್ಛಕ್ತಿ ಯೋಜನೆಯ ಅಡಿಯಲ್ಲಿ ಸಹಸ್ರಾರು ಜನರ ಬದುಕುಗಳು ಕತ್ತಲೆಯಲ್ಲಿ ಕರಗಿಹೋಗುವ ವಸ್ತುವನ್ನಾಗಿ ಉಳ್ಳ ‘ಮುಳುಗಡೆ’ ಕಾದಂಬರಿ, ಸುರೇಶ್ ಹೆಬ್ಳೀಕರ್ ನಿರ್ದೇಶನದಲ್ಲಿ ‘ಕಾಡಿನ ಬೆಂಕಿ’, ಗಿರೀಶ್ ಕಾಸರವಳ್ಳಿಯವರ ನಿರ್ದೇಶನದಲ್ಲಿ ‘ದ್ವೀಪ’, ಸಿರಿಗಂಧ ಶ್ರೀನಿವಾಸಮೂರ್ತಿಯವರ ನಿರ್ದೇಶನದಲ್ಲಿ ‘ಬಳುವಳಿ’, ಕೋಡ್ಲು ರಾಮಕೃಷ್ಣ ನಿರ್ದೇಶನದಲ್ಲಿ ‘ಬೆಟ್ಟದಪುರದ ದಿಟ್ಟ ಮಕ್ಕಳು’ ಮತ್ತು ಮನು ನಿರ್ದೇಶನದಲ್ಲಿ ‘ಅಂತರ್ಯ’ ಕಾದಂಬರಿಗಳು ಚಲನಚಿತ್ರಗಳಾಗಿ ಜನಮನ್ನಣೆ ಗಳಿಸಿದವು. ‘ಕಾಡಿನ ಬೆಂಕಿ’ ಚಿತ್ರ ರಜತ ಕಮಲ ಪ್ರಶಸ್ತಿಯನ್ನೂ, ‘ದ್ವೀಪ’ ಚಿತ್ರ ‘ಸ್ವರ್ಣ ಕಮಲ’ ಪ್ರಶಸ್ತಿಯನ್ನೂ ಗಳಿಸಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಹಿರಿಮೆ ಗಳಿಸಿವೆ. ದೂರದರ್ಶನ ಮಾಧ್ಯಮದಲ್ಲಿಯೂ ಮಕ್ಕಳ ಧಾರಾವಾಹಿ, ಕಥೆಗಳು, ಹಲವಾರು ಕಾದಂಬರಿಗಳು ನಾಟಕಕ್ಕೆ ರೂಪಾಂತರವಾಗಿ ಪ್ರದರ್ಶಿತವಾಗಿವೆ.

‘ಮುಳುಗಡೆ’, ‘ಕೊಳಗ’, ‘ಒಳಿತನ್ನು ಮಾಡಲು ಬಂದವರು’, ‘ಬಣ್ಣ’, ‘ಪಾದರಿಯಾಗುವ ಹುಡುಗ’, ‘ಇಬ್ಬರು ಮಾಜಿಗಳು’ ಮುಂತಾದ ಕಾದಂಬರಿಗಳು ನಾಡಿನ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಪಠ್ಯಗಳಾಗಿ ವಿದ್ಯಾರ್ಥಿ ಸಮುದಾಯಕ್ಕೆ ಅಧ್ಯಯನ ವಸ್ತು ಒದಗಿಸಿವೆ. ವಿಶೇಷವಾಗಿ ಮಕ್ಕಳ ಸಾಹಿತ್ಯದಲ್ಲಿ ಕೃಷಿ ಮಾಡಿರುವ ನಾ.ಡಿಸೋಜ ಮಕ್ಕಳ ಸಾಹಿತ್ಯದ ವಿವಿಧ ಪ್ರಕಾರದಲ್ಲಿ 12 ಕೃತಿಗಳನ್ನು ಪ್ರಕಟಿಸಿದ್ದಾರೆ. ಡಿಸೋಜ ಅವರ ಹಲವಾರು ಸಣ್ಣ ಕಥೆಗಳು ಕೊಂಕಣಿ, ಮಲಯಾಳಂ, ತೆಲುಗು, ಸಂಸ್ಕೃತ, ಹಿಂದಿ, ಇಂಗ್ಲಿಷ್ ಭಾಷೆಗೂ ಅನುವಾದಗೊಂಡಿವೆ. ತುಂಬಾಲು ಕಾದಂಬರಿಯು ತೆಲುಗು ಭಾಷೆಗೆ, ಪ್ರೀತಿಯೊಂದೇ ಸಾಲದೆ, ಜಲಪಾತದ ಸುತ್ತ, ಇಗರ್ಜಿ ಸುತ್ತಲಿನ ಹತ್ತು ಮನೆಗಳು, ಕಾಡಿನ ಬೆಂಕಿ, ತಿರುವು ಮುಂತಾದ ಕಾದಂಬರಿಗಳು ಕೊಂಕಣಿಗೆ, ಇಗರ್ಜಿ ಕಾದಂಬರಿ ಮತ್ತು ಬಾಲಗಂಧರ್ವ, ಏಸುಕ್ರಿಸ್ತ ಕೃತಿಗಳು ಇಂಗ್ಲಿಷ್‌ಗೂ, ನೇತ್ರಾಣಿ ಗುಡ್ಡಕ್ಕೆ ಯಾತ್ರೆ ಕೃತಿಯು ಹಿಂದಿ ಭಾಷೆಗೂ ಅನುವಾದಗೊಂಡಿದೆ.

ನಾ.ಡಿಸೋಜ ಅವರ ಸಾಹಿತ್ಯ ಕುರಿತು ಮದರಾಸು ವಿಶ್ವವಿದ್ಯಾಲಯ, ಮಧುರೆ ಕಾಮರಾಜ ವಿಶ್ವವಿದ್ಯಾಲಯ ಮತ್ತು ಕುವೆಂಪು ವಿಶ್ವವಿದ್ಯಾಲಯದಲ್ಲಿ ಸಂಶೋಧನಾ ವಿದ್ಯಾರ್ಥಿಗಳು ಸಲ್ಲಿಸಿದ ಮಹಾ ಪ್ರಬಂಧಗಳಿಗೆ ಎಂ.ಫಿಲ್ ಪದವಿ ಲಭಿಸಿದೆ. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ‘ನಾ. ಡಿಸೋಜ ಒಂದು ಸಾಂಸ್ಕೃತಿಕ ಅಧ್ಯಯನ’ ಕುರಿತು ಸಲ್ಲಿಸಿದ ಮಹಾ ಪ್ರಬಂಧಕ್ಕೆ ಡಾಕ್ಟರೇಟ್ ಪದವಿ ನೀಡಲಾಗಿದೆ.


ನಾ. ಡಿಸೋಜ ಅವರು ಕರ್ನಾಟಕ ಸಾಹಿತ್ಯ ಅಕಾಡಮಿ, ಕೊಂಕಣಿ ಸಾಹಿತ್ಯ ಅಕಾಡಮಿ, ಪುಸ್ತಕ ಪ್ರಾಧಿಕಾರ, ಕುವೆಂಪು ವಿಶ್ವವಿದ್ಯಾಲಯದ ಸೆನೆಟ್, ಹಂಪಿ ಕನ್ನಡ ವಿಶ್ವವಿದ್ಯಾಲಯದ ಸೆನೆಟ್, ಶಿವಮೊಗ್ಗ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಆಡಳಿತ ಪರಿಷತ್, ಕುವೆಂಪು ರಂಗ ಮಂದಿರ, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮುಂತಾದ ಸಂಸ್ಥೆಗಳಲ್ಲಿ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ.

ಕರ್ನಾಟಕ ಸಾಹಿತ್ಯ ಅಕಾದೆಮಿ ಪುರಸ್ಕಾರ, ಗುಲ್ವಾಡಿ ವೆಂಕಟರಾವ್ ಪ್ರಶಸ್ತಿ ಸಂದೇಶ ಸಾಹಿತ್ಯ ಪ್ರಶಸ್ತಿ, ನಿರಂಜನ ಸಾಹಿತ್ಯ ಪ್ರಶಸ್ತಿ, ಆಳ್ವಾಸ್ ನುಡಿಸಿರಿ ಪ್ರಶಸ್ತಿ, ವರ್ಧಮಾನ ಪ್ರಶಸ್ತಿ, ಚಿತ್ರದುರ್ಗದ ಬೃಹನ್ಮಠದಿಂದ ಡಾ. ಶಿವಮೂರ್ತಿ ಮುರುಘ ಶರಣ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾದೆಮಿಯ ಬಾಲ ಸಾಹಿತ್ಯ ಪುರಸ್ಕಾರ, ಮಾಸ್ತಿ ಪ್ರಶಸ್ತಿ, ಭಟ್ಕಳ ತಾಲ್ಲೂಕು ದ್ವಿತೀಯ ಸಾಹಿತ್ಯ ಸಮ್ಮೇಳನಾಧ್ಯಕ್ಷತೆ, ಮುಂಬೈಯ ಅಖಿಲ ಭಾರತ ಸಂಸ್ಕೃತಿ ಸಮ್ಮೇಳನದ ಅಧ್ಯಕ್ಷತೆ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಮತ್ತು ಕುವೆಂಪು ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಮುಂತಾದ ಗೌರವ, ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ನಾ. ಡಿಸೋಜ ಅವರಿಗೆ ಅಭಿಮಾನಿಗಳು 1993ರಲ್ಲಿ ‘ನಾ.ಡಿಸೋಜ’ ಅಭಿನಂದನ ಗ್ರಂಥ ಅರ್ಪಿಸಿ ಗೌರವಿಸಿದ್ದಾರೆ.

ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಆಡಳಿತ ಮಂಡಲಿ, ಕೊಂಕಣಿ ಸಾಹಿತ್ಯ ಅಕಾಡೆಮಿ, ಕನ್ನಡ ಪುಸ್ತಕ ಪ್ರಾಧಿಕಾರ, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗಾ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಆಡಳಿತ ಪರಿಷತ್ತುಗಳಲ್ಲಿ ಸದಸ್ಯರಾಗಿ ಕರ್ತವ್ಯ ನಿರ್ವಹಿಸಿದ್ದಾರೆ.

● ಲಕ್ಷ್ಮಣ್ ಕೊಡಸೆ

ಈಕೆ ಪ್ರತಿ ಮಹಿಳೆಯ ದನಿಯೂ, ಪ್ರತಿನಿಧಿಯೂ ಹೌದು




"ದಂಗೆ ಎದ್ದಿರುವ ಶತಕೋಟಿ ಮಹಿಳೆಯರು. ನಾನು ಪ್ರತಿ ಮಹಿಳೆ. ರಸ್ತೆಯಲ್ಲಿ ನಡೆದುಹೋಗುತ್ತಿರುವಾಗ ಶೀಟಿಗಳಿಗೆ ಗುರಿಯಾದ; ತಡವಿಸಿಕೊಂಡ, ತಿವಿಸಿಕೊಂಡ, ಕಾಮುಕದೃಷ್ಟಿಗೆ ಬಲಿಯಾದ, ಹಿಂಡಿಸಿಕೊಂಡ, ಚಿವುಟಿಸಿಕೊಂಡ, ಉಜ್ಜಿಸಿಕೊಂಡ ಪ್ರತಿ ಮಹಿಳೆ. ಹಿಂಜರಿಯುತ್ತಲೇ ನನ್ನ ರಕ್ಷಣೆಗೆ ಭುಜವನ್ನು ನೆಟ್ಟಗೆ ಮಾಡಿಕೊಂಡು, ಮೊಣಕೈಯಿಂದ ತಿವಿಯುತ್ತಾ ಜಾಗ ಮಾಡಿಕೊಂಡು ಮುಂದೆ ಸಾಗುವ ಮಹಿಳೆ ನಾನು. ಮೈಮುಚ್ಚಿಕೊಂಡೋ, ಬಟ್ಟೆಯನ್ನು ಕಿತ್ತಸೆದೋ, ವಸ್ತ್ರಗಳ ಹಿಂದೆ ಅಡಗಿಯೋ ಬದುಕುವ ಪ್ರತಿ ಮಹಿಳೆ ನಾನು. ನೇರವಾಗಿ ದಿಟ್ಟಿಸುವ ಅಥವಾ ನೆಲವನ್ನೇ ನೋಡುತ್ತಾ ನಡೆಯುವ ಪ್ರತಿ ಮಹಿಳೆ. ಕಣ್ಣಲ್ಲಿ ಕಣ್ಣಿಟ್ಟು ನೋಡಲು, ನಗಲೂ ಹೆದರುವ ಮಹಿಳೆ. ಎಲ್ಲಿಗೆ ಹೋಗಬೇಕು, ಯಾವಾಗ ಹೋಗಬೇಕು, ಯಾರೊಂದಿಗೆ ಹೋಗಬೇಕು ಎಂದೆಲ್ಲ ಹೇಳಿಸಿಕೊಳ್ಳುವ ಪ್ರತಿ ಮಹಿಳೆ. ನೀನು ಸೃಷ್ಟಿಸಿರುವ ಎಲ್ಲಾ ನಿಯಮಗಳನ್ನು ಪಾಲಿಸುವ ಮಹಿಳೆ. ನನ್ನ ದೇಹಕ್ಕಾಗಿ, ವರದಕ್ಷಿಣೆನಾಗಿ ಬಡಿಸಿಕೊಂಡಿರುವ, ಅತ್ಯಾಚಾರಕ್ಕೆ ಗುರಿಯಾಗಿರುವ, ಬೆಂಕಿ ಹಚ್ಚಿಸಿಕೊಂಡಿರುವ, ಕೊಲೆಯಾಗಿರುವ ಪ್ರತಿ ಮಹಿಳೆ ನಾನು. ನನ್ನ ಮೇಲೆ ಅತ್ಯಾಚಾರವೆಸಗಿದವನನ್ನೇ ಬಲವಂತವಾಗಿ ಮದುವೆಯಾದ ಮಹಿಳೆ ನಾನು. ಪ್ರೀತಿಸಿದ್ದಕ್ಕೆ, ಪ್ರೀತಿಸದಿದ್ದಕ್ಕೆ ಕೊಲೆಯಾದ ಮಹಿಳೆ ನಾನು. ಹೆಣ್ಣಾಗಿ ಹುಟ್ಟಿದ್ದಕ್ಕೆ ಕೊಲೆಯಾದ ಮಹಿಳೆ ನಾನು. ಈ ಎಲ್ಲ ಅನ್ಯಾಯಗಳ ವಿರುದ್ಧ ಸೆಟೆದೆದ್ದು ನಿಂತಿರುವ ಮಹಿಳೆಯೂ ನಾನು. ಧೈರ್ಯದಿಂದ ದುಡಿಯುವ, ಹಣ ಸಂಪಾದಿಸುವ ಮಹಿಳೆ ನಾನು. ನನ್ನ ಬಗ್ಗೆ ನಿನ್ನ ಅಭಿಪ್ರಾಯವೇನು ಎಂದು ಚಿಂತಿಸದ ಮಹಿಳೆ ನಾನು. ಒಂದಿಷ್ಟು ಕುಡಿಯುವ, ಜೋರಾಗಿ ನಗುವ, ಲಿಂಗಾಸಕ್ತಿ ಹೊಂದಿರುವ ಪ್ರತಿ ಮಹಿಳೆ ನಾನು. ನನ್ನ ಚಿಂತನೆ, ನನ್ನ ದೇಹ, ನನ್ನ ಬದುಕಿನ ಮೇಲೆ ಸಂಪೂರ್ಣ ಅಧಿಕಾರ ಹೊಂದಿರುವ ಪ್ರತಿ ಮಹಿಳೆ ನಾನು. ಇಲ್ಲಿ ನನ್ನ ಪ್ರತಿರೋಧದ ಕತೆಗಳಿವೆ..."

ಇವು ಇದೇ ವರ್ಷ ಫೆಬ್ರವರಿ ತಿಂಗಳಲ್ಲಿ ಅನ್ಯಾಯಗಳ ವಿರುದ್ಧ ಮಹಿಳೆಯರ ಹೋರಾಟವನ್ನು ಕುರಿತು ಪ್ರಕಟಗೊಂಡಿದ್ದ ತೆಹೆಲ್ಕಾ ವಿಶೇಷ ಸಂಚಿಕೆಯೊಂದರ ಮುಖಪುಟದಲ್ಲಿದ್ದ ಸಾಲುಗಳು. ಈಗ ಅದೇ ಪತ್ರಿಕೆಯ ಸಂಪಾದಕ ತರುಣ್ ತೇಜ್‌ಪಾಲ್‌ನನ್ನು ಪೊಲೀಸರು ಬಂಧಿಸಿದ್ದಾರೆ ಮತ್ತು ಅದೇ ಸಂಚಿಕೆಯಲ್ಲಿ ಮಹಿಳೆಯರ ಹೋರಾಟವನ್ನು ಕುರಿತು ಒಂದು ಲೇಖನವನ್ನು ಬರೆದಿದ್ದ ಯುವ ಪತ್ರಕರ್ತೆ ತನ್ನ ಮೇಲೆ ತೇಜ್‌ಪಾಲ್ ಎಸಗಿದ ಅತ್ಯಾಚಾರದ ವಿರುದ್ಧ ದಂಗೆ ಎದ್ದಿದ್ದಾಳೆ. ಆ ಮೂಲಕ ಆಕೆ ನಿಜವಾಗಲೂ 'ಪ್ರತಿ ಮಹಿಳೆ'ಯ ದನಿಯಾಗಿದ್ದಾಳೆ.

ಆ ಯುವತಿಗಿನ್ನೂ 26ರ ಪ್ರಾಯ. ಈಗತಾನೇ ತನ್ನ ಪತ್ರಿಕೋದ್ಯಮ ವೃತ್ತಿಯಲ್ಲಿ ಕಾಲೂರುತ್ತಿರುವವಳು. ಆರ್ಥಿಕವಾಗಿ ಆಕೆ ಬಲಿಷ್ಠಳೇನಲ್ಲ. ಹಲವಾರು ವರ್ಷಗಳ ಹಿಂದೆ ಆಕೆಯ ಪತ್ರಕರ್ತ ತಂದೆಗೆ ರಸ್ತೆಯ ಅಪಘಾತದಲ್ಲಿ ಮೆದುಳಿಗೆ ಗಾಯಗಳಾಗಿ ಅವರೀಗ ತಾನು ಯಾರು, ತಾನು ಎಲ್ಲಿದ್ದೇನೆ ಎಂದೂ ಅರಿಯದ ಸ್ಥಿತಿಯಲ್ಲಿದ್ದಾರೆ. ಆಕೆಯ ತಾಯಿಯೇ ದುಡಿದು ಗಂಡನನ್ನೂ, ಮಗಳನ್ನೂ ಸಾಕಿದ್ದಾರೆ, ಪೋಷಿಸಿದ್ದಾರೆ. ಹಿಂದೊಮ್ಮೆ ತಂದೆಯ ಸಹೋದ್ಯೋಗಿಯಾಗಿದ್ದ, ಯುವತಿಯನ್ನು ಚಿಕ್ಕ ಹುಡುಗಿಯಾಗಿದ್ದಾಗಿನಿಂದಲೂ ಕಂಡಿದ್ದ, ತಂದೆಯ ಸ್ಥಾನದಲ್ಲಿದ್ದು ಆಕೆಗೆ ಹಲವಾರು ಬಾರಿ ಜೀವನದ ಬಗ್ಗೆ ಸಲಹೆ, ಸೂಚನೆಗಳನ್ನು ನೀಡಿದ್ದ ಆತನ ಮಗಳ ಆಪ್ತ ಗೆಳತಿಯಾಗಿದ್ದ, ತೇಜ್‌ಪಾಲನನ್ನು ಗೌರವಿಸುತ್ತಿದ್ದ ಯುವತಿಯ ಮೇಲೆಯೇ ಆತ ಅತ್ಯಾಚಾರವೆಸಗಿದ್ದರಿಂದ ಆಕೆಗೆ ಅದೆಷ್ಟು ಘಾಸಿಯಾಗಿರಬೇಕೆಂದು ಊಹಿಸಲೂ ಆಗದು.

ಈಗ ತಾನು ಇಷ್ಟಪಡುತ್ತಿದ್ದ ಕೆಲಸವನ್ನು ಕಳೆದುಕೊಂಡಿದ್ದರೂ, ಅದರಿಂದ ಬರುತ್ತಿದ್ದ ಆರ್ಥಿಕ ನೆಮ್ಮದಿಯೂ ಇಲ್ಲದಂತಾಗಿದ್ದರೂ, ತನ್ನ ಉದ್ದೇಶವನ್ನು ಹಲವು ಜನರು ಪ್ರಶ್ನಿಸುತ್ತಿದ್ದರೂ ಆ ಯುವತಿ ದಿಟ್ಟವಾಗಿ ನಿಂತಿದ್ದಾಳೆ. ಆ ಮೂಲಕ ಆಕೆ ಪ್ರಜ್ಞಾವಂತರ ಪ್ರಶಂಸೆಗೆ ಕಾರಣವಾಗಿದ್ದಾಳೆ.

ಗೋವಾದಲ್ಲಿ ತೇಜ್‌ಪಾಲ್ ಆಯೋಜಿಸಿದ್ದ 'ಥಿಂಕ್‌ಫೆಸ್ಟ್' ಸಂದರ್ಭದಲ್ಲಿ ಲಿಫ್ಟ್‌ನಲ್ಲಿ ತೇಜ್‌ಪಾಲ್ ಆ ಯುವತಿಯ ಮೇಲೆ ಎಂತಹ ಘೋರ ದಾಳಿ ಮಾಡಿದ ಎಂಬ ವಿವರಗಳು ಇಲ್ಲಿ ಅನಗತ್ಯ. ಯಾವುದು ಅಗತ್ಯವೆಂದರೆ ಆನಂತರದ ದಿನಗಳಲ್ಲಿ ಆತ ತನ್ನ ವರ್ತನೆಯನ್ನು ಸಮರ್ಥಿಸಿಕೊಳ್ಳಲು ಮಾಡಿದ ತಿಪ್ಪರಲಾಗಗಳು. ಮೊದಲು "ನಾನು ತಪ್ಪು ಮಾಡಿದ್ದೇನೆ" ಎಂದು ಒಪ್ಪಿಕೊಂಡಿದ್ದ ತೇಜ್‌ಪಾಲ್ ಆನಂತರ "ಅದು ಕುಡಿದ ಅಮಲಿನಲ್ಲಿ ಮಾಡಿದ ಕುಚೋದ್ಯ" ಎಂದ. ಆಮೇಲೆ "ಅದು ಆಕೆಯ


Tehelka
ISSUE 08
ONE BILLION RISING
I AM EVERY WOMAN.
I AM EVERY WOMAN WHO'S EVER BEEN WHISTLED AT WALKING DOWN THE STREET.
SUNG AT + GROPED AT + THRUST AT + LEERED AT + LUSTED AT
SQUEEZED. PINCHED. BRUSHED AGAINST.
I AM EVERY WOMAN WHO SQUARES HER SHOULDERS, PUSHES HER ELBOWS OUT, DEFENSIVELY, WARILY. EVERY WOMAN WHO COVERS UP, DRESSES DOWN, HIDES BEHIND. WHO STARES STRAIGHT AHEAD OR AT THE GROUND, AFRAID TO MAKE EYE CONTACT. TO SMILE. I AM EVERY WOMAN WHO IS TOLD WHERE TO GO, WHEN TO GO THERE, WHO TO GO THERE WITH. AND EVEN THOUGH I DO ALL THESE THINGS, PLAY THE GAME BY THE RULES YOU MAKE.
I AM EVERY WOMAN WHO HAS BEEN BEATEN, RAPED, BURNT, MURDERED.
FOR MY BODY. FOR MY DOWRY. I AM EVERY WOMAN FORCED TO MARRY HER RAPIST. I AM EVERY WOMAN KILLED FOR BEING IN LOVE AND FOR NOT BEING IN LOVE. I AM EVERY WOMAN KILLED FOR BEING BORN.
I AM ALSO EVERY WOMAN WHO FIGHTS BACK.
WHO RAISES HER CHIN. I AM EVERY WOMAN WHO WORKS. WHO MAKES MONEY.
WHO COULD NOT CARE LESS WHAT YOU THINK.
I AM EVERY WOMAN WHO LIKES A DRINK. WHO LAUGHS OUT LOUD. WHO LOVES SEX.
KNOW THIS. I AM IN CHARGE. OF MY MIND. OF MY BODY. OF MY LIFE.
I AM EVERY WOMAN.
HERE ARE OUR STORIES OF RESISTANCE

ಸಮ್ಮತ ಇಲ್ಲದೆ ನಡೆದದಲ್ಲ" ಎಂದ. ಕೊನೆಗೆ "ಈ ಷಡ್ಯಂತ್ರದ ಹಿಂದೆ ಬಲಪಂಥೀಯ ರಾಜಕಾರಣಿಗಳ ಕೈವಾಡವಿದೆ" ಎಂದು ಹೇಳಿ ತಾನು ಯಾವ ತಪ್ಪೂ ಮಾಡಿಲ್ಲ ಎಂದು ನುಣುಚಿಕೊಳ್ಳಲು ಯತ್ನಿಸಿದ. ಇದೆಲ್ಲದರ ಮಧ್ಯೆ "ಇಂತಹ ಚಿಕ್ಕ ವಿಷಯದ ಬಗ್ಗೆ ಯಾಕೆ ನೀನು ನನ್ನ ಮಗಳಿಗೆ ಹೇಳಿದೆ? ತಂದೆ-ಮಗಳ ನಡುವಿನ ಸಂಬಂಧದ ಬಗ್ಗೆ ನಿನಗೆ ಅರಿವೇ ಇಲ್ಲವೇ?" ಎಂದು ಆ ಯುವತಿಯ ಬಾಯಿ ಮುಚ್ಚಿಸಲು ನೋಡಿದ.

ಸಾಮಾನ್ಯ ಯುವತಿಯಾಗಿದ್ದರೆ ತನ್ನ ಮೇಲಾದ ಅತ್ಯಾಚಾರದ ವಿರುದ್ಧ ಚಕಾರವೆತ್ತಲೂ ಹಿಂಜರಿಯುತ್ತಿದ್ದರು. ಅದರಲ್ಲೂ ಇದರಿಂದಾಗಿ ತಾನು ತನ್ನ ಕೆಲಸವನ್ನೂ ಕಳೆದುಕೊಳ್ಳುತ್ತೇನೆಂದು ಗೊತ್ತಾದರಂತೂ ತೆಪ್ಪಗಿರುತ್ತಿದ್ದರು. ಆದರೆ ಈ ಯುವತಿ ಸಾಮಾನ್ಯಳಲ್ಲ. ಮಹಿಳೆಯರಿಗಾಗುವ ಅನ್ಯಾಯದ ವಿರುದ್ಧ ಲೇಖನಗಳನ್ನು ಬರೆಯುತ್ತಿದ್ದ ಈಕೆ ಅಂತಹದ್ದೇ ಅನುಭವ ತನಗಾದಾಗ ತೆಪ್ಪಗೆ ಸಹಿಸಿಕೊಂಡಿರುವ ಜಾಯಮಾನದವಳಲ್ಲ. ತಾನು ಸುಮ್ಮನಿದ್ದರೆ ತನ್ನ ಮಹಿಳೆಯರ ಪರವಾದ ನಿಲುವಿಗೂ ತನ್ನ ಬದುಕಿಗೂ ಅರ್ಥವೇ ಇರಲ್ಲ ಎಂಬುದನ್ನು ಅರಿತ ಆಕೆ ಸೆಟೆದುನಿಂತಳು. ಇವೆಲ್ಲವೂ ಆಕೆ ಈ ಪ್ರಕರಣದ ನಂತರ ಬರೆದಿರುವ ಹೇಳಿಕೆಗಳಲ್ಲಿ ಸ್ಪಷ್ಟವಾಗುತ್ತದೆ.

ಅಂತಹ ಒಂದು ಪತ್ರದಲ್ಲಿ ಆಕೆ ಹೀಗೆ ಬರೆದಿದ್ದಾಳೆ: "ತರುಣ್, ನೀನು ನನ್ನ ಬರಹಗಳನ್ನು ಓದಿದ್ದರೆ ಯಾವ ಕಾರಣಕ್ಕೂ ನೀನು ನನ್ನ ಮೇಲೆ ದಾಳಿ ಮಾಡಲು ಯತ್ನಿಸುತ್ತಿರಲಿಲ್ಲ. ಅಷ್ಟೇ ಅಲ್ಲ, ಖಂಡಿತವಾಗಿಯೂ ಇಂತಹದ್ದು ಆದನಂತರ ನಾನು ತೆಪ್ಪಗಿದ್ದು ಕಣ್ಮರೆಯಾಗುತ್ತೇನೆ ಎಂದು ನೀನು ಭಾವಿಸುತ್ತಿರಲಿಲ್ಲ...

'ಸಮ್ಮತಿ ಇರಲಿಲ್ಲ' ಎಂಬುದರ ಅರ್ಥ ಇದು: ನೀನು ನನ್ನನ್ನು ಮುಟ್ಟಿದಾಕ್ಷಣ 'ನಿಲ್ಲಿಸು' ಎಂದು ಬೇಡಿಕೊಂಡೆ. ನಮ್ಮಿಬ್ಬರಿಗೂ ಮುಖ್ಯವಾಗಿರುವ ಜನರ ಮತ್ತು ತತ್ವಗಳತ್ತ ನಿನ್ನ ಗಮನವನ್ನು ಸೆಳೆಯಲು ಪ್ರಯತ್ನಿಸಿದೆ. ನಿನ್ನ ಮಗಳು, ಪತ್ನಿ, ಶೋಮಾ (ಮ್ಯಾನೇಜಿಂಗ್ ಎಡಿಟರ್), ನನ್ನ ತಂದೆ, ನೀನು ನನ್ನ ಉದ್ಯೋಗದಾತ ಎಂದೆಲ್ಲ ಹೇಳಿದೆ. ನೀನು ನನ್ನ ಮಾತುಗಳನ್ನು ಕೇಳುವ ಸ್ಥಿತಿಯಲ್ಲೇ ಇರಲಿಲ್ಲ. ಅಷ್ಟು ಸಾಲದೆಂಬಂತೆ ಅದರ ಮಾರನೆ ದಿನವೂ ಮತ್ತೆ ನನ್ನ ಮೇಲೆ ದಾಳಿ ಮಾಡಿದೆ. ತೆಹೆಲ್ಕಾದ ಹಲವಾರು ಸಂಪಾದಕೀಯ ಚರ್ಚೆಗಳಲ್ಲಿ - ಈ ಕುರಿತು ನೀನು ಹಲವಾರು ಲೇಖನಗಳನ್ನೂ ಬರೆಸಿದ್ದೀಯ- "ಪುರುಷರು ಯಾಕೆ ಮೃಗಗಳಂತೆ ವರ್ತಿಸುತ್ತಾರೆ" ಎಂಬುದರ ಬಗ್ಗೆ ನಾವೆಲ್ಲ ಮಾತನಾಡಿದ್ದೇವೆ. ಅದಕ್ಕೆ ಉತ್ತರ ಇದು: ಮಹಿಳೆಯೊಬ್ಬಳು 'ಬೇಡ' ಎಂದಾಗ ಅದನ್ನು ಒಪ್ಪದ ಪುರುಷನ ಮನಸ್ಥಿತಿ...

ನೀನು ಮಾಡಿದ ದಾಳಿಯ ಬಗ್ಗೆ ನಿನ್ನ ಮಗಳು ಟಿಯಾಳಿಗೆ ನಾನು ಹೇಳಿದ್ದನ್ನು ನೀನು ಆಕ್ಷೇಪಿಸಿದೆ. ಇದೊಂದು 'ಚಿಕ್ಕ ವಿಷಯ' ಎಂದು ನೀನು ನಿನ್ನ ವರ್ತನೆಯನ್ನು ಬಣ್ಣಿಸಿದೆ. ನಿನ್ನ ಮಗಳ ವಯಸ್ಸಳ ಮೇಲೆ, ನಿನ್ನ ಮಗಳ ಸ್ನೇಹಿತೆಯ ಮೇಲೆ ಲೈಂಗಿಕ ದಾಳಿ ಮಾಡಿದ್ದು ಯಾವ ಕಾರಣಕ್ಕೂ 'ಚಿಕ್ಕ ವಿಷಯ'ವಲ್ಲ. 'ತಂದೆ-ಮಗಳ ನಡುವಿನ ಸಂಬಂಧದ ಬಗ್ಗೆ ನಿನಗೆ ಅರಿವೇ ಇಲ್ಲವೇ?' ಎಂದ ನಿನಗೆ ತೆಹೆಲ್ಕಾ ಯಾವ ತತ್ವಕ್ಕೆ ಬದ್ಧವಾಗಿತ್ತು ಎಂಬುದರ ಪರಿವೆಯೇ ಇಲ್ಲ...

ನನ್ನ ಮೇಲೆ ದಾಳಿ ಮಾಡಿದ್ದಕ್ಕೆ ನನ್ನ ಗೆಳೆಯನ ಕ್ಷಮೆಯನ್ನೂ ಕೇಳುತ್ತೇನೆ ಎಂದಿದ್ದೀಯ. ಮಹಿಳೆಯರ ದೇಹದ ಮೇಲೆ ಪುರುಷರಿಗೆ ಮಾತ್ರ ಹಕ್ಕು ಇರುತ್ತದೆ ಎಂದೂ; ನನ್ನ ದೇಹ ನನ್ನ ಗೆಳೆಯನ 'ವಸ್ತು'ವಾದ್ದರಿಂದ ಆತನ ಕ್ಷಮೆ ಕೇಳುತ್ತೇನೆಂದೂ ಹೇಳುವ ಮೂಲಕ ನೀನು ನಿನ್ನ ಪುರುಷ ಪ್ರಧಾನ ಮನಸ್ಥಿತಿಯನ್ನು ತೋರಿಸಿದ್ದೀಯ. ನೀನು ಕ್ಷಮೆ ಕೇಳಬೇಕಿರುವುದು ನಿನ್ನಲ್ಲಿ ಭರವಸೆ ಇಟ್ಟಿದ್ದ ತೆಹಲ್ಕಾದ ಉದ್ಯೋಗಿಗಳಲ್ಲಿ."

ತೇಜ್‌ಪಾಲ್ ಪ್ರಕರಣದ ಸುತ್ತ ಚರ್ಚೆಗಳು ಪ್ರಾರಂಭವಾದಾಗ ಆ ಯುವತಿ ಒಂದು ಸಾರ್ವಜನಿಕ ಹೇಳಿಕೆಯನ್ನು ಕೊಟ್ಟಳು. ಅದರಲ್ಲಿ ಆಕೆಯ ಸೈದ್ಧಾಂತಿಕ ಸ್ಪಷ್ಟತೆ, ದಿಟ್ಟತನ ಮತ್ತು ಪ್ರಬುದ್ಧತೆ ವ್ಯಕ್ತವಾಗಿದೆ. ಆ ಹೇಳಿಕೆಯಲ್ಲಿನ ಹಲವು ಸಾಲುಗಳು ಹೀಗಿವೆ:

"ತಮ್ಮ ಬದುಕು ಮತ್ತು ದೇಹದ ಮೇಲೆ ಹಿಡಿತ ಸ್ಥಾಪಿಸಲು ಮಹಿಳೆಯರು ಪ್ರಯತ್ನಿಸುತ್ತಿರುವುದು ಖಂಡಿತವಾಗಿಯೂ ಒಂದು ರಾಜಕೀಯ ಹೋರಾಟ. ಆದರೆ ಮಹಿಳಾವಾದದ ರಾಜಕಾರಣವು ರಾಜಕೀಯ ಪಕ್ಷಗಳ ಸೀಮಿತ ಜಗತ್ತಿಗಿಂತ ವಿಸ್ತಾರವಾದದ್ದು. ಆದ್ದರಿಂದ ಲಿಂಗ, ಅಧಿಕಾರ ಮತ್ತು ಹಿಂಸೆಯನ್ನು ಕುರಿತ ಈ ಚರ್ಚೆಯನ್ನು ರಾಜಕೀಯ ಪಕ್ಷಗಳು ತಮ್ಮ ಮೂಗಿನ ನೇರಕ್ಕೆ ಪರಿವರ್ತಿಸಕೂಡದೆಂದು ಕೇಳಿಕೊಳ್ಳುತ್ತೇನೆ. ನಾನು ಯಾವುದೋ ಒಂದು ರಾಜಕೀಯ ಪಕ್ಷದ ಪ್ರೇರಣೆಯಿಂದಾಗಿ



• ಗೌರಿ ಲಂಕೇಶ್
editorlankesh@gmail.com

ಇಂತಹ ದೂರನ್ನು ದಾಖಲಿಸಿದ್ದೇನೆ ಎಂದು ಸಂಶಯ ವ್ಯಕ್ತಪಡಿಸುವುದು ಮಹಿಳೆಯರು ತಮ್ಮನ್ನು ಕುರಿತಂತ ನಿರ್ಧಾರಗಳನ್ನು ತೆಗೆದುಕೊಳ್ಳಲು ನಿಶಕ್ತರಾಗಿದ್ದಾರೆ ಎಂಬ ಅಭಿಪ್ರಾಯವನ್ನು ಬಿಂಬಿಸುತ್ತದೆ.

ಇತ್ತೀಚೆಗೆ ನಮ್ಮೆಲ್ಲರ ಹೋರಾಟದಿಂದಾಗಿ ಅತ್ಯಾಚಾರ ಎಂದರೆ ಏನು ಎಂಬುದನ್ನು ಕಾನೂನು ಸ್ಪಷ್ಟಪಡಿಸಿದೆ. ನಾವೆಲ್ಲ ಹಲವಾರು ಬಾರಿ ಅತ್ಯಾಚಾರ ಎಂಬುದು ಕೇವಲ ಕಾಮದ ತೃಷೆಯಲ್ಲ, ಬದಲಾಗಿ ಅದು ಅಧಿಕಾರ, ಹಕ್ಕು ಮತ್ತು ಮಹಿಳೆಯ ದೇಹದ ಮೇಲೆ ಸಾಮರ್ಥ್ಯವನ್ನು ಸ್ಥಾಪಿಸುವ ಕ್ರಿಯೆ ಕೂಡ ಹೌದು ಎಂದು ವಾದಿಸಿದ್ದೇವೆ. ಆದ್ದರಿಂದ ಹೊಸ ಕಾನೂನು ಎಲ್ಲರಿಗೂ - ಶ್ರೀಮಂತರಿಗೆ, ಅಧಿಕಾರಸ್ಥರಿಗೆ ಮತ್ತು ಪ್ರಮುಖರೊಂದಿಗೆ ಸಂಪರ್ಕ ಹೊಂದಿರುವವರಿಗೆ-ಅನ್ವಯಿಸಬೇಕೇ ಹೊರತು ಮುಖರಹಿತ ಆಗಂತುಕರಿಗೆ ಮಾತ್ರವಲ್ಲ.

ಮಿ.ತೇಜ್‌ಪಾಲ್‌ನಂತೆ ನಾನು ಅಗಾಧ ಶ್ರೀಮಂತಿಕೆಯನ್ನು ಹೊಂದಿರುವವಳಲ್ಲ. ಆತನಂತೆ ನಾನು ನನ್ನ ಆಸ್ತಿ ಅಧಿಕಾರ ಮತ್ತು ಸೌಲಭ್ಯಗಳನ್ನು ರಕ್ಷಿಸಿಕೊಳ್ಳಲು ಹೋರಾಡುತ್ತಿಲ್ಲ. ನಾನು ಕೇವಲ ನನ್ನ ಘನತೆ ಮತ್ತು ನನ್ನ ದೇಹದ ಮೇಲೆ ನನಗೆ ಅಧಿಕಾರ ಇದೆಯೇ ಹೊರತು ನನ್ನ ದೇಹ ನನ್ನ ಉದ್ಯೋಗದಾತನ ಆಟಿಕೆ ಅಲ್ಲ ಎಂದು ಸಾಬೀತುಪಡಿಸಲು ಹೋರಾಡುತ್ತಿದ್ದೇನೆ. ಈ ದೂರನ್ನು ದಾಖಲಿಸುವ ಮೂಲಕ ನಾನು ನನಗೆ ಪ್ರಿಯವಾಗಿದ್ದ ಕೆಲಸವನ್ನು, ಅದು ತಂದುಕೊಡುತ್ತಿದ್ದ ಆರ್ಥಿಕ ರಕ್ಷಣೆ ಮತ್ತು ಸ್ವಾವಲಂಬನೆಯನ್ನು ಕಳೆದುಕೊಂಡಿದ್ದೇನೆ. ಇದೆಲ್ಲದರೊಂದಿಗೆ ನಾನೀಗ ನನ್ನನ್ನು ವೈಯಕ್ತಿಕ ಮತ್ತು ಸಾರ್ವಜನಿಕ ಅವಹೇಳನಕ್ಕೆ ತೆರೆದುಕೊಂಡಿದ್ದೇನೆ. ಇದು ಸುಲಭದ ಸಮರವಾಗಿರುವುದಿಲ್ಲ.

ನನ್ನ ಬದುಕು ಮತ್ತು ಬರಹಗಳಲ್ಲಿ ನಾನು ಸದಾ ಲೈಂಗಿಕ ದಾಳಿಯ ವಿರುದ್ಧ ಮಹಿಳೆಯರು ದನಿ ಎತ್ತಬೇಕೆಂಬ ನಿಲುವನ್ನು ತೆಗೆದುಕೊಂಡಿರುವಾಕೆ. ಈಗ ಇಂತಹ ದಾಳಿಗಳಿಗೆ ತುತ್ತಾದವರು ಅದೆಂತೆಂತಹ ಕಷ್ಟಗಳನ್ನು ಎದುರಿಸಬೇಕಾಗುತ್ತದೆ ಎಂದು ನನಗೆ ಅರಿವಾಗುತ್ತಿದೆ. ಮೊದಲು ನಮ್ಮ ಮಾತುಗಳನ್ನು ಆನಂತರ ನಮ್ಮ ಉದ್ದೇಶವನ್ನೇ ಪ್ರಶ್ನಿಸುತ್ತಾರೆ. ಕೊನೆಗೆ ನಮ್ಮ ಶಕ್ತಿಯನ್ನೇ ನಮ್ಮ ವಿರುದ್ಧ ತಿರುಗಿಸುತ್ತಾರೆ...

ನನ್ನ ಮೇಲಾದ ದಾಳಿಯನ್ನು ಕುರಿತು ನಾನು ಚಕಾರವೆತ್ತದೆ ಸುಮ್ಮನಿದ್ದಿದ್ದರೆ ನಾನು ನನ್ನ ಮುಖವನ್ನಾಗಲಿ, ಹಲವಾರು ತಲೆಮಾರುಗಳ ಗಟ್ಟಿಗಿತ್ತಿ ಮಹಿಳೆಯರು ರೂಪಿಸಿರುವ ಮಹಿಳಾ ಕ್ರಾಂತಿಯನ್ನಾಗಲಿ ಎದುರಿಸಲು ನನ್ನಿಂದಾಗುತ್ತಿರಲಿಲ್ಲ.

ಕೊನೆಯದಾಗಿ, ಕೆಲವು ಪುರುಷರು ಈ ಪ್ರಕರಣದಿಂದಾಗಿ ತೆಹೆಲ್ಕಾ ಸಂಸ್ಥೆಗೆ ಹಾನಿಯಾಗಿದೆ ಎಂದು ಮರುಗಿದ್ದಾರೆ. ಅವರೆಲ್ಲರಿಗೆ ನೆನಪಿಸಲು ಬಯಸುತ್ತೇನೆ: ಇದಕ್ಕೆ ಕಾರಣ ಆ ಸಂಸ್ಥೆಯ ಸಂಪಾದಕ ಎಸಗಿದ ದೈಹಿಕ ದಾಳಿಯೇ ಹೊರತು ಅದರ ಬಗ್ಗೆ ದೂರು ಸಲ್ಲಿಸಿದ ಉದ್ಯೋಗಿ ಅಲ್ಲ ಎಂದು."

ಈ ಯುವತಿಗೆ ಆದದ್ದು ಯಾವ ಮಹಿಳೆಗೂ ಆಗಕೂಡದು. ಹಾಗೆಯೇ ಈ ಯುವತಿಯಂತೆ 'ಪ್ರತಿ ಮಹಿಳೆ'ಯೂ ಧೈರ್ಯ, ದಿಟ್ಟತನ ಮತ್ತು ದೃಢತೆಯನ್ನು ಮೈಗೂಡಿಸಿಕೊಳ್ಳಬೇಕು.

ಈ ಯುವತಿ ಇಂದು 'ಪ್ರತಿ ಮಹಿಳೆ'ಯ ದನಿಯೂ, ಪ್ರತಿನಿಧಿಯೂ ಆಗಿದ್ದಾಳೆ.

ಈ ಕಿರಿಯ ಯುವತಿಗೆ ಒಂದು ದೊಡ್ಡ ಸಲಾಮ್...

ಕೆಎಸ್‌ಆರ್‌ಟಿಸಿ ನೌಕರರ ಸೂಸೈಡ್ ಕೇಸುಗಳು



ಮೇಲಧಿಕಾರಿಗಳು ತಮ್ಮ ಕೆಳಗಿನ ನೌಕರರಿಗೆ ಕಿರುಕುಳ ಕೊಡುವುದು ಎಲ್ಲೆಡೆ ವ್ಯಾಪಕವಾಗಿದೆ. ಆದರೆ ಈ ಅಧಿಕಾರಿಗಳ ಕಿರುಕುಳ ಅಮಾಯಕ ನೌಕರರ ಜೀವಗಳನ್ನೇ ಬಲಿ ತೆಗೆದುಕೊಳ್ಳುವ ಮಟ್ಟಕ್ಕೆ ಹೋಗಿದೆಯೆಂದರೆ ನೀವು ನಂಬುತ್ತೀರಾ? ಅಂಥಾ ಒಂದು ಸಂಸ್ಥೆ ನಮ್ಮ ರಾಜ್ಯ ಸರ್ಕಾರದ ಒಡೆತನದಲ್ಲಿದೆ ಎಂದರೆ ನಂಬುವುದಾದರೂ ಹೇಗೆ?


ಆದರೆ ವಾಸ್ತವ ಸತ್ಯಗಳನ್ನು ಕಂಡಾಗ ನಾವು ನಂಬಲೇಬೇಕು. ಇಂಥಾ ವ್ಯವಸ್ಥೆ ಚಾಲ್ತಿಯಲ್ಲಿರುವುದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ. ಇಲ್ಲಿನ ಅಧಿಕಾರಿಗಳ ಅಟ್ಟಹಾಸ ಮೇರೆ ಮೀರಿದ ಪರಿಣಾಮ ಕಳೆದ 5 ವರ್ಷಗಳಿಂದೀಚೆಗೆ ಸುಮಾರು 35 ನೌಕರರು ಆತ್ಮಹತ್ಯೆ ಪ್ರಯತ್ನ ಮಾಡಿದ್ದಾರೆ. ಅವರ ಪೈಕಿ 9 ಮಂದಿ ಸಾವನ್ನಪ್ಪಿದ್ದು, ಉಳಿದವರು ಹೇಗೋ ಬದುಕುಳಿದಿದ್ದಾರೆ.

ಇಂಥಾ ತಾಜಾ ಪ್ರಕರಣವೊಂದು ಬೆಂಗಳೂರು ಬನಶಂಕರಿಯಲ್ಲಿರುವ ಬಿಎಂಟಿಸಿಯ 20ನೇ ಡಿಪೋದಲ್ಲಿ ಇತ್ತೀಚೆಗೆ ಸಂಭವಿಸಿದೆ. ಇಲ್ಲಿ ಚಾಲಕನಾಗಿ ದುಡಿಯುತ್ತಿರುವ ಗಂಗಾಧರ್ ಇದೇ ಭಾನುವಾರ ಬೆಳ್ಳಂಬೆಳಗ್ಗೆ ಡಿಪೋ ಮ್ಯಾನೇಜರ್ ಕೊಠಡಿಯಲ್ಲೇ ನೇಣು ಹಾಕಿಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದಾನೆ. ತಕ್ಷಣ ಇದನ್ನು ಗಮನಿಸಿದ ಇತರ ಚಾಲಕರು ಮತ್ತಿತರ ಸಿಬ್ಬಂದಿ ಕೂಡಲೇ ಬಾಗಿಲು ಒಡೆದು ಆತನನ್ನು ಪ್ರಾಣಾಪಾಯದಿಂದ ಪಾರು ಮಾಡಿದ್ದಾರೆ.

ಇಂಥಾ ಅನಾಹುತಕ್ಕೆ ಕಾರಣನಾದ ಪಾಖಂಡಿ ಅಧಿಕಾರಿ ಟ್ರಾಫಿಕ್ ಇನ್ಸ್‌ಪೆಕ್ಟರ್ ರಂಗಸ್ವಾಮಿ ಮಾತ್ರ ಈ ಘಟನೆ ತನ್ನ ಸಾಧನೆಗೆ ಮತ್ತೊಂದು ಸೇರ್ಪಡೆಯೆಂಬಂತೆ ಬೀಗುತ್ತಾ ತಿರುಗುತ್ತಿದ್ದಾನೆ.

ಘಟನೆ ನಡೆದದ್ದು ಹೇಗೆ?

ಈ ಡಿಪೋ ಪ್ರಾರಂಭವಾದಾಗಿನಿಂದಲೂ ಇದೇ ಡಿಪೋದಲ್ಲಿ ಚಾಲಕನಾಗಿರುವ ಗಂಗಾಧರ್ ಮೆಜೆಸ್ಟಿಕ್-ಪದ್ಮನಾಭನಗರ ರೂಟ್‌ನಲ್ಲಿ ದುಡಿಯುತ್ತಿದ್ದಾರೆ. ಚಾಲಕ ಗಂಗಾಧರ್ ಅವರ ವೃದ್ಧ ತಂದೆತಾಯಿಗಳು ಭದ್ರಾವತಿ ತಾಲೂಕಿನ ಹೊಸಸಿದ್ದಾಪುರ ಊರಿನಲ್ಲಿದ್ದಾರೆ. ತಂದೆ ತೀವ್ರ ಅಸ್ವಸ್ಥರಾಗಿರುವುದರಿಂದ ಕೂಡಲೇ ಬರಬೇಕೆಂದು ಊರಿನಿಂದ ಗಂಗಾಧರ್‌ಗೆ ಸುದ್ದಿ ಬಂದಿತ್ತು. ಆದ್ದರಿಂದ ಭಾನುವಾರದ ಮೊದಲ ಪಾಳಿ ಕೆಲಸ ಮುಗಿಸಿ ಸಂಜೆಯ ವೇಳೆಗೆ ಊರು ತಲುಪಿ ತಂದೆಯನ್ನು ಆಸ್ಪತ್ರೆಗೆ ಒಯ್ಯಲು ಗಂಗಾಧರ್ ಯೋಚಿಸಿಕೊಂಡಿದ್ದರು. ಹೀಗಾಗಿ ಭಾನುವಾರ 5.50ರ ವೇಳೆಗೆ ಡಿಪೋಗೆ ಬಂದು ಎಂದಿನಂತೆ ತನ್ನ ರೂಟ್ ಆಪರೇಟ್ ಮಾಡಲು ತೊಡಗಿದರು. ಆದರೆ ಟ್ರಾಫಿಕ್ ಇನ್ಸ್‌ಪೆಕ್ಟರ್ ರಂಗಸ್ವಾಮಿ ಅನುಮತಿ ಕೊಡಲಿಲ್ಲ. ಕಳೆದ ಎರಡು ವರ್ಷಗಳಿಂದಲೂ ಭಾನುವಾರದಂದು ಬೆಳಗಿನ ಪಾಳಿಯಲ್ಲೇ ಡ್ಯೂಟಿ ಮಾಡುತ್ತಿದ್ದೇನೆಂದು,


ಗಂಗಾಧರ್

ಅದಕ್ಕೆ ಅನುಮತಿ ಕೊಡಿರೆಂದು ಪರಿಪರಿಯಾಗಿ ಕೇಳಿದರೂ ಇನ್ಸ್‌ಪೆಕ್ಟರ್ ಸುತರಾಂ ಒಪ್ಪಲಿಲ್ಲ. ಹೋಗಲಿ, ಬೇರೊಂದು ರೂಟ್ ಆದರೂ ಕೊಡಿ ಅಂತ ಅಂಗಲಾಚಿದರೂ ಕಿವಿಯ ಮೇಲೂ ಹಾಕಿಕೊಳ್ಳದೆ ವಿನಾಕಾರಣ ಗಂಗಾಧರ್‌ರನ್ನು ಮನಬಂದಂತೆ ಬೈಯಲು ಶುರುಮಾಡಿದ. ಬೇರೆ ದಾರಿ ಕಾಣದೆ ಅರ್ಜಿ ಬರೆದುಕೊಟ್ಟ ಗಂಗಾಧರ್ ರಜೆಯನ್ನಾದರೂ ಅಂಗೀಕರಿಸುವಂತೆ ಗೋಗರೆದರೂ ನೀಚ ಇನ್ಸ್‌ಪೆಕ್ಟರ್‌ನ ಹೃದಯ ಕರಗಲಿಲ್ಲ.

ಗಂಗಾಧರ್ ಶನಿವಾರ ರಾತ್ರಿ ಸುಮಾರು 10 ಗಂಟೆಯ ವೇಳೆಗೆ ಡ್ಯೂಟಿ ಮುಗಿಸಿ ತಡರಾತ್ರಿ ಮನೆಗೆ ತಲುಪಿ ಭಾನುವಾರ ಬೆಳಗ್ಗೆ 4.30ಕ್ಕೆ ಮನೆಬಿಟ್ಟು ಕರ್ತವ್ಯಕ್ಕೆ ಹಾಜರಾಗಿದ್ದರು. ತನ್ನ ಡ್ರೈವರ್ ಡ್ಯೂಟಿಯನ್ನು ಒಂದು ವ್ರತದಂತೆ ಮಾಡಿಕೊಂಡು ಬಂದಿರುವ ಈತ ತನ್ನ 9 ವರ್ಷಗಳ ಸೇವಾವಧಿಯಲ್ಲಿ ಒಂದು ದಿನವೂ ಗೈರುಹಾಜರಾಗಿಲ್ಲ. ಅಷ್ಟು ಮಾತ್ರವಲ್ಲ, ಇದುವರೆಗೂ ಕೆಲಸದ ವಿಷಯದಲ್ಲಿ ಇವರ ಮೇಲೆ ಯಾವೊಂದೂ ಕಪ್ಪುಚುಕ್ಕೆಯೂ ಇಲ್ಲವೆಂದರೆ ಆತನ ಕರ್ತವ್ಯನಿಷ್ಠೆ ಯಾರಿಗಾದರೂ ಅರ್ಥವಾಗುತ್ತದೆ. ಆದರೆ ರಂಗಸ್ವಾಮಿಯಂಥವರಿಗೆ ಇವ್ಯಾವೂ ಮುಖ್ಯವಲ್ಲ. ಅವನಿಗೆ ಗಂಗಾಧರ್ ಮೇಲೆ ಸೇಡು ತೀರಿಸಿಕೊಳ್ಳುವುದಷ್ಟೆ ಮುಖ್ಯವಾಗಿತ್ತು.

ಈ ರಂಗಸ್ವಾಮಿ ಮತ್ತು ಗಂಗಾಧರ್ ಇಬ್ಬರೂ ಈ ಹಿಂದೆ 13ನೇ ಡಿಪೋದಲ್ಲಿ ಒಟ್ಟಿಗೆ ಕೆಲಸ ಮಾಡುತ್ತಿದ್ದು, 20ನೇ ಡಿಪೋ ಪ್ರಾರಂಭವಾದಾಗ ಒಟ್ಟಿಗೆ ವರ್ಗಾವಣೆಗೊಂಡು ಇಲ್ಲಿಗೆ ಬಂದಿದ್ದರು. ಭ್ರಷ್ಟಾಚಾರವನ್ನು ಕಟುವಾಗಿ ವಿರೋಧಿಸುವ ಗಂಗಾಧರ್ ರಂಗಸ್ವಾಮಿಯ ಭ್ರಷ್ಟಾಚಾರ, ಕಿರುಕುಳಗಳ ಬಗ್ಗೆ ಮೇಲಧಿಕಾರಿಗಳಿಗೆ ದೂರು ನೀಡಿದ್ದರು. ಆಗಿನಿಂದಲೂ ಈ ಸ್ವಾಭಿಮಾನಿ ಚಾಲಕನ ಮೇಲೆ ಕತ್ತಿಮಸೆಯುತ್ತಲೇ ಇದ್ದ ಕೊಳಕುಮಂಡಲ ರಂಗಸ್ವಾಮಿ ಮೊನ್ನೆ ಭಾನುವಾರ ತನ್ನ ವಿಷವನ್ನು ಹೊರಹಾಕಿದ್ದ.

ಸಂಸ್ಥೆಗಾಗಿ ಎಷ್ಟೇ ಶಿಸ್ತು ಪ್ರಾಮಾಣಿಕತೆಯಿಂದ ದುಡಿದರೂ ತಮ್ಮ ಪ್ರಾಮಾಣಿಕತೆಗೆ ಬೆಲೆಯಿಲ್ಲದೆ ತನ್ನನ್ನೇ ತಪ್ಪಿತಸ್ಥನಾಗಿ ಸಿಕ್ಕಿಸುವ ದುಷ್ಟ ಅಧಿಕಾರಿಯೆದುರು ಅಸಹಾಯಕತೆ ಒಂದುಕಡೆ, ಹಾಸಿಗೆ ಹಿಡಿದಿದ್ದ ವಯೋವೃದ್ಧ ತಂದೆಯನ್ನು ಆಸ್ಪತ್ರೆಗೆ ಒಯ್ಯಬೇಕಾಗಿದ್ದ ಒತ್ತಡ ಮತ್ತೊಂದು ಕಡೆ - ಹೀಗೆ ಮಾನಸಿಕವಾಗಿ ಜರ್ಜರಿತನಾದ ಗಂಗಾಧರ್‌ಗೆ ಏನು ಮಾಡಬೇಕೆಂಬ ದಿಕ್ಕೇ ತೋಚಲಿಲ್ಲ. ಅಂಥಾ

ಆತ್ಮಹತ್ಯೆಗೆ ಶರಣಾದ ನೌಕರರು


	ಹೆಸರು	ಹುದ್ದೆ	ಸ್ಥಳ
1	ವಿ.ಡಿ.ಶಿವಸಿಂಪಿ	ನಿರ್ವಾಹಕ	ಹರಿಹರ ಡಿಪೋ
2	ಹರಿಶ್ಚಂದ್ರ	ಕೇರ್‌ಟೇಕರ್	ಬಿಜಾಪುರ
3	ವಿಜಯ್‌ಕುಮಾರ್	ಚಾಲಕ	ಮಂಗಳೂರು
4	ಗಾಯಕವಾಡ್	ಚಾಲಕ	ಬಿಜಾಪುರ
5	ಸುನಿಲ್ ನಾಯಕ್	ಮೆಕ್ಯಾನಿಕ್	ಕುಮಟಾ
6	ಕಮಲಾಕರ್	ಚಾಲಕ	ಆಳಂದ
7	ಮಾರುತಿ	ಚಾಲಕ	ಚಿಂಚೋಳಿ
8	ರವೀಂದ್ರ	ಚಾಲಕ	ದಾವಣಗೆರೆ
9	ಕೃಷ್ಣೇಗೌಡ	ಚಾಲಕ	ಮೈಸೂರು

ಆತ್ಮಹತ್ಯೆಗೆ ಪ್ರಯತ್ನಿಸಿ ಬದುಕುಳಿದವರು

1	ಅತಾವುಲ್ಲಾ	ಚಾಲಕ	ಕೋಲಾರ
2	ಜಗನ್ನಾಥ್	ಚಾಲಕ	ಕೋಲಾರ
3	ಚಂದ್ರಪ್ಪ	ನಿರ್ವಾಹಕ	ಶಿವಮೊಗ್ಗ
4	ಚಂದ್ರಕಾಂತ್	ನಿರ್ವಾಹಕ	ಗುಲಬರ್ಗಾ
5	ಪವಿತ್ರ	ನಿರ್ವಾಹಕಿ	ಬಿಎಂಟಿಸಿ
6	ಜಯಪ್ರಕಾಶ್	ಚಾಲಕ	ಪಾವಗಡ
7	ಕುಮಾರ್	ಚಾಲಕ/ನಿರ್ವಾಹಕ	ಎಚ್.ಡಿ.ಕೋಟೆ
8	ರೇವಣ್ಣಸಿದ್ದಪ್ಪ	ಚಾಲಕ	ಬಿಎಂಟಿಸಿ
9	ಬಿ.ಆರ್.ಮೂರ್ತಿ	ಚಾಲಕ/ನಿರ್ವಾಹಕ	ಕುಣಿಗಲ್
10	ಕೇಶವಮೂರ್ತಿ	ಚಾಲಕ/ನಿರ್ವಾಹಕ	ಮೂಡಿಗೆರೆ
11	ರವಿ ಹುಲ್ಲೂರು	ಚಾಲಕ	—

ಈ ಪಟ್ಟಿ ಅಪೂರ್ಣ. ಮೊನ್ನೆ ಭಾನುವಾರ ಬಿಎಂಟಿಸಿ 20ನೇ ಡಿಪೋದಲ್ಲಿ ಆತ್ಮಹತ್ಯಾ ಯತ್ನ ನಡೆಸಿದ ಚಾಲಕ ಗಂಗಾಧರ್ ಈ ಪಟ್ಟಿಗೆ ಹೊಸ ಸೇರ್ಪಡೆ. ಪಿಶಾಚಿಗಳಂತೆ ನರಬಲಿ ಕೇಳುತ್ತಿರುವ ಅಧಿಕಾರಿಗಳಿಗೆ ಇನ್ನೆಷ್ಟು ಮಂದಿ ಬಲಿಯಾಗಬೇಕು? ಮತ್ತಷ್ಟು ಜೀವಗಳು ಬಲಿಯಾಗುವ ಮುನ್ನ ಸಚಿವ ರಾಮಲಿಂಗಾರೆಡ್ಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಇತ್ತ ಗಮನ ಹರಿಸುತ್ತಾರೆಯೆ?

ರಂಗಸ್ವಾಮಿ ಎಂಥವನು ಗೊತ್ತೆ?


ರಂಗಸ್ವಾಮಿ

ರಂಗಸ್ವಾಮಿ ಎಂಬ ಈ ಆಸಾಮಿಯೇನೂ ಐಎಎಸ್ ಗ್ರೇಡ್‌ನ ಅಧಿಕಾರಿಯಲ್ಲ. ಮೆಜೆಸ್ಟಿಕ್‌ನಲ್ಲಿರುವ 7ನೇ ಡಿಪೋದಲ್ಲಿ ಮಾಮೂಲಿ ಕಂಡಕ್ಟರ್ ಆಗಿ ಸಂಸ್ಥೆಗೆ ಸೇರಿ, ಹೇಗೋ ಕೆಲವು ಪ್ರಮೋಷನ್ ಗಿಟ್ಟಿಸಿ ಈಗ ಟ್ರಾಫಿಕ್ ಇನ್ಸ್‌ಪೆಕ್ಟರ್ ಆಗಿ ವಕ್ಕರಿಸಿ ಅದೇ ಕಂಡಕ್ಟರ್, ಡ್ರೈವರ್‌ಗಳ ಪ್ರಾಣ ಹಿಂಡುತ್ತಿದ್ದಾನೆ. ಮೂಲತಃ ಮಾಗಡಿ ಕಡೆಯ ಗ್ರಾಮೀಣ ಭಾಗದವನಾದ ಈತ ಎಲ್ಲಾ ಮಾನವೀಯ ಗುಣಗಳನ್ನು ಕಳೆದುಕೊಂಡಂತೆ ವರ್ತಿಸುತ್ತಿದ್ದಾನೆ.

ಈತ ಹೇಳಿಕೇಳಿ ಮಹಾಭ್ರಷ್ಟ. ಈ ಮೊದಲು ಈತ 13ನೇ ಡಿಪೋದಲ್ಲಿದ್ದ. ಅಲ್ಲಿ ಈತ ತನ್ನ ಅಧಿಕಾರ ವ್ಯಾಪ್ತಿಯ ನೌಕರರಿಗೆ ಕುಂಟುನೆಪಗಳನ್ನು ಮುಂದುಮಾಡಿ ಹಣ ವಸೂಲಿ ಮಾಡುವುದನ್ನೇ ತನ್ನ ಕಾಯಕ ಮಾಡಿಕೊಂಡಿದ್ದ. ಇವನ ಉಪಟಳದಿಂದ ಬೇಸತ್ತ ನೌಕರರು ಮೇಲಧಿಕಾರಿಗಳಿಗೆ ಇವನ ವಿರುದ್ಧ ನೇರವಾಗಿ ದೂರು ಕೊಡಲೂ ಕೂಡ ಧೈರ್ಯ ಮಾಡುತ್ತಿರಲಿಲ್ಲ. ತನ್ನ ವಿರುದ್ಧ ದೂರು ನೀಡಿದವರ ಮೇಲೆ ಮತ್ಸರ ಸಾಧಿಸಿ, ಶನಿಯಂತೆ ಅವರ ಹೆಗಲೇರುವುದು ಈತನ ಹುಟ್ಟುಗುಣ. ಹೀಗಾಗಿ ರಂಗಸ್ವಾಮಿಯ ವಿರುದ್ಧ ಕೇಂದ್ರ ಕಚೇರಿಗೆ ಹತ್ತಾರು ಮೂಕರ್ಜಿಗಳು ರವಾನೆಯಾದವು.

ಹೀಗಿದ್ದಾಗ 2011ರಲ್ಲಿ ಒಂದು ದಿನ ಇಲಾಖೆಯ ಆಂತರಿಕ ಸೆಕ್ಯುರಿಟಿ ಅಧಿಕಾರಿಗಳು ಡಿಪೋಗೆ ದಾಂಗುಡಿಯಿಟ್ಟರು. ಆ ವೇಳೆಯಲ್ಲಿ ರಂಗಸ್ವಾಮಿ ತನ್ನ ಕೈಯಲ್ಲಿದ್ದ ಲಂಚದ ಹಣವನ್ನು ಅದೇ ಕಚೇರಿಯಲ್ಲಿ ಡ್ಯೂಟಿಯಲ್ಲಿದ್ದ ಸುಶೀಲಮ್ಮ ಎಂಬ ಮಹಿಳೆಯ ಬ್ಯಾಗಿಗೆ ತುರುಕಿಬಿಟ್ಟ. ವಿಚಕ್ಷಣಾಧಿಕಾರಿಗಳು ಸುಶೀಲಮ್ಮನ ಮೇಲೆ ಕೇಸು ದಾಖಲಿಸಿಕೊಂಡರು.

ತಕ್ಷಣ ಕಾರ್ಯಪ್ರವೃತ್ತನಾದ ಈ ಕಂತ್ರಿ ಮತ್ತೊಂದು ಬಗೆಯ ನಾಟಕ ಹೂಡಿ, ತನಗಿರುವ ಇನ್‌ಫ್ಲುಯೆನ್ಸ್ ಬಳಸಿ ನಿನ್ನನ್ನು ಬಚಾವು ಮಾಡುತ್ತೇನೆಂದು ಹೇಳಿ, ಅದೇ ಸುಶೀಲಮ್ಮನಿಂದ ಹತ್ತು ಸಾವಿರ ಹಣ ಕಿತ್ತು ಜೇಬಿಗಿಳಿಸಿಕೊಂಡ. ಈತನ ಕುಯುಕ್ತಿಗೆ ಬಲಿಯಾದ ಅಮಾಯಕಿ ಸುಶೀಲಮ್ಮ ಸಸ್ಪೆಂಡ್ ಆದರು. ಅವರ ಇಂಕ್ರಿಮೆಂಟ್‌ಗಳನ್ನು ತಡೆಹಿಡಿಯಲಾಯಿತು.

ರೆಡ್‌ಹ್ಯಾಂಡಾಗಿ ಸಿಕ್ಕಿಬಿದ್ದು ಕೆಲಸ ಕಳೆದುಕೊಳ್ಳಬೇಕಿದ್ದ ಈ ಆಸಾಮಿ, ತನ್ನ ತಪ್ಪನ್ನು ಸಹೋದ್ಯೋಗಿಯ ತಲೆಗೆ ಕಟ್ಟಿದ್ದಲ್ಲದೆ, ಆ ಬಲಿಪಶುವಿನಿಂದಲೂ ಹಣ ವಸೂಲಿ ಮಾಡುತ್ತಾನೆಂದರೆ ಇವನೆಂಥಾ ಐನಾತಿ ಇರಬೇಕೆಂದು ಊಹಿಸಿ.


ಇಲಾಖೆಗೆ ಶಕ್ತಿಮೀರಿ ಸೇವೆ ಸಲ್ಲಿಸಬೇಕೆಂದು ದೃಢ ನಿಶ್ಚಯ ಮಾಡಿರುವ ರಂಗಸ್ವಾಮಿ ಇಂಥಾ ಕೃತ್ಯಗಳಿಗೆ ನೆರವಾಗಬಲ್ಲ ನಾಲ್ಕಾರು ಏಜೆಂಟ್‌ಗಳ ತಂಡವೊಂದನ್ನು ಕಟ್ಟಿಕೊಂಡಿದ್ದಾನೆ. ಇಲಾಖೆಯ ನೌಕರರು ಈ ಏಜೆಂಟ್‌ಗಳಿಗೆ "ಬಕೆಟ್" ಎಂಬ ಬಿರುದು ಕೊಟ್ಟು ಗೌರವಿಸುತ್ತಿದ್ದಾರೆ.

ಬಿಎಂಟಿಸಿಯ ಜೀತಗಾರಿಕೆ

ಬಿಎಂಟಿಸಿ ಸಂಸ್ಥೆಯಲ್ಲಿ ದುಡಿಯುತ್ತಿರುವ ಡ್ರೈವರ್, ಕಂಡಕ್ಟರ್, ಮೆಕ್ಯಾನಿಕ್ ಮುಂತಾದ ಕೆಳಹಂತದ ಸಿಬ್ಬಂದಿಗಳ ಪಾಲಿಗೆ ಇದು ಹೆಸರಿಗೆ ಮಾತ್ರ ಸರ್ಕಾರಿ ಕೆಲಸ. ಆದರೆ ವಾಸ್ತವದಲ್ಲಿ ಇಲ್ಲಿ ಚಾಲ್ತಿಯಲ್ಲಿರುವುದು ಆಧುನಿಕ ಜೀತಗಾರಿಕೆ. ಇವರ ಬವಣೆ ಹೇಳುತ್ತಾಹೋದರೆ ಒಂದು ದೊಡ್ಡ ಸಂಪುಟವೇ ಆಗುತ್ತದೆಯಾದ್ದರಿಂದ ಸಂಕ್ಷಿಪ್ತವಾಗಿ ಕೆಲವು ಮುಖ್ಯಾಂಶಗಳನ್ನಷ್ಟೇ ನೋಡೋಣ.

* ಸಾಮಾನ್ಯವಾಗಿ ಯಾವುದೇ ನೌಕರ ಕರ್ತವ್ಯಕ್ಕೆ ಹಾಜರಾದ ಕೂಡಲೆ ಹಾಜರಾತಿ ದಾಖಲಿಸುವುದು ಎಲ್ಲಾ ಇಲಾಖೆಗಳಲ್ಲಿರುವ ವಾಡಿಕೆ. ಆದರೆ ಬಿಎಂಟಿಸಿಯ ಸ್ಥಿತಿ ಇದಕ್ಕೆ ತದ್ವಿರುದ್ಧ. ಡ್ರೈವರ್, ಕಂಡಕ್ಟರ್‌ಗಳು ತಮ್ಮ ಡ್ಯೂಟಿ ಮುಗಿಸಿಬಂದು, ಡ್ಯೂಟಿ ಶೀಟ್ ಸಲ್ಲಿಸಿದ ಮೇಲಷ್ಟೇ ಹಾಜರಾತಿ ಕೊಡುವ ಪರಿಪಾಠವನ್ನು ಈ ಸಂಸ್ಥೆ ಇಟ್ಟುಕೊಂಡಿದೆ. ಅಷ್ಟು ಮಾತ್ರವಲ್ಲದೆ ಹಾಜರಾತಿ ನೀಡುವ ಅಧಿಕಾರಿ ಪ್ರತಿದಿನ 5 ಆಬ್ಸೆಂಟ್‌ಗಳನ್ನು ಹಾಕಲೇಬೇಕೆಂಬ ಅಲಿಖಿತ ಆದೇಶವೂ ಚಾಲ್ತಿಯಲ್ಲಿದೆಯಂತೆ. ಹೀಗಾಗಿ ಪರ್‌ಫಾರ್ಮೆನ್ಸ್ ಸರಿಯಿಲ್ಲವೆಂದೋ, 5-10 ನಿಮಿಷ ತಡವಾಯಿತೆಂದೋ ನಾನಾ ನೆಪಗಳನ್ನು ಹುಡುಕಿ ನೌಕರರ ಹಾಜರಾತಿಯನ್ನು ಕೊಡದೆ ಸತಾಯಿಸಿ ಹಣ ವಸೂಲಿ ಮಾಡುವ ಹೀನದಂಧೆಯಲ್ಲಿ ಅಧಿಕಾರಿಗಳು ತೊಡಗಿದ್ದಾರೆ. ಪೂರ್ತಿ ತಿಂಗಳ ಸಂಬಳ ಪಡೆಯುವುದೆ ಅಪರೂಪ ಎಂಬಂಥ ಸ್ಥಿತಿ ಇಲ್ಲಿ ನಿರ್ಮಾಣವಾಗಿದೆ ಎಂದರೆ ಈ ದಂಧೆಯ ವಿಸ್ತಾರ ನಮಗೆ ಅರ್ಥವಾಗುತ್ತದೆ.
* ಬಿಎಂಟಿಸಿಯಲ್ಲಿ ಉತ್ತರ ಕರ್ನಾಟಕದ ಭಾಗದ ನೌಕರರು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಸಾಮಾನ್ಯವಾಗಿ ವಾರದ ರಜೆಗಳನ್ನು ಪಡೆಯದೆ ತಿಂಗಳಿಗೊಮ್ಮೆ ಊರಿಗೆ ಹೋಗುವಾಗ ಒಟ್ಟಿಗೆ 3-4 ದಿನಗಳ ರಜೆ ಪಡೆಯುತ್ತಾರೆ. ಇವರ ಇಕ್ಕಟ್ಟನ್ನು ದುರುಪಯೋಗಪಡಿಸಿಕೊಳ್ಳುವ ಅಧಿಕಾರಿಗಳು ಅವರು ಉಳಿಸಿಟ್ಟುಕೊಂಡಿರುವ ರಜೆ ಮಂಜೂರು ಮಾಡಲು ಸಾವಿರಾರು ರೂಪಾಯಿ ಲಂಚ ವಸೂಲಿ ಮಾಡುತ್ತಾರೆ. ಇಲ್ಲದೇ ಹೋದರೆ 3-4 ತಿಂಗಳಾದರೂ ರಜೆಯಿಲ್ಲದೆ ಜೀತದಾಳುಗಳಂತೆ ದುಡಿಸುತ್ತಾರೆ.
* ಯಾವ ಸಮಸ್ಯೆ ಇಲ್ಲದಿದ್ದರೂ ತಿಂಗಳಿಗೆ 200-300 ಮಾಮೂಲಿ ಕೊಡಬೇಕು. ಈ ಮಾಮೂಲಿ ವಸೂಲಿಗೆ ರಂಗಸ್ವಾಮಿಯಂಥಾ ಕಿಲಾಡಿ ಅಧಿಕಾರಿಗಳು ವಿಶೇಷ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಡಿಪೋದ ಆಜುಬಾಜಿನ ಅಂಗಡಿಗಳಲ್ಲಿ ದೇವರ ಹುಂಡಿಯಂಥಾ ಒಂದು ಬಾಕ್ಸ್ ಇಟ್ಟು ನೌಕರರು ತಮ್ಮ ಮಾಮೂಲಿಯನ್ನು ಅದಕ್ಕೆ ಪಾವತಿಸಬೇಕಂತೆ. ಮಾಮೂಲಿ ಸಲ್ಲಿಸದವರ ಮೇಲೆ ಕಣ್ಣಿಟ್ಟು ಕಿರುಕುಳ ನೀಡಲಾಗುತ್ತದೆ.
* ರೂಟ್ ಪಡೆಯಬೇಕೆಂದರೆ, ಸುಸ್ಥಿತಿಯಲ್ಲಿರುವ ಬಸ್ ಪಡೆಯಬೇಕೆಂದರೆ ಕೊನೆಗೆ ತಮ್ಮದೇ ರಜೆಯನ್ನು ತಾವು ಮಂಜೂರು ಮಾಡಿಸಿಕೊಳ್ಳಲು ಅಧಿಕಾರಿಗಳಿಗೆ ಲಂಚ ಕೊಡಲೇಬೇಕು.
* ಬಸ್‌ಗಳು ರಿಪೇರಿಗೆ ಬರುವುದು ಮಾಮೂಲಿ. ಅದರ ಜವಾಬ್ದಾರಿ ಸಹಜವಾಗಿ ಅಧಿಕಾರಿಗಳದು. ಆದರೆ ಇಲ್ಲಿ ಅಧಿಕಾರಿಗಳು ಬಸ್ ರಿಪೇರಿ ಮಾಡಿಕೊಡಲು ಸಂಬಂಧಿತ ಡ್ರೈವರ್ ಕಂಡಕ್ಟರ್‌ಗಳಿಂದ ಹಣ ಕೀಳುತ್ತಾರೆ.
* ಸೇವಾಹಿರಿತನ ಮತ್ತು ಪರ್ಮನೆಂಟ್ ನೌಕರರಿಗೆ ಹೆಚ್ಚಿನ ಸಂಬಳ/ಒಟಿ ಕೊಡುವುದನ್ನು ತಪ್ಪಿಸಲು ಹೊಸಬರಿಗೆ, ಪ್ರೊಬೆಷನರಿಯಲ್ಲಿರುವವರಿಗೆ ಸತತವಾಗಿ 2-3 ದಿನಗಳ ಬಲವಂತದ ಡ್ಯೂಟಿ ಮಾಡಿಸಲಾಗುತ್ತದೆ. ಹೀಗೆ ವಿಶ್ರಾಂತಿ, ನಿದ್ರೆಯಿಲ್ಲದೆ ಬಸ್ ನಡೆಸಿದ ಪರಿಣಾಮವಾಗಿ ಆಗಿರುವ ಅಪಘಾತಗಳಿಗೆ ಲೆಕ್ಕವಿಲ್ಲ.
* ಇಷ್ಟೆಲ್ಲ ಸಾಲದೆಂಬಂತೆ ನೌಕರರ ಮೇಲೆ ಮತ್ತಷ್ಟು ಸವಾರಿ ಮಾಡಲು ಈಗಿನ ಸರ್ಕಾರ ಬೆಳಗಾವಿ ಅಧಿವೇಶನದಲ್ಲಿ ಎಸ್ಮಾ ಕಾಯ್ದೆಯನ್ನು ಅಂಗೀಕರಿಸಿದೆ.

ಹೀಗೆ ಬರೆಯುತ್ತಾ ಹೋದರೆ ಇಲ್ಲಿನ ಅವ್ಯವಸ್ಥೆಗಳಿಗೆ ಕೊನೆಯೇ ಇಲ್ಲ. ಯಾವ ಕಾರ್ಮಿಕ ಕಾನೂನುಗಳ ಹಕ್ಕುಗಳೂ ಇಲ್ಲಿ ಅನ್ವಯವಾಗುವುದಿಲ್ಲ. ಇಂಥಾ ವಿಷಮ ಸನ್ನಿವೇಶದಲ್ಲಿ ನೌಕರರ ಹಿತವನ್ನು ಕಾಯುವರಾರು?



ಗಂಗಾಧರ್

ದುರ್ಬಲ ಘಳಿಗೆಯಲ್ಲಿ ಮನಸ್ಸಿನ ಸ್ಥಿಮಿತ ಕಳೆದುಕೊಂಡ ಗಂಗಾಧರ್ ಆತ್ಮಹತ್ಯೆಯ ನಿರ್ಧಾರಕ್ಕೆ ಬಂದುಬಿಟ್ಟರು.

ಕೈಗೆ ಸಿಕ್ಕ ವೈರ್ ಹಿಡಿದುಕೊಂಡು ಸೀದಾ ಡಿಪೋ ಮ್ಯಾನೇಜರ್ ಕೊಠಡಿಗೆ ಹೋದವರೇ ಒಳಗಿನಿಂದ ಬಾಗಿಲು ಹಾಕಿಕೊಂಡು ರಂಗಸ್ವಾಮಿಯ ಕಿರುಕುಳದ ಬಗ್ಗೆ ಮರಣಪತ್ರ ಬರೆದಿಟ್ಟು ಟೇಬಲ್‌ಮೇಲೆ ಏರಿ ಕುತ್ತಿಗೆಗೆ ಹಗ್ಗ ಬಿಗಿದುಕೊಳ್ಳುವ ತಯಾರಿಯಲ್ಲಿದ್ದಾಗ ಕಿಟಕಿಯಿಂದ ಈ ದೃಶ್ಯವನ್ನು ಗಮನಿಸಿದ ಒಬ್ಬರು ಡ್ರೈವರ್ ಜೋರಾಗಿ ಚೀರಾಡಿದ ಪರಿಣಾಮ ಕೂಡಲೇ ಅಲ್ಲೇ ಇದ್ದ ಹತ್ತಾರು ಸಿಬ್ಬಂದಿಗಳು ಕ್ಷಣಾರ್ಧದಲ್ಲಿ ಕಾರ್ಯಪ್ರವೃತ್ತರಾಗಿ ಬಾಗಿಲು ಒಡೆದು ಸಿನಿಮೀಯ ರೀತಿಯಲ್ಲಿ ಒಳನುಗ್ಗಿದ್ದಾರೆ. ಗಂಗಾಧರ್‌ನ ಹೆಂಡತಿ ಮಕ್ಕಳ ಅದೃಷ್ಟ ಚನ್ನಾಗಿದ್ದುದರಿಂದ ಆತನ ಸಹೋದ್ಯೋಗಿಗಳಿಂದ ಹೇಗೂ ಆತ ಬಚಾವಾಗಿದ್ದಾನೆ. ಆದರೆ ಆ ನೀಚ ರಂಗಸ್ವಾಮಿಯ ಕಿರುಕುಳದಿಂದ ಮಾನಸಿಕ ಕ್ಷೋಭೆಗೆ ಒಳಗಾಗಿದ್ದ ಗಂಗಾಧರ್‌ಗೆ ಅದರಿಂದ ಹೊರಬರಲು ತಾಸುಗಟ್ಟಲೆ ಸಮಯ ಹಿಡಿಸಿದೆ.

ಸಿಟ್ಟಿಗೆದ್ದ ನೌಕರರು ಯಾವುದೇ ಬಸ್ಸನ್ನು ಗೇಟಿನಿಂದ ಆಚೆ ತೆಗೆಯದೆ ಸ್ವಯಂಪ್ರೇರಿತ ದಿಢೀರ್ ಮುಷ್ಕರ ನಡೆಸಿದರು. ಈ ಮುಷ್ಕರದ ಸುದ್ದಿ ತಿಳಿದ ರಂಗಸ್ವಾಮಿಯ ಗಾಡ್‌ಫಾದರ್ ಡಿಟಿಒ ಫಯಾಜ್ ರಂಗಕ್ಕಿಳಿದ. ಬಣ್ಣದ ಭರವಸೆಯ ಮಾತಾಡಿ ಬಸ್ಸುಗಳನ್ನು ಚಲಾಯಿಸುವಂತೆ ನೌಕರರ ಮನವೊಲಿಸುವಲ್ಲಿ ಯಶಸ್ವಿಯಾದ. ಆದರೆ ಇಷ್ಟೆಲ್ಲಾ ಅನಾಹುತಕ್ಕೆ ಕಾರಣನಾಗಿದ್ದ ತನ್ನ ಶಿಷ್ಯ ರಂಗಸ್ವಾಮಿಗೆ ಕನಿಷ್ಟ ಎಚ್ಚರಿಕೆ ಕೊಡುವ ಗೋಜಿಗೂ ಹೋಗಲಿಲ್ಲ. ಬದಲಿಗೆ ಮೊದಲೇ ಹೈರಾಣಾಗಿದ್ದ ಗಂಗಾಧರ್‌ನನ್ನೇ ದೂಷಿಸಿ ಜಾಗ ಖಾಲಿ ಮಾಡಿದ.


ಇತ್ತ ಸಹೋದ್ಯೋಗಿಗಳು ಹಾಗೂ ಯೂನಿಯನ್‌ನ ಕಾರ್ಯದರ್ಶಿ ಉಮಾದೇವಿ ಮುಂತಾದವರ ಸಾಂತ್ವನ, ಉಪಚಾರ, ಧೈರ್ಯದ ಮಾತುಗಳಿಂದ ಚೇತರಿಸಿಕೊಂಡಿರುವ ಗಂಗಾಧರ್ ಈಗ ಸಹಜ ಸ್ಥಿತಿಗೆ ಮರಳುತ್ತಿದ್ದಾರೆ. ಒತ್ತಡದ ಕ್ಷಣದಲ್ಲಿ ತಾನು ತೆಗೆದುಕೊಂಡ ದುಡುಕಿನ ನಿರ್ಧಾರದ ಬಗ್ಗೆ ಈಗ ಅವರಲ್ಲಿ ಪಶ್ಚಾತ್ತಾಪ ಮೂಡಿದೆ. ಜೊತೆಗೆ ಇದಕ್ಕೆ ಕಾರಣಕರ್ತನಾದ ಭ್ರಷ್ಟ, ದುಷ್ಟ ಅಧಿಕಾರಿಯ ವಿರುದ್ಧ ಹೋರಾಡುವ ಕಿಚ್ಚೂ ಮೂಡಿದೆ.

ಒಂದು ಜೀವವನ್ನೇ ಸಾವಿನಂಚಿಗೆ ದೂಡಿದ್ದ ರಂಗಸ್ವಾಮಿ ಮಾತ್ರ ನಿರುಮ್ಮಳವಾಗಿದ್ದಾನೆ. ಯಾರಾದರೂ ಒಬ್ಬರನ್ನು ಇಕ್ಕಟ್ಟಿಗೆ ಸಿಲುಕಿಸಿ ಪ್ರತಿದಿನ ಸಂಜೆಯ ವೇಳೆಗೆ ತನ್ನ ನೆಚ್ಚಿನ ಸಿಗ್ನೇಚರ್ ಬ್ರಾಂಡ್ ವಿಸ್ಕಿ ಪಾರ್ಟಿಗೆ ವ್ಯವಸ್ಥೆ ಮಾಡಿಕೊಳ್ಳುತ್ತಾ ಬಿಂದಾಸ್ ಆಗಿ ಕಾಲ ಕಳೆಯುತ್ತಿದ್ದಾನೆ.

ಸಜ್ಜನರೆಂದು ಹೆಸರು ಪಡೆದಿರುವ ಈ ಡಿಪೋದ ಮ್ಯಾನೇಜರ್ ದೇವರಾಜ್‌ಗಿಂತಲೂ ಇಲ್ಲಿ ಈ ಖೂಳ ರಂಗಸ್ವಾಮಿಯೇ ಪವರ್‌ಫುಲ್. ನೌಕರರ ಎದುರಿಗೆ ಸಜ್ಜನ ಮ್ಯಾನೇಜರ್‌ರನ್ನು ಹೀಯ್ಯಾಳಿಸುವುದು ರಂಗಸ್ವಾಮಿಯ ಮತ್ತೊಂದು ಹೀನ ಚಾಳಿ. ಹೀಗಾಗಿ ಇಲ್ಲಿನ ನೂರಾರು ಚಾಲಕರು, ನಿರ್ವಾಹಕರ ಪಾಲಿಗೆ ಯಮಕಿಂಕರನಂತೆ ಕಾಡುತ್ತಿರುವ ಇವನನ್ನು ಮಟ್ಟಹಾಕುವ ಕಾರ್ಯ ಡಿಪೋ ಹಂತದಲ್ಲಿ ಆಗುವ ಲಕ್ಷಣಗಳಿಲ್ಲ. ಮೇಲಾಗಿ ರಂಗಸ್ವಾಮಿಯ ಗಾಡ್‌ಫಾದರ್ ಆಗಿ ನಿಂತಿರುವ ಮತ್ತೊಬ್ಬ ಭ್ರಷ್ಟ ಅಧಿಕಾರಿ ಡಿಟಿಒ ಕೆ.ಎಂ.ಫಯಾಜ್ ಶ್ರೀರಕ್ಷೆ ಇರುವಷ್ಟು ಕಾಲ ಈತನನ್ನು ಅಲ್ಲಾಡಿಸುವವರೇ ಇಲ್ಲದಂತಾಗಿದೆ. ಹೀಗೆ ಕೊಬ್ಬಿ ಹೋಗಿರುವ ರಂಗಸ್ವಾಮಿ 'ಡಿಟಿಒ ನನ್ನ ಜೇಬಿನಲ್ಲಿದ್ದಾರೆ, ನನ್ನನ್ನು ಯಾರೂ ಏನೂ ಮಾಡೋಕಾಗಲ್ಲ' ಅಂತ ಮೀಸೆ ತಿರುಪಿಕೊಂಡು ಅಡ್ಡಾಡುತ್ತಿದ್ದಾನೆ.

ಸಂಸ್ಥೆಯಲ್ಲಿ ದುಡಿಯುತ್ತಿರುವ ನೌಕರರ ಜೀವಗಳನ್ನೇ ಬಲಿ ತೆಗೆದುಕೊಳ್ಳುತ್ತಿರುವ ದುಷ್ಟ ಅಧಿಕಾರಿಗಳ ಮೇಲೆ ಇಲಾಖೆ ಸೂಕ್ತ ಕ್ರಮ ತೆಗೆದುಕೊಳ್ಳದೇ ತಮ್ಮ ಮಾಮೂಲಿ ಧೋರಣೆಯನ್ನು ಮುಂದುವರೆಸುವ ಎಲ್ಲ ಲಕ್ಷಣಗಳು ಕಾಣುತ್ತಿವೆ. ಹೀಗೇ ಮುಂದುವರೆದರೆ ಒಂದಲ್ಲಾ ಒಂದು ದಿನ ನೌಕರರೇ ರೊಚ್ಚಿಗೆದ್ದು ಈ ದುಷ್ಟರಿಗೆ ತಾವೇ ಪಾಠ ಕಲಿಸುವ ದಿನಗಳು ದೂರವಿಲ್ಲ.

• ದೊಡ್ಡಿಪಾಳ್ಯ ನರಸಿಂಹಮೂರ್ತಿ



ಮಾನಸಿ ಮುಂದೆ ಹಲ್ಲುಕಿರಿಯುತ್ತಾ ನಿಂತಿರುವ ಮೋದಿ....

ಮಾನಸಿಯೊಂದಿಗೆ ಮೋದಿಯ ಪ್ರೇಮ ಪ್ರಸಂಗ

ಎರಡು ವಾರಗಳ ಹಿಂದೆ ನರೇಂದ್ರ ಮೋದಿ ಎಂಬ ನರಹಂತಕ ಮಾನಸಿ ಸೋನಿ ಎಂಬ ಮಹಿಳೆಯೊಂದಿಗೆ ಅಕ್ರಮ ಸಂಬಂಧ ಹೊಂದಿದ್ದರ ಬಗ್ಗೆ ವಿವರವಾಗಿ ಪ್ರಕಟಿಸಿದ್ದೆವು. ಇತ್ತೀಚೆಗೆ ಪತ್ರಕರ್ತ ಆಶೀಶ್ ಖೇತಾನ್ ಅವರು ತಮ್ಮ 'ಗುಲೈಲ್' ವೆಬ್‌ಪೋರ್ಟಲ್‌ನಲ್ಲಿ ಮೋದಿಯು ಈ ಮಾನಸಿಯ ಮುಂದೆ ಹಲ್ಲುಗಿಂಜುತ್ತಾ ನಿಂತಿರುವ ಫೋಟೊವನ್ನು ಪ್ರಕಟಿಸಿದ್ದಾರೆ. ಅದನ್ನು ಮತ್ತು ಇತರೆ ಫೋಟೋಗಳಲ್ಲಿ ಇಲ್ಲಿ ನಮ್ಮ ಓದುಗರಿಗಾಗಿ ಪ್ರಕಟಿಸುತ್ತಿದ್ದೇವೆ.

ಈ ಫೋಟೋಗಳನ್ನು ಸೆರೆಹಿಡಿದಿದ್ದು 2005ರಲ್ಲಿ.

ನಮ್ಮ ಡಿಸೆಂಬರ್ 4, 2013ರ ಸಂಚಿಕೆಯಲ್ಲಿ ಹೀಗೆ ಬರೆದಿದ್ದೆವು:

"ವಾಸ್ತುಶಿಲ್ಪದಲ್ಲಿ ಪದವಿ ಪಡೆದಿರುವ ಮಾನಸಿ ಮೋದಿಯನ್ನು ಭೇಟಿ ಆಗಿದ್ದು 2005ರಲ್ಲಿ, ಸ್ವಲ್ಪ ದಿನಗಳಲ್ಲೇ ಮಾನಸಿ ಮತ್ತು ಮೋದಿ ನಡುವೆ ಲವ್ ಅಫೇರ್ ಶುರುವಾಯಿತು. ಅದೇ 2005ರಲ್ಲಿ ನಡೆದ ಶರದ್ ಉತ್ಸವದಲ್ಲಿ ಮೋದಿಗೆಂದು 25,000 ರೂಪಾಯಿಗಳ ವೆಚ್ಚದಲ್ಲಿ ಒಂದು ಒಂಟೆ ಗಾಡಿಯನ್ನು ಅಲಂಕರಿಸಲಾಗಿತ್ತು. ಆಗ ಮೋದಿ ಮಾನಸಿಯೊಂದಿಗೆ ಈ ಗಾಡಿಯಲ್ಲಿ ಕುಳಿತು ಬೆಳದಿಂಗಳಲ್ಲಿ ಸುತ್ತಾಡಿದ್ದ. ಆತನಿಗೆಂದೇ ವಿಶೇಷ ಟೆಂಟ್ ಅನ್ನೂ ನಿರ್ಮಿಸಲಾಗಿತ್ತು. ಅವತ್ತು ಮೋದಿ ಮತ್ತು ಮಾನಸಿ ಇಬ್ಬರೂ ಈ ಟೆಂಟಿನಲ್ಲೇ ಉಳಿದುಕೊಂಡಿದ್ದರು. ಅವರಿಬ್ಬರಿಗೆಂದೇ ಅವತ್ತು ಸ್ಪೆಷಲ್ ಭೋಜನ ವ್ಯವಸ್ಥೆಯನ್ನೂ ಮಾಡಲಾಗಿತ್ತು."

ನಮ್ಮ ವರದಿ ಎಷ್ಟು ನಿಖರವಾಗಿತ್ತು ಎಂಬುದಕ್ಕೆ ಈ ಫೋಟೋಗಳೇ ಸಾಕ್ಷಿ. ಇವನ್ನು ತೆಗೆದದ್ದು ಅದೇ ಶರದ್ ಉತ್ಸವದಲ್ಲಿ.

ಇತ್ತೀಚೆಗೆ ಮಾನಸಿಯ ತಂದೆ ಪ್ರಾಣ್‌ಲಾಲ್ ಸೋನಿ ತಾನೇ ತನ್ನ ಮಗಳ ಮೇಲೆ ನಿಗಾ ಇಡಲು ನರೇಂದ್ರ ಮೋದಿಯನ್ನು ಕೋರಿದ್ದಕ್ಕಾಗಿ ಆಕೆಗೆ ಗುಜರಾತ್ ಪೊಲೀಸರು 'ರಕ್ಷಣೆ' ನೀಡಿದ್ದರು ಎಂದು ಹೇಳುವ ಮೂಲಕ ಮೋದಿ ಮತ್ತಾತನ ಬಲಗೈ ಭಂಟ ಅಮಿತ್ ಶಾ ಮಾನಸಿಯ ಮೇಲೆ ಅಕ್ರಮವಾಗಿ ಬೇಹುಗಾರಿಕೆ ಮಾಡಿದ್ದನ್ನು ಮುಚ್ಚಿಹಾಕಲು ಪ್ರಯತ್ನಿಸಿದ್ದು ನಿಮಗೆ ನೆನಪಿರಬಹುದು. ಜೊತೆಗೆ ಮಧು ಕಿಶ್ವರ್ ಎಂಬ ಮೋದಿಯ ಸೇವಕಿ "ತಾತನ ವಯಸ್ಸಿನಾದ, ಭ್ರಷ್ಟನೂ, ವ್ಯಭಿಚಾರಿಯೂ ಆದ ಪ್ರದೀಪ್ ಶರ್ಮಾನೊಂದಿಗೆ ಆಕೆಗೆ ಅನೈತಿಕ ಸಂಬಂಧ ಇತ್ತು. ಅದನ್ನು ತಡೆಯಲು ಆಕೆಯ ತಂದೆ ಕೋರಿದ್ದರಿಂದ ಪೊಲೀಸರು ಆಕೆಯ ಮೇಲೆ ನಿಗಾ ಇಟ್ಟಿದ್ದರು, ಆದರಲ್ಲಿ ತಪ್ಪೇನಿದೆ?" ಎಂದು ಟ್ವಿಟರ್‌ನಲ್ಲಿ ಒದರಿದ್ದೂ ನೆನಪಿರಬಹುದು.



ಒಂಟೆ ಗಾಡಿಯಲ್ಲಿ.....

ಆದರೆ ಇದೆಷ್ಟು ಸತ್ಯ?


ವಾಸ್ತವವಾಗಿ 2009ರಲ್ಲಿ ಶರ್ಮಾನೊಂದಿಗೆ ಮಾನಸಿಗೆ ಯಾವ ತರಹದ ಅನೈತಿಕ ಸಂಬಂಧವಾಗಲಿ, ಆತನಿಂದ ಮಾನಸಿಯ ಜೀವಕ್ಕೆ ಬೆದರಿಕೆಯಾಗಲಿ ಇರಲಿಲ್ಲ. ಬದಲಾಗಿ ಶರ್ಮಾನೊಂದಿಗೆ ಇಡೀ ಸೋನಿ ಕುಟುಂಬಕ್ಕೆ ಇದ್ದದ್ದು ಸ್ನೇಹ.

ಇದಕ್ಕೆ ಉದಾಹರಣೆ: 2010ರಲ್ಲಿ ಶರ್ಮಾರ ವಿರುದ್ಧ ಮೋದಿ ಹಲವಾರು ಆರೋಪಗಳನ್ನು ಹೊರಿಸಿ ಅವರನ್ನು ಜೈಲಿಗೆ ದೂಡಿದಾಗ ಜೈಲಿಗೆ ಭೇಟಿ ಕೊಟ್ಟಿದ್ದು, ಶರ್ಮಾ ಅವರಿಗೆ ತಮ್ಮ ಮನೆಯಿಂದ ತಿಂಡೀ-ಊಟ ತಂದು ಕೊಟ್ಟಿದ್ದು ಇದೇ ಪ್ರಾನ್‌ಲಾಲ್ ಸೋನಿ ಮತ್ತಾತನ ಪತ್ನಿ.

ಶರ್ಮಾರಿಂದ ತಮ್ಮ ಮಗಳಿಗೆ ಬೆದರಿಕೆ ಇದ್ದಿದ್ದರೆ, ಅವರೊಂದಿಗೆ ಆಕೆ ಅನೈತಿಕ ಸಂಬಂಧ ಹೊಂದಿದ್ದರೆ ಪ್ರಾನ್‌ಲಾಲ್ ಸೋನಿ ಯಾಕೆ ಆತನೊಂದಿಗೆ ಇಂತಹ ನಿಕಟಸಂಪರ್ಕ ಹೊಂದಿರುತ್ತಿದ್ದರು? ಕಾಳಜಿ ತೋರುತ್ತಿದ್ದರು?

ಇನ್ನು ಪ್ರಾನ್‌ಲಾಲ್ ಸೋನಿ ತನ್ನ ಮಗಳ ರಕ್ಷಣೆಗೆಂದು ತಾನೇ ಆಕೆಯ ನಿಗಾ ಇಡಲು ಕೋರಿದ್ದೆ ಎಂದು ಹೇಳಿರುವುದೂ ಅಷ್ಟು ಸರಳವೇ?

ಇದಕ್ಕೆ ಒಂದಷ್ಟು ಅಂಶಗಳನ್ನು ಗಮನಿಸಬಹುದು. ನಮ್ಮ ವರದಿಯಲ್ಲಿ ಮಾನಸಿ ತನ್ನ ಸಹೋದರರೊಂದಿಗೆ ಎಕೊಲಿಬ್ರಿಯಮ್ ಎನರ್ಜಿ ಎಂಬ ಕಂಪನಿಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಿದ್ದಳು ಎಂದು ಬರೆದಿದ್ದೆವು. ಆ ಕಂಪನಿಯು ಆರಂಭದಲ್ಲಿ ಕುಂಟುತ್ತ ತೆವಳುತ್ತಾ ಸಾಗಿತ್ತು. ಆದರೆ ಯಾವಾಗ ಮೋದಿಯೊಂದಿಗೆ ಮಾನಸಿಯ ಸಂಬಂಧ ಶುರುವಾಯಿತೋ ಆಕೆಯ ಎಕೊಲಿಬ್ರಿಯಮ್ ಕಂಪನಿಯ ಹಣೆಬರಹವೇ ಬದಲಾಯಿತು.



ಪ್ರದೀಪ್ ಶರ್ಮಾ ಜೊತೆ......


ಮೋದಿ ಈ ಕಂಪನಿಗೆ ಸ್ಮಾರ್ಟ್‌ಗ್ರಿಡ್ ಸ್ಥಾಪಿಸುವ ಒಂದು ದೊಡ್ಡ ಕಾಂಟ್ರಾಕ್ಟನ್ನು ನೀಡಿದ. ಜೊತೆಗೆ ಟೊರೆಂಟ್ ಪವರ್ ಎಂಬ ಖಾಸಗಿ ಕಂಪನಿಯೊಂದರ ಕಾಂಟ್ರಾಕ್ಟ್ ಕೂಡ ಇದೇ ಕಂಪನಿಗೆ ಸಿಗುವಂತೆ ಮೋದಿ ನೋಡಿಕೊಂಡ. ಮಾನಸಿಯ ಸಹೋದರ ಹರಿತ್ ಸೋನಿ 'ಬಿಸಿನೆಸ್ ವರ್ಲ್ಡ್' ಪತ್ರಿಕೆ ಕೊಟ್ಟ ಸಂದರ್ಶನದಲ್ಲಿ "ನಮ್ಮ ಕುಟುಂಬ ಮತ್ತು ಸಹೋದರಿಯ ನೆರವಿನಿಂದಲೇ ನಾವು ಈ ಕಂಪನಿಯನ್ನು ಗಟ್ಟಿಗೊಳಿಸಲು ಸಾಧ್ಯವಾಯಿತು" ಎಂದು ಹೇಳಿದ್ದ.

ಇದರ ಅರ್ಥ ಮೋದಿಯೊಂದಿಗೆ ಮಾನಸಿ ಹೊಂದಿದ್ದ ಸಂಬಂಧದಿಂದಾಗಿ ಆಕೆಯ ಮತ್ತು ಸಹೋದರರ ಕಂಪನಿ ಉದ್ಧಾರವಾಯಿತು ಎಂದಲ್ಲವೇ?


ಇದು ಭ್ರಷ್ಟಾಚಾರವಲ್ಲವೇ? •

ಈ ಚಿತ್ರಗಳಲ್ಲಿ ಮೋದಿ ಅಲಂಕೃತ ಒಂಟೆ ಗಾಡಿಯಲ್ಲಿ ಕುಳಿತಿರುವುದನ್ನು ನೋಡಬಹುದು. ಹಾಗೆಯೇ ಶರದ್ ಉತ್ಸವಕ್ಕೆ ಬಂದಿದ್ದ ಅತಿಥಿಗಳಿಗೆಂದು ನಿರ್ಮಿಸಿದ್ದ ವಿಶೇಷ ಟೆಂಟ್‌ಗಳನ್ನೂ ಕಾಣಬಹುದು. ಇಂತಹ ಒಂದು ಟೆಂಟಿನಲ್ಲೇ ಮೋದಿ ಮತ್ತು ಪ್ರೇಯಸಿ ಮಾನಸಿ ಒಂದು ರಾತ್ರಿಯ ಮಟ್ಟಿಗೆ ಉಳಿದುಕೊಂಡಿದ್ದು. ಒಂದೇ ಒಂದು ಕೊರತೆ ಯಾವುದೆಂದರೆ ಅವರಿಬ್ಬರೂ ಬೆಳದಿಂಗಳಲ್ಲಿ ಒಂಟೆಯ ಗಾಡಿಯಲ್ಲಿ ಸುತ್ತಾಡುತ್ತಿರುವ ಫೋಟೋ ಇಲ್ಲದಿರುವುದು!!

ಅಂದಹಾಗೆ ಈ ಶರದ್ ಉತ್ಸವವನ್ನು ಖಾಸಗಿ ಸಂಸ್ಥೆಯೊಂದು ಒಂದು ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿ ಏರ್ಪಡಿಸಿದಾಗ ಸ್ಥಳೀಯ ಜಿಲ್ಲಾಧಿಕಾರಿ ಆಗಿದ್ದವರು ಐಎಎಸ್ ಅಧಿಕಾರಿ ಪ್ರದೀಪ್ ಶರ್ಮ. ಇದೇ ಶರ್ಮ ಆನಂತರ ಮೋದಿಯ ಕೆಂಗಣ್ಣಿಗೆ ಗುರಿಯಾಗಿ ಅವಮಾನಕ್ಕೊಳಗಾಗಿದ್ದರು. ಅದಕ್ಕೆ ಕಾರಣ ಪ್ರದೀಪ್ ಶರ್ಮಾರಿಗೆ ಮಾನಸಿಯೊಂದಿಗೆ ಮೋದಿ ಹೊಂದಿದ್ದ ಅಕ್ರಮ ಸಂಬಂಧದ ಬಗ್ಗೆ ಗೊತ್ತಿತ್ತು ಎಂಬುದು! ಇಲ್ಲಿರುವ ಚಿತ್ರಗಳಲ್ಲಿ ಶರ್ಮಾ ಅವರನ್ನೂ ಕಾಣಬಹುದು.




ವಿಶೇಷವಾಗಿ ನಿರ್ಮಿಸಿದ್ದ ಟೆಂಟ್‌ಗಳು...




ತೇಜ್‌ಪಾಲ್‌ನ ಹೆಂಡತಿ ಗೀತನ್

ತೆಹೆಲ್ಕಾ

ಹಣಕಾಸಿನ ವ್ಯವಹಾರದ ಸುತ್ತ ಅನುಮಾನಗಳ ಹುತ್ತ




ತರುಣ್ ತೇಜ್‌ಪಾಲ್



ಪ್ರಖ್ಯಾತ ಪತ್ರಕರ್ತ ಎನಿಸಿಕೊಂಡಿದ್ದ ತೆಹೆಲ್ಕಾ ಸಂಪಾದಕ ತರುಣ್ ತೇಜ್‌ಪಾಲ್ ತನ್ನ ಕಿರಿಯ ಮಹಿಳಾ ಸಹೋದ್ಯೋಗಿಯ ಮೇಲೆ ಪೌರುಷ ತೋರಿಸಲು ಹೋಗಿ ಸಿಕ್ಕಿಬಿದ್ದಿದ್ದಾನೆ. ತೇಜ್‌ಪಾಲ್ ಒಡನಾಡುತ್ತಿದ್ದ ಭಾರತೀಯ ಸಮಾಜದ ಅತ್ಯುನ್ನತ ಶ್ರೀಮಂತ ಬುದ್ಧಿಜೀವಿ ಹಾಗೂ ಬರಹಗಾರರ ಒಂದು ಸೀಮಿತ ಹಾಗೂ ನಿರ್ದಿಷ್ಟ ವಲಯದಲ್ಲಿ ಸ್ತ್ರೀ-ಪುರುಷರ ಸಂಬಂಧಗಳಲ್ಲಿ ಬಲಾತ್ಕಾರದ ಮಾತು ಉದ್ಭವಿಸುವುದು ಅಪರೂಪ. ಅನೇಕರಿಗೆ ತೇಜ್‌ಪಾಲ್‌ನ ಈ ಮುಖ ಗೊತ್ತೇ ಇತ್ತು. ಏಕೆಂದರೆ 2011ರಲ್ಲಿ ಗೋವಾದಲ್ಲಿ ಮೊದಲ ಬಾರಿಗೆ ನಡೆದ ಅವನ ಥಿಂಕ್‌ಫೆಸ್ಟ್ ಎಂಬ ಅದ್ದೂರಿ ಚಿಂತನಾ ಸಮಾವೇಶದಲ್ಲಿ ತೇಜ್‌ಪಾಲ್ ಮಾತನಾಡುತ್ತಾ "ನೀವೀಗ ಮನಸ್ಸೋ ಇಚ್ಛೆ ಕುಡಿದು, ತಿಂದು ಆಮೇಲೆ ಬೇಕೆನಿಸಿದವರ ಜೊತೆ ಹೋಗಿ ಮಲಗಿ" ಎಂದು ಬಹಿರಂಗವಾಗಿಯೇ ಗುರುಬೋಧನೆ ಮಾಡಿದ್ದ. ತೇಜ್‌ಪಾಲ್‌ನ ಯೋಚನೆಗಳು, ಜೀವನಶೈಲಿ ಹಾಗೂ ಕೆಲ ಬರಹಗಳೂ ಕೂಡಾ ಹೀಗೆ 'ಸೆಕ್ಸ್' ಪೀಡಿತವಾಗಿದ್ದವು. ತೇಜ್‌ಪಾಲ್‌ನ **Alchemy of Desire** ಅರ್ಥಾತ್ ಕಾಮ ರಸಾಯನ ಎಂಬ ಕಾದಂಬರಿಯೂ ಅವನ ಮನೋರೋಗದ ಅಭಿವ್ಯಕ್ತಿಯಂತಿದೆ.

ಇಂತಹ ತರುಣ್ ತೇಜ್‌ಪಾಲ್‌ನೊಂದಿಗೆ ಒಡನಾಡುತ್ತಿದ್ದ ಮೆಚ್ಚುತ್ತಿದ್ದ ಆರಾಧಿಸುತ್ತಿದ್ದ ಜೊತೆಗೆ ಕೆಲಸ ಮಾಡುತ್ತಿದ್ದ ಎಲ್ಲರೂ ತನ್ನ ಯೋಚನೆಗಳೊಂದಿಗಿರುತ್ತಾರೆ ಎಂದು ತೇಜ್‌ಪಾಲ್ ವಿನಾಕಾರಣ ನಂಬಿಕೊಂಡಿದ್ದೇ ಮೊನ್ನೆ ನಡೆದ ಅತ್ಯಾಚಾರ ಪ್ರಯತ್ನದಂತಹ ಕೆಟ್ಟ ಘಟನೆಗೆ ಪ್ರಚೋದನೆ ನೀಡಿದ್ದು. ಏಕೆಂದರೆ ಆ ಯುವತಿ ತೇಜ್‌ಪಾಲ್‌ನ ಸಹೋದ್ಯೋಗಿಯಾಗಿದ್ದಳೇ ವಿನಃ ಅವನ ಆಲೋಚನೆ ಜೀವನಶೈಲಿಯ ಜೊತೆಗಾರಳಾಗಿರಲಿಲ್ಲ. ಇವೆಲ್ಲ ತೇಜ್‌ಪಾಲ್‌ನ ವೈಯಕ್ತಿಕ ಬದುಕಿನ ಕತೆಯಾದರೆ ಅವನು ಗೆಳೆಯರೊಂದಿಗೆ ರೂಪಿಸಿ ಬೆಳೆಸಿದ ತೆಹಲ್ಕಾ ಪತ್ರಿಕೆಯ ಹಣಕಾಸಿನ ವ್ಯವಹಾರಗಳ ಸುತ್ತ ಈಗ ಅನುಮಾನಗಳ ಹುತ್ತ ಬೆಳೆಯುತ್ತಿದೆ.



ಅಮೀರ್ ಖಾನ್

1983ರಲ್ಲಿ ಇಂಡಿಯನ್ ಎಕ್ಸ್‌ಪ್ರೆಸ್ ದಿನಪತ್ರಿಕೆಯ ಡೆಸ್ಕ್ ಕಾಪಿ ನೌಕರನಾಗಿ ಪತ್ರಕರ್ತ ಜೀವನ ಶುರು ಮಾಡಿದ ತೇಜ್‌ಪಾಲ್ 2004ರಲ್ಲಿ ತೆಹಲ್ಕಾ ಪತ್ರಿಕೆ ಲಾಂಚ್ ಮಾಡುವ ಹೊತ್ತಿಗೆ ಪ್ರಖ್ಯಾತನಾಗಿ ಹೋಗಿದ್ದ. ಕೆಲವರ್ಷ ಕಾಲ ಇಂಡಿಯಾ ಟುಡೆ ಹಾಗೂ ಔಟ್‌ಲುಕ್ ಪತ್ರಿಕೆಯಲ್ಲಿದ್ದು ನಂತರ **India House Ink** ಎಂಬ ಪ್ರಕಾಶನ ಸಂಸ್ಥೆ ಆರಂಭಿಸಿ ಅರುಂಧತಿ ರಾಯ್‌ರವರ 'ಗಾಡ್ ಆಫ್ ಸ್ಮಾಲ್ ಥಿಂಗ್ಸ್' ಕಾದಂಬರಿ ಪ್ರಕಟಿಸಿ, 2000ರಲ್ಲಿ ತೆಹಲ್ಕಾ ವೆಬ್‌ಸೈಟ್ ಶುರು ಮಾಡಿದ. ಆಗ ವಿವಿಧ ಹಂತಗಳಲ್ಲಿ ಅವನೊಂದಿಗೆ ಸತೀಶ್ ಶೇಟ್, ಅನಿರುದ್ ಬಹಾಲ್ ಮುಂತಾದ ಮಿತ್ರರಿದ್ದರು. ತೆಹಲ್ಕಾ ವೆಬ್‌ಸೈಟ್ ಮೂಲಕ ಕ್ರಿಕೆಟ್ ಬೆಟ್ಟಿಂಗ್ ಹಾಗೂ ಇಂಡಿಯಾದ ಮಿಲಿಟರಿ ಇಲಾಖೆಯಲ್ಲಿ ನಡೆಯುತ್ತಿದ್ದ ಲಂಚದ ದಂಧೆಗಳನ್ನೂ ರಹಸ್ಯ ಕ್ಯಾಮರಾ ಕಾರ್ಯಾಚರಣೆ ನಡೆಸುವ ಮೂಲಕ ಅನಿರುದ್ ಬಹಾಲ್ ಹಾಗೂ ತೇಜ್‌ಪಾಲರ ತಂಡ ಬಯಲಿಗೆಳೆಯಿತು.

ಬಹುಶಃ ಈ ಕಾರ್ಯಾಚರಣೆಗಳು ಹಾಗೂ ಸಿಕ್ಕ ಯಶಸ್ಸೇ ತೆಹಲ್ಕಾ ಪತ್ರಿಕೆಯ ಹುಟ್ಟಿಗೆ ಕಾರಣವಾದವು.

ಭಾರತೀಯ ಸಮಾಜ, ರಾಜಕಾರಣದೊಳಗೆ ಅಟ್ಟಹಾಸ ನಡೆಸುತ್ತಿದ್ದ ಭ್ರಷ್ಟಾಚಾರ, ಸ್ವಜನಪಕ್ಷಪಾತ ಎಲ್ಲಾ ತರಹ ಅನ್ಯಾಯಗಳ ವಿರುದ್ಧ ಯುದ್ಧ ಘೋಷಿಸುವಂತೆ ತೆಹಲ್ಕಾ ಲಾಂಚ್ ಆದಾಗ ಅದಕ್ಕೆ ಬೆಂಬಲವಾಗಿ ದೇಣಿಗೆ ರೂಪದಲ್ಲಿ ಹರಿದುಬಂದ ಹಣವೇ ಎರಡು ಕೋಟಿ ರೂಪಾಯಿಗಳಷ್ಟಿತ್ತು!

ಖ್ಯಾತ ಲೇಖಕಿ ಅರುಂಧತಿ ರಾಯ್, ವಕೀಲ ರಾಮ್ ಜೇಠ್ಮಲಾನಿ, ರಾಜಕಾರಣಿ ಕಪಿಲ್ ಸಿಬಾಲ್, ನಟ ಅಮೀರ್ ಖಾನ್, ನಟಿ ನಂದಿತಾ ದಾಸ್... ಹೀಗೆ ಇಂಡಿಯಾ ದೇಶದ ನಾನಾ ಕ್ಷೇತ್ರಗಳಲ್ಲಿ ಇದ್ದ, ನಾನಾ ಭಾಗಗಳಲ್ಲಿ ನೆಲೆಸಿದ್ದ 'ಒಳ್ಳೆಯದೇನನ್ನಾದರೂ ಮಾಡಲು' ಆಶಿಸುತ್ತಿದ್ದ ಜನ ಧಾರಾಳವಾಗಿ ತೆಹಲ್ಕಾಗೆ ಅರ್ಥಾತ್ ತೇಜ್‌ಪಾಲ್‌ಗೆ ಹಣ ಬೆಂಬಲ ನೀಡಿದ್ದರು.




ಶೋಮಾ

ಆಗ ಭಾರತದ ಪತ್ರಿಕೋದ್ಯಮ ಜಗತ್ತಿನಲ್ಲಿ ಪ್ರಮುಖ ಇಂಗ್ಲಿಷ್ ಪತ್ರಿಕೆಗಳಾಗಿ ಔಟ್‌ಲುಕ್, ಫ್ರಂಟ್‌ಲೈನ್ ಹಾಗೂ ದಿ ವೀಕ್ ಇದ್ದವು. ಆಧುನಿಕ ಜಗತ್ತಿನ ಸ್ಪರ್ಧೆ, ಖರ್ಚುಗಳು, ಜಾಹಿರಾತುಗಳ ಮೇಲಿನ ಅವಲಂಬನೆ, ರಾಜಕೀಯ ಒಲವು ನಿಲುವುಗಳ ಹಗ್ಗಜಗ್ಗಾಟಗಳಲ್ಲಿ ಬೇರೆಲ್ಲಾ ಪತ್ರಿಕೆಗಳಿಗೆ ಹೋಲಿಸಿದರೆ ತೆಹಲ್ಕಾಗೆ ಕೊಂಚ ಕಷ್ಟವೇ ಇತ್ತೆನ್ನಬಹುದು. ಏಕೆಂದರೆ 1995ರಲ್ಲಿ ಶುರುವಾದ ಔಟ್‌ಲುಕ್ ಕೇವಲ ಒಂದೇ ಪತ್ರಿಕೆಯಾಗಿ ಉಳಿಯದೆ **Out look Traveller, Out look money, Out look Business, Out look Career 360** ಹಾಗೂ ಔಟ್‌ಲುಕ್ ಹಿಂದಿ ಪತ್ರಿಕೆಗಳನ್ನು ಪ್ರಾರಂಭಿಸಿ ತಕ್ಕಮಟ್ಟಿಗಿನ ಒಂದು ಸ್ವಾವಲಂಬಿ ಪತ್ರಿಕಾ ಸಂಸ್ಥೆಯಾಗಿ ಬೆಳೆಯಿತು. ಸಂದರ್ಭದ ಒತ್ತಡ ಹಾಗೂ ಸಿಕ್ಕ ಅವಕಾಶಗಳನ್ನು ಬಳಸಿಕೊಂಡು ಔಟ್‌ಲುಕ್ ಮುಂದುವರೆಯಿತು. ಮತ್ತೊಂದೆಡೆ ಫ್ರಂಟ್‌ಲೈನ್‌ಗೆ ದಿ ಹಿಂದೂ ಎಂಬ ದೊಡ್ಡ ಮಾತೃ ಪತ್ರಿಕಾ ಸಂಸ್ಥೆಯ ಬೆಂಬಲವಿತ್ತಾದ್ದರಿಂದ ಅದಕ್ಕೆ ಹಣಕಾಸಿನ ಸಮಸ್ಯೆ ದೊಡ್ಡದಾಗಿ ಕಾಡುವ ಸಾಧ್ಯತೆ ಇರಲಿಲ್ಲ. ಇನ್ನು ದಿ ವೀಕ್ ಇಂಗ್ಲಿಷ್ ವಾರ ಪತ್ರಿಕೆಯ ಬೆನ್ನೆಲುಬಾಗಿ ಮಲೆಯಾಳಂ ಮನೋರಮಾ ಎಂಬ ಮಾಧ್ಯಮ ಸಂಸ್ಥೆ ಇದೆ. ಡಜನ್‌ಗಟ್ಟಲೆ ಪತ್ರಿಕೆಗಳು, ಟಿವಿ ಚಾನಲ್ಲುಗಳು, ಎಫ್.ಎಂ.ರೇಡಿಯೋ ಚಾನಲ್ಲುಗಳ ಮಾಲೀಕರಾಗಿರುವ ಮನೋರಮಾ ಸಂಸ್ಥೆಯ ವಹಿವಾಟು ಸಾವಿರ ಕೋಟಿಗಳಷ್ಟಿದೆ.

ಹೀಗೆ ಇಂತಹ ದೈತ್ಯ ಮೀಡಿಯಾ ಗ್ರೂಪ್‌ಗಳ ಸಾಮರ್ಥ್ಯಕ್ಕೆ ಹೋಲಿಸಿದಾಗ ತೆಹಲ್ಕಾದ ಹಣ ಬಲ ತೀರಾ ಕಡಿಮೆ ಇತ್ತು. ಆದರೆ ತೆಹಲ್ಕಾಗಿದ್ದ ಶ್ರೀಮಂತಿಕೆ ಏನೆಂದರೆ ಅದಕ್ಕಿದ್ದ ಕ್ರೆಡಿಬಲಿಟಿ ಹಾಗೂ ಓದುಗರ ಬೆಂಬಲ.

ಒಂದು ನಿರ್ದಿಷ್ಟ ಗುರಿ, ಉದ್ದೇಶ ಇಟ್ಟುಕೊಂಡು ಹೊರಡುವ ಯಾರೇ ವ್ಯಕ್ತಿ ಅಥವಾ ಸಂಸ್ಥೆಗಳಿಗೆ ಹಣಕಾಸಿನ ಸಮಸ್ಯೆ ಎದುರಾದಾಗ ಅದು ಕೇವಲ ಹಣದ ಸಮಸ್ಯೆಯಾಗಷ್ಟೆ ಉಳಿಯುವುದಿಲ್ಲ. ಅವರ ಬದ್ಧತೆ, ಕ್ರಿಯಾಶೀಲತೆ ಹಾಗೂ ಸಮಸ್ಯೆಗಳನ್ನು ಮುಖಾಮುಖಿಯಾಗುವಾಗ ತೋರುವ ಚಾಕಚಕ್ಯತೆಗಳೆಲ್ಲಾ ಗಣನೆಗೆ ಬರುತ್ತವೆ. ಸಮಸ್ಯೆ ಪರಿಹರಿಸಿಕೊಳ್ಳಲು ಯಾವ ಹಾದಿ ಹಿಡಿಯಬೇಕೆಂಬ ಬಿಕ್ಕಟ್ಟಿನ ಆಯ್ಕೆಗಳೂ ಎದುರಾಗುತ್ತವೆ.



ಕೆ.ಡಿ. ಸಿಂಗ್

2007ರಲ್ಲಿ ಟ್ಯಾಬ್ಲಾಯ್ಡ್ ಆಕಾರದಿಂದ ಮ್ಯಾಗಜೀನ್ ಆಗಿ ಬದಲಾದ ತೆಹಲ್ಕಾಗೆ ಮುಂಬೈನ ದೊಡ್ಡ ಉದ್ಯಮಿ ಫಕ್ರುದ್ದೀನ್ ತಾಹಿರ್‌ಬಾಯ್ ಖೋಕರಿವಾಲ ಎಂಬುವರು ಇಂತಿಷ್ಟೇ ಎಂದು ಖಚಿತವಾಗಿ ಹೇಳಲಾಗದಿದ್ದರೂ ಕೋಟಿಗಳಷ್ಟು ರೂಪಾಯಿಯ ಹಣದ ನೆರವು ನೀಡಿದರು. ಈ ನೆರವಿಗೆ ಪ್ರತಿಯಾಗಿ ಫಕ್ರುದ್ದೀನ್ ಬೇರೇನನ್ನು ಬಯಸದೆ ಕೇವಲ ತೆಹಲ್ಕಾ ತನ್ನ ಪತ್ರಿಕೋದ್ಯಮದ ಹೋರಾಟವನ್ನು ಮುನ್ನಡೆಸಬೇಕು ಎಂದಷ್ಟೇ ಬಯಸಿದ್ದರು. ಆದರೆ ತೆಹಲ್ಕಾದ ಕಷ್ಟಗಳಿಗೆ ಆ ಹಣವೂ ಬೇಗನೆ ಕರಗಿ ಸಮಸ್ಯೆ ಮುಂದುವರೆಯಿತು.

ಆಗ ತೇಜ್‌ಪಾಲ್ ದಿಕ್ಕು ಬದಲಿಸಿದ.

A.K. Gurtu Holdings Pvt. Ltd. ಎಂಬ ಕಂಪನಿಯೊಂದು ಏಕಾಏಕಿ ಪ್ರತ್ಯಕ್ಷವಾಗಿ ತೆಹಲ್ಕಾದ ಷೇರುಗಳನ್ನು ಖರೀದಿಸಲಾರಂಭಿಸಿತು. ನೀವು ಈ ಷೇರುಗಳ ಖರೀದಿ ಹಾಗೂ ಮಾರಾಟವೆಂಬ ವಹಿವಾಟಿನ ವಿವರ ಕೇಳಿದರೆ ಬೆಚ್ಚಿಬೀಳುತ್ತೀರಿ.

ತೆಹಲ್ಕಾ ಲಾಸ್‌ನಲ್ಲಿ ನಡೆಯುತ್ತಿದ್ದರೂ ಕೂಡ ಹೆಚ್ಚಿನ ಮಾಲೀಕತ್ವ ಹೊಂದಿದ್ದ ಅಗ್ನಿ ಮೀಡಿಯಾ ಪ್ರೈ.ಲಿ. (ಇದು ನಂತರ ಅನಂತ್ ಮೀಡಿಯಾ ಎಂದಾಯಿತು) ಎಂಬ ನಿಗೂಢ ಖಾಸಗಿ ಕಂಪನಿಯೊಂದು ತೆಹಲ್ಕಾದಲ್ಲಿ ಹಲವರಿಗೆ ಷೇರುಗಳ ರೂಪದಲ್ಲಿ ಮಾಲೀಕತ್ವ ಹಂಚಿತ್ತು. ಆಗ **A.K. Gurtu** ಕಂಪನಿಯು ಸಡನ್ನಾಗಿ ತೆಹಲ್ಕಾದ ಪ್ರತಿ ಷೇರಿನ ಮುಖ ಬೆಲೆ ರೂ. 10 ಇದ್ದಾಗಲೂ ರೂ. 13,189ನಂತೆ ಬೆಲೆ ನೀಡಿ ಷೇರು ಕೊಂಡಿತು. ಈ ಅನುಮಾನಾಸ್ಪದ ಡೀಲ್‌ನಲ್ಲಿ ಶೋಮಾ ಚೌಧುರಿ 2006ರಲ್ಲಿ ತನ್ನಲ್ಲಿದ್ದ 1500 ಷೇರುಗಳ ಪೈಕಿ 500 ಷೇರುಗಳನ್ನು **A.K. Gurtu**ಗೆ ಮಾರಿ 66 ಲಕ್ಷ ರೂಪಾಯಿ ಲಾಭ ಮಾಡಿಕೊಂಡಳು.

ವಾಸ್ತವವಾಗಿ ತನ್ನ ಪಾಲಿನ 1500 ಷೇರುಗಳಿಗಾಗಿ ಶೋಮಾ ಹೂಡಿದ್ದ ಬಂಡವಾಳ ಕೇವಲ 15 ಸಾವಿರ ರೂಪಾಯಿ ಮಾತ್ರ ಆಗಿತ್ತು. ಆಕೆಯ 5 ಸಾವಿರ ರೂಪಾಯಿ ಹೂಡಿಕೆಯ 500 ಷೇರುಗಳು ಕೇವಲ ಮೂರೇ ವರ್ಷದಲ್ಲಿ 66 ಲಕ್ಷ ರೂ.ಗೆ ಮಾರಾಟವಾಗಿದ್ದವು, ಅದೂ ನಷ್ಟದಲ್ಲಿದ್ದ ತೆಹಲ್ಕಾ ಷೇರುಗಳು!

ಮತ್ತೊಂದೆಡೆ ತರುಣ್ ತೇಜ್‌ಪಾಲ್‌ನ ಹೆಂಡತಿ ಗೀತನ್ ಬಾತ್ರ ಬಳಿಯಿದ್ದ 10 ರೂ. ಬೆಲೆಯ 2 ಸಾವಿರ ಷೇರುಗಳನ್ನು ತಲಾ 13,189 ರೂ.ನಂತೆ ಅದೇ **A.K. Gurtu** ಕಂಪನಿ ಖರೀದಿಸಿತು. ಇಲ್ಲಿ ಕೈ ಬದಲಾಗಿದ್ದು 2.64 ಕೋಟಿ ರೂಪಾಯಿಗಳು.

ತೇಜ್‌ಪಾಲ್ ತಮ್ಮ ಮಿಂಟಿ ಕುನ್ವರ್ ಎಂಬಾತನೂ ಅದೇ ರೇಟಿನಲ್ಲಿ ತನ್ನಲ್ಲಿದ್ದ 1500 ಷೇರುಗಳನ್ನು **A.K. Gurtu**ಗೆ ಮಾರಿ 2 ಕೋಟಿ ರೂ. ಜೇಬಿಗಿಳಿಸಿದ. ತೇಜ್‌ಪಾಲ್‌ನ ತಂದೆ ಇಂದರ್‌ಜಿತ್ ತೇಜ್‌ಪಾಲ್ ಒಂದು ಸಾವಿರ ಷೇರು ಮಾರಿ 1.35 ಕೋಟಿ ರೂಪಾಯಿ ಪಡೆದ. ತೇಜ್‌ಪಾಲ್ ತಾಯಿ ಶಕುಂತಲಾ ತನ್ನಲ್ಲಿದ್ದ ಒಂದು ಸಾವಿರ ಷೇರು ಮಾರಿ 1.32 ಕೋಟಿ ರೂ. ಗಿಟ್ಟಿಸಿದಳು. ತೇಜ್‌ಪಾಲ್ ಸೋದರಿ ತೆಹಲ್ಕಾ ಸಿಬ್ಬಂದಿಯೂ ಆಗಿರುವ ನೀನಾ ಶರ್ಮ ತನ್ನ 432 ಷೇರು ಮಾರಿ 57 ಲಕ್ಷ ಗಳಿಸಿದಳು.

ಈ ಹಂತದಲ್ಲಿ ತರುಣ್ ತೇಜ್‌ಪಾಲ್ ತನ್ನಲ್ಲಿದ್ದ ಯಾವ ಷೇರನ್ನು ಮಾರಲಿಲ್ಲ. ಅದರ ಬದಲಾಗಿ ತೆಹಲ್ಕಾ ಷೇರುಗಳನ್ನು ಹೊಂದಿದ್ದ ಶಂಕರ್ ಶರ್ಮ ಹಾಗೂ ದೇವಿನಾ ಮೆಹ್ರಾ ಎಂಬುವರ ಬಳಿಯಿದ್ದ 4125 ಷೇರುಗಳನ್ನು ತಲಾ ರೂ. 10ರಂತೆ ಖರೀದಿಸಿದ ಮತ್ತು ಅದೇ ದಿನ ಷೇರು ಒಂದಕ್ಕೆ ತಲಾ 13,189 ರೂಪಾಯಿಯಂತೆ ಅದೇ **A.K. Gurtu** ಕಂಪನಿಗೆ ಮಾರಿಕೊಂಡ!

ಇದು ನಡೆದದ್ದು 2006ರ ಜೂನ್‌ನಲ್ಲಿ. ತೆಹಲ್ಕಾದ ಒಟ್ಟು ವಹಿವಾಟು ಹಾಗೂ ಆಸ್ತಿ ಮೌಲ್ಯ ಅದರ ಷೇರು ಬೆಲೆಗಿಂತ ಕಡಿಮೆಯೇ ಇದ್ದಾಗಲೂ ಈ ಅನುಮಾನಾಸ್ಪದ ಡೀಲ್ ನಡೆದಿದೆ. 2012ರ ಭಾರತೀಯ ಹಣಕಾಸು ಕಾಯ್ದೆಯ ಪ್ರಕಾರ ಒಂದೇ ದಿನದಲ್ಲಿ ಷೇರು ಕೈ ಬದಲಾವಣೆಯ ವ್ಯವಹಾರದಲ್ಲಿ 10 ರೂ. ಖರೀದಿಸಿ 13189 ರೂ.ಗೆ ಮಾರುವುದು ಅಕ್ರಮ ವಹಿವಾಟು ಎನಿಸಿಕೊಳ್ಳುತ್ತದೆ. ಅಷ್ಟೇ ಅಲ್ಲ ಅದು ಅನುಮಾನಾಸ್ಪದ ಹೌದಲ್ಲವೆ?

ಇಷ್ಟಕ್ಕೂ ಲಾಸ್‌ನಲ್ಲಿದ್ದ ತೆಹಲ್ಕಾ ಷೇರುಗಳನ್ನು ಹತ್ತಾರು ಕೋಟಿ ಹಣ ನೀಡಿ ಕೊಂಡುಕೊಂಡ **A.K. Gurtu** ಕಂಪನಿ ಯಾರದ್ದು? ಎಲ್ಲಿದೆ? ಎಂದು ಹುಡುಕಿದಾಗ ಅದು ನೀಡಿದ್ದ ಅಡ್ರೆಸ್ ನಂ.22, ಜಂಗಪುರ್ 'ಡಿ' ನವದೆಹಲಿ. ಆದರೆ ಇಲ್ಲಿ ಆ ಕಂಪನಿಯೇ ಇರಲಿಲ್ಲ.



ಅಕ್ರಮವಾಗಿ ಗಳಿಸಿದ ಹಣದಲ್ಲಿ ತೇಜ್‌ಪಾಲ್ ಗೋವಾದಲ್ಲಿ ಖರೀದಿಸಿರುವ ಪುರಾತನ ಬಂಗಲೆ ಮುಂದೆ ತೇಜ್‌ಪಾಲ್ ಕುಟುಂಬ

ತೇಜ್‌ಪಾಲ್‌ನ ಮನೆ ಇದ್ದ ಏರಿಯಾ ಅದು. ಹೀಗೆ ತೆಹಲ್ಕಾಗೆ 40 ಕೋಟಿ ರೂಪಾಯಿ ಹಣ ಹರಿಸಿದ್ದ Gurtu ಕಂಪನಿಯ ವಿಳಾಸ ನಂತರ ದೆಹಲಿಯ 313, ಬಿ.ಜೆ. ಶಾಪಿಂಗ್ ಸೆಂಟರ್, ವೀರ್ ಸಾವರ್ಕರ್ ಬ್ಲಾಕ್, ಶಕರಪುರ್‌ಗೆ ಬದಲಾಯಿತು. ಆಶ್ಚರ್ಯ ಅಂದರೆ ಇಂದಿಯಾದ ಕಾರ್ಪೊರೇಟ್ ಸಚಿವಾಲಯದ ದಾಖಲೆಗಳಲ್ಲಿ ಈ Gurtu ಕಂಪನಿಯ ಅಸ್ತಿತ್ವದ ಬಗ್ಗೆ ದಾಖಲೆಗಳೇ ಇರಲಿಲ್ಲ.

ನಂತರ 2007ರಲ್ಲಿ Gurtu ಕಂಪನಿ ದಿಢೀರನೆ ನಾಪತ್ತೆಯಾಯಿತು. ಅದು ತನ್ನಲ್ಲಿದ್ದ ತೆಹಲ್ಕಾ ಷೇರುಗಳನ್ನು ಎನ್‌ಲೈಟನ್ಸ್ ಕನ್ಸಲ್‌ಟೆನ್ಸಿ ಹಾಗೂ ವೆಲ್ಡನ್ ಪಾಲಿಮರ್ಸ್ ಎಂಬ ಕಂಪನಿಗಳಿಗೆ ಷೇರಿಗೆ ತಲಾ ರೂ. 10,623ರಂತೆ ಮಾರಿ ನಾಪತ್ತೆಯಾಯಿತು. ಮಜಾ ಅಂದರೆ ಇವೆರಡೂ ಕಂಪನಿಗಳೂ Gurtu ಕಂಪನಿಯ ವಿಳಾಸವಿದ್ದ ಸ್ಥಳದಲ್ಲೇ ತಮ್ಮ ಕಚೇರಿ ವಿಳಾಸ ಹೊಂದಿದ್ದವು. ಇದಾಗಿ ಎರಡೇ ವರ್ಷದಲ್ಲಿ ಎನ್‌ಲೈಟನ್ಸ್ ಕನ್ಸಲ್‌ಟೆನ್ಸಿಯು ಬಾಗಿಲು ಮುಚ್ಚಿತು.

ಇದರರ್ಥ ಇಷ್ಟೆ.

ತೆಹಲ್ಕಾವನ್ನು ತರುಣ್ ತೇಜ್‌ಪಾಲ್ Money laundering ಅರ್ಥಾತ್ ಕಪ್ಪು ಹಣವನ್ನು ಬಿಳಿಯಾಗಿ ಪರಿವರ್ತಿಸುವವರ ಕಾಳದಂಧೆಗೆ ವೇದಿಕೆ ಒದಗಿಸಿಕೊಟ್ಟಿದ್ದ!

ಈ ಕೈಬದಲಾವಣೆಯ ಡೀಲ್‌ನಲ್ಲಿ ತರುಣ್ ಮತ್ತವನ ಕುಟುಂಬ ಹಾಗೂ ಶೋಮಾ ಚೌಧರಿ ಕೋಟ್ಯಂತರ ರೂ. ಲಾಭ ಮಾಡಿಕೊಂಡಿದ್ದರು.

ಒಂದು ಹಂತದಲ್ಲಿ ತೆಹಲ್ಕಾಗೆ ಆರು ಪ್ರಮುಖ ಪಾಲುದಾರರಿದ್ದರು. ಮುಂಬೈನ ಫಕ್ರುದ್ದೀನ್, ಎ.ಕೆ. ಗುರ್ಟೆ, ಎನ್‌ಲೈಟನ್ಸ್ ಕನ್ಸಲ್‌ಟೆನ್ಸಿ, ವೆಲ್‌ಡನ್ ಪಾಲಿಮರ್ಸ್, ರಾಜಸ್ತಾನ್ ಪತ್ರಿಕಾ ಹಾಗೂ ಪಶ್ಚಿಮ ಬಂಗಾಳದ ಉದ್ಯಮಿ ಕನ್ವರ್ ದೀಪ್‌ಸಿಂಗ್ ಎಂಬಾತ. ಈತ ತೃಣಮೂಲ ಕಾಂಗ್ರೆಸ್‌ಗೆ ಹಣ ನೀಡಿ ಒಮ್ಮೆ ರಾಜ್ಯಸಭಾ ಸದಸ್ಯನೂ ಆದ.

ಇವರ ಪೈಕಿ ಫಕ್ರುದ್ದೀನ್ ಹಾಗೂ ರಾಜಸ್ತಾನ ಪತ್ರಿಕೆ ಹೊರತುಪಡಿಸಿದರೆ ಉಳಿದವರೆಲ್ಲಾ ಕರಾಳ ದಂಧೆಕೋರರೇ ಆಗಿದ್ದರು.

ಈ ಕಂಪನಿಗಳ ವಿಳಾಸವಿದ್ದ ದೆಹಲಿಯ ಶಕರ್‌ಪುರ್ ಏರಿಯಾವನ್ನು ಭಾರತದ ಮಾರಿಷಸ್ ಎಂದೇ ಕರೆಯುತ್ತಾರೆ. ಅಂದರೆ ಕಪ್ಪು ಹಣದ ದಂಧೆಕೋರರ ತಾಣವದು.

ತೇಜ್‌ಪಾಲ್ ಸಲೀಸಾಗಿ ಈ ದಂಧೆಯವರ ಸಖ್ಯ ಬೆಳೆಸಿದ. ಲಕ್ಷಾಂತರ ಜನ ಅಪಾರ ನಿರೀಕ್ಷೆ ಇಟ್ಟುಕೊಂಡಿದ್ದ ತೆಹಲ್ಕಾವನ್ನು ಆ ದಂಧೆಕೋರರ ಕೈಗೊಪ್ಪಿಸಿ ಜನ ಹಾಗೂ ಸಮಾನ ಆಶಯಗಳಿದ್ದ ಸಹೋದ್ಯೋಗಿಗಳನ್ನು ವಂಚಿಸಿದ್ದ.

ಪಂಜಾಬಿನ ನಿವೃತ್ತ ಸೇನಾಧಿಕಾರಿಯೊಬ್ಬನ ಮಗನಾಗಿದ್ದ ತೇಜ್‌ಪಾಲ್‌ಗೆ ಕೊಂಚ ಪ್ರತಿಭೆ ಇತ್ತು, ಮಹತ್ವಾಕಾಂಕ್ಷೆಗಳೂ ಇದ್ದವು. ನಮ್ಮ ಭ್ರಷ್ಟ ಸಮಾಜವನ್ನು ರಿಪೇರಿ ಮಾಡಿಬಿಡಬೇಕೆಂಬ ತುಡಿತವೂ ಖಂಡಿತಾ ಇತ್ತು. ಆದರೆ ಅದು ಕೇಳುವ ತ್ಯಾಗ, ಛಲ ಹಾಗೂ ಬದ್ಧತೆಗಳ ಸಂಘರ್ಷ ಎದುರಾದಾಗ ಅವನು ದಾರಿ ಬದಲಿಸಿಬಿಟ್ಟ. ಅವನ ಶ್ರೀಮಂತ ಕೌಟುಂಬಿಕ ಹಿನ್ನೆಲೆ, ಸಮಾಜದ ಉನ್ನತ ವಲಯಗಳೊಂದಿಗಿನ ಒಡನಾಟ, ಸುಖ ದೋಚುವ ಪ್ರವೃತ್ತಿಗಳು ಅವನ ವ್ಯಕ್ತಿತ್ವವನ್ನು ಬೆಳೆಸಲಿಲ್ಲ. ತೇಜ್‌ಪಾಲ್‌ಗೆ ಅಸಲಿಗೆ ಇಂಡಿಯಾ ದೇಶ ಅರ್ಥವಾಗಿದ್ದು ಸ್ವಲ್ಪವೇ ಇರಬಹುದು. ಹಾಗಾಗಿ ತೆಹಲ್ಕಾಗೆ ಕಷ್ಟ ಬಂದಾಗ ಅವನು ಜನಸಾಮಾನ್ಯರ ಹತ್ತಿರ ಸರಿಯದೆ ಅನುಮಾನಾಸ್ಪದ ಉದ್ದೇಶಗಳಿದ್ದ ಖಾಸಗಿ ಕಾರ್ಪೊರೇಟ್ ಉದ್ಯಮಿಗಳ ಹತ್ತಿರಕ್ಕೆ ಸರಿದ. ಒಮ್ಮೆ ಆ ಸ್ಮಶಾನ ಹೊಕ್ಕು ಸ್ವಯಂ ಸಮಾಧಿ ನಿರ್ಮಿಸಿ ಕೊಂಡರೆ ಸಾಮಾಜಿಕ ನ್ಯಾಯವೆಂಬ ರಕ್ತಮಾಂಸ ಅಲ್ಲಿ ಕರಗಿಹೋಗಿ ಕೊನೆಗೆ ಉಳಿಯುವುದು ಅಸ್ಥಿಪಂಜರ ಮಾತ್ರ ತಾನೆ.

ತೇಜ್‌ಪಾಲ್ ಶುರು ಮಾಡಿದ್ದ Think fest ಕಾರ್ಯಕ್ರಮಗಳು, ದೆಹಲಿಯಲ್ಲಿ ಶುರು ಮಾಡಿದ್ದ Prufrock ಕ್ಲಬ್‌ಗಳು, 'ಕುಡಿದು, ತಿಂದು ಸಿಕ್ಕವರೊಂದಿಗೆ ಮಜಾ ಮಾಡಿ' ಎನ್ನುವ ಸ್ಲೋಗನ್‌ಗಳೆಲ್ಲ ಅವನ ವ್ಯಕ್ತಿತ್ವದ ಪತನದ ಹಾದಿಯನ್ನು ಸಂಕೇತಿಸುತ್ತಿದ್ದವು. ಅವನ Prufrock ಕ್ಲಬ್ ಇಂಡಿಯಾ ದೇಶದ ಅತೀ ಶ್ರೀಮಂತ ವರ್ಗದ ಹಿನ್ನೆಲೆಯ ಬುದ್ಧಿಜೀವಿ-ಬರಹಗಾರರು, ಕಲಾವಿದರು ಕೂಟಿಯಾಗಿ ಚರ್ಚಿಸುವ ಒಂದು ಮೋಜಿನ ತಾಣವಾಗಿತ್ತು. ಇದೇ ಗುಂಪಿನ ಜನ ನಮ್ಮ ದೇಶದ ರಾಜಕೀಯ ಕಲೆ-ಸಾಹಿತ್ಯ-ಸಾಮಾಜಿಕ ಮೌಲ್ಯಗಳ ವಿಮರ್ಶಕರೂ, ನೀತಿ ನಿರೂಪಕ ಪ್ರತಿಪಾದಕರೂ ಆಗಿದ್ದರು.

ಇಷ್ಟು ಕಾಲ ಅಂತಲ್ಲಿ ಕುಳಿತು ಈ ದೇಶದ ಅನೇಕ ವಿಚಾರಗಳ ಬಗ್ಗೆ ಮಾತನಾಡುತ್ತಿದ್ದ ವ್ಯಕ್ತಿ ಕೆಲಕಾಲ ಜನರ ಗಮನವನ್ನು ತನ್ನತ್ತ ಸೆಳೆದುಕೊಂಡಿದ್ದ, ಆದರೆ ಕೊನೆಗೆ ಸೇರಬೇಕಾದ ಜಾಗ ಸೇರಿಕೊಂಡಿದ್ದಾನೆ ಅಷ್ಟೆ.


ಜನಸಾಮಾನ್ಯರು ತರುಣ್ ತೇಜಪಾಲ್‌ನನ್ನು ನಂಬಿ ಮೋಸ ಹೋದರು ಎಂಬುದೇ ಈ ಸಂದರ್ಭದ ವಿಷಾದಕರ ಅಂಶ.

■ ವರದಿಗಾರ


ಮೋದಿ ಕರಾಮತ್ತು: ಫೇಸ್‌ಬುಕ್ LIKEಗಳೂ ಮಾರಾಟಕ್ಕಿವೆ!

ರೇಸ್‌ಗು ಮುನ್ನ ವಿಪರೀತ ಓಡಿ, ಇನ್ನೇನು ರೇಸ್ ಆರಂಭವಾಗಿಬಿಡುತ್ತೆ ಅನ್ನುವ ಹೊತ್ತಿಗೆ ನಿತ್ರಾಣನಾಗಿ ನೆಲಕಚ್ಚುವ ಮತ್ಸ್ಯನ ಲಕ್ಷಣಗಳೆಲ್ಲವೂ ಮೋದಿ ಎಂಬ 'ಮಾಯೆ'ಯಲ್ಲಿ ಎದ್ದು ಕಾಣುತ್ತಿವೆ. ಊರಿಗೆ ಮುನ್ನವೇ ಪ್ರಧಾನಿ ಪಟ್ಟದತ್ತ ಓಟಕಿತ್ತಿರುವ ಮೋದಿ ಮಾಡಿ ಕೊಳ್ಳುತ್ತಿರುವ ಯಡವಟ್ಟುಗಳೇ ಇದಕ್ಕೆ ಸಾಕ್ಷಿ. ಈ ಪಟ್ಟಿಗೆ ಹೊಸ ಸೇರ್ಪಡೆಯೇ ಆನ್‌ಲೈನ್ ಫೇಕಿಂಗ್! ರ್‍ಯಾಲಿಗಳಲ್ಲಿ ಬಾಯಿಗೆ ಬಂದಂತೆ 'ಇತಿಹಾಸ' ಒದರಲು ಹೋಗಿ ಛೀಮಾರಿ ಹಾಕಿಸಿಕೊಂಡ ಬೆನ್ನಿಗೇ ಸೋಶಿಯಲ್ ನೆಟ್‌ವರ್ಕ್‌ಗಳನ್ನು ಬೇಕಾಬಿಟ್ಟಿ ದುರುಪಯೋಗಪಡಿಸಿಕೊಂಡ ಮೋದಿಯ ಮತ್ತೊಂದು ಅವತಾರವನ್ನು ಕೋಬ್ರಾ ಪೋಸ್ಟ್ ಎನ್ನುವ ಖಾಸಗಿ ಸುದ್ದಿ ಸಂಸ್ಥೆಯೊಂದು ಜಗಜ್ಜಾಹೀರು ಮಾಡಿದೆ.


ಮೋದಿಗೆ ಯುವ ಮತದಾರರ ಬೆಂಬಲವಿದೆ.... ಮೋದಿಗಂತಲೇ ಲಕ್ಷೋಪಲಕ್ಷ ಆನ್‌ಲೈನ್ ಅಭಿಮಾನಿಗಳಿದ್ದಾರೆ.......... ಮೋದಿಯನ್ನು ಬೆಂಬಲಿಸುವ ಸಲುವಾಗಿ ಕೋಟ್ಯಂತರ ಅಕೌಂಟುದಾರರು ಮೋದಿಯನ್ನು 'ಲೈಕ್' ಮಾಡಿದ್ದಾರೆ....... ಮೋದಿ ಮಹಾತ್ಮ(!)ನ ಒಂದೊಂದು ಚಲನವಲನವನ್ನು ಹೆಮ್ಮೆಯಿಂದ ದಾಖಲಿಸಿ ಹರಿಬಿಡುವ ಅಸಂಖ್ಯ Followerಗಳಿದ್ದಾರೆ......



ಹೀಗೆಲ್ಲಾ ಬಡಾಯಿ ಕೊಚ್ಚಿಕೊಳ್ಳುವ 'ನಮೋ' ವಾರಸುದಾರರಿಗೆ ಅಚ್ಚರಿಯೊಂದು ಕಾದಿದೆ. ಇವೆಲ್ಲಾ ಅಪ್ಪಟ ಫೇಕ್ ಕಿತಾಪತಿಗಳು. ತನ್ನನ್ನು ತಾನು ಮೋಸ್ಟ್ ಡಿಬೇಟಬಲ್, ಮೋಸ್ಟ್ ಅಬ್ಸರ್ವಿಂಗ್ ಪರ್ಸನಾಲಿಟಿ ಅಂತ ತೋರಿಸಿಕೊಳ್ಳುವುದಕ್ಕಾಗಿ ಸ್ವತಃ ಮೋದಿಯೇ ರೊಕ್ಕ ಚೆಲ್ಲಿ ಸೃಷ್ಟಿಸಿರುವ ಅಪ್ಪಟ ಸುಳ್ಳಿನ ಆನ್‌ಲೈನ್ ಅಕೌಂಟುಗಳವು ಎಂಬುದೀಗ ಸಾಬೀತಾಗಿದೆ. ಮೋದಿಯ ಕಾಸಿಗೆ ಆಸೆ ಬಿದ್ದ ಕೆಲ ಸಾಫ್ಟ್‌ವೇರ್ ಕಂಪನಿಗಳು ತಮ್ಮ ನೌಕರರನ್ನು ಹಗಲೂ ರಾತ್ರಿ ದುಡಿಮೆಗಚ್ಚಿ ಅವರಿಂದ ಈ ಕೆಲಸ ಮಾಡಿಸುತ್ತಿದೆ. ಅಸ್ತಿತ್ವವೇ ಇಲ್ಲದವನ ಹೆಸರಲ್ಲಿ ಫೇಸ್‌ಬುಕ್, ಟ್ವಿಟ್ಟರ್, ಯೂಟ್ಯೂಬ್ ಅಕೌಂಟ್ ತೆರೆಯುವುದು, ಆತ ಮೋದಿಯ ಫಾಲೋವರ್ ಎನ್ನುವಂತೆ ಒಂದೆರಡು ಕಾಮೆಂಟ್, ಫೋಟೋಗಳನ್ನು ಅಪ್‌ಲೋಡ್ ಮಾಡಿ ಚಾಲ್ತಿಗೆ ತಳ್ಳುವುದೇ ಅವರ ಕಾಯಕ.



ಕೋಬ್ರಾ ಪೋಸ್ಟ್ ಸಂಪಾದಕ. ಅನಿರುದ್ಧ ಬಹಲ್



ಬ್ಲೂ ವೈರಸ್ ಕುಟುಕು ಕಾರ್ಯಾಚರಣೆಯ ತುಣುಕು..

ಕೋಬ್ರಾ ಪೋಸ್ಟ್ ಸಂಸ್ಥೆ ನಡೆಸಿದ 'ಆಪರೇಷನ್ ಬ್ಲೂ ವೈರಸ್' ಹೆಸರಿನ ರಹಸ್ಯ ಕಾರ್ಯಾಚರಣೆಯಲ್ಲಿ ಮೋದಿಯ ಈ ಮುಖವಾಡ ಕಳಚಿ ಬಿದ್ದಿದೆ. ಅಸಲಿಗೆ ಸಂಸ್ಥೆಯ ಕಾರ್ಯಾಚರಣೆಯ ಉದ್ದೇಶ ಕೇವಲ ಮೋದಿಯ ಪ್ರಚಾರ ತಂತ್ರವನ್ನು ಮಾತ್ರ ಬಯಲು ಮಾಡುವುದಾಗಿರಲಿಲ್ಲ, ರಾಜಕೀಯ ಪಕ್ಷಗಳು ಸಾಮಾಜಿಕ ಜಾಲತಾಣಗಳನ್ನು ತಮ್ಮ ಪ್ರಚಾರಕ್ಕಾಗೊ ಇಲ್ಲವೇ ಎದುರಾಳಿಗಳ ಅಪಪ್ರಚಾರಕ್ಕಾಗೊ ಹೇಗೆ ಬಳಸಿಕೊಳ್ಳುತ್ತಿವೆ ಎನ್ನುವುದನ್ನು ಪತ್ತೆ ಮಾಡಲು ಈ ರಹಸ್ಯ ಕಾರ್ಯಾಚರಣೆ ನಡೆದಿತ್ತು. ಅಚ್ಚರಿ ಅಂತಂದರೆ ಈ 'ಸಾಫ್ಟ್' ವಂಚನೆಯಲ್ಲಿ ಬಿಜೆಪಿ ಮತ್ತು ಅದರ ಪ್ರಧಾನಿ ಅಭ್ಯರ್ಥಿ ನರೇಂದ್ರ ಮೋದಿಯೇ ಮುಂದಿರುವುದು ಬೆಳಕಿಗೆ ಬಂದಿದೆ. ಏನಿಲ್ಲವೆಂದರೂ ಎರಡು ಡಜನ್‌ಗೂ ಹೆಚ್ಚು ಸಾಫ್ಟ್‌ವೇರ್ ಕಂಪನಿಗಳು ಮೋದಿಯ ಕುರಿತು 'ಗಾಳಿಸುದ್ದಿ' ಹಬ್ಬಿಸುವುದರಲ್ಲಿ ಫುಲ್ ಬ್ಯುಸಿಯಂತೆ!


ಅಷ್ಟಕ್ಕೂ ಇಂತಹ ಕಂತ್ರಿ ಕೆಲಸವೇನು ಸುಲಭಕ್ಕೆ ಆಗುವಂತದ್ದಲ್ಲ. ಯಾರದ್ದೋ ಹೆಸರಲ್ಲಿ ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್, ಟ್ವಿಟ್ಟರ್‌ಗಳ ಖಾತೆ ತೆರೆಯುವುದು ಕಾನೂನು ಪ್ರಕಾರ ಅಪರಾಧ. ಅದಕ್ಕೆಂದೇ ಮೋದಿಯ ಆನ್‌ಲೈನ್ ಕಂಟ್ರಾಕ್ಟುದಾರರು ಬಲು ಚಾಲಾಕಿತನ ವಹಿಸಿದ್ದಾರೆ. ಇಂಟರ್ನೆಟ್ ಕನೆಕ್ಷನ್ ತೆಗೆದುಕೊಳ್ಳುವಾಗ ಯಾರದೋ ಖೊಟ್ಟಿ ದಾಖಲೆ ನೀಡಿ ಯಾಮಾರಿಸಿದ್ದಾರೆ. ಜೊತೆಗೆ ಕಂಪ್ಯೂಟರ್‌ನ ಐಪಿ ವಿಳಾಸ ಪದೇಪದೇ ಸ್ವಿಚ್ ಆಫ್ ಆಗುವಂತವುಳನ್ನೇ ಆಯ್ದುಕೊಂಡಿದ್ದಾರೆ. ಇದರಿಂದ ವಿಳಾಸವನ್ನು ಪತ್ತೆ ಮಾಡಲು ಸಾಧ್ಯವಾಗುವುದಿಲ್ಲ. ಅವರ ಖತರ್ನಾಕ್ ಬುದ್ಧಿ ಇಷ್ಟಕ್ಕೇ ನಿಂತಿಲ್ಲ. ಮೋದಿ ಫೇಕ್ ಪಬ್ಲಿಸಿಟಿ ಗುತ್ತಿಗೆಯನ್ನು ಹೊರದೇಶಗಳಿಗೂ ಕಾಂಟ್ರಾಕ್ಟ್ ನೀಡಿದ್ದಾರಂತೆ. ಅಲ್ಲಿನ ಕಂಪ್ಯೂಟರ್, ನೆಟ್‌ವರ್ಕ್‌ಗಳನ್ನು ಬಳಸಿ ಫೇಕ್ ಅಕೌಂಟ್ ಉತ್ಪತ್ತಿ ಮಾಡಿ ಮೋದಿಯ ಮಡಿಲಿಗೆ ಹಾಕುತ್ತಾರೆ. ವಿದೇಶಿ ಮೂಲವಾದ್ದರಿಂದ ಟ್ರೇಸ್ ಮಾಡುವುದೂ ಕಷ್ಟ. ಇದೊಂಥರಾ 'ಅಂತಾರಾಷ್ಟ್ರೀಯ ವ್ಯಭಿಚಾರ'ವಿದ್ದಂತೆ. ಮುಸ್ಲಿಮರ ಹೆಸರಲ್ಲಿ ಅಕೌಂಟ್‌ಗಳನ್ನು ತೆರೆದು ಮೋದಿ ಗುಣಗಾನ ಮಾಡುವ ಕಮೆಂಟ್‌ಗಳನ್ನು ಲೋಡ್ ಮಾಡಿ ಮೋದಿಗಂಟಿರುವ ಮುಸ್ಲಿಂ ವಿರೋಧಿ ಹಣೆಪಟ್ಟಿ ಅಳಿಸುವಲ್ಲೂ ಇವುಗಳನ್ನು ಬಳಸಿಕೊಳ್ಳಲಾಗುತ್ತಿದೆಯಂತೆ.

ಮತ್ತೊಂದು ಮಜಾ ಅಂದರೆ ಈ ದಗಲ್ಬಾಜಿ ದಂಧೆಯವರು ಫೇಕ್ ಅಕೌಂಟನ್ನು ಸೃಷ್ಟಿಸಿ ಮೋದಿ ಪರವಾಗಿ ಪರಿವರ್ತಿಸಿ ಹರಿಬಿಟ್ಟ ಕೂಡಲೇ ಕಂಪ್ಯೂಟರ್ ಅನ್ನು ಕಿತ್ತು ಕಲಸುಮೇಲೋಗರ ಮಾಡಿ ಹೊಸದಾಗಿ ಬೇರೆ ಬೇರೆ ಕಂಪ್ಯೂಟರ್‌ನ ಪಾರ್ಟ್‌ಗಳನ್ನು ಅಸೆಂಬಲ್ ಮಾಡುತ್ತಾರಂತೆ. ಅಲ್ಲಿಗೆ ಒಬ್ಬೊಬ್ಬ ಮೋದಿ 'ಲೈಕು'ಗಾರನಿಗೂ ಒಂದೊಂದು ಕಂಪ್ಯೂಟರ್ ಸೃಷ್ಟಿಯಾಗಿ ಧ್ವಂಸವಾಗಿಬಿಡುತ್ತೆ. ಇಷ್ಟೆಲ್ಲಾ ಶ್ರಮ ಹಾಕುವ ಈ ಡಿಜಿಟಲ್ ವಂಚಕರಿಗೆ ಮೋದಿ ಮತ್ತು ಬಿಜೆಪಿಯಿಂದ ಬಲು ದೊಡ್ಡ ಅಮೌಂಟೇ ಸಂದಾಯವಾಗುತ್ತದಂತೆ. ಇಲ್ಲದಿದ್ದರೆ ಯಾರು ತಾನೆ ಇಷ್ಟುದ್ದದ ರಿಸ್ಕ್ ತೆಗೆದುಕೊಂಡಾರು? ಆಘಾತಕಾರಿ ಸಂಗತಿ ಎಂದರೆ ಉತ್ತರ ಪ್ರದೇಶದ ಮುಜಫರಾಬಾದ್‌ನಲ್ಲಿ ಗಲಭೆಯಾದಾಗ ಸಾಮಾಜಿಕ ಜಾಲತಾಣಗಳ ಇದೇ ಫೇಕ್ ಖಾತೆಗಳನ್ನು ಬಳಸಿಕೊಂಡು ಕೋಮುಸಂಘರ್ಷಕ್ಕೆ ಎಡೆ ಮಾಡಿಕೊಡುವಂತ ಅಭಿಪ್ರಾಯಗಳನ್ನು ಹರಿಬಿಡಲಾಗಿತ್ತಂತೆ.

ಖೊಟ್ಟಿ ಖಾತೆ ತೆರೆದು ಮೋದಿಗೆ ಫೇಕ್ ಪಬ್ಲಿಸಿಟಿ ನೀಡುವುದಷ್ಟೇ ಇವುಗಳ ಕಾಯಕವಾಗಿರಲಿಕ್ಕಿಲ್ಲ ಎಂಬ ಅನುಮಾನವನ್ನೂ ಕೋಬ್ರಾಪೋಸ್ಟ್ ಸಂಸ್ಥೆ ಹೊರಹಾಕಿದೆ. ಯಾಕೆಂದರೆ ಬ್ಲೂ ವೈರಸ್ ಕಾರ್ಯಾಚರಣೆಯ ನೇತೃತ್ವ ವಹಿಸಿದ್ದ ಕೋಬ್ರಾಪೋಸ್ಟ್‌ನ ಸಹ ಸಂಪಾದಕ ಸೈಯದ್ ಮಸರೂರ್ ಹಸನ್‌ರು ತಾನೊಬ್ಬ ಗಿರಾಕಿಯಂತೆ ಅಂತಹ ಕಂಪನಿಗೆ ಹೋದಾಗ 'ಸಾಫ್ಟ್' ಜೀತದಾಳುಗಳು ತಾವು ಎಸ್‌ಎಂಎಸ್ ಮೂಲಕ ಬಾಂಬ್ ಸ್ಫೋಟದ ಗಾಳಿ ಸುದ್ದಿಯನ್ನು ಹರಿಬಿಟ್ಟು ಚುನಾವಣೆ ದಿವಸ ಮುಸ್ಲಿಮರು ಮತದಾನದಿಂದ ದೂರ ಉಳಿಯುವಂತೆ 'ಟ್ರಿಕ್' ಕೂಡಾ ಮಾಡಬಲ್ಲೆವು ಅಂತ ಬಡಾಯಿ ಕೊಚ್ಚಿಕೊಂಡಿದ್ದನ್ನು ಹಸನ್ ನೆನಪಿಸಿಕೊಳ್ಳುತ್ತಾರೆ. ಒಟ್ಟಿನಲ್ಲಿ ಮೋದಿ ಎಂಬ ಮಹಾವಂಚಕ ಪ್ರಧಾನಿ ಹುದ್ದೆಯನ್ನು ಕಿತ್ತುಕೊಳ್ಳಲು ಭರ್ಜರಿ ತಯಾರಿ ನಡೆಸಿರೋದು ಇದರಿಂದ ಸಾಬೀತಾಗುತ್ತದೆ.

ಕೋಬ್ರಾ ಪೋಸ್ಟ್‌ನ ಕುಟುಕು ಕಾರ್ಯಾಚರಣೆಯ ನಂತರ ನಿವೃತ್ತ ಐಪಿಎಸ್ ಅಧಿಕಾರಿಯಾದ ಅಮಿತಾಬ್ ಠಾಕೂರ್ ಎನ್ನುವವರು ಐಟಿ ಕಂಪನಿಗಳು ವಿರುದ್ಧ ದೂರು ನೀಡಿದ್ದಾರೆ. ಅದಾಗಲೇ ಅಂತಹ ಹತ್ತು ಕಂಪನಿಗಳ ಮೇಲೆ ಪೊಲೀಸರು ಎಫ್‌ಐಆರ್ ಕೂಡಾ ದಾಖಲಿಸಿಕೊಂಡು ತನಿಖೆಗಿಳಿದಿದ್ದಾರೆ. ಮುಂದೆ ಮೋದಿಗೆ ಅದಿನ್ನೆಂತ ಕಷ್ಟಕಾಲ ಎದುರಾಗುವುದೋ ಕಾದು ನೋಡಬೇಕು. ಅಂತೂ ಮೋದಿ 'ದಯೆ'ಯಿಂದ ಫೇಸ್‌ಬುಕ್‌ನ ಲೈಕ್‌ಗಳೂ ಭಾರೀ ಬೆಲೆಗೆ ಬಿಕರಿಯಾಗುತ್ತಿವೆ. ■

'ಬಿಜೆಪಿಯವರೆಂದರೆ ಹೆಡ್ಡರುಗಳು'



ಹೀಗಂತ ಹೇಳಿದ್ದು ಯಾವುದೋ ಕಾಂಗ್ರೆಸ್ಸಿಗನಲ್ಲ; ಸ್ವತಃ ಮೋದಿ ಸಾಹೇಬರೇ ಟ್ವೀಟ್ ಮಾಡಿದ್ದಾರೆ. ಇತ್ತೀಚೆಗೆ ಮಧ್ಯಪ್ರದೇಶದಲ್ಲಿ ತಾನು ಮಾಡಿದ ಭಾಷಣವನ್ನು ಅಪ್‌ಲೋಡ್ ಮಾಡುವಾಗ ತನ್ನ ಖಾಸಾ ಟ್ವಿಟ್ಟರ್ ಖಾತೆಯಲ್ಲಿ ಹೀಗೆ ಬರೆದುಕೊಂಡಿದ್ದ 'Urged people to start voting early, vote for the LOUTS ? give BJP a chance to serve them once again,".

ಕಮಲಕ್ಕೆ ಮತ ನೀಡಿ; ನಿಮ್ಮ ಸೇವೆ ಮಾಡಲು ಬಿಜೆಪಿಗೆ ಮತ್ತೊಂದು ಅವಕಾಶ ಕೊಡಿ ಎಂದು ಅಂಗಲಾಚುವ ಉದ್ದೇಶದಿಂದ ಮೋದಿ ಇದನ್ನು ಟೈಪಿಸಿದ್ದ. ಆದರೆ ಅವನ ಜ್ಞಾನ ಯಾವ ಮಟ್ಟದ್ದೆಂದರೆ ತನ್ನ ಪಕ್ಷದ ಚಿಹ್ನೆ LOTUSನ ಸ್ಪೆಲ್ಲಿಂಗೇ ಗೊತ್ತಿಲ್ಲ. LOUTS ಎಂದು ಬರೆದಿದ್ದ. ಅಷ್ಟಕ್ಕೂ ಇಂಗ್ಲಿಷ್‌ನಲ್ಲಿ ಈ LOUTS ಎಂದರೆ ಗಮಾರ, ಪೆದ್ದ, ನಯನಾಜೂಕಿಲ್ಲದವ ಎಂದರ್ಥ. ಮೋದಿಗೆ ತಕ್ಕನಾದ ಅರ್ಥಗಳು. ಹೀಗೆ ತಪ್ಪುತಪ್ಪಾಗಿ ಟ್ವೀಟ್ ಮಾಡಿದ ಇಷ್ಟೇ ನಿಮಿಷಕ್ಕೆ ತಪ್ಪನ್ನು ಅಳಿಸಿ ಹಾಕಿದ ಮೋದಿ ಸ್ಪೆಲ್ಲಿಂಗ್ ಕರೆಕ್ಷನ್ ಮೂಲಕ ತ್ಯಾಪೆ ಹಾಕಿದ್ದ. ಆಕಸ್ಮಿಕವಾಗಿ ಆಗಿದ್ದರೂ ಮೋದಿ ಹೇಳಿದ ಸತ್ಯವೆಂದರೆ ಇದೊಂದೇ ಇರಬಹುದೇನೋ.



ಮಂಗಳೂರು ವಿಶ್ವವಿದ್ಯಾನಿಲಯ ನೇಮಕಾತಿ
ಹಗರಣದ ಸುತ್ತಮುತ್ತ...


ಮಂಗಳೂರು ವಿಶ್ವವಿದ್ಯಾನಿಲಯ ಇತ್ತೀಚಿನ ವರ್ಷಗಳಲ್ಲಿ ಸುದ್ದಿಯಾಗಬಾರದ ಕಾರಣಕ್ಕಾಗಿ ಮತ್ತೆ ಮತ್ತೆ ಸುದ್ದಿಯಾಗುತ್ತಿದೆ. ಚಡ್ಡಿಗಳ ಆಡುಂಬೊಲವಾಗಿರುವ ಮಂಗಳೂರು ಜಿಲ್ಲೆಯಲ್ಲಿ ಅವರ ಕೇಡಿಯಾಟದಿಂದ ವಿಶ್ವವಿದ್ಯಾನಿಲಯವೂ ಹೊರತಾಗಿಲ್ಲ ಎಂಬುವುದು ಮಂಗಳೂರಿನ ಪ್ರಜ್ಞಾವಂತರಿಗೆ ಹೊಸ ವಿಚಾರವೇನಲ್ಲ. ದಕ್ಷತೆಯ ಮುಖವಾಡ ಹಾಕಿರುವ ಸ್ವಯಂಘೋಷಿತ ಮಿಸ್ಟರ್ ಕ್ಲೀನ್ ಅಧಿಕಾರಸ್ಥರ ಬಾಲ ಹಿಡಿದು ಓಡುವವರು ಎಂಬುವುದು ಮಂಗಳೂರು ವಿಶ್ವವಿದ್ಯಾನಿಲಯ ಮಂದಿಗೆ ಮತ್ತು ಆತನನ್ನು ಬಲ್ಲವರಿಗೆ ಹೊಸ ವಿಚಾರವೇನಲ್ಲ. ರಾಜ್ಯದಲ್ಲಿ ಬಿ.ಜೆ.ಪಿ. ಸರಕಾರ ಅಧಿಕಾರದಲ್ಲಿರುವ ಕಾಲದಲ್ಲಿ ವಿಶ್ವವಿದ್ಯಾನಿಲಯದಂತಹ 'ಪವಿತ್ರ ವಿದ್ಯಾದೇಗುಲಕ್ಕೆ 'ಚಕ್ರವರ್ತಿ ಸೂಲಿಬೆಲೆಯಂತಹ ಬೇದಿಪುಂಡನನ್ನು ಕಾರ್ಯಕ್ರಮಗಳಿಗೆ ಕರೆಸಿ ಆತನಿಂದ ಭಾಷಣ ಕೊಡಿಸುವ ಮಿಸ್ಟರ್ ಶಿವಶಂಕರಮೂರ್ತಿಯ ಯೋಗ್ಯತೆಯನ್ನು ಅಳೆಯಲು ಅದಕ್ಕಿಂತ ಮಿಗಿಲಾದ ಮಾನದಂಡಬೇಕೇ? ಉಪಕುಲಪತಿಯ ಲಫಡಾ, ದಗಲ್ಬಾಜಿಗಳ ಕುರಿತಂತೆ ಪ್ರಶ್ನಿಸಿದ ಕಾರಣಕ್ಕಾಗಿ ಗೋವಿಂದ ಮಟ್ಟಿ ಎಂಬ ಸ್ವಜಾತಿ ದಲಿತ ನೌಕರನನ್ನೇ ಅಮಾನತ್ತುಗೊಳಿಸಿದ ರೆಕಾರ್ಡ್ ಈ ಉಪಕುಲಪತಿಯ ಬೆನ್ನಿಗಿದೆ. ತನ್ನನ್ನು ಪ್ರಶ್ನಿಸುವವರಿಗೆಲ್ಲಾ ನಿಯಮಗಳನ್ನು, ಕಾನೂನುಗಳನ್ನು ಭೋದಿಸುವ ಉಪ ಕುಲಪತಿಗೆ ರೂಲ್ಸ್ ಎಂಡ್ ರೆಗ್ಯುಲೇಶನ್ ವಿ.ಸಿ. ಎಂಬ ಅಡ್ಡನಾಮವೂ ಇದೆ. ಇಂತಿಪ್ಪ ನಿಯಮಗಳ ಚೌಕಟ್ಟಿನೊಳಗೆ ಬದುಕುತ್ತಿದ್ದ ಉಪಕುಲಪತಿ ಟಿ.ಸಿ. ಶಿವಶಂಕರಮೂರ್ತಿ ಇದೀಗ ಅನಿಯಮಗಳ ಬೋನಿಗೆ ಬಿದ್ದು ಒದ್ದಾಡುತ್ತಿರುವುದು ವಿಶ್ವವಿದ್ಯಾನಿಲಯದ ಮಾನವಂತರಿಗೆ ಖುಷಿ ಕೊಟ್ಟಿದೆ.

ಕಳೆದ ಮೂರೂವರೆ ವರ್ಷಗಳ ಅಧಿಕಾರಾವಧಿಯಲ್ಲಿ ಈ ವಿ.ಸಿ. ಮಹಾತ್ಮ ಮಾಡಿದ ಕೆಲವೊಂದು ಘನಂದಾರಿ ಕೆಲಸಗಳತ್ತ ಬೆಳಕು ಚೆಲ್ಲುತ್ತಾ ಆ ಬಳಿಕ ಇತ್ತೀಚೆಗಿನ ಹಗರಣದ ಕುರಿತಂತೆ ಚರ್ಚಿಸುತ್ತೇನೆ. ಯುನಿವರ್ಸಿಟಿ ಕ್ಯಾಂಪಸ್‌ನೊಳಗೆ ಆಗಾಗ ಚಡ್ಡಿಗಳ ತರಹೇವಾರಿ ಬ್ಯಾನರ್‌ಗಳು, ಪೋಸ್ಟರ್‌ಗಳು ಪ್ರತ್ಯಕ್ಷವಾಗುತ್ತಿದ್ದರೂ ಈ ವಿ.ಸಿ. ಎಂಬ ಮನುಷ್ಯ ಎಂದೂ ಆ ಬಗ್ಗೆ ತಲೆಕೆಡಿಸಿಕೊಂಡದ್ದಿಲ್ಲ. ಇದೇ ವಿಶ್ವವಿದ್ಯಾನಿಲಯದ ಕೆಲವು ಬಾಲ ಚಡ್ಡಿಗಳು ಕೋಮು ಸೌಹಾರ್ದ ವೇದಿಕೆಯ ಕಾರ್ಯಕ್ರಮದಂಗವಾಗಿ ಮತ್ತು ಜನಶಕ್ತಿ ಸಮಾವೇಶದಂಗವಾಗಿ ಇದೇ ಲೇಖಕ ಕ್ಯಾಂಪಸ್‌ನ ಹೊರಗಡೆಯ ಬಸ್ ನಿಲ್ದಾಣ, ಕಲ್ಲು ಬೆಂಚಿನ ಮೇಲ್ಭಾಗಕ್ಕೆ ಅಂಟಿಸಿದ್ದ ಪೋಸ್ಟರ್‌ಗಳನ್ನು ಹರಿದು ಹಾಕಿದ್ದಿದೆ, ವಿರೂಪಗೊಳಿಸಿದ್ದಿದೆ. ಚಡ್ಡಿಗಳ ಸರಕಾರವಿರುವಾಗ ಅವರನ್ನು ಪರೋಕ್ಷ ಎನ್‌ಕರೇಜ್ ಮಾಡುವ ವಿ.ಸಿ. ಅವರ ಕಿಡಿಗೇಡಿ ಕೆಲಸಗಳ ಬಗ್ಗೆ ತಲೆಕೆಡಿಸಿಕೊಳ್ಳುವುದು ಆಗದ ಹೋಗದ ಮಾತು. ವಿಶಲ ಮಲೆಕುಡಿಯ ಎಂಬ ಆದಿವಾಸಿ ವಿದ್ಯಾರ್ಥಿಯ ಭವಿಷ್ಯಕ್ಕೆ ಕಲ್ಲು ಹಾಕಲು ಶತಪ್ರಯತ್ನ ನಡೆಸಿದ ದಾಖಲೆಯೂ ಈ ವಿ.ಸಿ.ಯ ಬೆನ್ನಿಗಿದೆ. ವಿಶ್ವವಿದ್ಯಾನಿಲಯದ ಪಕ್ಕದ ಗ್ರಾಮದ ಹಲವು ರಾಜ್ಯ, ರಾಷ್ಟ್ರಮಟ್ಟದ ಪ್ರಶಸ್ತಿ ವಿಜೇತ, ಸಮಾಜಸೇವಕ, ಸಮಾಜಸೇವಾ ಕ್ಷೇತ್ರದ ಐಕಾನ್ ಎಂದೇ ದೇಶದಾದ್ಯಂತ ಪ್ರಸಿದ್ಧಿ ಪಡೆದ, ಮೂರು ವಿಶ್ವವಿದ್ಯಾನಿಲಯಗಳಿಗೆ ಪಠ್ಯವಾದ ಅಕ್ಷರ ಸಂತ ಹರೇಕಳ ಹಾಜಬ್ಬರನ್ನು ಅವಮಾನಿಸಿ ತನ್ನ ಕೊಠಡಿಯಿಂದ ಇದೇ ವಿ.ಸಿ. ಮಹಾತ್ಮ ಹೊರಗಟ್ಟಿದ್ದೂ ಇದೆ. ಮಂಗಳೂರು ವಿಶ್ವವಿದ್ಯಾನಿಲಯ ಪ್ರಪ್ರಥಮ ಕುಲಪತಿ ಮತ್ತು ರಾಜ್ಯದ ಹಿರಿಯ ಇತಿಹಾಸ ತಜ್ಞ ಪ್ರೊ.ಬಿ.ಶೇಖ್ ಅಲಿಯವರ ಹೆಸರಲ್ಲಿ ನಿರ್ಮಿಸಲಾಗಿದ್ದ "ಶೇಖ್ ಅಲಿ ರಸ್ತೆ"ಯ ಫಲಕವನ್ನೂ ಈ ಮತ್ಸರಿ ವಿ.ಸಿ. ತೆಗೆಸಿದ್ದರು. (ನಾನೂ ಸೇರಿದಂತೆ ಕೆಲವು ಗೆಳೆಯರು ಗಲಾಟೆ ಮಾಡುವ ಮುನ್ಸೂಚನೆ ನೀಡಿದ್ದರಿಂದ ಮತ್ತೆ ಅದನ್ನು ಪುನರ್ ಸ್ಥಾಪಿಸಲಾಯಿತು). ಇಂದಿಗೂ ಮಂಗಳೂರು ವಿಶ್ವವಿದ್ಯಾನಿಲಯ ಕ್ಯಾಂಪಸ್‌ನೊಳಗೆ ಆಧುನಿಕ ಹಿಟ್ಲರ್ ಮೋದಿಯ ಬೃಹತ್ತಾದ ಕಟೌಟ್ ಕಾಣಸಿಗುತ್ತದೆ. ಇದನ್ನು ಪ್ರಶ್ನಿಸ ಹೋದವರಿಗೆ 'ಅದೇನ್ರೀ ನಿಮ್ಮ ಎದೆ ಮೇಲಿದೆಯೇನ್ರಿ?' ಎಂದು ಪ್ರಶ್ನಿಸುವ ಈ ಬಲಿತ ದಲಿತ ಕುಲಪತಿಯ ಅಸಲಿಯತ್ತೇನು?

ಮೊನ್ನೆ ಅಖಿಲ ಭಾರತ ಶಿಕ್ಷಣ ಸಚಿವರ ಸಮ್ಮೇಳನದಲ್ಲಿ ರಾಷ್ಟ್ರೀಯ ಉಚ್ಚತರ್ ಶಿಕ್ಷಾ ಅಭಿಯಾನ್ (ರೂಸಾ) ದಿಂದ ರಾಜ್ಯದ ಅತ್ಯಂತ ಶುದ್ಧ ವಿಶ್ವವಿದ್ಯಾನಿಲಯವೆಂಬ ಪ್ರಶಂಸೆಗೆ ಮಂಗಳೂರು ವಿಶ್ವವಿದ್ಯಾನಿಲಯ ಪಾತ್ರವಾದ ಮೂರನೇ ದಿನವೇ ಮಂಗಳೂರು ವಿಶ್ವವಿದ್ಯಾನಿಲಯ ಬೋಧಕ ಸಿಬ್ಬಂದಿ ನೇಮಕಾತಿ ಪ್ರಕ್ರಿಯೆಯಲ್ಲಿನ ಅವ್ಯವಹಾರ ಹೊರಬಿದ್ದಿದೆ. ಯುನಿವರ್ಸಿಟಿ ಗ್ರ್ಯಾಂಟ್ ಕಮಿಷನ್‌ನ ನಿಯಮಾವಳಿ ಪ್ರಕಾರ ಉಪಕುಲಪತಿಯೊಬ್ಬ ತನ್ನ ಅಧಿಕಾರಾವಧಿಯ ಕೊನೆಯ ಮೂರು ತಿಂಗಳುಗಳಲ್ಲಿ ಯಾವುದೇ ಮಹತ್ವದ ನಿರ್ಣಯ ತೆಗೆದುಕೊಳ್ಳುವಂತಿಲ್ಲ, ಇನ್ನೇನು ತನ್ನ ಅಧಿಕಾರಾವಧಿಯ ಕೊನೆಯ ಮೂರು ತಿಂಗಳು ಸನ್ನಿಹಿತವಾಗಬೇಕಾದರೆ ಉಪಕುಲಪತಿ ಮೂರ್ತಿ ಏಕಾಏಕಿ 80 ಬೋಧಕ ಸಿಬ್ಬಂದಿ ಹುದ್ದೆಯನ್ನು ಭರ್ತಿಗೊಳಿಸಹೊರಟಿದ್ದರು.

ಆಗಲೇ ಸಂಶಯದ ವಾಸನೆ ವಿಶ್ವವಿದ್ಯಾನಿಲಯದೊಳಗಿನ ಮಂದಿಗಳಿಗೆ ಬಡಿದಿತ್ತು, ನೇರ ನೇಮಕಾತಿ ಮೂಲಕ ಹುದ್ದೆಯನ್ನು ಭರ್ತಿಗೊಳಿಸುವ ಕಾಲ್ ಫಾರ್ ಆದ ಕೂಡಲೇ ರಾಜ್ಯದ ವಿವಿಧೆಡೆಗಳಿಂದ ಬಹಳಷ್ಟು ಆಕಾಂಕ್ಷಿಗಳು ಅರ್ಜಿ ಗುಜರಾಯಿಸಿದ್ದರು. ಹಾಗೆ ಅರ್ಜಿ ಗುಜರಾಯಿಸಿದವರೆಲ್ಲರಿಗೂ ಸಂದರ್ಶನಕ್ಕೆ ಕರೆ ನೀಡಬೇಕೋ ಬೇಡವೋ ಎಂಬುವುದನ್ನು ವಿಶ್ವವಿದ್ಯಾನಿಲಯವು ಅವರ ದಾಖಲೆಗಳನ್ನು ಪರಿಶೀಲಿಸಿ ನಿರ್ಧರಿಸಬೇಕಾಗುತ್ತದೆ. ಹಾಗೆ ದಾಖಲೆಗಳನ್ನು ಪರಿಶೀಲಿಸಿದ ಬಳಿಕ ಅವರು ಹುದ್ದೆಗೆ ಅರ್ಹರು ಎಂದು ಕಂಡುಬಂದಲ್ಲಿ ಸಂದರ್ಶನಕ್ಕೆ ಅವರಿಗೆ ಕರೆ ಕಳುಹಿಸಬೇಕು. ಈ ನೇಮಕಾತಿಯ ಲಫಡಾದ ಮೊದಲ ಪ್ರಾಯೋಗಿಕ ಹಂತ ಇಲ್ಲಿಂದಲೇ ಪ್ರಾರಂಭವಾಗುತ್ತದೆ. ಸಂದರ್ಶನಕ್ಕೆ ಯಾರಿಗೆ ಕರೆ ಕಳುಹಿಸಬೇಕು, ಯಾರನ್ನು ಹುದ್ದೆಗೆ ಆಯ್ಕೆ ಮಾಡಬೇಕು ಎಂಬುವುದನ್ನು ಉಪಕುಲಪತಿಯವರ ಆಪ್ತ ಬಳಗದ ಪ್ರೊ. ವಿಶ್ವನಾಥ್, ಬಿ.ಜೆ.ಪಿ (ಬಿ. ಜಗದೀಶ್ ಪ್ರಸಾದ್) ಮುಂತಾದವರು ನಿರ್ಧರಿಸುತ್ತಾರೆ. ಸಂದರ್ಶನಕ್ಕೆ ಕರೆ ಕಳುಹಿಸಬೇಕಾದರೆ ಆತನಿಗಿರಬೇಕಾದ ಮೊದಲ ಅರ್ಹತೆ ಆತ ಪ್ರಭಾವಿ ರಾಜಕಾರಣಿಯ ಕ್ಯಾಂಡಿಡೇಟಾಗಿರಬೇಕು, ಬಲಗೈ ಗುಂಪಿನ ದಲಿತನಾಗಿರಬೇಕು, ಹಳೆ ಮೈಸೂರು ಭಾಗದವನಾಗಿರಬೇಕು, ಈ ಮೂರರಲ್ಲಿ ಯಾವ ಅರ್ಹತೆಯೂ ಇಲ್ಲದವರ ಅರ್ಜಿಗಳನ್ನು ಪರಿಗಣಿಸುವುದಿಲ್ಲ, ಇದಕ್ಕೆ ಒಂದೆರಡು ಉದಾಹರಣೆಗಳು: ದಿನೇಶ್ ಶೆಟ್ಟಿ ಎಂಬ ಕೆಮಿಸ್ಟ್ರಿ ವಿಭಾಗದ ಪ್ರತಿಭಾವಂತರೊಬ್ಬರು ಕೊರಿಯಾದ ವಿಶ್ವವಿದ್ಯಾನಿಲಯವೊಂದರಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರು ಕೊರಿಯಾದಲ್ಲೇ ತನ್ನ ಪಿಎಚ್.ಡಿ. ಮುಗಿಸಿದವರು, ಆ ಬಳಿಕ ಅಲ್ಲಿ ಎರಡು **Post Doctoral Fellowship** ಪಡೆದುಕೊಂಡವರು, ಅಮೆರಿಕಾ, ಕೊರಿಯಾ ದೇಶಗಳಲ್ಲಿ ಅನೇಕ ವಿಜ್ಞಾನ ಪ್ರಶಸ್ತಿ ಗಳಿಸಿಕೊಂಡವರು. ಆದರೆ ಅವರಿಗೆ ಸಂದರ್ಶನಕ್ಕೆ ಕರೆ ನೀಡಲಾಗಿಲ್ಲ, ಯಾಕೆಂದರೆ ನಾನು ಈ ಮೇಲೆ ಹೆಸರಿಸಿದ ಮೂರರಲ್ಲಿ ಒಂದು ಅರ್ಹತೆಯೂ ದಿನೇಶ್ ಶೆಟ್ಟಿಯವರಿಗಿರಲಿಲ್ಲ.

ಅಶೋಕ್ ಆ್ಯಂಟನಿ ಡಿ'ಸೋಜಾ ಎಂಬವರು ಬೆಳಗಾವಿಯ ಕಿತ್ತೂರು ಚೆನ್ನಮ್ಮ ವಿಶ್ವವಿದ್ಯಾನಿಲಯದಲ್ಲಿ



ಸಮಾಜ ಸೇವಾಕಾರ್ಯ ವಿಭಾಗದ ಸಹ ಪ್ರಾಧ್ಯಾಪಕರಾಗಿರುವವರು. ಅವರನ್ನು ಸಂದರ್ಶನಕ್ಕೆ ಪರಿಗಣಿಸಲಾಗಿರಲಿಲ್ಲ, ಒಂದು ವೇಳೆ ಯು.ಜಿ.ಸಿ. ನಿಯಮಾವಳಿಯ ಪ್ರಕಾರ ಡಿ'ಸೋಜಾ ಅವರು ಅರ್ಹರಲ್ಲದಿದ್ದರೆ, ಬೆಳಗಾವಿ ವಿಶ್ವವಿದ್ಯಾನಿಲಯದಲ್ಲಿ ಅವರಿಗೆ ಯಾವ ಮಾನದಂಡದ ಮೇಲೆ ಉದ್ಯೋಗ ನೀಡಲಾಗಿತ್ತು?

ಡಾ|| ಬಾಬು ಕೊರಗ ರಾಜ್ಯದ ಅತ್ಯಂತ ಹಿಂದುಳಿದ ವರ್ಗದ ಪ್ರತಿನಿಧಿ. ಕೊರಗ ಸಮುದಾಯದ ಪ್ರಪ್ರಥಮ ಪಿಎಚ್.ಡಿ. ಪದವೀಧರ. ದಲಿತ ಸಮುದಾಯದ ಉಪಕುಲಪತಿ ಅತ್ಯಂತ ಹಿಂದುಳಿದ ಕೊರಗ (ಆದಿವಾಸಿ) ಸಮುದಾಯದ ವಿಚಾರಕ್ಕೆ ಬಂದಾಗ ತನ್ನ ವಿಶೇಷಾಧಿಕಾರದ ಮೂಲಕ ಹುದ್ದೆಗೆ ಅವರನ್ನು ಪರಿಗಣಿಸುವ ಉದಾರತೆಯನ್ನು ವಿ.ಸಿ. ತೋರಬಹುದಿತ್ತು.

ಬಾಬು ಕೊರಗ ಸೀಮಿತ ಸಂಪನ್ಮೂಲದಲ್ಲಿ ಅಸಾಧಾರಣ ಸಾಧನೆಗೈದವರು ಮತ್ತು ಅತ್ಯಂತ ಸ್ವಾಭಿಮಾನಿ. ಅವರು ಖಂಡಿತವಾಗಿಯೂ ಯಾರ ಕೃಪಾಕಟಾಕ್ಷದ ಮೂಲಕ ಹುದ್ದೆ ಸಿಕ್ಕರೆ ಸ್ವೀಕರಿಸುತ್ತಿರಲಿಲ್ಲ. **Organic Chemistry** ಯಲ್ಲಿ ಪಿಎಚ್.ಡಿ. ಪದವಿ ಗಳಿಸಿರುವ ಬಾಬು ಅವರನ್ನು ವಿನಾಕಾರಣ, ಅವರಿಗೆ ಎಲ್ಲಾ ಅರ್ಹತೆಗಳಿದ್ದಾಗ್ಯೂ ಕಡೆಗಣಿಸಲಾಗಿದೆ.

ಹೆಚ್ಚಿನ ಕ್ಯಾಂಡಿಡೇಟ್‌ಗಳು ತಾವು ಅರ್ಹರೋ, ಅಲ್ಲವೋ ಎಂಬುವುದನ್ನು ಸ್ವತಃ ನಿರ್ಧರಿಸಿದ ಬಳಿಕವೇ ಅರ್ಜಿ ಸಲ್ಲಿಸಿದ್ದಾರೆ. ಆದಾಗ್ಯೂ ಅವರ ಅರ್ಹತೆಯನ್ನು ವಿಶ್ವವಿದ್ಯಾನಿಲಯದಲ್ಲಿ ನಿರ್ಧರಿಸುವ ಜವಾಬ್ದಾರಿಯನ್ನು ಪ್ರೊ. ವಿಶ್ವನಾಥ್ ಎಂಬಾತನಿಗೆ ನೀಡಲಾಗಿತ್ತು. ಈ ವಿಶ್ವನಾಥ್‌ನ ಯೋಗ್ಯತೆ ಎಂತಹದ್ದೆಂದರೆ ನೆಟ್ಟಗೆ ಪಾಠ ಮಾಡಲಾಗದ ಈತ 2003 ರಲ್ಲಿ ಹನುಮಯ್ಯ ಅವರು ಉಪಕುಲಪತಿಯಾಗಿದ್ದಾಗ ಬ್ಯಾಕ್‌ಲಾಗ್ ಭರ್ತಿಯಲ್ಲಿ ಒಳನುಸುಳಿದಾತ. ಆಗ ಈತನಿಗೆ ಎರಡು ಅರ್ಹತೆಗಳಿದ್ದವು. ಮೊದಲನೆಯದಾಗಿ ಈತ ಹನುಮಯ್ಯರ ಹತ್ತಿರದ ಸಂಬಂಧಿ. ಎರಡನೆಯದಾಗಿ ಈತ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವಿ.ಸಿ.ಯಾಗಿದ್ದ ಮಾದಯ್ಯ ಎಂಬವರ

ವ್ಯರಿಯೊಬ್ಬರಿಗೆ ಕ್ಯಾಂಪಸ್ ಒಳಗೆ ಪಿಗ್ಗಾಮುಗ್ಗಾ ತದುಕಿದ... 33ನೇ ವಯಸ್ಸಿಗೆ ಪ್ರೊಫೆಸರ್ ಆಗಿ ನೇಮಕವಾಗಿರು... ಈತ ತಾನು ಕಿರಿಯ ವಯಸ್ಸಿಗೆ ಪ್ರೊಫೆಸರ್ ಆದವ... ಎಂದು ಟಾಂಟಾಂ ಮಾಡುತ್ತಾನೆ. ಅಷ್ಟಕ್ಕೂ ಈತನೇ... ನೋಂ ಚಾಮ್‌ಸ್ಕಿಯೋ, ಅಮರ್ತ್ಯಸೇನೋ ಎಂ... ತಿಳಿದುಕೊಳ್ಳಬೇಕಾಗಿಲ್ಲ, 33ನೇ ವರ್ಷಕ್ಕೆ ಪ್ರೊಫೆಸರ್‌ಗಿ... ಗಿಟ್ಟಿಸಲು ಈತನಿಗಿದ್ದುದು ಈ ಮೇಲೆ ಬರೆದ ಎರ... ಯೋಗ್ಯತೆಗಳು. ಈತ ತನಗೆ ಬೇಕಾದವರಿಗೆಲ್ಲಾ ಸಂದರ್ಶ... ಕರೆ ನೀಡಿದ್ದಾನೆ.

ಇಂತಹದ್ದೆಲ್ಲವೂ ವಿ.ಸಿ.ಯ ಮೂಗಿನ ನೇರ... ನಡೆಯುತ್ತಿತ್ತು. ಕೆಲವು ಡಿಪಾರ್ಟ್‌ಮೆಂಟ್ ಡೀನ್‌ಗಳ... ಪ್ಯಾನಲ್‌ಗಳಲ್ಲಿ ಹಾಕಿದ್ದರೂ ಎಲ್ಲಾ ನಿರ್ಧರಿತವಾಗುತ್ತಿದ್ದು... ವಿಶ್ವನಾಥನ ಆಣತಿಯ ಮೇರೆಗೆ. ಡಾ|| ಚೆನ್ನಪ್ಪಗೌ... ಡಾ|| ಸಬಿಹಾ ಭೂಮಿಗೌಡ ಮುಂತಾದವರೆಲ್ಲಾ ಪ್ಯಾನ... ನಲ್ಲಿದ್ದರೂ ಅವರನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿತ... ಸೆಲೆಕ್ಷನ್ ಪ್ಯಾನಲ್‌ನವರು ನಡೆಸುತ್ತಿದ್ದ ಹರಾಕಿರಿಯಿಂದಾ... ಚೆನ್ನಪ್ಪಗೌಡ ಮತ್ತು ಸಬಿಹಾ ಅವರು ಮಾಡದ ತಪ್ಪಿಗಾ... ಮುಜುಗರ ಅನುಭವಿಸಬೇಕಾಗಿ ಬಂದಿತ್ತು.

ಹೀಗೊಬ್ಬ ವಿ.ಐ.ಪಿ. ಅಭ್ಯರ್ಥಿ

ಅದೆಷ್ಟೋ ಪ್ರತಿಭಾವಂತ ಅಭ್ಯರ್ಥಿಗಳಿಗೆ ಸಂದರ್ಶ... ಕರೆಯೂ ನೀಡಲಾಗಿರಲಿಲ್ಲ, ಇತಿಹಾಸ ವಿಭಾಗಕ್ಕೆ ಮ... ಪ್ರೊಫೆಸರ್ ಆಗಿ ಆಯ್ಕೆಯಾದ ನಿರ್ಮಲ್‌ರಾಜ್ ಅವ... ವಿಶೇಷ ಆತಿಥ್ಯವನ್ನು ವಿಶ್ವವಿದ್ಯಾನಿಲಯ ಅಧಿಕೃತ... ನೀಡಿದ್ದರು. ಎಲ್ಲಾ ಅಭ್ಯರ್ಥಿಗಳು ಅವರವರೇ ಖ... ಮಾಡಿ ಸಂದರ್ಶನಕ್ಕೆ ಬಂದಿದ್ದರೆ, ಈ ಆಸಾಮಿಯ... ಮಂಗಳೂರು ನಗರದಿಂದ ಬೆಳಗ್ಗೆ ಪಿಕ್ ಅಪ್ ಮ... ಕೊಂಡು ಬರಲು ವಿಶ್ವವಿದ್ಯಾನಿಲಯ ಅಧಿಕೃತ ವಾಹನವ... ಕಳುಹಿಸಿತ್ತು, ಹಾಗೆ ಬಂದವನಿಗೆ ವಿ.ಐ.ಪಿ. ಆತಿಥಿಗ... ನೀಡುವ ಕಾವೇರಿ ಅತಿಥಿಗೃಹದ ರೂಂ ನಂಬರ್-... ರಲ್ಲಿ ತಂಗುವ ವ್ಯವಸ್ಥೆ ಮಾಡಲಾಗಿತ್ತು. ಇಂಟರ್... ಪ್ಯಾನಲ್‌ನಲ್ಲಿದ್ದ ವಿಷಯ ಪರಿಣತರು ಅದೇ ಅತಿಥಿಗೃಹ... ತಂಗಿದ್ದರು. ಸಂಜೆಗೆ ಇಂಟರ್‌ವ್ಯೂ ಮುಗಿಸಿ ಹೊರಟವ... ವಿಶ್ವವಿದ್ಯಾನಿಲಯದ ಅಧಿಕೃತ ವಾಹನದಲ್ಲೇ ಮಂಗಳೂ... ನಗರಕ್ಕೆ ಡ್ರಾಪ್ ಮಾಡಲಾಗಿತ್ತು. ಹೀಗ್ಯಾಕೆಂದು ಕೆದಕು... ಹೋದಾಗ ತಿಳಿದುಬಂದ ಸತ್ಯವೇನೆಂದರೆ ... ನಿರ್ಮಲ್‌ರಾಜ್ ಶಿವಶಂಕರಮೂರ್ತಿ ವಿ.ಸಿ.ಯ... ಆಯ್ಕೆಯಾಗಲು ಬಹಳಷ್ಟು ಕೆಲಸ ಮಾಡಿದ್ದ. ... ಮೈಸೂರಿನಲ್ಲಿ ಬಹಳ ಪ್ರಭಾವಿ ಉದ್ಯೋಗಿಯಾಗಿದ್ದವ... ಪಾಠ ಮಾಡುವುದಕ್ಕಿಂತಲೂ ಹೆಚ್ಚಾಗಿ ಬಡ್ಡಿ ವ್ಯವಹಾರ... ಈತ ಪರಿಣತ ಎಂಬುದು ಈತನನ್ನು ಬಲ್ಲ... ಅಂಬೋಣ....!

ಪ್ರೊಫೆಸರ್ ಹುದ್ದೆಗೆ ಪ್ರೊಫೆಸರ್‌ಗಳದ್ದೇ ಅರ್ಜಿ

ಇದು ವಿಚಿತ್ರವಾದರೂ ಸತ್ಯ. ಮಂಗಳೂ... ವಿಶ್ವವಿದ್ಯಾನಿಲಯ ಮತ್ತು ವಿಜ್ಞಾನ ವಿಭಾಗದ ಪ್ರೊ. ಪಟ... ಮತ್ತು ಸಸ್ಯಶಾಸ್ತ್ರ ವಿಭಾಗದ ಪ್ರೊ. ಚಂದ್ರಶೇಖ... ಪ್ರೊಫೆಸರ್‌ಗಳಾಗಿದ್ದೂ ಪುನಃ ಪ್ರೊಫೆಸರ್ ಹುದ್ದೆಗೆ ಅ... ಗುಜರಾಯಿಸಿದ್ದರು. ಇದರ ಹಿಂದಿನ ಉದ್ದೇಶವೂ ... ಆ ಹುದ್ದೆಗಳು ಭರ್ತಿಯಾಗಬಾರದು. ತಮ್ಮ ಪ್ರೀತಿ ... ಕ್ಯಾಂಡಿಡೇಟ್‌ಗಳ ಹಾದಿ ಸುಗಮ ಮಾಡಿಕೊಡಲು ... ಮಾಡಿದ್ದಿರಲೂಬಹುದು. ಇವರಿಬ್ಬರನ್ನೂ ತನಿಖೆಗೊಳ... ಶಿಕ್ಷಿಸಲೇಬೇಕಿದೆ.

ಅನರ್ಹರಿಗೆ ಮಣೆ

ಮೈಸೂರು ಭಾಗದ ಮಹಿಳೆಯೋವ... ಅಸೋಸಿಯೇಟ್ ಪ್ರೊಫೆಸರ್ ಹುದ್ದೆಗೆ ಅ... ಗುಜರಾಯಿಸಿದ್ದರು. ಯು.ಜಿ.ಸಿ ಸೂಚಿಸಿದ ... ಅರ್ಹತೆಯೂ ಇಲ್ಲದ ಆಕೆಯನ್ನು ಹುದ್ದೆಗೆ ... ಮಾಡಲಾಗಿದೆ. ಹಾಗೆ ನೋಡ ಹೋದರೆ ಆಕೆಗೆ ಸಂದರ್ಶ... ಕರೆ ನೀಡಲೇಬಾರದಿತ್ತು, ಯು.ಜಿ.ಸಿ. ನಿಯಮಾವ... ಪ್ರಕಾರ ಅಸೋಸಿಯೇಟ್ ಪ್ರೊಫೆಸರ್ ಹು... ಅಭ್ಯರ್ಥಿಯನ್ನು ಪರಿಗಣಿಸಬೇಕಾದರೆ ಆತ ಯಾ... ಕನಿಷ್ಠ 8 ವರ್ಷಗಳ ಕಾಲ ಪೂರ್ಣಾವಧಿ ಉಪನ್ಯಾಸ... ಕೆಲಸ ನಿರ್ವಹಿಸಿರಬೇಕು. ಆ ಪ್ರಮಾಣಪತ್ರವು ಜಾಯಿ... ಡೈರೆಕ್ಟರ್ ಅವರಿಂದ ದೃಢೀಕರಿಸಿರಬೇಕು. ಇ... ಯಾವುದೇ ಅರ್ಹತೆ, ಸಂಬಂಧಿತ ಪೇಪರ್‌ಗಳಿಲ್ಲದ... ಈಕೆಯನ್ನು ಇತಿಹಾಸ ವಿಭಾಗದ ಅಸೋಸಿಯೆ... ಪ್ರೊಫೆಸರ್ ಆಗಿ ನೇಮಕಗೊಳಿಸಲಾಗಿದೆ.

ಅರ್ಹರನ್ನು ಅವಮಾನಿಸಿದ್ದು

ಈಗಾಗಲೇ ಪತ್ರಿಕೆಯಲ್ಲಿ ಕನ್ನಡ ಪ್ರೊಫೆಸರ್ ಹುದ್ದೆಯ ...ಂಕ್ಷಿಯಾಗಿದ್ದ ಭಲಪತಿಯವರು ತಮ್ಮ ನೋವನ್ನು ...ಡಿಕೊಂಡಿದ್ದಾರೆ. ಕನ್ನಡದ ಪ್ರಮುಖ ಲೇಖಕಿ ಎಂ.ಎಸ್. ...ಶಾದೇವಿಯವರೂ ತಮಗಾದ ಅವಮಾನವನ್ನು ನನ್ನಲ್ಲಿ ...ೀದಿಕೊಂಡಿದ್ದಾರೆ. ಇವರೀರ್ವರನ್ನು ಮತ್ತು ಇವರಂತಹದ್ದೇ ...ನೇಕ ಅರ್ಹ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಸದಿರಲು ...ರಿಮೇ ಇರಲಿಲ್ಲ, ನೇರ ದಾರಿಯಲ್ಲಿ ಆಯ್ಕೆ ಪ್ರಕ್ರಿಯೆಗಳು ...ಡೆಯುತ್ತಿದ್ದರೆ ಇವರನ್ನು ಕೈಬಿಟ್ಟು ವಿಶ್ವನಾಥ ಮತ್ತು ...ಸಿ. ಗೆ ಬೇಕಾಗಿರುವ ಕ್ಯಾಂಡಿಡೇಟನ್ನು ಆಯ್ಕೆ ಮಾಡಲು ...ಧ್ಯವೇ ಆಗುತ್ತಿರಲಿಲ್ಲ. ಆದುದರಿಂದ ಎಂ.ಎಸ್. ...ಶಾದೇವಿ ಮತ್ತು ಭಲಪತಿಯವರನ್ನು ಸಂದರ್ಶನಕ್ಕಿಂತ ...ಮುಂಚಿನ ಹಂತದಲ್ಲೇ ಹೊರದಬ್ಬಲಾಗಿತ್ತು. ಪ್ರೊಫೆಸರ್ ...ಹುದ್ದೆಯ ಸಂದರ್ಶನಕ್ಕೆ ಆಯ್ಕೆ ಮಾಡಬೇಕೆಂದರೆ ಅದಕ್ಕಿಂತ ...ಹಿಂದಿನ ಅಂಕ ನೀಡಿಕೆ ಪ್ರಕ್ರಿಯೆಯಲ್ಲಿ ಅಭ್ಯರ್ಥಿ ಕನಿಷ್ಟ ...00 ಅಂಕಗಳನ್ನು ಪಡೆಯಬೇಕು. ಈ ಅಂಕ ನೀಡಿಕೆ ...ಕ್ರಿಯೆಗೆ ಅನುಭವ ಮಂಡಿಸಿದ ಪ್ರಬಂಧಗಳು, ...ಸ್ತಕಗಳು, ಪಡೆದಂತಹ ಫೆಲೋಶಿಪ್‌ಗಳು ಗಣನೆಗೆ ...ರುತ್ತದೆ. ಆಶಾದೇವಿಯವರು ಪಡೆದಂತಹ ಫೆಲೋಶಿಪ್ ...ಮತ್ತು ಅವರು ಮಂಡಿಸಿದ ಸೆಮಿನಾರ್ ಪೇಪರ್‌ಗಳ ...ಬಗ್ಗೆ ಸ್ಕ್ರೀನಿಂಗ್ ಕಮಿಟಿಯ ಪ್ರೊ. ವಿಶ್ವನಾಥ್ ತುಚ್ಛವಾಗಿ ...ಮಾತನಾಡಿ ಅವರನ್ನು ಅವಮಾನಿಸಿದ್ದನಂತೆ. ಆಯ್ಕೆ ...ಪ್ರಕ್ರಿಯೆಯ ಬಗ್ಗೆ ಅಭ್ಯರ್ಥಿಗಳಿಗೆ ಜ್ಞಾನವಿದ್ದೇ ಇರುತ್ತದೆ. ...ಗೆ ಲೆಕ್ಕ ಹಾಕಿ ನೋಡಿದರೂ ತಮಗೆ ಇಂತಿಷ್ಟು ...ಅಂಕಗಳು ಸಿಗುತ್ತದೆ ಎಂಬ ಖಾತರಿಯಿಂದಲೇ ...ಅಭ್ಯರ್ಥಿಗಳು ಅರ್ಜಿ ಸಲ್ಲಿಸಿರುತ್ತಾರೆ. ಎಂ.ಎಸ್. ಆಶಾದೇವಿ ಮತ್ತು ಭಲಪತಿಯವರ ಪ್ರಶ್ನೆ: 'ಒಂದು ವೇಳೆ ನಾವು ಅರ್ಹರಿಲ್ಲದಿದ್ದರೆ ನಮಗೆ ಸಂದರ್ಶನಕ್ಕೆ ಕರೆ ...ಕಳುಹಿಸಿದ್ದಾದರೂ ಯಾಕೆ?'

ಅಡ್ಡ ದಾರಿಯಲ್ಲಿ ಆಯ್ಕೆ ಬಯಸಿದವರು ಯಾವ ...ಅರ್ಹತೆಯೂ ಇಲ್ಲದೇ ಅರ್ಜಿ ಸಲ್ಲಿಸುತ್ತಾರೆ, ಸಂದರ್ಶನಕ್ಕೆ ...ಹಾಜರಾಗುತ್ತಾರೆ. ಅವರು ತಮ್ಮ ಪ್ರಭಾವಗಳಿಂದ ಯು.ಜಿ.ಸಿ. ...ಅರ್ಹತೆಯನ್ನು ಮೀರಿಸುವ 'ಅರ್ಹತೆ' ...ಪಡೆದುಕೊಂಡಿರುತ್ತಾರೆ ಎಂಬ ಖಚಿತತೆ ಅವರಿಗಿರುತ್ತದೆ.

ಯು.ಜಿ.ಸಿ. ನಿಯಮಾವಳಿಯಿರಲಿ, ಇನ್ನೇನೇ ಇರಲಿ ...ಎಲ್ಲದರಲ್ಲೂ ಒಂದು ನ್ಯಾಯ, ನೀತಿ ಎಂಬುದು ಇದ್ದೇ ...ಇರುತ್ತದೆ. ಯಾವುದೇ ಹುದ್ದೆಯ ಸಂದರ್ಶನಕ್ಕೆ 15 ...ದಿನಗಳಿಗಿಂತ ಮುಂಚಿತವಾಗಿ ಅಭ್ಯರ್ಥಿಗಳಿಗೆ ಮಾಹಿತಿ ...ನೀಡಬೇಕಾಗುತ್ತದೆ. ವಿಶ್ವನಾಥ ಮತ್ತು ವಿ.ಸಿ. ತಮಗೆ ...ಬೇಕಾಗಿರುವ ಅಭ್ಯರ್ಥಿಗಳಿಗೆ ಅನಧಿಕೃತವಾಗಿ ಹಲವು ...ದಿನಗಳ ಹಿಂದೆಯೇ ಕರೆ ನೀಡಿದ್ದರೂ ತಮ್ಮ ಕೃಪಾಕಟಾಕ್ಷದ ...ದೃಷ್ಟಿಗೆ ಬಾರದವರಿಗೆ ಕೇವಲ 24-48 ಗಂಟೆಗಳಿಗೆ ...ಮುಂಚಿತವಾಗಿ ಕರೆ ನೀಡಿದ್ದರು. ಸಾಮಾನ್ಯವಾಗಿ ಹುದ್ದೆಗೆ ...ಆಯ್ಕೆಯಾದವರಿಗೆ ಕನಿಷ್ಠ 48 ಗಂಟೆಗಳ ಬಳಿಕವಷ್ಟೆ ...ಮಾಹಿತಿ ನೀಡಲಾಗುತ್ತದೆ. ಮೊನ್ನೆ ಮಂಗಳೂರು ...ವಿಶ್ವವಿದ್ಯಾನಿಲಯ ಹುದ್ದೆಗಳಿಗೆ ನೇಮಕವಾದವರಿಗೆ ...ಸಂದರ್ಶನ ಮುಗಿದು 30 ನಿಮಿಷಗಳಿಗೊಳಗಾಗಿ ಮಾಹಿತಿ ...ನೀಡಿ ವಿಶ್ವವಿದ್ಯಾನಿಲಯ ಕ್ಯಾಂಪಸ್‌ನಲ್ಲಿ ಸಂತೋಷಾಚರಣೆ ...ಪಾರ್ಟಿ ನಡೆದಿತ್ತು.

ಸದಾ ಪಾರದರ್ಶಕತೆಯ ಬಗ್ಗೆ, ನಿಯಮಾವಳಿಗಳ ...ಬಗ್ಗೆ ಹೋದ ಬಂದವರಿಗೆಲ್ಲಾ ಬುದ್ಧಿವಾದ ಹೇಳುವ ...ಕೆ.ಸಿ. ಶಿವಶಂಕರಮೂರ್ತಿ ಇವೆಲ್ಲದರ ಹಿಂದಿನ ಹಕೀಕತ್ತೇನು ...ಎಂದು ನಾಡಿನ ಜನತೆಗೆ ತಿಳಿಸಬೇಕಾಗಿದೆ. ಅಂತಹದ್ದೇನೂ ...ನಡೆದಿಲ್ಲ, ಎಲ್ಲಾ ರಬ್ಬಿಶ್ ಎಂದು ಅರಚಾಡುತ್ತಿರುವ ವಿ.ಸಿ. ...ಈ ಎಲ್ಲಾ ಆರೋಪಗಳ ಹಿಂದಿನ ಹಕೀಕತ್ತೇನೆಂದು ಬಾಯಿ ...ಬಿಡಬೇಕು. ಒಂದು ವೇಳೆ ಇವೆಲ್ಲದರ ಹಿಂದೆ ಏನೂ ...ಇಲ್ಲದಿರುತ್ತಿದ್ದರೆ ಯಾಕೆ ದಿನೇಶ್ ಶೆಟ್ಟಿ, ಬಾಬು ಕೊರಗ, ...ಅಶೋಕ ಡಿ'ಸೋಜ ಮುಂತಾದವರಿಗೆ ಸಂದರ್ಶನಕ್ಕೆ ಕರೆ ...ನೀಡಿಲ್ಲ? ಆಶಾದೇವಿ, ಭಲಪತಿ ಮುಂತಾದವರಿಗೆ ಎಲ್ಲಾ ...ಅರ್ಹತೆಯಿದ್ದೂ ಯಾಕೆ ಸಂದರ್ಶನಕ್ಕಿಂತ ಮುಂಚಿನ ...ಹಂತದಲ್ಲಿ ಅವರನ್ನು ಅವಮಾನಕರವಾಗಿ ಹೊರದಬ್ಬಿದ್ದು? ...ದಿಕ್ಕುಗಳಿಂದಲೂ ಹುದ್ದೆಗಳ ಆಕಾಂಕ್ಷಿಗಳ ಅರ್ಜಿಗಳನ್ನು ...ಮತ್ತು ದಾಖಲೆಗಳನ್ನು ಮರುಪರಿಶೀಲಿಸಬೇಕೆಂಬ ಕೂಗು ...ಕೇಳಿಬರುತ್ತಿದ್ದರೂ ವಿ.ಸಿ. ಯಾಕೆ ಅವನ್ನೆಲ್ಲಾ ...ನಿರ್ಲಕ್ಷಿಸುತ್ತಿದ್ದಾರೆ? ಇದೊಂದು ಅತ್ಯಂತ ಗಂಭೀರವಾದ ...ವಿಚಾರ. ವಿಶ್ವವಿದ್ಯಾನಿಲಯಗಳೆಂದರೆ ಜವಾಬ್ದಾರಿಯುತ ...ನ ಸಮುದಾಯವನ್ನು ನಿರ್ಮಿಸುವ, ಒಂದು ...ನಿರ್ಮಾಣೆಯುದ್ಯಂತೆ. ಅಲ್ಲಿನ ನಿರ್ಮಾಪಕರೇ ...ಜವಾಬ್ದಾರಿರಹಿತರಾದರೆ, ಅನರ್ಹರಾದರೆ ಅವರು ...ರೂಪಿಸುವ ಶಿಕ್ಷಕರು, ವಿಜ್ಞಾನಿಗಳು, ವಿವಿಧ ವಿಷಯಗಳ ...ತಜ್ಞರು ಯಾವ ರೀತಿಯಿರಬಹುದು ಎಂಬುದೂ ನಮ್ಮ ...ಮುಂದಿರುವ ಗಂಭೀರ ಸವಾಲು. ಮುಖ್ಯಮಂತ್ರಿ ...ಸಿದ್ದರಾಮಯ್ಯನವರು ಇದರ ಬಗ್ಗೆ ವಿಶೇಷ ಆಸ್ಥೆ ವಹಿಸಿ ...ತನಿಖೆಗೆ ಆದೇಶಿಸಬೇಕಿದೆ. ಭ್ರಷ್ಟಾತಿಭ್ರಷ್ಟ ಉನ್ನತ ಶಿಕ್ಷಣ ...ವನ್ನು 'ಆರ್.ವಿ.ದೇಶಪಾಂಡೆ' ತನಿಖೆಯಲ್ಲಿ ಮೂಗು ...ತೂರಿಸದಂತೆ ಎಚ್ಚರವಹಿಸಬೇಕಿದೆ.

● ಇಸ್ಮತ್ ಪಜೀರ್

ನಾಗಮಂಗಲ ಇಸ್ಪೀಟ್ ದಂಧೆಕೋರರಿಗೆ

ಮಂಡ್ಯ ಎಸ್ಪಿ ಗುನ್ನ!




ನಾಗಮಂಗಲದ ಇಸ್ಪೀಟು ದಂಧೆಕೋರರ ಬುಡಕ್ಕೆ ಮಂಡ್ಯ ಎಸ್ಪಿ ಭೂಷಣ್ ಜಿ. ಬೊರಸೆ ಸರಿಯಾಗಿಯೇ ಬಿಸಿನೀರು ಬಿಟ್ಟಿದ್ದಾರೆ. ಮೊದಮೊದಲು ಗದ್ದೆ ಬಯಲಿನಲ್ಲಿ ಶುರುಮಾಡಿಕೊಂಡು ಕ್ರಮೇಣ ನಾಗಮಂಗಲ ಟೌನಿಗೆ ವಕ್ಕರಿಸಿದ್ದ ದಂಧೆಕೋರರಿಂದ ಜನ ಬೇಸತ್ತುಹೋಗಿದ್ದರು. ಇದಕ್ಕೆ ಕೆಲ ಪೊಲೀಸರ ಸಾಥ್ ಕೂಡಾ ಇತ್ತು, ಆದರೆ ಡಿಸೆಂಬರ್ 1ನೇ ತಾರೀಖಿಗೆ ಇಸ್ಪೀಟ್‌ವಾಲಾಗಳ ನಸೀಬು ಕಂಪ್ಲೀಟಾಗಿ ಮಕಾಡೆ ಮಲಗಿತ್ತು, ಯಾಕೆಂದರೆ ಅವತ್ತು ಎಸ್ಪಿ ಭೂಷಣ್ ಜಿ.ಬೊರಸೆ ಆದೇಶದಂತೆ ಡಿವೈಎಸ್ಪಿ ಶೋಭಾರಾಣಿ ಅಂದರ್-ಬಾಹರ್, ಜಾಕ್‌ಪಾಟ್ ಆಡುತ್ತಿದ್ದ 28ಮಂದಿಯನ್ನು ಅಟ್ಯಾಡಿಸಿ ಬಡಿದು ಜೈಲಿಗೆ ಗದುಮಿದ್ದರು. ಇದು ನಾಗಮಂಗಲದ ಸಭ್ಯ ನಾಗರಿಕರು ನಿಟ್ಟುಸಿರುಬಿಡುವಂತೆ ಮಾಡಿದ್ದು ಸುಳ್ಳಲ್ಲ.

ನಾಗಮಂಗಲ ಟೌನ್ ಪೊಲೀಸ್ ಠಾಣೆಗೆ 1 ಕಿ.ಮೀ. ಅಂತರದಲ್ಲೇ ಮುದ್ದೇಗೌಡನ ಕೊಪ್ಪಲು ಬಳಿಯ ತೋಟದ ಮನೆಯೊಂದರಲ್ಲಿ ಕಳೆದ ವಾರದ ಹಿಂದಷ್ಟೇ ತೆರೆದಿದ್ದ ಅನಧಿಕೃತ ಇಸ್ಪೀಟು ಅಡ್ಡೆಯಲ್ಲಿ ದಿನಂಪ್ರತಿ ಲಕ್ಷ-ಲಕ್ಷ ಹಣ ಜೂಜಿನಲ್ಲಿ ವಹಿವಾಟಾಗುತ್ತಿತ್ತು, ಇಷ್ಟಾದರೂ ಕೂಗಳತೆಯ ದೂರದಲ್ಲಿದ್ದ ಟೌನ್ ಪೊಲೀಸರಿಗೆ ಮಾತ್ರ ಈ ಅಕ್ರಮ ದಂಧೆಯ ಕಲರವ ಕೇಳಿಸುತ್ತಲೇ ಇರಲಿಲ್ಲ. ಇಸ್ಪೀಟ್ ದಂಧೆಕೋರರು ಎಸೆಯುತ್ತಿದ್ದ ಮೂಳೆಗೆ ನಾಗಮಂಗಲ ಪೊಲೀಸರು ಕಿವಿ ಇದ್ದೂ ಕಿವುಡರಂತಾಗಿದ್ದರು. ಅದ್ಯಾವ ನತದೃಷ್ಟ ಕುಟುಂಬದ ಆರ್ತನಾದ ಮಂಡ್ಯ ಎಸ್ಪಿ ಭೂಷಣ್ ಬೊರಸೆಯವರ ಕಿವಿ ಮುಟ್ಟಿತೋ, ಕೂಡಲೇ ಅವರು ನಾಗಮಂಗಲ ಪೊಲೀಸರಿಗೆ ಸಣ್ಣ ಸುಳಿವೂ ಕೊಡದೆ ಡಿವೈಎಸ್ಪಿ ಶೋಭಾರಾಣಿ ಕಳುಹಿಸಿ ದಂಧೆಕೋರರ ನಡು ಮುರಿದಿದ್ದಾರೆ. ಇದು ನಾಗಮಂಗಲ ಪೊಲೀಸರ ಮುಖಕ್ಕೆ ಕ್ಯಾಕರಿಸಿ ಉಗಿದಂತ ಕಾರ್ಯಾಚರಣೆ.

ಪುಂಗನ ಪುಂಗಿ ಬಂದ್

ಮೊನ್ನೆ ನಡೆದ ರೈಡ್‌ನಲ್ಲಿ ಪೊಲೀಸರಿಗೆ ಸಿಕ್ಕಿ ಬಿದ್ದ 28 ಮಂದಿಯೂ ಕೈತಟ್ಟುತ್ತಾ ಕೂತದ್ದು ಪಟ್ಟಣ ಪಂಚಾಯಿತಿಯ ಸದಸ್ಯ ವಿಜಯ್‌ಕುಮಾರ್ ಅಲಿಯಾಸ್ ಪುಂಗನ ಅಕ್ರಮ ಕ್ಲಬ್‌ನಲ್ಲಿ, ಮಾಜಿ ಶಾಸಕ ಕೆ.ಸುರೇಶ್‌ಗೌಡರ ಆಪ್ತನಾದ ಮಾಜಿ ಕೌನ್ಸಿಲರ್ ಗೋಪಾಲ್‌ರವರಿಗೆ ಸೇರಿದ ಮುದ್ದೇಗೌಡನ ಕೊಪ್ಪಲಿನ ತೋಟದ ಮನೆಯೊಂದನ್ನು ವಾರದ ಹಿಂದೆಯಷ್ಟೇ ಬಾಡಿಗೆ ಪಡೆದು ಲಯನ್ಸ್ ಕ್ಲಬ್ ಎಂಬ ಇಸ್ಪೀಟು ಅಡ್ಡೆಯನ್ನು ಪುಂಗ ತೆರೆದಿದ್ದ. ಇಸ್ಪೀಟು ವಿದ್ಯೆಯಲ್ಲಿ ಪ್ರಾವೀಣ್ಯತೆ ಪಡೆದಿರುವ ಪುಂಗನಿಗೆ ಈ ದಂಧೆ ಹೊಸದೇನೂ ಅಲ್ಲ, ಮಾಜಿ ಶಾಸಕ ಸುರೇಶ್‌ಗೌಡನ ಶಿಷ್ಯನಾದ ಈತ ಕಳೆದ ಪಟ್ಟಣ ಪಂಚಾಯಿತಿ ಚುನಾವಣೆಯಲ್ಲಿ ಸ್ಪರ್ಧಿಸಲು ಕಾಂಗ್ರೆಸ್ ಟಿಕೆಟ್ ಕೇಳಿದ್ದ. ಇಸ್ಪೀಟ್ ಅಡ್ಡೆಯ ಪುಂಗನಿಗೆ ಟಿಕೆಟ್ ಕೊಟ್ಟರೆ ಕೆಟ್ಟ ಹೆಸರು ಬರುತ್ತದೆಂದು ಸುರೇಶ್‌ಗೌಡ ಅವನಿಗೆ ಟಿಕೆಟ್ ನೀಡಿರಲಿಲ್ಲ.

ಅಷ್ಟಕ್ಕೇ ಸುಮ್ಮನಾಗದ ಪುಂಗ ಇಸ್ಪೀಟು ದಂಧೆಯಲ್ಲಿ ಗಳಿಸಿದ ಹಣವನ್ನೆಲ್ಲಾ ಚೆಲ್ಲಿ 9ನೇ ವಾರ್ಡ್‌ನಿಂದ ಪಕ್ಷೇತರನಾಗಿ ಸ್ಪರ್ಧಿಸಿ ಪಟ್ಟಣ ಪಂಚಾಯಿತಿ ಸದಸ್ಯನಾಗಿಯೇ ಬಿಟ್ಟಿದ್ದ. ಓಟಿಗೆ ಐನೂರು-ಸಾವಿರ ಚೆಲ್ಲಿದ ಪುಂಗ ಗೆದ್ದದ್ದಾದರು ಜುಜುಬಿ ಒಂದು ಮತದ ಅಂತರದಲ್ಲಿ. ಇಷ್ಟಾದರು ತನ್ನ ಹಳೇ ಛಾಳಿಯನ್ನೇನು ಆತ ಬಿಡಲಿಲ್ಲ, ಒಂದಷ್ಟು ಪುಂಡ-ಪೋಕರಿ, ಜೂಜುಕೋರರನ್ನು ಜೊತೆಗಾಕಿಕೊಂಡು ಈ ಕ್ಲಬ್ ತೆರೆದು ಕೂತಿದ್ದ.



ಪುಂಗ

ಎಲ್ಲಾ ಪಕ್ಷದವರು ಸಿಕ್ಕಿಬಿದ್ದರು

ಇಸ್ಪೀಟು ತಟ್ಟುತ್ತಿದ್ದವರಲ್ಲಿ ಕಾಂಗ್ರೆಸ್, ಜೆಡಿಎಸ್ ಸೇರಿದಂತೆ ಎಲ್ಲಾ ಪಕ್ಷದವರೂ ಇದ್ದರು. ಪಟ್ಟಣ ಪಂಚಾಯಿತಿಯ ಮಾಜಿ ಸದಸ್ಯರಾದ ಬರ್ಕತ್‌ವುಲ್ಲಾ ಕಾಂಗ್ರೆಸ್ ಪಕ್ಷಕ್ಕೆ ಸೇರಿದ್ದರೆ, ಬಡ್ಡಿ ರಮೇಶ ಜೆಡಿಎಸ್ ಪಕ್ಷಕ್ಕೆ ಸೇರಿದವನು. ಇನ್ನು 2ನೇ ವಾರ್ಡ್‌ನ ಜಾ.ದಳ ಸದಸ್ಯ ಗೀತಾಳ ಗಂಡ ದಾಸೇಗೌಡನೂ ಸಿಕ್ಕಿಬಿದ್ದಿದ್ದಾನೆ. ಜಾ.ದಳದ ಮಾಜಿ ಕೌನ್ಸಿಲರ್ ಲಕ್ಷ್ಮಣ್, ಜಯರಾಂ ಸೇರಿದಂತೆ ಸಿಕ್ಕಿಬಿದ್ದಿರುವ ಹಲವರು ಜನಸೇವೆ ಮಾಡುವ ರಾಜಕಾರಣಿಗಳಂತೆ ಪೋಸು ಕೊಡುತ್ತಿದ್ದವರೇ. ಇನ್ನು ರೌಡಿ ಶಬರೀಶ್, ಗುರು, ಮಂಜು ಅಲಿಯಾಸ್ ಬವಾಳಿ ಮಂಜ ಇವರಿಗೆಲ್ಲಾ ಇಸ್ಪೀಟು ಆಡಿಸುವುದೇ ಮುಖ್ಯ ಕಸುಬು. ಲಾಡ್ಜ್‌ಗಳಲ್ಲಿ, ಗದ್ದೆ ಬಯಲಿನಲ್ಲಿ ಜೂಜಾಟ ಆಡಿಸುವ ಇವರನ್ನು ಎಸ್ಪಿ ಬೊರಸೆ ಕರೆಸಿ ಎಚ್ಚರಿಕೆ ನೀಡಬೇಕಿದೆ.



ವಸಂತ ಶೋಭಾರಾಣಿ

ಪೊಲೀಸರ ಜಾಣ ನಿದ್ದೆ

ನಾಗಮಂಗಲ ಪಟ್ಟಣದಲ್ಲಿ ಇಸ್ಪೀಟು ಕ್ಲಬ್‌ಗಳು ಇರಲಿಲ್ಲ, ಹಿಂದೆ ಟೌನ್ ಪೊಲೀಸ್ ಠಾಣೆಯಲ್ಲಿದ್ದ ಎಸ್‌ಐ ವೆಂಕಟೇಗೌಡ ಅವುಗಳಿಗೆ ಕಡಿವಾಣ ಹಾಕಿದ್ದರು. ಆದರೆ ಈಗಿರುವ ಸರ್ಕಲ್ ಇನ್‌ಸ್ಪೆಕ್ಟರ್ ವಸಂತ್ ಹಾಗೂ ಎಸ್‌ಐ ಸಿದ್ದರಾಜು ಕಣ್ಮುಚ್ಚಿ ಕುಳಿತಿದ್ದಾರೆ. ಆದ್ದರಿಂದಲೇ ಎಸ್ಪಿ ಭೂಷಣ್ ಜಿ. ಬೊರಸೆ ಇವರಿಗೆ ಮಾಹಿತಿ ಕೊಡದೆ ನೇರವಾಗಿ ಡಿವೈಎಸ್ಪಿ ಶೋಭಾರಾಣಿ ಮೂಲಕ ರೇಡ್ ಮಾಡಿಸಿದ್ದು. ಶಂಭೂಗೌಡ ಎಂಬ ಪೇದೆ 10 ವರ್ಷಗಳಿಂದ ನಾಗಮಂಗಲದಲ್ಲೇ ಗೂಟ ಬಡಿದುಕೊಂಡು ಕೂತಿದ್ದು ಈತನೇ ದಂಧೆಕೋರರ ಆಪ್ತಮಿತ್ರ.

ಸರ್ಕಲ್ ಇನ್ಸ್‌ಪೆಕ್ಟರ್ ಹೆಚ್.ಎಸ್. ವಸಂತ್ ನಾಗಮಂಗಲದಲ್ಲೇ ಎಸ್‌ಐ ಆಗಿ ಕೆಲಸ ಮಾಡಿದವರು. ಬಡ್ತಿ ಪಡೆದು ಅಲ್ಲಿಯೇ ಕೆಲಸ ಮಾಡುತ್ತಿರುವ ಅವರಿಗೆ ಯಾರು ಯಾವ ದಂಧೆ ನಡೆಸುತ್ತಾರೆ ಎಂಬ ಬಗ್ಗೆ ಆಳವಾದ ಅರಿವಿದೆ. ತಾನೊಬ್ಬ ದಕ್ಷ ಎಂಬಂತೆ ಪೋಸು ಕೊಡುವ ವಸಂತ್ ನ್ನ ಪೊಲೀಸ್ ಠಾಣೆಯ ಕೂಗಳತೆ ದೂರದಲ್ಲಿಯೇ ರಾಜಾರೋಷವಾಗಿ ಲಕ್ಷಾಂತರ ಹಣವನ್ನು ಪಣಕ್ಕಿಟ್ಟು ಅಂದರ್-ಬಾಹರ್ ಆಡುತ್ತಿದ್ದರೂ ಗೊತ್ತಿಲ್ಲದೆ ಇದ್ದುದರ ಹಿಂದಿರುವ ರಹಸ್ಯವೇನು ಎಂಬುದನ್ನು ತಿಳಿಯದಷ್ಟು ನಾಗಮಂಗಲದ ಜನ ದಡ್ಡರಲ್ಲ. ಸೂಳೆಕೆರೆ, ಹಿರೀಕೆರೆ ಬಯಲಿನಲ್ಲಿ, ಲಾಡ್ಜ್‌ಗಳಲ್ಲಿ, ಅರಣ್ಯ ಪ್ರದೇಶಗಳಲ್ಲಿ ಇಸ್ಪೀಟು ಆಡಿಸುವ ಈ ಖದೀಮರ ಬಗ್ಗೆ ಟೌನ್ ಪೊಲೀಸರಿಗೆ ಗೊತ್ತಿದ್ದರೂ ಅವರು ಕೊಡುವ ಪ್ರಸಾದವನ್ನೇ ಸತ್ಯನಾರಾಯಣ ಪ್ರಸಾದವೆಂಬಂತೆ ಸ್ವೀಕರಿಸುತ್ತಾ ಮನೆಹಾಳು ದಂಧೆಯಲ್ಲಿ ಕೈಜೋಡಿಸಿದ್ದಾರೆ.

ಸಿಕ್ಕಿದ್ದು ಬರೀ ಲಕ್ಷ!

ಮೊನ್ನೆ ನಡೆದ ದಾಳಿಯ ಸಂದರ್ಭದಲ್ಲಿ 1,11,000ರೂಗಳನ್ನಷ್ಟೇ ವಶಪಡಿಸಿಕೊಂಡಿದ್ದಾಗಿ ಪೊಲೀಸರು ತೋರಿಸಿದ್ದಾರೆ. ಆದರೆ ಮಾಹಿತಿಗಳ ಪ್ರಕಾರ ಅಲ್ಲಿ 2ಲಕ್ಷಕ್ಕೂ ಅಧಿಕ ಹಣವನ್ನು ಪಣಕ್ಕಾಗಿ ಇಡಲಾಗಿತ್ತು, ಉಳಿದ 1ಲಕ್ಷ ಹಣ ಏನಾಯ್ತೋ ಪೊಲೀಸರಿಗೆ ಗೊತ್ತು. ಪೊಲೀಸರು ವಶಪಡಿಸಿಕೊಂಡ ಹಣವೆಷ್ಟು? ತೋರಿಸಿದ್ದೆಷ್ಟು? ಎಂಬುದು ಹಾಳಾಗಿ ಹೋಗಲಿ, ಪಟ್ಟಣದಲ್ಲಿ ತಲೆ ಎತ್ತಿದ್ದ ಈ ದಂಧೆ ನಿಂತಿತಲ್ಲ ಅಷ್ಟು ಸಾಕು ಎಂದು ಜನ ನಿಟ್ಟುಸಿರು ಬಿಡುತ್ತಿದ್ದಾರೆ.


ಮಂಡ್ಯ ಎಸ್ಪಿ ಭೂಷಣ್ ಜಿ. ಬೊರಸೆಯವರು ಈ ವಿಚಾರದಲ್ಲಿ ನಿಜಕ್ಕೂ ಅಭಿನಂದನಾರ್ಹರು. ಅವರ ಕಂಡೂಕಾಣದಂತಿದ್ದ ನಾಗಮಂಗಲ ಪೊಲೀಸರಿಗೆ ಅದ್ಯಾವ ಥರಾ ದಂಡಿಸುತ್ತಾರೋ ಕಾದು ನೋಡಬೇಕು. ●



ದಾಳಿಗೊಳಗಾದ ಪುಂಗನ ಅಡ್ಡೆ



ಶಾಸಕ ಚಲುವರಾಯಸ್ವಾಮಿ ಗಮನಿಸಲಿ



ತಾಲ್ಲೂಕಿನಲ್ಲಿ ಮರಳು ದಂಧೆ, ಇಸ್ಪೀಟ್ ದಂಧೆ ರಾಜಾರೋಷವಾಗಿ ನಡೆಯುತ್ತಿದೆ. ಇದಕ್ಕೆ ಪೊಲೀಸರು ಸಾಥ್ ನೀಡಿದ್ದಾರೆ. ಒಂದು ತಿಂಗಳ ಹಿಂದೆ 30ಕ್ಕೂ ಹೆಚ್ಚು ಅಕ್ರಮ ಮರಳು ಸಾಗಣಿಕೆ ಲಾರಿಗಳನ್ನು ಡಿವೈಎಸ್ಪಿ ಶೋಭಾರಾಣಿಯೇ ತಡೆದು 25 ಲಕ್ಷ ರೂ. ದಂಡ ವಸೂಲಿ ಮಾಡಿದ್ದರು. ಶಾಸಕ ಚಲುವರಾಯಸ್ವಾಮಿ ಸ್ವಾಮಿ ಕೂಡ ಮರಳು ದಂಧೆಕೋರರಿಗೆ ಕಡಿವಾಣ ಹಾಕುವಂತೆ ಜಿಲ್ಲಾಧಿಕಾರಿಗಳನ್ನೇ ಮರಳು ಗಣಿಗಾರಿಕೆ ನಡೆದಿರುವ ಸ್ಥಳಗಳಿಗೆ ಕರೆತಂದು ವಿನಂತಿಸಿದ್ದರು. ಈಗ ಇಸ್ಪೀಟು ದಂಧೆ ಕೂಡ ಪಟ್ಟಣದಲ್ಲಿ ತಲೆ ಎತ್ತಿದೆ. ಎಲ್ಲಾ ದಂಧೆಗಳ ಮೇಲೂ ಎಸ್ಪಿ ಹಾಗೂ ಡಿವೈಎಸ್ಪಿಯೇ ದಾಳಿ ಮಾಡುವುದಾದರೆ ನಾಗಮಂಗಲ ಪೊಲೀಸರೇಕೆ ಕಡಿಯುತ್ತಿದ್ದಾರೆ ಎಂಬ ಬಗ್ಗೆ ಶಾಸಕ ಚಲುವರಾಯಸ್ವಾಮಿ ಗಮನ ಹರಿಸಿ ಕ್ರಮ ತೆಗೆದುಕೊಳ್ಳಲು ಸೂಚಿಸಬೇಕಿದೆ. ಇದು ಜನರ ಒತ್ತಾಯ.

ಗೊರವನಹಳ್ಳಿ ಮಹಾಲಕ್ಷ್ಮಿಗೆ ವಂಚಕ ಆನಂದನ ಕಾಟ!



ನಡೆದ ಅನಾಹುತ ಮತ್ತದರ ಸಾಮಾಜಿಕ ದುಷ್ಪರಿಣಾಮವನ್ನು ಕನ್ನಡದ ಲಾಭಬಡುಕ ಟಿವಿ ಚಾನಲ್ಲುಗಳೆಲ್ಲ ಸೇರಿಕೊಂಡು ವ್ಯವಸ್ಥಿತವಾಗೇ ಮುಚ್ಚಿ ಹಾಕಿರಬಹುದು. ಗೊರವನಹಳ್ಳಿಯ ಮಹಾಲಕ್ಷ್ಮಿ ಅದ್ಯಾವ ರಾದ್ಧಾಂತವಾಗಿ ಪ್ರತ್ಯಕ್ಷಳಾದಳೋ ಗೊತ್ತಿಲ್ಲ. ದೇವಿಯದರ್ಶನಕ್ಕೆಂದು ಅಕ್ಷೋಹಿಣಿಯಾಗಿ ಹರಿದುಬಂದ ಮೂಢಾತ್ಮರ ಫಜೀತಿಯಂತೂ ಬಣ್ಣನೆಗೆ ನಿಲುಕುತ್ತಿಲ್ಲ. ಕಾಲ್ತುಳಿತಕ್ಕೆ ಸಿಲುಕಿ ಒಬ್ಬಳು ಮುದುಕಿ ಮತ್ತೊಂದು ಮಗು ಹೆಣವಾದ ಬಗ್ಗೆಯೂ ಖಾತರಿಯಿಲ್ಲ.

ಆದರೆ ಇಂಥಾದ್ದೊಂದು ಅವಾಂತರಕ್ಕೆ ಕಾರಣನಾದ ವಂಚಕ ಜ್ಯೋತಿಷಿ ಡಾ. ಶ್ರೀ ಶ್ರೀ ಶ್ರೀ ಮಹರ್ಷಿ ಆನಂದ ಗುರೂಜಿ ಉರ್ಫ್ ಗಡ್ಡಾ ಆನಂದನೆಂಬ ಹಲಾಲು ಕೋರನನ್ನು ಜನ ಅಟ್ಟಾಡಿಸಿ ಹೊಡೆಯದೆ ಯಾಮಾರಿದ್ದಂತೂ ಸತ್ಯ!

ತುಮಕೂರು ಜಿಲ್ಲೆ ಕೊರಟಗೆರೆಯ ಗೊರವನಹಳ್ಳಿಯಂಥ ಶುದ್ಧ ಹಳ್ಳಿಗಾಡಿನಲ್ಲಿ ರಾತ್ರೋರಾತ್ರಿ ಲಕ್ಷಾಂತರ ಮೂಢಾತ್ಮರು ಕಿಕ್ಕಿರಿದದ್ದು, ಬರೋಬ್ಬರಿ 10 ಮೈಲುಗಳ ತನಕ ರಸ್ತೆ ಝಾಮ್ ಆಗಿದ್ದು, ಏಕಾಏಕಿ ಈ ಪಾಟಿ ಜನ ಸೇರಿ ರಾದ್ಧಾಂತವಾದೀತೆಂಬ ಯಃಕಶ್ಚಿತ್ ಲೆಕ್ಕಾಚಾರ ಕೂಡ ಜಿಲ್ಲಾಡಳಿತಕ್ಕೆ ಸಿಗದೇ ಹೋಗಿದ್ದು ಮತ್ತು ಬಂದ ಜನಸಾಗರವನ್ನು ನಿಯಂತ್ರಿಸಲಾಗದೆ ಪೊಲೀಸರು, ಅಧಿಕಾರಿ ಗಳೆಲ್ಲ ಹೈರಾಣಾಗಿ ಸುದೈವವಶಾತ್ ಭಯಾನಕ ಕಾಲ್ತುಳಿತ ದಿಂದ ನೂರಾರು ಜನರ ಪ್ರಾಣ ಉಳಿದದ್ದು ಕರ್ನಾಟಕದ ಮಟ್ಟಿಗೆ ಸಣ್ಣ ಸಂಗತಿಯೇನಲ್ಲ.

ಟಿವಿ ವಂಚಕರು

ಸರ್ಕಾರ ಮೌಢ್ಯ ವಿರೋಧಿ ಕಾಯ್ದೆ ರೂಪಿಸುತ್ತಿರುವಾಗಲೇ ಟಿವಿ ಚಾನಲ್ಲುಗಳು ಮತ್ತು ಕಪಟ ಜ್ಯೋತಿಷಿಗಳೆಲ್ಲ ಸೇರಿಬಿಟ್ಟರೆ ಏನೆಲ್ಲ ಅನಾಹುತ ಆಗಬಹುದೆಂಬುದಕ್ಕೆ ಇದಕ್ಕಿಂತ ಉದಾಹರಣೆ ಬೇಕಿಲ್ಲ. ಇಲ್ಲಿ ವರ್ಷದ ಹಿಂದೆ ಅದೆಂಥದೋ ದಿನದಂದು ಸುಮಂಗಲಿಯರೆಲ್ಲ ಹೆಣ್ಣು ದೇವತೆಗೆ ಐದು ರೀತಿಯ ಎಣ್ಣೆಗಳಿಂದ ದೀಪ ಹಚ್ಚಿದರೆ ಸಂಭವಿಸಲಿದ್ದ ಪ್ರಳಯ ತಪ್ಪುತ್ತದೆಯೆಂದೂ ಅವತ್ತು ಆಕಾಶದಲ್ಲಿ ಆದಿಶಕ್ತಿ ನಾಲಿಗೆ ಚಾಚಿ ದರ್ಶನ ನೀಡುತ್ತಾಳೆಂದೂ ಹೇಳಿದ್ದೇ ದೊಡ್ಡ ರಂಪವಾಯಿತು. ರಾಜ್ಯಾದ್ಯಂತ ಪಂಚ ತೈಲಗಳದ್ದೇ ದೊಡ್ಡ ರಾದ್ಧಾಂತವಾಗಿ ಜನ ಸಿಕ್ಕಸಿಕ್ಕ ದೇವಸ್ಥಾನಕ್ಕೆ ನುಗ್ಗಿ ದೀಪ ಉರಿಸಿದ್ದೇ ಉರಿಸಿದ್ದು. ಪ್ರಳಯದ ಕತೆ ಏನಾಯಿತೋ; ಆದರೆ ಆದಿಶಕ್ತಿಯಂತೂ ಆಕಾಶದಲ್ಲಿ ಹಾಜರಾಗಲೇ ಇಲ್ಲ!

ಟಿವಿಗಳು ಬಿತ್ತುವ ಮೌಢ್ಯ ಮತ್ತು ವಂಚಕ ಜ್ಯೋತಿಷಿಗಳ ಕಸುಬಿಗೆ ಇದು ಒಂದು ಉದಾಹರಣೆಯಷ್ಟೆ. ಅದೇ ಹೊತ್ತಿಗೆ ರಾತ್ರೋರಾತ್ರಿ ಪ್ರಖ್ಯಾತಿಗೆ ಬಂದವನು ಬ್ರಹ್ಮಾಂಡ ಪಿಂಡ. ನಾಯಿ ಎಂಬ ಪ್ರಾಣಿಯೇ ಅನಿಷ್ಟ ಅದು ಮನೆಯಲ್ಲಿತ್ತೆಂದರೆ ಲಕ್ಷ್ಮಿ ಬರುವುದಿಲ್ಲ ಎಂದು ತನ್ನ ಟಿವಿ ಪ್ರಲಾಪದಲ್ಲಿ ರೈಲುಬಿಟ್ಟ. ಇದರ ಘೋರ ಹೇಗಿತ್ತೆಂದರೆ ಸಾವಿರಾರು ಮಂದಿ ಮೂಢಮತಿಗಳೆಲ್ಲ ತಾವು ಸಾಕಿದ್ದ ನಾಯಿಗಳನ್ನು ಬೀದಿಗೆಸೆದರು. ಒಂದೆಡೆ ನಾಯಿಗಳದ್ದೇ ಮಹಾಕಾಟವೆಂಬಂತೆ ಜನರ ದಿಕ್ಕು ತಪ್ಪಿಸಿದ್ದ ಟಿವಿಗಳೇ ದಗಲುಬಾಜಿ ಜ್ಯೋತಿಷಿಯ ಮೂಲಕ ಸಹಸ್ರಾರು ನಾಯಿಗಳು ಬೀದಿಗೆ ಬೀಳಲು ಕಾರಣವಾಗಿದ್ದವು. ಇನ್ನಾರೋ ಟಿವಿ ಜ್ಯೋತಿಷಿಯೊಬ್ಬ ಕ್ಷೌರಿಕರ ಮುಖ ನೋಡುವುದೇ ಅನಿಷ್ಟ ಎಂದು ಸವಿತಾ ಸಮಾಜದ ಯುವಕರಿಂದ ಒದೆ ತಿಂದ.

ಹೀಗೆ ಕನ್ನಡದ ಟಿವಿ ಚಾನಲ್ಲುಗಳ ಮೂಲಕ ಸಾಮೂಹಿಕ ಸನ್ನಿಯಾಗಿ ವಕ್ಕರಿಸುವ ಚಾನಲ್ ಜ್ಯೋತಿಷಿಗಳ ಹಾವಳಿಯ ವಿರುದ್ಧ ಸರ್ಕಾರ ಚಂಡ ಶಾಸನ ಮಾಡ ಹೊರಟಿರುವುದು ಕೂಡ ಇವುಗಳ ದುಷ್ಪರಿಣಾಮದ ಪ್ರತಿಫಲವಷ್ಟೆ. ಈ ಎಲ್ಲದ್ದರ ಅತಿರೇಕ ಸಂಭವಿಸಿದ್ದು ಮೊನ್ನೆ ನವೆಂಬರ್ 27ರ ಬುಧವಾರದಂದು.

ಛದ್ಮವೇಷದ ಕಪಟಿ

ಗೊರವನಹಳ್ಳಿಯಲ್ಲಿ ಮಹಾಲಕ್ಷ್ಮಿ ಪ್ರತ್ಯಕ್ಷಳಾಗುತ್ತಾಳೆಂಬ ರೈಲು ಬಿಟ್ಟ ಮಹರ್ಷಿ ಡಾ. ಶ್ರೀ ಶ್ರೀ ಶ್ರೀ ಆನಂದ್ ಗುರೂಜಿ ಉರ್ಫ್ ಗಡ್ಡಾ ಆನಂದ ಯಾರು, ಎಲ್ಲಿಂದ ಬಂದ, ಆತನ ಹಿನ್ನೆಲೆಯೇನು ಇತ್ಯಾದಿಗಳನ್ನೆಲ್ಲ ಬದಿಗಿಟ್ಟು ನೋಡಿದರೂ ನವೆಂಬರ್ 27ರ ಅನಾಹುತ ಕಮ್ಮಿಯದೆನಿಸುವುದಿಲ್ಲ. ಸದ್ಯ ಈ ಟಿವಿಯಲ್ಲಿ ಪ್ರತಿನಿತ್ಯ ಪ್ರಸಾರವಾಗುವ 'ಧರ್ಮ ದರ್ಪಣ' ಎಂಬ ಕಾರ್ಯಕ್ರಮದ ರೂವಾರಿಯೇ ಈ ಆನಂದ್ ಗುರೂಜಿ. ವಿಕಾರವಾಗಿ ಗಡ್ಡಬಿಟ್ಟು, ಪೌರಾಣಿಕ ನಾಟಕ ರಾಕ್ಷಸ ಪಾತ್ರಧಾರಿಯಂತೆ ಜುಟ್ಟು, ಭಯಂಕರ ಮೀಸೆ, ದೈತ್ಯಕಾಯ ಹಣೆಗೆ ವಿಭೂತಿ ಪಟ್ಟೆ, ಕೊರಳಲ್ಲಿ ಚಿನ್ನದ ಚೈನು; ಜೊತೆಗೆ ರುದ್ರಾಕ್ಷಿ ಮಾಲೆ, ಅದಕ್ಕೆ ಗಜ ಗಾತ್ರದ ಪದಕ, ಕೈಗೆ ರ್‍ಯಾಡೋ ವಾಚು, ಎಲ್ಲಾ ಬೆರಳುಗಳಿಗೂ ಉಂಗುರ, ಹೆಗಲಲ್ಲಿ ಸುವರ್ಣ ಪಿತಾಂಬರ ಮತ್ತು ಥೇಟು ಆರ್ಟ್ ಆಫ್ ಲೀವಿಂಗ್ ರವಿಶಂಕರ್‌ನಂತೆ ಶ್ವೇತವಸ್ತ್ರ..!

ಇದು ಮಹರ್ಷಿ ಡಾ. ಆನಂದ್ ಗುರೂಜಿಯ ಛದ್ಮವೇಷವಾದರೆ ಆತನ ಟೆಕ್ನಿಕ್ಕು, ಗಿಮ್ಮಿಕ್ಕುಗಳದ್ದೇ ಪ್ರತ್ಯೇಕ ಪುರಾಣವಿದೆ. ಈತನೇ ಹೊರತರುವ 'ರಾಶಿ ಫಲ ದರ್ಪಣ' ಎಂಬ ಜ್ಯೋತಿಷ್ಯ ಪತ್ರಿಕೆಯೊಂದು ಕರ್ನಾಟಕದುದ್ದಕ್ಕೂ ಪತ್ರಿಕಾ ಮಳಿಗೆಗಳಲ್ಲಿ ಮಾರಾಟವಾಗುತ್ತದೆ. ಈತನ ಹೆಸರಲ್ಲಿ ತರಹೇವಾರಿ ವೆಬ್‌ಸೈಟುಗಳಿವೆ. ಅದರಲ್ಲಿ ಕೆಟ್ಟಾ ಕಳಪೆ ಇಂಗ್ಲಿಷಿನಲ್ಲಿ ಈತನ ಮಹಿಮೆಗಳ ಬಣ್ಣನೆಯಿದೆ. ತನ್ನನ್ನು ತಾನೇ ಈತ ಹೇಗೆ ಬಿಂಬಿಸಿಕೊಳ್ಳುತ್ತಾನೆಂಬುದಕ್ಕೆ ಸಣ್ಣ ಸ್ಯಾಂಪಲ್ಲೆಂದರೆ 'ಈ ಟಿವಿ, ಜೀ ಟೀವಿ, ಸುವರ್ಣ ಟಿವಿ ಮೊದಲಾದ ವಾಹಿನಿಗಳ ಪ್ರಖ್ಯಾತ ಧಾರ್ಮಿಕ ರೂವಾರಿಗಳಾದ ಶ್ರೀ ವಿದ್ಯೋಪಾಸಕ ರತ್ನ ಅಥರ್ವಣ ಪರಿಹಾರ ಪ್ರವೀಣ, ದರ್ಪಣಾಂಜನ ಚಕ್ರವರ್ತಿ, ಸಾಮುದ್ರಿಕಾ ಶಿರೋಮಣಿ, ಸ್ವರ ಶಾಸ್ತ್ರಜ್ಞ, ಅಭಿನವ ಸರ್ವಜ್ಞ ಶ್ರೀ ಶ್ರೀ ಮಹರ್ಷಿ ಡಾ. ಆನಂದ್...!

ಇದು ಗಡ್ಡಾ ಆನಂದ್ ತನ್ನನ್ನು ತಾನೇ ಪ್ರೊಜೆಕ್ಟ್ ಮಾಡಿಕೊಳ್ಳುವ ರೀತಿ. ಹಾಗಂತ ವಿಜಿಟಿಂಗ್ ಕಾರ್ಡ್ ಹೊಡೆಸಿಕೊಂಡಿದ್ದೂ ಅಲ್ಲದೆ ಬೆಂಗಳೂರಿನುದ್ದಕ್ಕೂ ತಾನೇ ಕಾಸು ಕೊಟ್ಟು ಫ್ಲೆಕ್ಸು ಬ್ಯಾನರ್‌ಗಳನ್ನು ಹಾಕಿಸಿದ್ದಾನೆ. ಇಲ್ಲಿಗೆ ಹತ್ತು ವರ್ಷದ ಹಿಂದೆ ಬನ್ನೇರಘಟ್ಟದ ಮೃಗಾಲಯದ ಸೆಕ್ಯೂರಿಟಿ ಗಾರ್ಡ್ ಆಗಿದ್ದು ಕ್ರಮೇಣ ತನಗೆ ವಶೀಕರಣ ವಿದ್ಯೆ ಗೊತ್ತೆಂದು ಮೃಗಾಲಯದ ಪ್ರಾಣಿಗಳ ಕಣ್ಣಲ್ಲಿ ಕಣ್ಣಿಟ್ಟು ತಾನು ವಶೀಕರಣ ಮಾಡಿದ್ದರಿಂದಲೇ ಅವುಗಳು ತನ್ನ ಮಾತು ಕೇಳುತ್ತವೆ ಎಂದು ವೀಕ್ಷಣೆಗೆ ಬಂದವರೆದುರು ಭೋಂಗು ಬಿಡುತ್ತಿದ್ದ. ಗೊರಟಗೆರೆಯಲ್ಲಿ ಬಾಡಿಗೆ ಕೋಣೆಯೊಂದರಲ್ಲಿ ವಾಸಿಸುತ್ತಿದ್ದ. ಅಲ್ಲಿ ಹೆಂಗಸೊಬ್ಬಳಿಗೆ ಸಂತಾನ ಪ್ರಾಪ್ತಿಯಾಗುತ್ತದೆ ಎಂದು ಇನ್ನೆಂಥದೋ ಪೂಜೆಯ ನೆಪದಲ್ಲಿ ಲೇಹ ಕುಡಿಸಿ ಪ್ರಜ್ಞೆ ತಪ್ಪಿಸಿ ಚೇಷ್ಟೆಗಿಳಿದವನನ್ನು ಜನರೇ ಹಿಡಿದು ಆಟ್ಟಾಡಿಸಿ ಹೊಡೆದಿದ್ದರು.

ಬನಶಂಕರಿ ದೇಗುಲದಲ್ಲಿ

ಹಾಗೇ ಬನ್ನೇರಘಟ್ಟದಿಂದ ಪರಾರಿಯಾದ ಗಡ್ಡಾ ಆನಂದ ಅನಂತರ ವಕ್ಕರಿಸಿದ್ದು ಕನಕಪುರ ರಸ್ತೆಯ ಪ್ರಖ್ಯಾತ ಬನಶಂಕರಿ ದೇವಸ್ಥಾನಕ್ಕೆ. ಕೆಲಕಾಲ ಪೌರೋಹಿತ್ಯ ಮಾಡಿಕೊಂಡಿದ್ದ ಆನಂದ ಇಲ್ಲೂ ಅಮಾಯಕ ಹೆಂಗಸರನ್ನು ಯಾಮಾರಿಸಲಾರಂಭಿಸಿದ್ದ. ಮಕ್ಕಳಾಗದೆ ಹರಕೆ ಹೊತ್ತಿದ್ದ ಬಿಜೆಪಿ ಕೌನ್ಸಿಲರ್ ಒಬ್ಬನ ಹೆಂಡತಿಗೆ ಪುತ್ರಕಾಮೇಷ್ಠಿಯಾಗ ಮಾಡುತ್ತೇನೆಂದು ಲೈಂಗಿಕ ಛೇಷ್ಟೆಗೆ ಇಳಿದಿದ್ದ. ಇದು ಹೇಗೋ ಆಕೆಯ ಗಂಡನಿಗೆ ಗೊತ್ತಾಗಿ ದೇವಸ್ಥಾನಕ್ಕೇ ನುಗ್ಗಿ ಹೊಡೆದಿದ್ದರು. ಬನಶಂಕರಿ ದೇವಾಲಯದ ಆಡಳಿತ ಮಂಡಳಿಗೇ ತಲೆನೋವಾಗಿ ಪರಿಣಮಿಸಿದ್ದ ಆನಂದನನ್ನು ಕುತ್ತಿಗೆ ಪಟ್ಟಿ ಹಿಡಿದು ಹೊರದಬ್ಬಲಾಯಿತು.

ಎಲ್ಲೂ ಸಲ್ಲದೆ ಒಂದಷ್ಟು ದಿನಗಳ ಕಾಲ ತಲೆಮರೆಸಿಕೊಂಡಿದ್ದ ಆನಂದನ ಮೂಲ ಹೆಸರು ಆನಂದಶಾಸ್ತ್ರಿ. ಚಿಕ್ಕಬಳ್ಳಾಪುರ ಸಮೀಪದ ಬಸವನಪುರದ ಸತ್ಯನಾರಾಯಣ, ಸರೋಜಮ್ಮ ದಂಪತಿಗಳ ಮಗನಾದ ಆನಂದ ಬೆಂಗಳೂರಿಗೆ ಬಂದು ತನ್ನ ಹೆಸರನ್ನು ಎಂ.ಎಸ್.ಆನಂದ್‌ಕುಮಾರ್ ಎಂದು ಬದಲಾಯಿಸಿಕೊಂಡಿದ್ದ. ಆದರೆ ಬನಶಂಕರಿ ದೇವಾಲಯದಿಂದ ಹೊರದಬ್ಬಿಸಿಕೊಂಡ ನಂತರ ತನ್ನನ್ನು ಆನಂದ್ ಭಟ್ಟ ಎಂದು ಹೇಳಿಕೊಳ್ಳತೊಡಗಿದ. ಆ ಹೊತ್ತಿಗೆ ಸುವರ್ಣ ಟಿವಿಯನ್ನು ಸಂಭಾಳಿಸುತ್ತಿದ್ದದು ಭಟ್ಟರೆ!

ತನ್ನದೇ ಹವ್ಯಕ ಬ್ರಾಹ್ಮಣನಾಗಿರಬಹುದೆಂದು ಲೆಕ್ಕಾ ಹಾಕಿದ ಟಿವಿ ಭಟ್ಟರಿಗೆ ತಾನು ಕೇರಳದ ಕುಖ್ಯಾತ ಮಂತ್ರವಾದಿಯೊಬ್ಬನಿಂದ ವಶೀಕರಣ, ಭಸ್ಮ ಪ್ರಯೋಗ, ವಾಸ್ತು ಶಾಸ್ತ್ರ ಜ್ಯೋತಿಷ್ಯ, ಸಂಖ್ಯಾಶಾಸ್ತ್ರ ಅಂಜನ ತಂತ್ರ ಇತ್ಯಾದಿಗಳನ್ನೆಲ್ಲ ಕಲಿತು ಬಂದಿದ್ದೇನೆಂದು ಆನಂದ ನಂಬಿಸಿದ್ದ. ಕೆಲದಿನಗಳ ಕಾಲ 'ದರ್ಪಣ' ಹೆಸರಲ್ಲಿ ಸುವರ್ಣ ಟಿವಿಯಲ್ಲಿ ಈತನ ಬುರುಡೆ ಧಾರಾವಾಹಿಯೂ ಬಂತು. ವಿಚಿತ್ರ ವೇಷ, ರಾಕ್ಷಸ ರೂಪದ ವಿಕಾರವಾಗಿ ಕಾಣುತ್ತಿದ್ದ ಆನಂದನಿಗೆ ಅರಿವಿಲ್ಲದೆಯೇ ಡಿಮ್ಯಾಂಡ್ ಒಂದು ಹುಟ್ಟಿಕೊಂಡಿತ್ತು. ಆ ತನಕ ಝಿ ಟಿವಿಯಲ್ಲಿ ಮಿಂಚುತ್ತಿದ್ದ ನರೇಂದ್ರಬಾಬು ಶರ್ಮ ಎಂಬ ದಢೂತಿ ಜ್ಯೋತಿಷಿ ಇದ್ದಕ್ಕಿದ್ದಂತೆ ಝೀ ಟಿವಿ ತೊರೆದು ಈ ಟಿವಿಗೆ ಪಕ್ಷಾಂತರವಾಗಿದ್ದ. ಆತನಂತೆ ವಿಕಾರವಾಗಿ, ವಿಚಿತ್ರವಾಗಿ, ದಪ್ಪಗಾಗಿ, ದುಂಡಗಾಗಿ, ಕೊಬ್ಬಿದ ಕೋಣದಂತೆ ಕಾಣುವ ಆಕೃತಿಯೊಂದಕ್ಕಾಗಿ ಹುಡುಕಾಡುತ್ತಿದ್ದ ಝೀ ಕನ್ನಡದವರಿಗೆ ಕೊಬ್ಬಿದ ಕುರಿಯಂತೆ ಕಂಡವನು ಆನಂದ.



ಕಮಲಮ್ಮ

ಹಾಗಂತ ಝಿ ಟೀವಿಗೂ ಈತ ನಿಯತ್ತಾಗಿರಲಿಲ್ಲ. ಬ್ರಹ್ಮಾಂಡ ಎಲ್ಲೆಲ್ಲಿ ಗಬ್ಬೆಬ್ಬಿಸಿ ಜಾಗ ಖಾಲಿ ಮಾಡುತ್ತಾನೋ ಖಾಲಿಯಾದ ಜಾಗವನ್ನೆಲ್ಲ ಈತನೇ ತುಂಬುತ್ತಾ ಸಾಗುತ್ತಿದ್ದ. ಹಾಗೇ ಬ್ರಹ್ಮಾಂಡನ ಜಾಗಕ್ಕೆ ಈ ಟಿವಿಗೆ ವಕ್ಕರಿಸಿದ ಆನಂದನಿಗೆ ಹೇಗಾದರೂ ಮಾಡಿ ಬ್ರಹ್ಮಾಂಡನನ್ನು ಮೀರಿಸುವ ದುರಾಶೆ. ಅದಕ್ಕೆಂದು ಬ್ರಹ್ಮಾಂಡನಿಗಿಂತಲೂ ವಿಚಿತ್ರವಾದ ವೇಷಭೂಷಣವಷ್ಟೇ ಅಲ್ಲ, ಅಗದಿ ಚೀಪಾದ ಗಿಮ್ಮಿಕ್ಕು ಮಾಡಲಾರಂಭಿಸಿದ. ಬ್ರಹ್ಮಾಂಡ ಕನಿಷ್ಠ ಜ್ಯೋತಿಷ್ಯವೆಂದು ನಂಬಿಸುತ್ತಿದ್ದ. ಆದರೆ ಆನಂದ ನೇರವಾಗಿ ವಾಮಾಚಾರಕ್ಕೇ ಕೈಯಿಟ್ಟಿದ್ದ. ಹೀಗಾಗಿ ಬ್ರಹ್ಮಾಂಡನ ಬಿಗ್‌ಬಾಸ್ ರಿಯಾಲಿಟಿ ಷೋನ ಜನಪ್ರಿಯತೆಯನ್ನು ಬದಿಗೊತ್ತಿ ರಾತ್ರೋರಾತ್ರಿ ಆನಂದ ಟಿವಿ ಜ್ಯೋತಿಷಿಗಳ ಸಾಲಿಗೆ ಮೊದಲಿಗನಾಗಿ ಬಿಟ್ಟ. ತನ್ನ ಹೆಸರನ್ನು ಮಹರ್ಷಿ ಡಾಕ್ಟರ್ ಶ್ರೀ ಶ್ರೀ ಎಂದೆಲ್ಲಾ ಬದಲಾಯಿಸಿಕೊಂಡ.

ಇಷ್ಟೊಂದು ಅಲ್ಪಾವಧಿಯಲ್ಲಿ ಬ್ರಹ್ಮಾಂಡದ ನರೇಂದ್ರಬಾಬು ಶರ್ಮನನ್ನು ಮೀರಿ ಜನಪ್ರಿಯನಾದ ಆನಂದ್ ಗುರೂಜಿಯ ಸುತ್ತ ವಿಜಯನಗರದ ಹಳೇರೌಡಿ ತಿರುಮಲ ವೈನ್ಸ್ ಶಿವಕುಮಾರನಂಥ ಕಿರಾತಕರ ಹಿಂಡೇ ಸುತ್ತುವರಿಯಿತು. ಈತನಂತೆಯೇ ಆಯುರ್ವೇದದ ನೆಪದಲ್ಲಿ ಅಳಲೆಕಾಯಿ ಬುರುಡೆ ಬಿಡುತ್ತಿದ್ದ ವಂಚಕ ಸಂತೋಷ್ ರಾತ್ರೋರಾತ್ರಿ ಸಂತೋಷ್ ಗುರೂಜಿಯಾಗಿದ್ದ. ಹುಟ್ಟಾ ವಂಚಕ ಸೋಮಯಾಜಿ ತನ್ನ ಹೆಸರನ್ನು ದೈವಜ್ಞ ಸೋಮಯಾಜಿ ಎಂದು ಬದಲಿಸಿಕೊಂಡಿದ್ದ. ಉದಯ ಟಿವಿಯಲ್ಲಿ ಜ್ಯೋತಿಷ್ಯ ಶುರು ಹಚ್ಚಿಕೊಂಡಿದ್ದ ಎಸ್.ಕೆ. ಜೈನ್ ಯಾಕೋ ಸಪ್ಪೆ ಹೊಡೆಯುತ್ತಿದ್ದ.

ಸುವರ್ಣ ಟಿವಿಯಲ್ಲಿ ಜಾತಕಫಲ ಹೇಳುವ ರವಿಶಂಕರ್ ಸಮಯ ಟಿವಿಯ ಗೋಪಾಲಶರ್ಮ, ಟಿವಿ ಒಂಬತ್ತ

ಅಡಿಕೆಯ ಹೊಂಬಾಳೆ ಹಿಡಿದದ್ದೇ 'ಅಮ್ಮಾ... ತಾಯೀ ಮಾಲಕ್ಷ್ಮಿ...' ಎಂದ ಪರಾರಿಯಾದ!

ನವೆಂಬರ್ 27ರ ಬುಧವಾರದ ವಿಶೇಷ ಪೂಜೆಗೆ ಆನಂದ್ ಗುರೂಜಿ ಈ ರೀತಿ ಮುಳುವಾಗುತ್ತಾನೆಂಬ ಲೆಕ್ಕಾಚಾರವೇ ದೇವಸ್ಥಾನದ ಮಂಡಳಿಗಿರಲಿಲ್ಲ. 26ರ ರಾತ್ರಿಯಿಂದಲೇ ಜನ ಸಾಗರೋಪಾದಿಯಲ್ಲಿ ಬರಲಾರಂಭಿಸಿದ್ದರ ಅಂದಾಜು ಕೂಡ ತುಮಕೂರು ಜಿಲ್ಲಾಡಳಿತಕ್ಕಿರಲಿಲ್ಲ. ಸತತ ಮೂರ್‍ನಾಲ್ಕು ದಿನಗಳ ಕಾಲ ತನ್ನ ಸೀರಿಯಲ್‌ನಲ್ಲಿ ಲಕ್ಷ್ಮಿ ಪ್ರತ್ಯಕ್ಷಳಾಗುತ್ತಾಳೆಂದೇ ಪುಂಗಿ ಊದುತ್ತಿದ್ದ ಆನಂದನ ವಿಶಿಷ್ಟ ಉಂಗುರದ ಮೇಲೆ ಕಣ್ಣಿಟ್ಟೇ ದೂರದ ಬೀದರ್, ಬೆಳಗಾವಿ, ಬಿಜಾಪುರ, ಗುಲ್ಬರ್ಗಗಳಿಂದಲೂ ಜನ ಲಾರಿ ಹತ್ತಿ ಬರಲಾರಂಭಿಸಿದ್ದರು.

ಬೆಳಗ್ಗೆ 10ರ ಹೊತ್ತಿಗೆ ಯಾರೂ ನಿರೀಕ್ಷಿಸದಂತೆ ಎಲ್ಲಾ ದಿಕ್ಕುಗಳಿಂದ ಗೊರವನಹಳ್ಳಿಗೆ ಮುತ್ತಿಗೆ ಹಾಕಿದ ಭಕ್ತಾದಿಗಳ ಜನಸಾಗರದಲ್ಲಿ ಇಡೀ ಗೊರವನಹಳ್ಳಿಯೇ ಮುಳುಗಿಹೋಯಿತು. ತಂದ ವಾಹನಗಳನ್ನು ನಿಲ್ಲಿಸಲು ಸ್ಥಳವೇ ಉಳಿದಿರಲಿಲ್ಲ. ತುಮಕೂರು-ಕೊರಟಗೆರೆ ರಸ್ತೆಯಲ್ಲಿ ಅದೆಂಥಾ ದೃಶ್ಯವೆಂದರೆ ಗೊರವನಹಳ್ಳಿಯಿಂದ ಹತ್ತು ಕಿ.ಮೀ.ಗಳ ತನಕ ಒಂದರ ಹಿಂದೊಂದು ವಾಹನಗಳು ನಿಂತು ಟ್ರಾಫಿಕ್ ಝಾಮ್ ಆಗಿತ್ತು. ಮುಂದೆ ಹೋಗುವಂತಿಲ್ಲ, ವಾಪಸ್ಸು ಬರುವುದೂ ಸಾಧ್ಯವಿಲ್ಲ. ಅಸಾಧ್ಯ ಇಕ್ಕಟ್ಟು.

ತಂದ ವಾಹನಗಳಿಂದ ಇಳಿದ ಜನ ನಡಕೊಂಡೇ ಗೊರವನಹಳ್ಳಿ ತಲುಪಬೇಕೆಂದರೆ ನಡೆದುಹೋಗುವಷ್ಟು ಜಾಗವಿಲ್ಲ. ನಿಂತಲ್ಲೇ ನಿಲ್ಲುವುದಕ್ಕಾದರೂ ಆಗಬೇಕಲ್ಲವೆ? ವಿಪರೀತ ನೂಕುನುಗ್ಗಲು. ಕುಡಿಯಲು ನೀರಿಲ್ಲ, ತಿನ್ನಲು ಏನೇನೂ ಇಲ್ಲ. ಮಧ್ಯಾಹ್ನ 12ಕ್ಕೆ ಲಕ್ಷ್ಮಿ ಪ್ರತ್ಯಕ್ಷಳಾಗುತ್ತಾಳೆಂದು ಆನಂದ್ ಹೇಳಿದ್ದನಲ್ಲ; ಇತ್ತ ದೇವಾಲಯದ ಆವರಣದಲ್ಲಿ ಕಿಕ್ಕಿರಿದು ಕೂಗಾಡುತ್ತಿದ್ದ ಜನ 'ಎಲ್ಲಯ್ಯಾ ಲಕ್ಷ್ಮಿ ಪ್ರತ್ಯಕ್ಷಳಾಗ್ತಾಳೆ ಅಂದಿದ್ಯಲ್ಲ, ಎಲ್ಲಿ..?' ಎಂದು ದಬಾಯಿಸುತ್ತಿದ್ದರೆ ಆನಂದ ಮಿಕಿಮಿಕಿ ನೋಡುತ್ತಿದ್ದ.

ಜನ ಇನ್ನೆಲ್ಲಿ ಅಟ್ಟಾಡಿಸುತ್ತಾರೋ ಎಂದು ಗಡಗಡ ನಡುಗುತ್ತಲೇ ಅಡಿಕೆಯ ಎಳೆ ಗೊನೆಯೊಂದನ್ನು ಹೊರತೆಗೆದ ಆನಂದ ಅದರ ಹೊಂಬಾಳೆಯ ಪಕಳೆಗಳನ್ನು ಒಂದೊಂದಾಗಿ ಬಿಡಿಸತೊಡಗಿದ. ಕೊನೆಗೆ ಅಡಿಕೆಯ ಚಿಗುರು ಕಂಡಿದ್ದೇ



'ಅಮ್ಮಾ ತಾಯೀ..., ಮಾಲಕ್ಷ್ಮಿ, ಅಮ್ಮಾ ತಾಯಿ ಮಾಲಕ್ಷ್ಮಿ...!' ಎಂದು ಕೂಗಾಡಲಾರಂಭಿಸಿದ್ದ. ಆತನ ಪ್ರಕಾರ ಅಡಿಕೆಯ ಹೊಂಬಾಳೆಯ ತಿರುಳೇ ಮಹಾಲಕ್ಷ್ಮಿ.

ಇದನ್ನು ನೋಡಿದ್ದೇ ಜನ 'ಎಲಾ ಇವ್ನ ಮಹಾಲಕ್ಷ್ಮಿ ಪ್ರತ್ಯಕ್ಷಳಾಗ್ತಾಳೆ ಎಂದು ಈಗ ಹೊಂಬಾಳೆ ತೋರಿಸ್ತಾ ಅವ್ನಲ್ಲ' ಎಂದು ಹಿಡಿಶಾಪ ಹಾಕುತ್ತಿದ್ದರೆ ಆನಂದ ಅದನ್ನೇ ಮುಖಕ್ಕೆ ಒತ್ತಿಕೊಂಡು ಅಮ್ಮಾ ತಾಯೀ..., ಮಾಲಕ್ಷ್ಮೀ.... ಎಂದು ಚೀರಾಡುತ್ತಿದ್ದ. ಆ ಹೊತ್ತಿಗಾಗಲೇ ಆನಂದನನ್ನು ಹಿಡಿದು ಹೊಡೆಯಲು ಮುನ್ನುಗ್ಗಿದ ಭಕ್ತಾದಿಗಳು ಹೆಂಗಸರು, ಮಕ್ಕಳು, ಮುದುಕರೆನ್ನದೇ ತುಳಿಯಲಾರಂಭಿಸಿದ್ದಾರೆ. ನಿಲ್ಲಿ; ಯಾರೂ ಆತುರ ಪಡಬೇಡಿ; ಉಂಗುರ ತರ್‍ತೀನಿ, ಎಲ್ಲರಿಗೂ ಕೊಡ್ತೀನಿ ಎಂದು ಕೋಣೆಯೊಂದನ್ನು ಹೊಕ್ಕ ಆನಂದ್ ಹಿಂಬಾಗಿಲಿನಿಂದ ಉಪಾಯವಾಗಿ ಪೇರಿಕಿತ್ತಿದ್ದಾನೆ.

ಇತ್ತ ಆನಂದನನ್ನು ಅಟ್ಟಾಡಿಸಲು ದೇವಸ್ಥಾನದ ಹೊರಗಿದ್ದವರೂ ನುಗ್ಗಿದ್ದಾರೆ. ಏಕಾಏಕಿ ಜನ ಎಲ್ಲೆಲ್ಲಿಂದಲೋ ನುಗ್ಗಿ ಬಂದಿದ್ದರಿಂದಾಗಿ ಎಲ್ಲೆಂದರಲ್ಲಿ ಕಾಲ್ತುಳಿತ ಶುರುವಾಗಿದೆ. ಕಾಲ್ತುಳಿತಕ್ಕೆ ಸಿಲುಕಿದ ಮಗುವೊಂದು ಪ್ರಜ್ಞೆ ತಪ್ಪಿಬಿದ್ದರೆ ಮುದುಕಿಯೊಬ್ಬಳು ಸತ್ತೇ ಹೋದೆ ಎಂದು ಕಿರುಚಾಡತೊಡಗಿದ್ದಾಳೆ. ಮಗುವಿನ ಸಮೇತ ಮುದುಕಿ ಕೂಡ ಕಾಲ್ತುಳಿತದಲ್ಲಿ ಸತ್ತಳೆಂದು ಸುದ್ದಿಯಾಗಿದ್ದೇ ತಡ ಜನ ಎದೆಬಡಿದುಕೊಂಡು ಚೀರಲಾರಂಭಿಸಿದ್ದಾರೆ.

ಮೂವತ್ತೋ ನಲವತ್ತೋ ಮಂದಿಯಷ್ಟಿದ್ದ ಪೊಲೀಸರು ನೆರೆದ ಎರಡೂವರೆ ಲಕ್ಷ ಜನಕ್ಕೆ ಯಾವ ಲೆಕ್ಕ? ಅತ್ತ ತುಮಕೂರಿನಿಂದ ಧಾವಿಸಿ ಬಂದಿದ್ದ ಎಸ್.ಪಿ. ರಮಣಗುಪ್ತ ಹತ್ತು ಕಿ.ಮೀ. ಉದ್ದಕ್ಕೂ, ಲಾರಿ ಹಿಡಿದು ನಡೆಯಬೇಕಾಯ್ತು. ಜಿಲ್ಲಾಧಿಕಾರಿ ಸತ್ಯಮೂರ್ತಿ ದಿಕ್ಕೇ ತೋಚದಂತಾಗಿ ನಿಂತುಬಿಟ್ಟರು. ಇದ್ದುದರಲ್ಲಿ ಸಮಯಪ್ರಜ್ಞೆ ಮೆರೆದ ಕೊರಟಗೆರೆ ತಹಸೀಲ್ದಾರ್ ರಾಮಚಂದ್ರಪ್ಪ ಎಲ್ಲೆಲ್ಲಿಗೋ ಫೋನ್ ಮಾಡಿ ಬಸ್ಸುಗಳನ್ನು ತರಿಸಿಕೊಂಡರು. ಸಿಲುಕಿಕೊಂಡವರನ್ನೆಲ್ಲ ಬಸ್ಸಿಗೆ ತುಂಬಿಸಿ ತುಮಕೂರಿನತ್ತ ಸಾಗಿಸಲಾರಂಭಿಸಿದರು. ನೆರೆದ ಜಂಗುಳಿ ತಿಳಿಯಾಗಲು ರಾತ್ರಿತನಕ ಸಮಯ ಹಿಡಿದಿತ್ತು.

ಸದ್ಯ ಕೊರಟಗೆರೆ ತಹಸೀಲ್ದಾರ್ ರಾಮಚಂದ್ರಪ್ಪನವರೇ ಮಧುಗಿರಿ ಅಸಿಸ್ಟೆಂಟ್ ಕಮೀಷನರ್ ಜೆಹೆರಾರಿಗೆ ಪತ್ರ ಬರೆದು ಗೊರವನಹಳ್ಳಿ ದೇವಾಲಯವನ್ನು ಮುಜರಾಯಿ ವಶಕ್ಕೊಪ್ಪಿಸುವಂತೆ ಮನವಿ ಸಲ್ಲಿಸಿದ್ದಾರೆ. ಎ.ಸಿ. ಜೆಹೆರಾ ಕೂಡ ತಹಸೀಲ್ದಾರ್ ಕೋರಿಕೆಯನ್ನು ಮನ್ನಿಸಿದ್ದಾರೆ. ಆದರೆ ಜಿಲ್ಲಾಧಿಕಾರಿ ಸತ್ಯಮೂರ್ತಿ ಮಾತ್ರ ಈ ಬಗ್ಗೆ ತಲೆಕೆಡಿಸಿಕೊಳ್ಳದೆ ನಿಷ್ಕ್ರಿಯರಾಗಿರುವುದೇಕೆ?

ಕಪಟಿ ಆನಂದ್ ಗುರೂಜಿಯಂತಹವರ ಅಡ್ಡೆಯಾಗುವ ಬದಲು ಮಹಾಲಕ್ಷ್ಮಿ ಸರ್ಕಾರದ ಬಳಿಯಿರುವುದೇ ಥರವಲ್ಲವೆ?

ಗೊರವನಹಳ್ಳಿ ಟ್ರಸ್ಟ್‌ಗೆ ಇವನೇ ಬೇಕಿತ್ತೇ?

ಸೋತೆಗೆ ಮುನ್ನ ಗಂಟು ಕಳ್ಳರು ಸೇರಿದ ಹಾಗೆ ಗೊರವನಹಳ್ಳಿಯ ಮಹಾಲಕ್ಷ್ಮಿ ದೇವಾಲಯ ಟ್ರಸ್ಟ್‌ನವರು ಆನಂದ್ ಗುರೂಜಿಯನ್ನೇ ಕರೆಯುವುದಕ್ಕೂ ಕಾರಣವಿದೆ. ನವೆಂಬರ್ 27ರಿಂದ ಮೂರು ದಿನಗಳ ಕಾಲ ನಡೆಯುವ ಟ್ರಸ್ಟ್ ವಾರ್ಷಿಕೋತ್ಸವದ ಎರಡನೇ ದಿನಕ್ಕೆ ಪೇಜಾವರರನ್ನು ಕರೆದು, ಮೂರನೇ ದಿನಕ್ಕೆ ಮತ್ತೊಬ್ಬ ಕಳ್ಳಸ್ವಾಮಿ ಸಂತೋಷ್ ಗುರೂಜಿಯನ್ನು ಆಹ್ವಾನಿಸಿ ಇವರಿಬ್ಬರಿಗೂ ಮೊದಲ ದಿನವೇ ಆನಂದ್ ಗುರೂಜಿಯನ್ನು ಕರೆದದ್ದು ಆತನ ವಿಥೀರ್ ಜನಪ್ರಿಯತೆಗೆ ತಕ್ಕಂತೆಯೇ ಇತ್ತು.

ಏಕೆಂದರೆ ಗೊರವನಹಳ್ಳಿ ಮಹಾಲಕ್ಷ್ಮಿ ಟ್ರಸ್ಟ್ ಎಂದರೇನೇ ಅದು ವರ್ಷಕ್ಕೆ ಹತ್ತಾರು ಕೋಟಿ ರೂಪಾಯಿಗಳ ಆಮದನಿಯ ಬಾಬತ್ತು!

ವೃದ್ಧೆ ಕಮಲಮ್ಮ ಬದುಕಿರುವತನಕ ಅಷ್ಟಿಷ್ಟು ದೈವಿಕವಾಗಿದ್ದ ದೇವಾಲಯ ಆಕೆಯ ನಿಧನಾನಂತರ ಅವಳ ದತ್ತು ಮಗ ಪ್ರಸನ್ನನ ಸೊತ್ತಾಯಿತು. ಈ ಹಂತದಲ್ಲೇ ಸರ್ಕಾರ ಅದನ್ನು ಮುಜರಾಯಿ ಇಲಾಖೆಯ ವಶಕ್ಕೊಪ್ಪಿಸಲು ಚಿಂತಿಸಿತ್ತಾದರೂ ಅದಕ್ಕೆ ಅಡ್ಡಗಾಲಿಟ್ಟವ ಕೊರಟಗೆರೆಯ ಮಾಜಿ ಶಾಸಕ ಮತ್ತು ಮಾಜಿ ಮಂತ್ರಿ ಚೆನ್ನಿಗಪ್ಪ. ಚೆನ್ನಿಗಪ್ಪನ ಚೇಲಾಗಳು ಮತ್ತು ಒಂದಿಬ್ಬರು ಸ್ಥಳೀಯ ಪಾಳೇಗಾರರೂ ದೇವಸ್ಥಾನದ ಹುಂಡಿಕಾಸಿನ ಮೇಲೆ ಕಣ್ಣಿಟ್ಟಿದ್ದರು.

ಕಮಲಮ್ಮನ ದತ್ತು ಮಗನ ಗ್ಯಾಂಗ್, ಚೆನ್ನಿಗಪ್ಪನ ಗ್ಯಾಂಗ್ ಮತ್ತು ಲೋಕಲ್ ಪಾಳೇಗಾರರ ಮಧ್ಯೆ ದೇವಾಲಯದ ಉತ್ಪತ್ತಿಯ ಮೇಲೆ ಹಿಡಿತ ಸಾಧಿಸಲು ಭೀಕರ ಕಾಳಗವೇ ನಡೆದುಹೋಯಿತು. ಸಾಕಷ್ಟು ರಕ್ತವೂ ಹರಿದಿತ್ತು. ಒಂದು ಹಂತದಲ್ಲಿ ಎಲ್ಲರೂ ರಾಜಿಯಾಗಿ ದೇವಸ್ಥಾನದ ಉತ್ಪತ್ತಿಯನ್ನು ಪರಸ್ಪರ ಹಂಚಿಕೊಳ್ಳುವ ಒಪ್ಪಂದಕ್ಕೆ ಬಂದನಂತರವೇ ಗಲಾಟೆ ಸ್ತಿಮಿತಕ್ಕೆ ಬಂತು. ಸದ್ಯ ದೇವಸ್ಥಾನದ ವಾರ್ಷಿಕ ಉತ್ಪತ್ತಿ ಕಮ್ಮಿಯೆಂದರೂ 15 ಕೋಟಿ!

ಹಾಗಂತ ಲಾಭವನ್ನು ಹೆಚ್ಚಿಸಿಕೊಳ್ಳದೆ ಸುಮ್ಮನಿರಲಾಗುತ್ತಾ? ಆದಕ್ಕೆಂದು ಟಿವಿ ಒಂಬತ್ತರಲ್ಲಿ ಗೊರವನಹಳ್ಳಿ ಮಹಿಮೆ ಕುರಿತಂತೆ ಹೀಗೂಉಂಟೆ ಜಾಹಿರಾತು ಕಾರ್ಯಕ್ರಮವನ್ನೂ ಮಾಡಿದ್ದಾಯ್ತು. ಇತ್ತೀಚೆಗೆ ರಾತ್ರೋರಾತ್ರಿ ಜನಪ್ರಿಯನಾದ ಆನಂದ್ ಗುರೂಜಿಯನ್ನು ಮುಂದಿಟ್ಟುಕೊಂಡ ಜನ ಹುಚ್ಚೆದ್ದು ಗೊರವನಹಳ್ಳಿಗೆ ಬರುತ್ತಾರೆಂಬ ಲೆಕ್ಕಾಚಾರದ ಹಿನ್ನೆಲೆಯಲ್ಲಿ ಮೊದಲ ದಿನಕ್ಕೇ ಆತನನ್ನೇ ಆಹ್ವಾನಿಸಲಾಯ್ತು. ಆದರೆ ಪರಿಣಾಮ ಮಾತ್ರ ಭಯಾನಕವಾಗಿತ್ತು.

ಸಚ್ಚಿದಾನಂದ ಬಾಬು, ಪಬ್ಲಿಕ್ ಟಿವಿಯಲ್ಲಿ ರವಿಶಂಕರ್ ಮಂಜುನಾಥ್ ಶಾಸ್ತ್ರಿ ವಾಚಸ್ಪತಿ ಭಟ್; ಹೀಗೆ ಪ್ರತಿಯೊಂದು ಟಿವಿಯಲ್ಲೂ ಇಬ್ಬಿಬ್ಬರು ಮೂವರಂತೆ ಜ್ಯೋತಿಷಿಗಳೆಂದು ಹುಟ್ಟಿಕೊಂಡ ವಂಚಕರೆಲ್ಲ ಕಾಲಕ್ರಮೇಣ ತಮ್ಮ ಹೆಸರಿನ ಮುನ್ನೆಯಲ್ಲಿ ಗುರೂಜಿ ಸೇರಿಸಿಕೊಂಡರು. ಅನಾದಿಕಾಲದಿಂದಲೂ ದೇವರು, ಧರ್ಮದ ಪೇಟೆಂಟ್ ಹಿಡಿದಂತಿದ್ದ ಪೇಜಾವರ ಸ್ವಾಮಿ, ಆದಿಚುಂಚನಗಿರಿ ಸ್ವಾಮಿ, ಸಿದ್ಧಗಂಗೆ, ಸುತ್ತೂರು, ಮುರುಘಾಮಠದ ಸ್ವಾಮಿಗಳೆಲ್ಲ ಪಂಡಾ ಹೊಡೆದಂತೆ ರಾತ್ರೋರಾತ್ರಿ ದೇವಮಾನವರಾಗಿ ಅವತರಿಸಿದ ಜ್ಯೋತಿಷಿಗಳು ಮತ್ತು ಟಿವಿಗಳ ಸಂಕರದ ಫಲವಾಗಿ ರಾಜ್ಯಾದ್ಯಂತ ಮೌಢ್ಯದ ಸನ್ನಿಯೇ ಆವರಿಸಿದಂತಾಗಿತ್ತು.

ಗೊರವನಹಳ್ಳಿಗೆ ವಕ್ಕರಿಸಿದ್ದು

ಯಾವುದೋ ದೇವಸ್ಥಾನದ ಉದ್ಘಾಟನೆ, ಇನ್ನೆಲ್ಲೋ ಚಂಡಿಕಾ ಹೋಮ, ಇನ್ನೆಂಥದ್ದೋ ಪೂಜೆಗೆಂದು ಆನಂದ್ ಗುರೂಜಿಯನ್ನು ಆಹ್ವಾನಿಸುವುದೇ ಫ್ಯಾಷನ್ನಾಗಿ ಹೋಯಿತು. ಹಾಗೆ ಕಾರ್ಯಕ್ರಮಕ್ಕಾಗಮಿಸುವ ಆನಂದನ ವಿಚಿತ್ರ ವೇಷಭೂಷಣದ ಆಳೆತ್ತರದ ಕಟೌಟು, ಫ್ಲೆಕ್ಸು, ಬ್ಯಾನರ್‌ಗಳು ಬೆಂಗಳೂರಿನ ಮೂಲೆಮೂಲೆಗಳಲ್ಲಿ ವಿಜೃಂಭಿಸತೊಡಗಿದವು. ವಿಚಿತ್ರವೆಂದರೆ ಹೀಗೆ ಆನಂದ್ ಗುರೂಜಿ ಬರುತ್ತಾನೆಂಬ ಸುದ್ದಿ ಹಬ್ಬಿದ್ದೇ ತಡ ಟಿವಿಗಳಲ್ಲಿ ಆತನ ಗಿಮ್ಮಿಕ್ಕಿಗೆ ಬಲಿಯಾಗಿದ್ದ ಅರೆಬರೆ ವಿದ್ಯಾವಂತ ಗೃಹಿಣಿಯರ ಹಿಂಡೇ ಆತನ ದರ್ಶನಕ್ಕೆಂದು ಮುಗಿಬೀಳುತ್ತಿತ್ತು!

ಒಂದೆಡೆ ಟಿವಿ, ಮತ್ತೊಂದೆಡೆ ಕಾಲಿಗೆರಗುತ್ತಿದ್ದ ಮೂಢಭಕ್ತರ ಹಿಂಡು, ಮಗದೊಂದೆಡೆ ವಂಚನೆಯ ದುಡ್ಡು ಸೇರಿಕೊಂಡು ಆನಂದ್ ಗುರೂಜಿ ತಾನು ಯಾವ ಮಠಾಧಿಪತಿಗಿಂತಲೂ ಕಮ್ಮಿಯಿಲ್ಲ ಎಂಬ ಭ್ರಮೆಗೆ ಬಿದ್ದ. ಟಿವಿಯ ಫೋನ್ ಇನ್ ಕಾರ್ಯಕ್ರಮದಲ್ಲಿ ತನ್ನನ್ನು ತಾನೇ ದೇವರೆಂಬಂತೆ ಬಿಂಬಿಸಿಕೊಂಡ. ಇದು ಅತಿರೇಕಕ್ಕೆ ಹೋಗಿದ್ದು ಇಲ್ಲಿಗೆ ವಾರದ ಹಿಂದೆ ನಡೆದ ಗೊರವನಹಳ್ಳಿ



ಅನಾಹುತದಲ್ಲಿ.

ಕೊರಟಗೆರೆ ತಾಲ್ಲೂಕು ಗೊರವನಹಳ್ಳಿ ಎಂದರೆ ಅದನ್ನು ದಕ್ಷಿಣದ ಕೊಲ್ಲಾಪುರ ಎಂದೇ ಮೂಢಭಕ್ತವೃಂದವೊಂದು ನಂಬಿಕೊಂಡಿದೆ. ಕೊಲ್ಲಾಪುರದಲ್ಲಿ ಮಹಾಲಕ್ಷ್ಮಿಯ ದೇಗುಲಕ್ಕೆ ನಡಕೊಂಡರೆ ಎಂಥಾ ಭಿಕಾರಿಯೂ ಕುಬೇರನಾಗುತ್ತಾನಂತೆ. ಹಾಗೇ ಗೊರವನಹಳ್ಳಿ ಮಹಾಲಕ್ಷ್ಮಿ ದೇವಾಲಯಕ್ಕೆ ನಡಕೊಂಡೇ ತಾವು ಉದ್ಧಾರವಾಗಿದ್ದು ಎಂದು ಆಂಧ್ರ, ಕೇರಳ, ತಮಿಳಿನಾಡಿನಲ್ಲಷ್ಟೇ ಅಲ್ಲ ಕರ್ನಾಟಕದಲ್ಲೂ ಅನೇಕರು ನಂಬಿದ್ದಾರೆ.

ಕಮಲಮ್ಮ ಎಂಬ ಮುದುಕಿಯೊಬ್ಬಳು ಹುಚ್ಚುಚ್ಚಾಗಿ ವರ್ತಿಸುತ್ತಿದ್ದದ್ದಕ್ಕೆ ಆಕೆಯೇ ಮಹಾಲಕ್ಷ್ಮಿಯ ಅವತಾರವೆಂದೋ ಅಥವಾ ಆಕೆಯ ಮೇಲೆ ಲಕ್ಷ್ಮಿದೇವತೆ ಬರುತ್ತಾಳೆಂದೋ ಭಾವಿಸಿದ್ದ ಸುತ್ತಮುತ್ತಲ ಹಳ್ಳಿಗಳ ಅನಕ್ಷರಸ್ಥರೇ ಗೊರವನಹಳ್ಳಿಯನ್ನು ಉದ್ಧಾರ ಮಾಡಿಬಿಟ್ಟರು. ಮುದುಕಿ ಕಮಲಮ್ಮ 2002ರ ಡಿಸೆಂಬರ್ 22ರಂದು ತನ್ನ 90ನೇ ವಯಸ್ಸಿಗೆ ಸತ್ತ ನಂತರ ಆಕೆಯನ್ನೂ ದೇವರಾಗಿಸಿ ಆಕೆಯ ಸಮಾಧಿಗೂ ದೇವಸ್ಥಾನ ಕಟ್ಟಿಸಲಾಯ್ತು. ಸದ್ಯ ಧರ್ಮಸ್ಥಳ, ಕೊಲ್ಲೂರು, ಹೊರನಾಡು, ಕುಕ್ಕೆ ಸುಬ್ರಹ್ಮಣ್ಯ ಇತ್ಯಾದಿ ಪಾರಂಪರಿಕ ದೇವಸ್ಥಾನಗಳಿಗೆ ಹೋಲಿಸಿದರೆ ಅತ್ಯಂತ ವೇಗವಾಗಿ ಜನಪ್ರಿಯತೆಗೊಳಗಾಗಿದ್ದು ಗೊರವನಹಳ್ಳಿ ಮಹಾಲಕ್ಷ್ಮಿಯೆ.

ಲಕ್ಷ್ಮಿ ಪ್ರತ್ಯಕ್ಷ

ಇದನ್ನು ಸೂಕ್ಷ್ಮವಾಗೇ ಲೆಕ್ಕ ಹಾಕಿದ್ದ ಖದೀಮ ಆನಂದ ಗೊರವನಹಳ್ಳಿ ಮಹಾಲಕ್ಷ್ಮಿಗೆ ತಾನೇ ಬ್ರಾಂಡ್ ಅಂಬಾಸಿಡರ್ ಆಗುವ ಕುಟೀಲವೊಂದಕ್ಕೆ ಕೈಯಿಟ್ಟ. ನವೆಂಬರ್ 27ರಿಂದ ಮೂರು ದಿನಗಳ ಕಾಲ ಗೊರವನಹಳ್ಳಿ ದೇವಾಲಯದ ರಜತೋತ್ಸವದ ಪ್ರಯುಕ್ತ ಲಕ್ಷ ದೀಪೋತ್ಸವ, ಜಾತ್ರೆ, ವರ ಮಹಾಲಕ್ಷ್ಮಿ ವ್ರತ ಇತ್ಯಾದಿಗಳನ್ನು ಹಮ್ಮಿಕೊಳ್ಳಲಾಗಿತ್ತು. ಇದನ್ನೇ ತನ್ನ ಸ್ವಾರ್ಥಕ್ಕೆ ಬಳಸಿಕೊಳ್ಳಲು ಆನಂದ್ ತನ್ನ ಈ ಟಿವಿಯ ಧರ್ಮದರ್ಪಣ ಧಾರಾವಾಹಿಯಲ್ಲಿ ಭಯಾನಕ ಸುಳ್ಳೊಂದನ್ನು ಸೃಷ್ಟಿಸಿಬಿಟ್ಟ.

ನವೆಂಬರ್ 27 ರ ಬುಧವಾರ ತಾನು ಗೊರವನಹಳ್ಳಿ ಮಹಾಲಕ್ಷ್ಮಿ ದೇವಾಲಯದಲ್ಲಿ ವಿಶಿಷ್ಟ ಪೂಜೆಯೊಂದನ್ನು ಹಮ್ಮಿಕೊಂಡಿದ್ದೇನೆಂದೂ, ಆವತ್ತು ಗೊರವನಹಳ್ಳಿ ದೇವಾಲಯದಲ್ಲಿ ಸಾಕ್ಷಾತ್ ಮಹಾಲಕ್ಷ್ಮಿಯೇ ಪ್ರತ್ಯಕ್ಷಳಾಗುತ್ತಾಳೆಂದೂ; ಹಾಗೆ ಪ್ರತ್ಯಕ್ಷಳಾದ ಲಕ್ಷ್ಮಿಯನ್ನು ಕಣ್ಣಾರೆ ಕಂಡವರೇ ಪುಣ್ಯವಂತರೆಂದೂ, ಆ ಪೂಜೆಗೆ ಸುಮಂಗಲಿಯರೆಲ್ಲ ಪೂಜಾ ಸಾಮಗ್ರಿಗಳನ್ನು ತರತಕ್ಕದ್ದು, ಆ ರೀತಿ ಪೂಜೆಯಲ್ಲಿ ಭಾಗವಹಿಸಿದ ಮಹಿಳೆಯರಿಗೆಲ್ಲ ದೇವಿಯನ್ನು ಸಿಂಗರಿಸಿ ವಸ್ತ್ರ ಒಡವೆಗಳನ್ನು ನೀಡುತ್ತೇನೆ. ಜೊತೆಗೆ ಯಾರೆಲ್ಲ ಪೂಜೆಯಲ್ಲಿ ಭಾಗವಹಿಸುತ್ತಾರೋ ಅವರಿಗೆ ವಿಶಿಷ್ಟ ಉಂಗುರವೊಂದನ್ನು ನೀಡುತ್ತೇನೆ, ಅದು ದಿವ್ಯಶಕ್ತಿಯ ಉಂಗುರ, ಅದನ್ನು ತೊಟ್ಟವರಿಗೆ ಕಾಯಿಲೆಗಳೇ ಬರುವುದಿಲ್ಲ, ಹಾಗೊಂದು ವೇಳೆ ಕಾಯಿಲೆ ಬಂದರೂ ಕ್ಷಣಮಾತ್ರದಲ್ಲಿ ಮಾಯವಾಗುತ್ತೆ, ಉಂಗುರ ತೊಟ್ಟವರಿಗೆ ಲಕ್ಷ್ಮಿ ಒಲಿಯುತ್ತೆ... ಎಂದೆಲ್ಲ ಬುರುಡೆ ಬಿಟ್ಟಿದ್ದ.

ಗೊರವನಹಳ್ಳಿ ಲಕ್ಷ್ಮಿ ದೇವಾಲಯದ ವಾರ್ಷಿಕೋತ್ಸವಕ್ಕೆ ಹೆಚ್ಚೆಂದರೆ ಹತ್ತೋ ಹದಿನೈದೋ ಸಾವಿರ ಜನ ಭಾಗವಹಿಸುವುದು ವಾಡಿಕೆ. ಹಾಗೆ ಬಂದ ಜನಕ್ಕೆ ತಾನು ಮಂಕುಬೂದಿ ಎರಚಿ ಮಿಂಚಬಹುದೆಂಬುದು ಆತನ ಲೆಕ್ಕಾಚಾರವಾಗಿತ್ತು. ಆದರೆ ಟಿವಿಗಳ ಜ್ಯೋತಿಷ್ಯದ ದುಷ್ಪರಿಣಾಮದ ಅಂದಾಜಿಲ್ಲದ ತುಮಕೂರು ಜಿಲ್ಲಾಡಳಿತ, ಗೊರವನಹಳ್ಳಿ ದೇವಾಲಯ ಟ್ರಸ್ಟ್ ಮತ್ತು ಖುದ್ದು ಆನಂದನಿಗೆ ತಾವು ಮಾಡಿದ ಅನಾಹುತದ ಆಳ ಗೊತ್ತಾಗುವ ಮೊದಲೇ ಕಾಲ ಮಿಂಚಿತು.

ಪ್ರವಾಹಪಾದ ಜನಸಾಗರ

ಮಹಾಲಕ್ಷ್ಮಿ ಪ್ರತ್ಯಕ್ಷಳಾಗುತ್ತಾಳೆಂದೂ ದಿವ್ಯಶಕ್ತಿಯ ಉಂಗುರ ಸಿಗುತ್ತದೆಯೆಂದೂ ನಂಬಿದ ಮೂಢಮತಿಗಳ ಪ್ರವಾಹ ಗೊರವನಹಳ್ಳಿಗೆ ಹರಿದುಬಂದಿತ್ತು. ನೂರಲ್ಲ, ಸಾವಿರವಲ್ಲ ಎರಡೂವರೆ ಲಕ್ಷಕ್ಕೂ ಅಧಿಕ ಸಂಖ್ಯೆಯ ಮೂಢರ ಪ್ರವಾಹ ಕಂಡಿದ್ದೇ ಆನಂದ್ ಗುರೂಜಿ ಗಡಗಡ ನಡುಗತೊಡಗಿದ. ಅಷ್ಟೊಂದು ಜನಕ್ಕೆ ಉಂಗುರ ಹಾಳಾಗಲಿ ಪ್ರಸಾದ ಕೊಡುವ ಯೋಗ್ಯತೆಯೂ ಆನಂದನಿಗಿರಲಿಲ್ಲ. ಮಹಾಲಕ್ಷ್ಮಿ ದೇವಿಯೇ ಪ್ರತ್ಯಕ್ಷಳಾಗುತ್ತಾಳೆಂದು ಭವಿಷ್ಯ ನುಡಿದವನಿಗೆ ತನ್ನ ವಂಚನೆಗೆ ಇಷ್ಟೊಂದು ಮಂದಿ ಬಲಿಯಾಗಬಹುದೆಂಬ ಸಣ್ಣ ಲೆಕ್ಕಾಚಾರ ಕೂಡ ಇರಲಿಲ್ಲ. (ಬಾಕ್ಸ್ ನೋಡಿ)

ನವೆಂಬರ್ 27ರ ಮಧ್ಯಾಹ್ನ 12ಕ್ಕೆ ಮಹಾಲಕ್ಷ್ಮಿ ಪ್ರತ್ಯಕ್ಷಳಾಗುತ್ತಾಳೆಂದದ್ದೂ ಸುಳ್ಳಾಗಿತ್ತು. ಮಹಾಲಕ್ಷ್ಮಿ ಪ್ರತ್ಯಕ್ಷಳಾಗುವುದಿರಲಿ ಗಡ್ಡಾ ಆನಂದನನ್ನು ಕಾಪಾಡಲು ಪೊಲೀಸರು ಕೂಡ ಪ್ರತ್ಯಕ್ಷರಾಗುವ ಸ್ಥಿತಿಯಲ್ಲಿರಲಿಲ್ಲ. ನೂರೋ ಇನ್ನೂರೋ ಉಂಗುರ ಹಿಡಿದು ಹೊರಟವನಿಗೆ ಅಷ್ಟ ದಿಕ್ಕುಗಳಲ್ಲೂ ಜನ ನುಗ್ಗುತ್ತಿದ್ದದ್ದು ನೋಡಿಯೇ ಬೇಧಿ ಕಿತ್ತುಕೊಂಡಿದ್ದೇ ಎದ್ದೂ ಬಿದ್ದು ಓಡಿ ಬಂದಿದ್ದಾನೆ. ಹಾಗೆ ಆತ ತನ್ನ ಶಿಷ್ಯರ ಬೆಂಗಾವಲಿನಲ್ಲಿ ಅವಿತುಕೊಳ್ಳ ಲೆತ್ನಿಸುತ್ತಿದ್ದರೆ ಮತ್ತೊಂದೆಡೆ ಹಿಡ್ಕೊಳ್ರೋ ಆವನ್ ಮಗನ್ನಾ... ನಮ್ಮನ್ನೆಲ್ಲ ಯಾಮಾರಿಸಿ ಪರಾರಿಯಾಗ್ತವನಂತೆ ಬಿಡಬ್ಯಾಡ್ರೋ ಎಂದು ಜನ ಕೂಗಾಡುತ್ತಿದ್ದರು!

ಖದೀಮ ಆನಂದ್ ಪ್ರಾಣವೇನೋ ಉಳಿದಿದೆ ನಿಜ. ಆದರೆ ಕಾಲ್ತುಳಿತಕ್ಕೆ ಸಿಕ್ಕಿ ಕೈಕಾಲು ಮುರಿದುಕೊಂಡವರು, ಅನ್ನ ನೀರಿಲ್ಲದೆ ಹೈರಾಣಾದವರು, ಜನ ಸಾಗರವನ್ನು ನಿಯಂತ್ರಿಸಲಾಗದೆ ಬೆವರು ಹರಿಸಿದ ಪೊಲೀಸರು ಮತ್ತು ಲಕ್ಷ್ಮಿ ಪ್ರತ್ಯಕ್ಷಳಾಗುತ್ತಾಳೆಂದು ಸಾವಿರಾರು ರೂಪಾಯಿ ಖರ್ಚು ಮಾಡಿ ಬಂದವರ ದುರ್ಗತಿಗೆ ಯಾರು ಹೊಣೆ.

ಕಪಟ ಜ್ಯೋತಿಷಿ ಮತ್ತು ಅವಿವೇಕಿ ಟಿವಿಗಳು ಸೇರಿಕೊಂಡರೆ ಏನೆಲ್ಲಾ ಅನಾಹುತವಾಗುತ್ತದೆಂಬುದಕ್ಕೆ ಇದಕ್ಕಿಂತ ಬೇಕೆ? ಪೊಲೀಸರು ಗಡ್ಡ ಆನಂದನನ್ನು ಹಿಡಿದು ಒದ್ದು ಜೈಲಿಗೆ ಕಳಿಸದೆ ಇನ್ನೂ ಯಾಕೆ ಸುಮ್ಮನಿದ್ದಾರೆ?

- ಧಾ. ಸೋಮನಾಥ್

ಕೊನೆಗೂ ಸೌಂದರ್ಯ ಆಸ್ತಿ ಪಾಲಾಯಿತು!

ನಟಿ ಸೌಂದರ್ಯಳ ಆಸ್ತಿ ಕೊನೆಗೂ ಪಾಲಾಗುವ ಹಂತಕ್ಕೆ ಬಂದಿದೆ. ಇದೇನು ಕೋರ್ಟ್‌ನಲ್ಲಿ ತೀರ್ಮಾನವಾದ ಪಾಲುದಾರಿಕೆಯಲ್ಲ. ಬದಲಾಗಿ ಸೌಂದರ್ಯ ದುಡಿದು ಗಳಿಸಿದ್ದ ಮನೆ, ಸೈಟು, ಬಂಗಾರ, ಷೇರು ಬಂಡವಾಳ ಹೂಡಿಕೆಯೆಂಬ ಹಲವು ಕೋಟಿ ರೂಪಾಯಿ ಬೆಲೆಯ ಆಸ್ತಿಯನ್ನು ಆಕೆ ಸತ್ತು ಇನ್ನು ಚಿತೆಯ ಬೆಂಕಿ ಆರುವ ಮೊದಲೇ ಕೈವಶ ಮಾಡಿಕೊಳ್ಳಲು ಓಡಿದ್ದ ಮನೆಯವರೇ ಈಗ ಕೋರ್ಟ್ ಹೊರಗೆ ರಾಜಿಸಂಧಾನ ಮಾಡಿಕೊಂಡು ಆಸ್ತಿ ಹಂಚಿಕೆ ಒಪ್ಪಂದಕ್ಕೆ ಬಂದಿದ್ದಾರೆ.

ಕೋಲಾರ ಜಿಲ್ಲೆ ಮುಳಬಾಗಿಲು ಮೂಲದ ಸೌಂದರ್ಯಳ ತಂದೆ ಕೆ.ಎಸ್. ಸತ್ಯನಾರಾಯಣ ಸ್ವತಃ ಚಿತ್ರ ನಿರ್ಮಾಪಕರಾಗಿದ್ದವರು. 1972ರಲ್ಲಿ ಹುಟ್ಟಿದ ಸೌಂದರ್ಯ ಮೆಡಿಕಲ್ ಓದಲೆಂದು ಸೇರಿದ ಮೊದಲ ವರ್ಷ 1992ರಲ್ಲೇ 'ಗಂಧರ್ವ' ಕನ್ನಡ ಸಿನಿಮಾಗೆ ನಾಯಕಿಯಾಗಿ ಆಯ್ಕೆಯಾಗಿ ಅಲ್ಲಿಂದ ತೆಲುಗಿಗೆ ಹೋಗಿ ಕೊನೆಗೆ 2004ರಲ್ಲಿ ತೀರಿಕೊಳ್ಳುವ ಹೊತ್ತಿಗೆ ನೂರಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಾಯಕಿಯಾಗಿ ಅಭಿನಯಿಸಿದ್ದಳು. ತನ್ನ ಅಭಿನಯ ಪ್ರತಿಭೆ, ಸರಳತೆ ಹಾಗೂ ನಗುವನ್ನು ಪ್ರೇಕ್ಷಕರಿಗೆ ಹಂಚಿ ಮನಸೂರೆಗೊಂಡ ಸೌಂದರ್ಯಗೆ ತನ್ನ ಆಸ್ತಿಯನ್ನು ಸಂಬಂಧಿಗಳಿಗೆ ಹಂಚಿ ತೃಪ್ತಿ ಪಡಿಸಲಾಗಲಿಲ್ಲ.

ಏಕೆಂದರೆ 2004ರ ಏಪ್ರಿಲ್ 17ರ ಬೆಳಗ್ಗೆ ಬೆಂಗಳೂರಿನ ಜಕ್ಕೂರು ಹತ್ತಿರ ಅಪಘಾತಕ್ಕೆ ಒಳಗಾದ ವಿಮಾನ [illegible] ಆಕೆಯ ಗಂಡ ಹಾಗೂ ಸೌಂದರ್ಯಳ [illegible] ಆಸ್ತಿ [illegible] ಒಂದು [illegible] ಸೌಂದರ್ಯಳ ವಿಲ್ [illegible] ಒಂದು [illegible] ಇನ್ನೊಂದು ಗುಂಪು 'ಅದು [illegible] ವಿಲ್' ಎಂದು ಕೋರ್ಟ್ ಮೆಟ್ಟಿಲೇರಿತು.

ಈ ಬೀದಿ ಜಗಳದಲ್ಲಿ ಸೌಂದರ್ಯಳ ಗಂಡ ರಘು, ಆಕೆಯೊಂದಿಗೆ ವಿಮಾನ ಅಪಘಾತದಲ್ಲಿ ಮಡಿದ ಅಮರನಾಥರ ಪತ್ನಿ ನಿರ್ಮಲಾ, ತಾಯಿ ಮಂಜುಳಾ ಮುಂತಾದವರಿದ್ದರು. ಅಲ್ಲದೆ ಅಮರನಾಥ್-ನಿರ್ಮಲ ದಂಪತಿಗಳ ಮಗ ಸಾತ್ವಿಕ್ ಕೂಡ ಆಸ್ತಿಯಲ್ಲಿ ಪಾಲು ಕೇಳಿ ಕೋರ್ಟ್‌ಗೆ ಹೋಗಿದ್ದ. ಒಂದು ಹಂತದಲ್ಲಿ ಸೌಂದರ್ಯ ಗಂಡ ರಘು ಹಾಗೂ ಆಕೆಯ ತಾಯಿ ಮಂಜುಳಾ ಕೋರ್ಟ್‌ನಲ್ಲಿ ಒಂದು ಅಫಿಡವಿಟ್ ಹಾಕಿ ನಾದಿನಿ ನಿರ್ಮಲ ಸೌಂದರ್ಯಳ ನಕಲಿ ವಿಲ್ ಸೃಷ್ಟಿಸಿದ್ದಾಳೆಂದು ಆರೋಪಿಸಿ ನಂತರ ಅದು ನಿರ್ಮಲಾರ ಲಾಯರ್ ಧನರಾಜ್ ಮಾನನಷ್ಟ ಕೇಸ್ ಹಾಕುವಲ್ಲಿ ಬದಲಾಗಿತ್ತು.

ಗಳಿಸಿದ್ದ ಆಸ್ತಿಪಾಸ್ತಿ

1992ರಿಂದ ಹತ್ತು ವರ್ಷ ಕಾಲ ಸಿನಿಮಾ ನಟಿಯಾಗಿ ಕನ್ನಡ, ತೆಲುಗು, ತಮಿಳು, ಮಲೆಯಾಳಿ ಹಾಗೂ ಹಿಂದಿ ಚಿತ್ರಗಳಲ್ಲಿ ಬ್ಯುಸಿಯಾಗಿದ್ದ ಸೌಂದರ್ಯ ವಿಪರೀತ ಅನಿಸುವಷ್ಟೇನೂ ಆಸ್ತಿ ಮಾಡಿಲ್ಲ. ಬೆಂಗಳೂರಿನ ಹನುಮಂತ ನಗರದಲ್ಲೊಂದು 40x36 ವಿಸ್ತೀರ್ಣ ಕಟ್ಟಡ. ಆರ್‌ಎಂವಿ ಬಡಾವಣೆಯಲ್ಲಿ 40x36 ಅಳತೆಯ ಕಟ್ಟಡ, ಹೆಚ್‌ಆರ್‌ಬಿಆರ್ ಲೇಔಟ್‌ನಲ್ಲಿ ಒಂದು ಸಣ್ಣ ಸೈಟು... ಹತ್ತು ವರ್ಷ ಕಾಲ ನಿರಂತರವಾಗಿ ದುಡಿದ ಜನಪ್ರಿಯ ನಟಿಯೊಬ್ಬಳಿಗೆ ಈ ಮೊತ್ತ ದೊಡ್ಡದೇನಾಗಿರಲಿಲ್ಲ. ಆಕೆ ಹಣಕ್ಕಾಗಿ, ತನ್ನ ಸ್ಟೇಟಸ್‌ಗಾಗಿ, ಐಷಾರಾಮಕ್ಕಾಗಿ ಚಿತ್ರ ನಿರ್ಮಾಪಕರ ಪ್ರಾಣ ತಿಂದವಳಲ್ಲ. ಅವಳ ಪ್ರತಿಭೆ ಹಾಗೂ ಜನಪ್ರಿಯತೆಯನ್ನು ಬಳಸಿಕೊಂಡು ಹಣ ಮಾಡಿಕೊಂಡ ಸಿನಿಮಾ ಜನರೇ ಜಾಸ್ತಿ ಇದ್ದರು. ಇದಕ್ಕೆ ಸೌಂದರ್ಯಳ ಖಾಸಾ ಅಣ್ಣ ಅಮರನಾಥರೂ ಹೊರತಾಗಿರಲಿಲ್ಲ.

ಭವಾನಿ ಸೊಸೈಟಿಯದೊಂದು ಸೈಟು, ಹೈದರಾಬಾದಿನ ಬಂಜಾರ ಹಿಲ್‌ನಲ್ಲಿ ಮೂರು ಮುಕ್ಕಾಲು ಸಾವಿರ ಚದರಡಿಯ ಒಂದು ಆಫೀಸು ಕಟ್ಟಡ, ಒಂದಷ್ಟು ಕ್ಯಾಶ್, ಚಿನ್ನ, ಷೇರು ಇತ್ಯಾದಿ ಆಕೆ ದುಡಿದಿದ್ದ! ಗಳಿಸಿ ಉಳಿಸಿದ್ದ ಆಸ್ತಿಯಾಗಿತ್ತು. ಇವತ್ತಿನ ಬೆಲೆಯಲ್ಲಿ ಇವೆಲ್ಲಾ ಐವತ್ತು ಕೋಟಿ ರೂಪಾಯಿ ಆಗಬಹುದೇನೊ. ಆದರೆ ಆಕೆ ಇದನ್ನೆಲ್ಲಾ ಖರೀದಿಸಿದಾಗ ಆಗಿದ್ದ ಖರ್ಚು ಮೂರು ಕೋಟಿ ರೂಪಾಯಿಯೂ ಆಗಿದ್ದಿರಲಿಕ್ಕಿಲ್ಲ. ಒಂದು ನೂರು ಸಿನಿಮಾಗಳಲ್ಲಿ ನಟಿಸಿದ ನಂತರ ತನ್ನ ಸಿನಿಮಾ ಬದುಕು ಮುಗಿಯುವ ಹಂತ ಬಂದಿದೆ ಎಂದು ಅರಿವಾದ ಬಳಿಕ ಸೌಂದರ್ಯ ತಾನೇ ಹಣ ಹಾಕಿ 'ದ್ವೀಪ' ಎಂಬ ಸಿನಿಮಾ ನಿರ್ಮಿಸಿ ನಟಿಸಿ ಪ್ರಶಸ್ತಿ ಪಡೆದಿದ್ದಳು. ಅದು ಕಲಾವಿದೆಯಾಗಿ **fullfillment**ಗಾಗಿ ಆಕೆ ಮಾಡಿದ ಪ್ರಾಮಾಣಿಕ ಪ್ರಯತ್ನವಾಗಿತ್ತು.

ಆದರೆ ಸೌಂದರ್ಯಳ ಸಿನಿಮಾ ಹಂಗಾಮ ಮುಗಿದಿದ್ದರೂ ಅವಳ ಅಣ್ಣ ಆಕೆಯ ಜನಪ್ರಿಯತೆಯನ್ನು ಬೇರೊಂದು ರೀತಿಯಲ್ಲಿ ಕ್ಯಾಶ್ ಆಗಿ ಬದಲಾಯಿಸುವ ಹೊಸ ದಾರಿ ಹುಡುಕಿದ್ದ.

ಅದು ಬಜೆಪಿ ಪರವಾಗಿ ಎಲೆಕ್ಷನ್ ಪ್ರಚಾರದಲ್ಲಿ ಭಾಗವಹಿಸುವುದು.

ಇದಕ್ಕೆ ದಿನಕ್ಕೆ 25 ಸಾವಿರ ರೂಪಾಯಿ ಕೂಲಿ ದರ ನಿಗದಿಯಾಗಿತ್ತು. ಸೌಂದರ್ಯಗೆ ಕಾಂಗ್ರೆಸ್, ಬಜೆಪಿ ಇತ್ಯಾದಿ ಎಂತದ್ದೂ ಆಳವಾಗಿ ಗೊತ್ತಿರಲಿಲ್ಲ. ಆಕೆಗೆ ರಾಜಕೀಯವೂ ಬೇಕಿರಲಿಲ್ಲ. ಆದರೆ ಅಮರನಾಥನಿಗೆ ದುಡ್ಡು ಬೇಕಿತ್ತು. ಅತ್ತ ಬಜೆಪಿಗೆ ನಟಿ ಸೌಂದರ್ಯ ತನ್ನನ್ನು ಬೆಂಬಲಿಸಿದ್ದಾಳೆಂಬ ಪ್ರಚಾರ ಬೇಕಿತ್ತು. ಈ ನೆಲೆಯಲ್ಲಿ ಫಿಕ್ಸ್ ಆದ ರಾಜಕೀಯ ಡೀಲ್ ಅದಾಗಿತ್ತು. ಹಣವೇ ಪ್ರಧಾನವಾಗಿದ್ದ ಈ ರಾಜಕೀಯ ಪ್ರಚಾರದಲ್ಲಿ ಹಣ ಉಳಿಸುವ ದಾರಿಯನ್ನು



ಅಮರನಾಥ ಹಾಗೂ ಬಿಜೆಪಿ ಲೀಡರ್‌ಗಳು ಹುಡುಕಿದರು. ಸುಮ್ಮನೆ ವೃಥಾ ಖರ್ಚೇಕೆಂದು ಲಡಾಸು ಚಿಕ್ಕ ವಿಮಾನವೊಂದನ್ನು ಬಾಡಿಗೆಗೆ ಪಡೆದು ಅದರೊಳಗೆ ಸೌಂದರ್ಯಳನ್ನು ತುರುಕಿ ಹಾರಿಸಿದಾಗ ಅದು ಮೇಲೇರಿದ ಕೆಲ ನಿಮಿಷಗಳಲ್ಲೇ ಮುರಿದು ಉರಿದುಬಿತ್ತು.

ಸಹೃದಯಿ ನಟಿ ಸೌಂದರ್ಯ ಜೀವಂತವಿದ್ದಾಗಲೇ ಬೆಂಕಿಗೆ ಸಿಲುಕಿ ಸತ್ತಳು.

ಆ ಅರ್ಥದಲ್ಲಿ ಸೌಂದರ್ಯಳನ್ನು ಕೊಂದವರು ಬಜೆಪಿಗಳು ಹಾಗೂ ಅಣ್ಣ ಅಮರನಾಥನೆ ಎನ್ನಬೇಕು.

ನಂತರ ಸೌಂದರ್ಯಳ ಆಸ್ತಿಗಾಗಿ ಕಿತ್ತಾಡುತ್ತಾ ಹಾದಿರಂಪ ಬೀದಿರಂಪ ಮಾಡಿಕೊಂಡು, ನಕಲಿ ವಿಲ್ ಎಂದು ರಂಪ ಮಾಡಿ ಕೋರ್ಟ್‌ಗೂ ಹೋಗಿ ಯಾವುದು ಬಗೆಹರಿಯದೇ ಹೋದಾಗ ಈಗ ಬಂದು ರಾಜಿ ಸೂತ್ರಕ್ಕೆ ಬಂದಿದ್ದಾರೆ.

ಸೌಂದರ್ಯಳ ಆಸ್ತಿ ಹಂಚಿಕೆ ಯಾವ್ಯಾವ ರೀತಿಯಲ್ಲೇ ಆಗಿರಲಿ, ಆದರೆ ಆಕೆ ಬದುಕಿದ್ದಾಗ [illegible] ಮಾನ್ಯತೆಗಳೆಲ್ಲಾ ಸತ್ತ ನಂತರ ಸೌಂದರ್ಯಳ ಸಂಬಂಧಿಗಳೇ ಬೀದಿಪಾಲು ಮಾಡಿದ್ದು ಈ ಬಂಧುಗಳೆಂಬ ಅವಿವೇಕಿಗಳು [illegible] ಹೀನತೆಯನ್ನು ತೋರಿಸುತ್ತದೆ.

ಮಂತ್ರಿ, ಶಾಸಕರಾಗದೆ ತೀರ್ಥಹಳ್ಳಿಯ ಜನ ನಾಯಕರಾಗಿದ್ದ ಡಾ.ಬಿ.ಎನ್.ರಂಗಪ್ಪನವರ ಶತಮಾನೋತ್ಸವ



ತೀರ್ಥಹಳ್ಳಿಯ ಆಜಾದ್ ರಸ್ತೆಯಲ್ಲಿ ಡಾ.ಬಿ.ಎನ್. ರಂಗಪ್ಪನವರು ಕಂಡರೆಂದರೆ ಕೈಲಿದ್ದ ಬೀಡಿಯನ್ನು ಕೆಳಗೆ ಬಿಸಾಕಿ ನಿಧಾನ ಕಾಲಲ್ಲಿ ಸುರಿದು ಕೆಡಿಸಿದವರಿದ್ದಾರೆ. ಅವರು ನೋಡದಿದ್ದರೂ ಅವರಿಗೊಂದು ವಿಶ್ ಮಾಡಿ ಗೌರವ ಸೂಚಿಸಿದವರಿದ್ದಾರೆ. ಅವರು ನಡೆದುಹೋಗುತ್ತಿದ್ದರೆ ಆ ದಾರಿಯನ್ನೇ ಬಿಟ್ಟುಕೊಟ್ಟವರಿದ್ದಾರೆ. ಅವರು ತಮ್ಮ ತೀರ್ಥಹಳ್ಳಿಯ ಕ್ಲಿನಿಕ್‌ನಲ್ಲಿ ಇದ್ದಾರೋ ಇಲ್ಲವೋ ಎಂದು ನಿಗದಿ ಮಾಡಿಕೊಂಡು ತಮ್ಮ ದೈನಂದಿನ ಕೆಲಸಕಾರ್ಯಗಳಿಗೆ ಹೋದ ಎಷ್ಟೋ ಹಳ್ಳಿಗರಿದ್ದಾರೆ. ಹಾಗಂತ ಅವರು ಬೈದದ್ದಿಲ್ಲ, ರೇಗಿದ್ದಿಲ್ಲ, ಕೈ ಮಾಡಿದ್ದಿಲ್ಲ, ಆದರೂ ಅವರು ಈ ರೀತಿಯಾಗಿ ಸಂಪಾದಿಸಿದ ಗೌರವ ಹೇಗೆ ಎಂದು ಬರಹ ರೂಪದಲ್ಲಿ ಕೊಡಲಾಗದು. ರಂಗಪ್ಪನವರು ಬದುಕಿದ್ದ ಅರ್ಥಪೂರ್ಣ 85 ವರ್ಷಗಳ ಕಾಲ ಅವರು ನಿರ್ಮಿಸಿದ ಕೃತಿಗಳೇ ತೀರ್ಥಹಳ್ಳಿ ತುಂಬಾ ಸಾರಲ್ಪಡುವವು.

ರಂಗಪ್ಪನವರು ಮಾತ್ರವಲ್ಲ, ಡಾ.ಕೆ. ರಾಮಭಟ್, ಜವಳಿ ನಾಗೇಂದ್ರನಾಥ್, ಪುರುಷೋತ್ತಮ ರಾವ್, ಹೆಚ್.ವಿ. ರಾಮಯ್ಯ, ಶಾಮ ಐತಾಳ್, ಕಾಳಿಂಗಯ್ಯನ ರಾಘವೇಂದ್ರ ರಾವ್... ಇವರೆಲ್ಲ ಇದೇ ರೀತಿಯ ಗೌರವ ಸಲ್ಲಿಸಿಕೊಳ್ಳಲು ಕಾರಣ ಇವರುಗಳು ತೀರ್ಥಹಳ್ಳಿಯನ್ನು ಅತ್ಯಂತ ವಿಶಿಷ್ಟ ರೀತಿಯಲ್ಲಿ ಕಟ್ಟಿದ್ದು. ಅದಕ್ಕೆಂದು ತಮ್ಮ ಶ್ರಮ, ಹಣ, ಸಂಪರ್ಕ ಎಲ್ಲವನ್ನೂ ಧಾರೆ ಎರೆದದ್ದು. ಈ ಪಡೆಯ ನಾಯಕತ್ವ ಡಾ.ಬಿ.ಎನ್.ರಂಗಪ್ಪನವರ ಹೆಗಲ ಮೇಲಿತ್ತು.

ಡಾ.ಬಿ.ಎನ್.ರಂಗಪ್ಪನವರು ಅಂದಿನ ಪುರಸಭೆಯ ಅಧ್ಯಕ್ಷರಾಗಿದ್ದರು. ರಂಗಪ್ಪನವರು ಕಾಂಗ್ರೆಸ್ ಪಕ್ಷವನ್ನು ಪ್ರತಿನಿಧಿಸಿದರೆ ಕಾಳಿಂಗಯ್ಯನ ರಾಘವೇಂದ್ರ ರಾವ್ ಎಂಬುವವರು ಸೋಷಲಿಸ್ಟ್ ಪಾರ್ಟಿಯನ್ನು ಪ್ರತಿನಿಧಿಸಿ ವಿರೋಧ ಪಕ್ಷದಲ್ಲಿ ಕೂರುತ್ತಿದ್ದರು. ರಂಗಪ್ಪನವರಿಗೆ ಪ್ರಜಾಸತ್ತಾತ್ಮಕವಾಗಿ ಆಡಳಿತ ಮಾಡುವುದು ಹೇಗೆ ಎಂದು ಕಲಿಸಿ ಕೊಟ್ಟದ್ದೇ ಕಾಳಿಂಗಯ್ಯನವರು. ಊರಿನ ಅಭಿವೃದ್ಧಿ ವಿಷಯದಲ್ಲಿ ಇಬ್ಬರಿಗೂ ಸ್ಪರ್ಧೆ ಏರ್ಪಡುತ್ತಿತ್ತಂತೆ. ಬೀದಿಯ ಸ್ವಚ್ಛತೆ ನೋಡಲು ರಂಗಪ್ಪ ಬೇಗ ಎದ್ದು ಹೋಗುತ್ತಿದ್ದಾರೆ ಎಂದು ತಿಳಿದರೆ ಅವರಿಗಿಂತ ಮೊದಲೇ ಕಾಳಿಂಗಯ್ಯನವರು ಎದ್ದು ಹೋಗಿ ನೋಡಿಕೊಂಡು ಬರುತ್ತಿದ್ದರಂತೆ. ರಂಗಪ್ಪನವರು ಪುರಸಭಾ ಅಧ್ಯಕ್ಷರಾಗಿದ್ದ ಅವಧಿಯಲ್ಲೇ ತೀರ್ಥಹಳ್ಳಿ ಪಟ್ಟಣಕ್ಕೆ ವಿದ್ಯುತ್ ಆಗಮನವಾದದ್ದು.

ಕೆಲವು ವರ್ಷಗಳ ಹಿಂದೆ ರಂಗಪ್ಪನವರು ಬದುಕಿದ್ದಾಗ ಅವರ ಬಗ್ಗೆ ಒಂದು ಪುಸ್ತಕ ತರಲು ಕಡಿದಾಳು ದಯಾನಂದ್ ಮುಂದಾದಾಗ ಇವರ ಪುರಸಭಾ ಅಧ್ಯಕ್ಷತೆಯಲ್ಲಿ ತೆಗೆಸಿಕೊಂಡ ಫೋಟೋಗಾಗಿ ಹುಡುಕತೊಡಗಿದರು. ಎಲ್ಲೆಲ್ಲೂ ಸಿಗಲಿಲ್ಲ. ಅಂತಿಮವಾಗಿ ರಂಗಪ್ಪನವರ ಅಧ್ಯಕ್ಷತೆಯ ಅವಧಿಯಲ್ಲಿ ಸದಸ್ಯರಾಗಿದ್ದ ವೆಂಕಟರಾಯ ಕಾಮತ್ ಎಂಬುವವರ ಹತ್ತಿರ ಈ ಬಗ್ಗೆ ವಿಚಾರಿಸಿದರು. "ರಂಗಪ್ಪನವರು ಪುರಸಭಾ ಅಧ್ಯಕ್ಷರಾಗಿದ್ದ ಅವಧಿಯಲ್ಲಿನ ಫೋಟೋ ಸಿಗಲಿಕ್ಕೆ ಸಾಧ್ಯವೇ ಇಲ್ಲ'' ಎಂದು ಕಡ್ಡಿ ಮುರಿದಂತೆ ಕಾಮತ್ ಹೇಳಿದರಂತೆ.



"ಯಾಕೆ?" ಎಂದು ಪ್ರಶ್ನಿಸಿದಾಗ ರಂಗಪ್ಪನವರ ಘನಘೋರ ಪ್ರಾಮಾಣಿಕತೆಯ ತುಣುಕೊಂದು ಹೊರಬಿದ್ದಿತ್ತು. "ತೆಗೆಸಿದರಲ್ಲವೆ ಸಿಗುವುದು? ಪುರಸಭೆಯ ಸದಸ್ಯರ ಫೋಟೊ ತೆಗೆಸಿದರೆ ಪುರಸಭೆಯಿಂದ ಖರ್ಚು ಹಾಕಿಸಬೇಕಾಗುತ್ತದೆ. ಸಾರ್ವಜನಿಕ ಹಣದ ಒಂದು ಕಾಸೂ ಇಂಥದ್ದಕ್ಕೆಲ್ಲ ಅಪವ್ಯಯ ಮಾಡುವುದು ಅವರ ಜಾಯಮಾನದಲ್ಲೇ ಇರಲಿಲ್ಲ, ಹಾಗಿರುವಾಗ ನಿಮಗೆ ಫೋಟೋ ಸಿಗುವುದು ಎಲ್ಲಿಂದ?" ಎಂದರಂತೆ ಕಾಮತ್. ಈ ಬಗ್ಗೆ ರಂಗಪ್ಪನವರನ್ನು ಪ್ರಶ್ನಿಸಿದಾಗ "ಹೌದು. ಮುನಿಸಿಪಲ್ ಮೀಟಿಂಗ್‌ನಲ್ಲಿ, ನಮ್ಮ ಕಾಲದಲ್ಲಿ ಕಾಫಿ ಕುಡಿಯಲೂ ಸಾರ್ವಜನಿಕ ಹಣ ಖರ್ಚು ಮಾಡುತ್ತಿರಲಿಲ್ಲ" ಎಂದರಂತೆ.


ರಂಗಪ್ಪನವರು ಓದುತ್ತಿದ್ದಾಗ ಇಡೀ ತೀರ್ಥಹಳ್ಳಿಯಲ್ಲಿ ಪ್ಲೇಗಿನ ಹಾವಳಿ. ಆ ಕಾರಣಕ್ಕಾಗಿ ಶಾಲೆಗಳೆಲ್ಲ ಮುಚ್ಚಿದ್ದವು. ರಂಗಪ್ಪನವರು ಮಾಳೂರಿನ ಶಾಲೆಗೆ ಹೋಗಿ ಓದಬೇಕಾಯ್ತು. "ನಮ್ಮೂರಿನಲ್ಲಿ ಶಾಲೆ ಇಲ್ಲದ್ದರಿಂದ ನನ್ನ ತಂಗಿ ತುಳಸಮ್ಮ ಜೀವಮಾನವಿಡೀ ಅನಕ್ಷರಸ್ಥಳಾದಳು. ಹಾಗೆಯೇ ನನ್ನ ತಮ್ಮಂದಿರುಗಳು ದೂರದಲ್ಲಿರೋ ಸಂಬಂಧಿಗಳ ಮನೆಯಲ್ಲಿದ್ದು ಓದಬೇಕಾಯ್ತು. ಈ ಎಲ್ಲ ನೋವಿನಿಂದ ಬಳಲಿ ನಮ್ಮ ತಾಲೂಕನ್ನು ವಿದ್ಯಾವಿಹೀನ ಸ್ಥಿತಿಯಿಂದ ಮುಂದೆ ತರಬೇಕೆಂದು ಗುರಿ ಇತ್ತು" ಎಂದು ಉತ್ತರಿಸಿದ್ದರು ರಂಗಪ್ಪ. ಈ ನಿಟ್ಟನಲ್ಲಿ ತಮ್ಮ ಜೀವಿತಾವಧಿಯನ್ನೆಲ್ಲ ಮುಡಿಪಾಗಿಟ್ಟಿದ್ದರು.

1960 ರಲ್ಲಿ ರಂಗಪ್ಪನವರು ತಾಲೂಕು ಅಭಿವೃದ್ಧಿ ಮಂಡಲಿಯ ಅಧ್ಯಕ್ಷರಾದಾಗ ಇಡೀ ರಾಜ್ಯವೇ ನಿಬ್ಬೆರಗಾಗುವ ಕೆಲಸ ಮಾಡಿದರು. ಆಗ ಇಡೀ ತಾಲೂಕಲ್ಲಿ ಕೇವಲ ಎರಡೇ ಹೈಸ್ಕೂಲುಗಳಿದ್ದವು. ತೀರ್ಥಹಳ್ಳಿ ಸಾಕ್ಷರತೆಯ ದೃಷ್ಟಿಯಲ್ಲಿ ಹಾಳು ಕೊಂಪೆಯೇ ಆಗಿತ್ತು, ವಿದ್ಯೆ ಇಲ್ಲದೆ ತಮ್ಮ ಕುಟುಂಬ ಒದ್ದಾಡಿದ್ದನ್ನು ಸ್ವತಃ ಅನುಭವಿಸಿದ್ದ ರಂಗಪ್ಪನವರು ತಾಲೂಕು ಅಭಿವೃದ್ಧಿ ಮಂಡಳಿಯಿಂದ ಹೈಸ್ಕೂಲ್ ಆರಂಭಿಸಿದರೆ ಹೇಗೆಂದು ಯೋಚಿಸಿದರು. ಆದರೆ ರಸ್ತೆ ಮೋರಿ, ಬೀದಿ ದೀಪ, ಇವೇ ತಾಲೂಕು ಅಭಿವೃದ್ಧಿ ಮಂಡಳಿ ಕೆಲಸವಾಗಿದ್ದವು. ಕಾನೂನಲ್ಲಿ ಮಂಡಳಿ ಶಾಲೆಯನ್ನು ಸ್ಥಾಪಿಸಲು ಅವಕಾಶವಿರಲಿಲ್ಲ. ಆಗ ಜಿಲ್ಲಾಧಿಕಾರಿಗಳಾಗಿದ್ದ ಜನಪದ ತಜ್ಞ ಹೆಚ್.ಎಲ್.ನಾಗೇಗೌಡರನ್ನು ಹಿಡಿದುಕೊಂಡು ತಾಲೂಕಿನಲ್ಲಿ ಹದಿನಾಲ್ಕು ಹೈಸ್ಕೂಲುಗಳನ್ನು ಆರಂಭಿಸಿದ ಕೀರ್ತಿ ರಂಗಪ್ಪನವರಿಗೆ ಸಲ್ಲುತ್ತದೆ. ಎಂತಹ ಕಡುಬಡವನಿಗೂ ವಿದ್ಯೆಯ ಬಾಗಿಲು ತೆರೆದು ರಾಜ್ಯದಲ್ಲೇ ತೀರ್ಥಹಳ್ಳಿ ತಾಲೂಕು ಅತಿಹೆಚ್ಚು ವಿದ್ಯಾವಂತರನ್ನು ಕೊಟ್ಟ ತಾಲೂಕು ಎಂಬ ಹೆಮ್ಮೆಗೆ ಕಾರಣಕರ್ತರಾದವರಲ್ಲಿ ರಂಗಪ್ಪನವರೂ ಒಬ್ಬರು ಎಂಬುದನ್ನು ಮುಲಾಜಿಲ್ಲದೆ ಹೇಳಬಹುದು.

ಶಿಸ್ತು ಹಾಗೂ ಸಜ್ಜನಿಕೆಗೆ ಗೌರವ ಕೊಡುತ್ತಿದ್ದ ರಂಗಪ್ಪನವರು ಕುವೆಂಪುರವರ ಹತ್ತಿರದ ಸಂಬಂಧಿ. ಅವರ ಜೊತೆಗೆ ಅನೇಕ ರಸಕ್ಷಣಗಳನ್ನು ಕಳೆದಿದ್ದಾರೆ. ಅಲ್ಲದೆ ಅವರೊಂದಿಗೆ ಇಂಗ್ಲಾದಿ ಮನೆಯಿಂದ ಕಾಡು ಬೆಟ್ಟ ಸುತ್ತಿದ್ದರು. ಶಿಕಾರಿ ಮಾಡಿದ್ದರು. ಹುಲಿ ಹೊಡೆದಿದ್ದರು. ಆಧ್ಯಾತ್ಮದ ಬಗ್ಗೆ ಚರ್ಚಿಸಿದ್ದರು. ಕುವೆಂಪುರವರ ಜೊತೆ ಸೇರಿ 'ಜಲಗಾರ' ನಾಟಕವಾಡಿ ಅದರಲ್ಲಿ ಜಲಗಾರನ ಪಾತ್ರ ಮಾಡಿದ್ದರು.

ಆ ಕಾಲದ ತೀರ್ಥಹಳ್ಳಿಯ ಎಲ್ಲ ಸ್ಥಿತಿವಂತ ಕುಟುಂಬದವರ ಒಟ್ಟು ಸಾಂಸ್ಕೃತಿಕ ಬದುಕಲ್ಲಿ ಮೈಸೂರಿನ ರಾಮಕೃಷ್ಣಾಶ್ರಮ ವಹಿಸಿದ ಪಾತ್ರ ಸ್ಮರಣೀಯ. ಇದಕ್ಕೆ ಕಾರಣಕರ್ತರು ಕುವೆಂಪುರವರು. ತಮ್ಮ ವಾರಿಗೆಯವರು, ಬಂಧುಗಳು, ದಾಯಾದಿಗಳು ಎಲ್ಲರಿಗೂ ಮೈಸೂರಿನ ರಾಮಕೃಷ್ಣಾಶ್ರಮದಲ್ಲಿ ವಿದ್ಯೆ ದೊರೆವಂತೆ ನೋಡಿಕೊಂಡರು. ಅಂತಹವರಲ್ಲಿ ರಂಗಪ್ಪನವರೂ ಒಬ್ಬರು. ಆಶ್ರಮದ ಶಿಸ್ತು ರಂಗಪ್ಪನವರ ಜೀವನದಲ್ಲಿ ಅದೆಷ್ಟು ಹೊಕ್ಕಿತೆಂದರೆ ಇಡೀ ತೀರ್ಥಹಳ್ಳಿ ಇವರು ಅಳವಡಿಸಿಕೊಂಡ ಶಿಸ್ತಿನ ಬಗ್ಗೆ ದಂತಕತೆಗಳನ್ನೇ ಸೃಷ್ಟಿಸಿದೆ.

ರಂಗಪ್ಪ ದೇವರು, ತೀರ್ಥಯಾತ್ರೆ ಎಂದು ಸಮಯ ವ್ಯರ್ಥ ಮಾಡಿದವರಲ್ಲ, ಅಂತಹವರನ್ನು ಕಂಡರೆ ಅವರಿಗೆ ಆಗುತ್ತಲೂ ಇರಲಿಲ್ಲ, ದೇವರಲ್ಲಿ ನಂಬಿಕೆ ಇದ್ದರೂ ಅದನ್ನು ಆಡಂಬರದ ವಸ್ತುವಾಗಿ ಬಿಂಬಿಸುವುದನ್ನು ಇಷ್ಟಪಟ್ಟವರಲ್ಲ, ತುಂಗಾ ಮಹಾವಿದ್ಯಾಲಯದ ಆರಂಭಿಕ ಅಧ್ಯಕ್ಷರಾಗಿದ್ದ ರಂಗಪ್ಪ ಮನೆಯ ಕೆಲಸ ಬಿಟ್ಟು ಇದರ ನಿರ್ಮಾಣದಲ್ಲಿ ತೊಡಗಿಸಿಕೊಂಡಿದ್ದೇ ಹೆಚ್ಚು, ತಮ್ಮ ತೋಟ ಹಾಗೂ ತುಂಗಾ ವಿದ್ಯಾಲಯದ ಅಭಿವೃದ್ಧಿ ಎರಡರ ನಡುವೆ ವ್ಯತ್ಯಾಸ ಗೊತ್ತಿಲ್ಲದಂತೆ ಕೆಲಸ ನಿರ್ವಹಿಸಿದ್ದರು. ಆಗ ನಾವೆಲ್ಲ ಈ ಕಾಲೇಜಿನ ವಿದ್ಯಾರ್ಥಿಗಳು. ರಂಗಪ್ಪನವರು ದಪ್ಪ ಗಾಜಿನ ಕನ್ನಡಕ ಹಾಕಿಕೊಂಡು ಕೊಡೆಯನ್ನು ಹೆಗಲಿಗೇರಿಸಿಕೊಂಡು



ಮಂಗಳೂರಿನಲ್ಲಿ 'ಜನ-ನುಡಿ' ಕಾರ್ಯಕ್ರಮ

ಕರ್ನಾಟಕದ ಜನಪರ ಕಾಳಜಿಗಳ ಹಾಗೂ ಪ್ರಗತಿಪರ ಸಂಘಟನೆಗಳು ಹಾಗೂ ವ್ಯಕ್ತಿಗಳು ಒಗ್ಗೂಡಿ ಡಿಸೆಂಬರ್ 14-15 ರಂದು ಮಂಗಳೂರಿನಲ್ಲಿ ಆಯೋಜಿಸಿರುವ 'ಜನ-ನುಡಿ' ಕಾರ್ಯಕ್ರಮದ ವಿವರ

[illegible]

ಡಿಸೆಂಬರ್ 14 ಮತ್ತು 15, 2013.

ಸ್ಥಳ: ಕಲಾಂಗಣ್, ಶಕ್ತಿನಗರ, ಮಂಗಳೂರು

14-12-2013, ಬೆಳಗ್ಗೆ 10.00 -12.30

ಚಾಲನೆ : ಡಾ. ರಾಜೇಂದ್ರ ಚೆನ್ನಿ
ಅಧ್ಯಕ್ಷತೆ : ಪ್ರೊ. ಎಸ್. ಜಿ. ಸಿದ್ಧರಾಮಯ್ಯ
ಪ್ರಾಸ್ತಾವಿಕ ಮಾತು : ಡಾ. ಎಚ್. ಎಸ್. ಅನುಪಮಾ
ಅತಿಥಿಗಳು : ಸಾರಾ ಅಬೂಬಕರ್, ಲಕ್ಷ್ಮಿನಾರಾಯಣ ನಾಗವಾರ, ಕಡಿದಾಳು ಶಾಮಣ್ಣ

12.30 - 1.00 ಹೋರಾಟದ ಹಾಡುಗಳು

ಮಧ್ಯಾಹ್ನ 2.00 - 4.00

[illegible] - ವರ್ತಮಾನ ಮತ್ತು [illegible]

ಅಧ್ಯಕ್ಷತೆ : ಡಾ. ಕೆ. ಷರೀಫಾ
ಆಶಯ : ದು. ಸರಸ್ವತಿ
ವಿಷಯ ಮಂಡನೆ : ಡಾ. ಮೀನಾಕ್ಷಿ ಬಾಳಿ, ಡಾ. ವಿನಯಾ ವಕ್ಕುಂದ, ಡಾ. ಎನ್. ಗಾಯತ್ರಿ
ಪ್ರತಿಕ್ರಿಯೆ : ಗುಲಾಬಿ ಬಿಳಿಮಲೆ, ಡಾ. ಅನಸೂಯಾ ಕಾಂಬ್ಳೆ, ಜ್ಯೋತಿ ಚೇಳಾಯರು, ಮಂಜುಳಾ ಮಾಳಗಿ

ಸಂಜೆ 4.00 -6.00

[illegible]

ಅಧ್ಯಕ್ಷತೆ: ಡಾ. ಕಾಳೇಗೌಡ ನಾಗವಾರ
ಆಶಯ: ನಾರಾಯಣ ಗಟ್ಟಿ
ವಿಷಯ ಮಂಡನೆ: ಡಾ. ಎಂ. ಡಿ. ವಕ್ಕುಂದ, ಕೆ. ಎಸ್. ವಿಮಲಾ, ಡಾ. ವಿ. ಲಕ್ಷ್ಮೀನಾರಾಯಣ
ಪ್ರತಿಕ್ರಿಯೆ: ಡಾ. ರಂಗನಾಥ್ ಕಂಟನಕುಂಟೆ, ಡಾ. ಅರುಣ್ ಜೋಳದ ಕೂಡ್ಲಿಗಿ, ಹಿ. ಭಾರತೀದೇವಿ, ವರುಣ್ ನಾಯ್ಕರ್

ಸಾಂಸ್ಕೃತಿಕ ಕಾರ್ಯಕ್ರಮ

15-12-2013, ಬೆಳಗ್ಗೆ 10.00 -12.00

[illegible]

ಆಶಯ: ಪ್ರೊ. ರಹಮತ್ ತರೀಕೆರೆ
ಅಧ್ಯಕ್ಷತೆ: ಡಾ. ಆರ್. ಪೂರ್ಣಿಮಾ
ವಿಷಯ ಮಂಡನೆ: ಬಿ. ಶ್ರೀಪಾದ ಭಟ್, ಡಾ. ಬಾಲ ಗುರುಮೂರ್ತಿ
ಪ್ರತಿಕ್ರಿಯೆ: ಸರ್ಜಾಶಂಕರ ಹರಳಿಮಠ, ರವಿಕೃಷ್ಣಾ ರೆಡ್ಡಿ, ಡಾ. ಎಚ್. ಡಿ. ಪ್ರಶಾಂತ್, ಹರ್ಷಕುಮಾರ್ ಕುಗ್ವೆ

ಮಧ್ಯಾಹ್ನ 12.00- 1.30

[illegible]

ಅಧ್ಯಕ್ಷತೆ: ಜಿ. ಪಿ. ಬಸವರಾಜು
ಆಶಯ : ಪಿಚ್ಚಳ್ಳಿ ಶ್ರೀನಿವಾಸ್
ಕವನ ವಾಚನ: ಆರಿಫ್ ರಾಜಾ, ರೇಣುಕಾ ಹೆಳವರ, ಶಶಿಧರ ಹೆಮ್ಮಾಡಿ, ದೀಪಾ ಹಿರೇಗುತ್ತಿ, ಲಕ್ಷ್ಮೀನಾರಾಯಣ ಸ್ವಾಮಿ. ಅಕ್ಷತಾ ಹುಂಚದಕಟ್ಟೆ, ಸಂವರ್ಥ ಸಾಹಿಲ್, ಬಸವರಾಜ ಹೂಗಾರ, ಕೆ.ಪಿ.ಮೃತ್ಯುಂಜಯ, ಪ್ರವರ ಕೊಟ್ಟೂರು, ಬಿ. ಶ್ರೀನಿವಾಸ, ನಾಗರಾಜ ಹರಪನಹಳ್ಳಿ

1.30 - 2.00 ಹೋರಾಟದ ಹಾಡು

ಮಧ್ಯಾಹ್ನ 2.30 - 4.30

ಕರಾವಳಿಯ ತಲ್ಲಣಗಳು

ಅಧ್ಯಕ್ಷತೆ: ಡಾ. ಸಬಿಹಾ ಭೂಮಿಗೌಡ
ವಿಷಯ ಮಂಡನೆ: ಡಾ. ಎಚ್. ನಾಗವೇಣಿ, ಅತ್ರಾಡಿ ಅಮೃತ ಶೆಟ್ಟಿ, ಬಿ. ಎಂ. ಬಶೀರ್
ಪ್ರತಿಕ್ರಿಯೆ : ಡಾ. ವಿಠ್ಠಲ ಭಂಡಾರಿ, ವಿದ್ಯಾ ದಿನಕರ್, ಸುಶೀಲಾ ನಾಡ, ವಿಠಲ ಮಲೆಕುಡಿಯ, ಜೀವನ್ ರಾಜ್ ಕುತ್ತಾರ್

ಸಮಾರೋಪ: ಸಂಜೆ 4.30 - 6.00

ಅಧ್ಯಕ್ಷತೆ: ಕೆ. ನೀಲಾ
ಸಮಾರೋಪ: ದಿನೇಶ್ ಅಮಿನ್ ಮಟ್ಟು
ಅತಿಥಿಗಳು: ಮಾವಳ್ಳಿ ಶಂಕರ್, ಸನತ್‌ಕುಮಾರ್ ಬೆಳಗಲಿ, ಡಾ. ವಸುಂಧರಾ ಭೂಪತಿ, ಅನಸೂಯಮ್ಮ, ಹರೇಕಳ ಹಾಜಬ್ಬ

ಸಹಯೋಗ: ಕೊರಗ ಅಭಿವೃದ್ಧಿ ಸಂಘಗಳ ಒಕ್ಕೂಟ (ಕರ್ನಾಟಕ-ಕೇರಳ), ಕೊರಗ ಜಾಗೃತಿ ಸಂಘ, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ (ಭೀಮವಾದ), ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ), ಕರಾವಳಿ ಲೇಖಕಿಯರ ಸಂಘ, ಲಡಾಯಿ ಪ್ರಕಾಶನ (ಗದಗ), ಸಹಮತ (ಕುಂದಾಪುರ), ಜಾತಿ ಮುಕ್ತ ಸಂಬಂಧ ವೇದಿಕೆ, ಕರ್ನಾಟಕ ಕೋಮು ಸೌಹಾರ್ದ ವೇದಿಕೆ, ನಾವು ನಮ್ಮಲ್ಲಿ (ಕೊಟ್ಟೂರು), ವರ್ತಮಾನ.ಕಾಂ, ಕರ್ನಾಟಕ ಜನ ಸಾಹಿತ್ಯ ಸಂಘಟನೆ, ಸಮುದಾಯ (ಮಂಗಳೂರು), ಇಪ್ಟಾ, ಪಿಯುಸಿಎಲ್

ಬನ್ನಿ, ಭಾಗವಹಿಸಿ

ಗಾಂಭೀರ ನಡುಗೆಯಲ್ಲಿ ಬಂದರೆಂದರೆ ಗಿಜಿಗಿಜಿಯ ಕಾಲೇಜು ಸಂಪೂರ್ಣ ಮೌನಕ್ಕೆ ಶರಣಾಗಲೇಬೇಕಿತ್ತು, ಮಲೆನಾಡಿನ ರಾಜ ಗಾಂಭೀರ್ಯ ಅವರಲ್ಲಿ ತುಳುಕುತ್ತಿತ್ತು. ಬೆಂಗಳೂರಿನಲ್ಲಿ ಅವರು ಸೈಕಲ್ ಮೇಲೆ ಹೋಗುತ್ತಿದ್ದರೆ ಅವರನ್ನು 'ಮಲೆನಾಡ ಪ್ರಿನ್ಸ್' ಎಂದು ಜನ ಕರೆಯುತ್ತಿದ್ದರಂತೆ. ಅವರು ಹಾಗೆಯೇ ಇದ್ದರು ಬಿಡಿ. ಒಂದು ಆ್ಯಂಗಲ್‌ನಲ್ಲಿ ಈಗಿನ ರಷ್ಯಾ ಅಧ್ಯಕ್ಷ ವ್ಲಾದಿಮೇರ್ ಪುಟಿನ್ ತರಹ ಕಾಣಿಸುತ್ತಿದ್ದರು. ಅವರು ಸಾಯುವವರೆಗೂ ಉಳಿಕೊಂಡು ಬಂದ ಸೌಂದರ್ಯದ ಗಾಂಭೀರ್ಯ ಅದು.

ಇಷ್ಟೆಲ್ಲ ತಾಲೂಕಿಗಾಗಿ ದುಡಿದ ರಂಗಪ್ಪನವರನ್ನು 1978ರ ವಿಧಾನಸಭಾ ಚುನಾವಣೆಯಲ್ಲಿ ಜನ ಸೋಲಿಸಿದರು. ದೂರದೃಷ್ಟಿ, ಸಮಷ್ಟಿ ಪ್ರಜ್ಞೆ, ಕ್ರಿಯಾಶೀಲತೆ, ಪ್ರಾಮಾಣಿಕತೆ ಇವುಗಳನ್ನು ಜನ ಇಷ್ಟಪಡುತ್ತಾರೆ ಎಂಬ ತೀರ್ಥಹಳ್ಳಿಯ ಮೌಲ್ಯಗಳಿಗೆ ರಂಗಪ್ಪನವರ ಸೋಲು ಮೊದಲ ಬಾರಿಗೆ ಹೊಡೆತ ಕೊಟ್ಟಿತ್ತು. ಹಾಗಂತ ರಂಗಪ್ಪನವರು ಸುಮ್ಮನೆ ಕೂರಲಿಲ್ಲ. ತುಂಗಾ ಮಹಾವಿದ್ಯಾಲಯವಲ್ಲದೆ ಸಹ್ಯಾದ್ರಿ ಆಂಗ್ಲ ಮಾಧ್ಯಮ ಶಾಲೆ ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳನ್ನು ಕಟ್ಟಿದರು.

ರಂಗಪ್ಪನವರು ಶಾಸಕರಾಗಲಿಲ್ಲ, ಮಂತ್ರಿಯಾಗಲಿಲ್ಲ, ಆದರೆ ಜನ ನಾಯಕರಾದರು. ಆ ನಾಯಕತ್ವವನ್ನು ಮಂತ್ರಿ-ಶಾಸಕರುಗಳಿಂದ ಕಸಿಯಲು ಕಡೆಗೂ ಸಾಧ್ಯವಾಗಲಿಲ್ಲ. ಇದು ಪ್ರಜಾಸತ್ತೆಯ ವ್ಯಂಗ್ಯ ಕೂಡಾ.

ರಂಗಪ್ಪನವರು ದೂರದ ಮಂಡ್ಯಾದ ಕೀಲಾರ, ಪರ್ತೂರು ಮುಂತಾದೆಡೆ ಗಾಡಿ ಕಟ್ಟಿಕೊಂಡು ವೈದ್ಯ ವೃತ್ತಿ ಮಾಡಿದ್ದರು. ದಟ್ಟ ಕಾಡಿನ ಆಗುಂಬೆಯಲ್ಲಿ ವೈದ್ಯರಾಗಿ ಮಲೇರಿಯಾ ವಿರುದ್ಧ ಹೋರಾಡಿದ್ದರು. ಲಾಟೀನು ಹಿಡಿದುಕೊಂಡು ಹೋಗಿ ರೋಗಿಗಳನ್ನು ಉಪಚರಿಸಿದ್ದರು. ಮಲೆನಾಡ ಸುತ್ತ ಇವರಿಂದ ಉಪಚರಿಸಲ್ಪಟ್ಟ ರೋಗಿಗಳು ಸಾವಿರಾರು. ಇವರಲ್ಲಿ ಕೆಲವರಾದರೂ ಜೀವಂತವಿದ್ದು ರಂಗಪ್ಪನವರ ವಿಶಿಷ್ಟ ಬದುಕನ್ನು ವರ್ಣಿಸುತ್ತಾರೆ.


ಅಂತಹವರಲ್ಲಿ ಒಬ್ಬರು ಮಂಡ್ಯದ ಕೀಲಾರದಲ್ಲಿ ರಂಗಪ್ಪನವರು ವೈದ್ಯ ವೃತ್ತಿ ಮಾಡುತ್ತಿದ್ದಾಗಿನ ಘಟನೆಯೊಂದನ್ನು ನೆನಪಿಸಿಕೊಳ್ಳುತ್ತಾರೆ:

ಆಗ ಕೀಲಾರದಲ್ಲಿ ಎಸ್.ಎಸ್.ಎಲ್.ಸಿ ಓದಿದವರು ಯಾರೂ ಇರಲಿಲ್ಲ. ಆ ಊರಿನ ಯುವಕರೊಬ್ಬರೇ ದೂರದ ಬೆಳಗಾವಿಯಲ್ಲಿ ಲಾ ಓದುತ್ತಿದ್ದರು. ಆ ಯುವಕರಿಗೆ ವಿರಾಮವಿದ್ದಾಗ ರಂಗಪ್ಪನವರೊಂದಿಗೆ ಹರಟೆ ಹೊಡೆಯಲು ಬರುತ್ತಿದ್ದರಂತೆ. ಮಾತಿನ ನಡುವೆ ಆ ಯುವಕ "ಮೊದಲ ವರ್ಷದ ಲಾ ಮುಗಿದಿದೆ. ಮುಂದುವರಿಸಲು ದುಡ್ಡಿಲ್ಲ" ಎಂದಾಗ ರಂಗಪ್ಪ ಚಿಕಿತ್ಸೆ ನೀಡುತ್ತಿದ್ದ ಸ್ಥಿತಿವಂತರೊಬ್ಬರ ನೆನಪಾಗಿ ಈ ಯುವಕನಿಗೆ ಸಾಲ ಕೊಡಿಸಲು ಅವರ ಬಳಿಹೋದರು. ಆ ಸ್ಥಿತಿವಂತರು ಇನ್ನೂ ಬೆಳೆಯದ ತಮ್ಮ ಮಗಳನ್ನು ತೋರಿಸಿ "ಇವಳನ್ನು ಮದುವೆಯಾಗುವುದಾದರೆ ಮುಂದೆ ಓದಲು ಹಣಕಾಸಿನ ಸಹಾಯ ಮಾಡುವೆ " ಎಂಬ ಶರತ್ತನ್ನು ಹಾಕಿದರು. ಈ ಶರತ್ತನ್ನು ಯುವಕನಿಗೆ ಹೇಳಿದಾಗ ಯುವಕ ಇದಕ್ಕೆ ಒಪ್ಪಲಿಲ್ಲ. ಅಲ್ಲಿ ಇಲ್ಲಿ ಎಂದು ಎಲ್ಲಿ ಹುಡುಕಿದರೂ ಆ ಯುವಕನಿಗೆ ಹಣ ಹೊಂದಿಸಲಾಗದೆ ಅಂತಿಮವಾಗಿ ರಂಗಪ್ಪನವರ ಹತ್ತಿರ ಬಂದು "ಸ್ಥಿತಿವಂತರ ಶರತ್ತಿಗೆ ಒಪ್ಪಿದ್ದೇನೆ. ಅವರ ಮಗಳನ್ನು ಮದುವೆಯಾಗುತ್ತೇನೆ" ಎಂದರಂತೆ. ಆಗ ರಂಗಪ್ಪ ಸ್ಥಿತಿವಂತರಿಂದ ಯುವಕನಿಗೆ ಹಣ ಕೊಡಿಸಿದರು. ಆ ಯುವಕ ತನ್ನ ವಿದ್ಯೆ ಮುಂದುವರಿಸಿದರು. ಅಲ್ಲದೆ ಮಂಡ್ಯದ ಸರ್ವತೋಮುಖ ಅಭಿವೃದ್ಧಿಗೂ ಕಾರಣರಾದರು. ಶಿಕ್ಷಣ ಮಂತ್ರಿಯೂ ಆದರು. ಅವರೇ ಕೆ.ವಿ.ಶಂಕರೇಗೌಡರು.

ಶಂಕರೇಗೌಡರು ಶಿಕ್ಷಣ ಮಂತ್ರಿಯಾಗಿದ್ದ ಸಂದರ್ಭದಲ್ಲೊಮ್ಮೆ ರಂಗಪ್ಪನವರನ್ನು ಭೇಟಿಯಾಗಿ "ಡಾಕ್ಟ್ರೇ, ಈಗಿನ ಕೀಲಾರ ನೀವು ಆಗ ನೋಡಿದಂತಿಲ್ಲ, ಬಹಳ ಬದಲಾಗಿದೆ. ಜನ ಸ್ಥಿತಿವಂತರಾಗಿದ್ದಾರೆ. ಎಲ್ಲ ಸವಲತ್ತುಗಳೂ ಇವೆ. ಆದರೆ ಮೂಲ ಸಂಸ್ಕೃತಿ ಮಾತ್ರ ಹಾಗೇ ಇದೆ" ಎಂದು ನೆನಪಿಸಿಕೊಂಡಿದ್ದನ್ನು ಕಡಿದಾಳು ದಯಾನಂದ್ ಹಾಗೂ ಕೋಣಿಗೆ ಶಿವಪ್ಪನವರಿಗೆ ರಂಗಪ್ಪನವರು ಹೇಳಿದ್ದರು.

19013 ರಲ್ಲಿ ಹುಟ್ಟಿದ ರಂಗಪ್ಪನವರು ಬದುಕಿದ್ದಿದ್ದರೆ ಈಗ ಅವರಿಗೆ ನೂರು ವರ್ಷ ತುಂಬುತ್ತಿತ್ತು. ನೂರರ ನೆನಪಲ್ಲಿ ಇದೇ ಡಿಸೆಂಬರ್ 7 ರಂದು 'ಡಾ.ಬಿ.ಎಸ್.ರಂಗಪ್ಪ ಜನ್ಮಶತಮಾನೋತ್ಸವ ಸಮಾರಂಭ' ತೀರ್ಥಹಳ್ಳಿಯಲ್ಲಿ ನಡೆಯಲಿದೆ.


ಹಿರಿಯ ಲೇಖಕರು ಹಾಗೂ ವಿಚಾರವಾದಿಗಳಾದ ಪ್ರೊ.ಜಿ.ಕೆ.ಗೋವಿಂದರಾವ್, ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರಾದ ಕಿಮ್ಮನೆ ರತ್ನಾಕರ್, ಸಾಹಿತಿಗಳಾದ ಡಾ.ಕೆ.ಕೆ.ರಮೇಶ್ ಮುಂತಾದವರು ಈ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ಈ ಸಮಾರಂಭದ ಯಶಸ್ಸಿಗೆ ಕಡಿದಾಳು ದಯಾನಂದ್, ಬಿ.ಕೆ.ಹರ್ಷ ಮುಂತಾದವರು ಶ್ರಮಿಸುತ್ತಿದ್ದಾರೆ.




■ ನೆಂಪೆ ದೇವರಾಜ್
ತೀರ್ಥಹಳ್ಳಿ


ಸ್ವರ್ಣವಲ್ಲಿ ಸ್ವಾಮಿಯ ಗೀತಾ ಗಾಯನ ಗಲಾಟೆ!!

ಬ್ರಾಹ್ಮಣರ 'ಮರಿ' ಮಠಾಧೀಶ ಶಿರಸಿಯ ಸ್ವರ್ಣವಲ್ಲಿ ಸ್ವಾಮಿಯ ಭಗವದ್ಗೀತಾ ಭಾಗ್ಗಡಿಯ ದ್ವಿತೀಯ ಕಾಂಡ ಶುರುವಾಗಿದೆ! ಶಿರಸಿ ಸೀಮೆ ಹೈಗರಿಗಷ್ಟೇ ಸೀಮಿತವಾಗಿರುವ ತನ್ನ ಕಾವಿ ತೇಜಸ್ಸಿನ ವ್ಯಾಪ್ತಿ ಉತ್ತರ ಕನ್ನಡದಾದ್ಯಂತ, ಅಲ್ಲಿಂದ ಇಡೀ ರಾಜ್ಯಕ್ಕೆ ವಿಸ್ತರಿಸಿಕೊಳ್ಳಲು ಈ ಗಂಗಾಧರೇಂದ್ರ ಸರಸ್ವತಿ ಗೀತೋಪದೇಶಕ್ಕೆ ಧುಮುಕಿರುವುದು ಹಳೇ ಪುರಾಣ. ಪ್ರತಿಸ್ಪರ್ಧಿ ಕಾವಿ ಜೀವಿ ರಾಘವೇಶ್ವರ ಭಾರತಿ ಎಂಬ ಸಗಣಿ ಸಂತನಿಗೆ ಸಡ್ಡು ಹೊಡೆದು ಸದ್ದು ಮಾಡಿ ಸುದ್ದಿಯಾಗುವ ಹಿಡನ್ ಅಜೆಂಡಾ ಗಂಗಾಧರರ ಗೀತಾ ಅಭಿಯಾನದಲ್ಲಿ ಅಡಗಿರುವುದು ಬ್ರಾಹ್ಮಣ ವಲಯದಲ್ಲಿ ಕದನ ಕುತೂಹಲ ಮೂಡಿಸಿಬಿಟ್ಟಿದೆ.





ದುರಂತವೆಂದರೆ, ಈ ಪುರೋಹಿತಶಾಹಿ ಮಠಾಧೀಶರ ರಾಮ ಕಥಾ V/s ಗೀತಾ ಅಭಿಯಾನದ ಗುದ್ದಾಟದ ಅಡ್ಡ ಪರಿಣಾಮ ಅಮಾಯಕ ಅಬ್ರಾಹ್ಮಣರ ಮೇಲಾಗುತ್ತಿದೆ. ರಗಳೆ ರಾಘವ ಚೆಡ್ಡಿ ಸರ್ಕಾರದ ಬಲದಿಂದ ಗೋಕರ್ಣ ದೇವಸ್ಥಾನವನ್ನು ತನ್ನ ಜೋಳಿಗೆಗೆ ತುಂಬಿಕೊಂಡಾಗಲೇ ಗಲಾಟೆ ಗಂಗಾಧರ ಎಗರಾಡಿದ್ದರು. ದೇವಸ್ಥಾನ ಹಸ್ತಾಂತರ ಸರಿಯಲ್ಲವೆಂದು ಬೊಬ್ಬೆ ಹೊಡೆದಿದ್ದರು. ಆದರೆ ಅಂದು ಮಂತ್ರಿಯಾಗಿದ್ದ, ಸ್ವರ್ಣವಲ್ಲಿ ಮಠದ ಪಕ್ಕದವನೇ ಆಗಿದ್ದ ಕಾಗೇರಿ ಮಾಣಿ ಈತನಿಗೆ ಕ್ಯಾರೇ ಮಾಡಲಿಲ್ಲ. 'ಹಸಿರು ಸ್ವಾಮಿ' ಎಂಬ ಬೋಗಸ್ ಇಮೇಜೂ ರಾಘವನ






ಶಿವರಾಮ ಹೆಬ್ಬಾರ್








ರಾಜಕೀಯ ಧರ್ಮದ ಮುಂದೆ ಕೆಲಸಕ್ಕೆ ಬರಲಿಲ್ಲ. ಆಗ ಮುಖಭಂಗಿತನಾದ ಸ್ವರ್ಣವಲ್ಲಿ ಸ್ವಾಮಿ ಎದುರಾಳಿ ರಾಘವನ ಹಣಿಯಲು ಸಮಯ ಸಾಧಿಸಲಾರಂಭಿಸಿದ...

ಕೋಟ್ಯಾಂತರ ರೂಪಾಯಿಯ ಚರ-ಸ್ಥಿರ ಆಸ್ತಿಯ ಗೋಕರ್ಣ ದೇವಸ್ಥಾನದ ಅಧಿಪತಿಯಾದ ರಾಘವ ಗೋಕರ್ಣ ಮಂಡಲದ ಬ್ರಾಹ್ಮಣ ಸಮುದಾಯದಲ್ಲಿ ತನ್ನ ವಿರುದ್ಧ ಎದ್ದ ಪ್ರಬಲ ಪ್ರತಿರೋಧ ಅಡಗಿಸಲು ನಾನಾ ನಮೂನೆಯ ಗಿಮಿಕ್ ಮಾಡತೊಡಗಿದ. ಒಂದೆಡೆ ಸರ್ಕಾರಿ ಯಂತ್ರ ಬಳಸಿಕೊಂಡು ವಿರೋಧಿಗಳ ನಿರ್ನಾಮಕ್ಕೆ ಹವಣಿಸಿದ ರಾಘವ ಮತ್ತೊಂದೆಡೆ ಮುಗ್ಧರನ್ನು ಭಾವನಾತ್ಮಕವಾಗಿ ಸೆಳೆಯಲು 'ರಾಮಕಥಾ'ದಂಥ ಸಮ್ಮೋಹ ಸನ್ನಿಯನ್ನು ಅಸ್ತ್ರ ಬಳಸಲಾರಂಭಿಸಿದ. ಕಂಡ-ಕಂಡಲ್ಲಿ ಕೋಟ್ಯಾಂತರ ರೂ. ಸಂಗ್ರಹಿಸಿ ರಾಮಾಯಣದ ಆಖ್ಯಾನಗಳ ನೃತ್ಯ-ಚಿತ್ರ-ಸಂಗೀತ ಕಾರ್ಯಕ್ರಮ ರಾಮಚಂದ್ರಾಪುರ ಮಠ ಹಮ್ಮಿಕೊಂಡಿತು. ಧರ್ಮೋನ್ಮಾದದಲ್ಲಿ ಹವ್ಯಕ ಹೆಣ್ಣು-ಗಂಡುಗಳ ಕುಣಿಸಿದ ರಾಘವ ಕುಣಿವವರನ್ನು ಕಣ್ಣು-ಬಾಯಿ ಬಿಟ್ಟುಕೊಂಡು ನೋಡಿ ಥ್ರಿಲ್ ಅನುಭವಿಸಿದ. ಈ ರಾಮಕಥಾಕ್ಕೆ ಜನಜಾತ್ರೆಯೇ ಸೇರತೊಡಗಿತು. ಯಾರದೋ ದುಡ್ಡು; ರಾಘವನ ತೆವಲು.

ರಾಘವನ 'ಪ್ರಸಿದ್ಧಿ' ಗಂಗಾಧರನಲ್ಲಿ 'ಕೀರ್ತಿ' ಕನಸು ಕೆರಳಿಸಿತು. ಆಗಾತ ಶಿರಸಿಸೀಮೆಯ ಅಡಿಕೆ ಬೆಳೆಗಾರರ ಸಾಲ ಮನ್ನಾಕ್ಕೆ ಆಗ್ರಹಿಸುವ ದೊಡ್ಡದೊಂದು ಹವ್ಯಕರ ಸಮಾವೇಶ ನಡೆಸಿದ. ಜತೆ-ಜತೆಗೇ ಭಗವದ್ಗೀತೆಯ 'ಮಹತ್ವ' ಸಾರುವ ಅಭಿಯಾನ ಒಂದನ್ನು ರಾಜ್ಯದಾದ್ಯಂತ ಹಮ್ಮಿಕೊಂಡು ಬಿಟ್ಟ! ಎಲ್ಲ ಜಾತಿ-ಧರ್ಮದ ವಿದ್ಯಾರ್ಥಿಗಳಿರುವ ಶಾಲೆ-ಕಾಲೇಜುಗಳನ್ನೇ ಗುರಿಯಾಗಿಟ್ಟುಕೊಂಡು ಗೀತಾಬೋಧನೆಗೆ ಸ್ಕೆಚ್ ಹಾಕಿದ. ವಿದ್ಯಾ ಕೇಂದ್ರದೊಳಗೆ ನುಸುಳಲು ಅವಕಾಶ ಸಿಗದಿದ್ದಾಗ ಶಾಲೆ-ಕಾಲೇಜಿನ ಹತ್ತಿರದ ದೇವಸ್ಥಾನ ಅಥವಾ ಸಭಾಮಂಟಪಗಳಲ್ಲಿ ಭಗವದ್ಗೀತೆ ಪ್ರಸಾರ ಮಾಡುವ ಉಪನ್ಯಾಸ ಏರ್ಪಡಿಸಿದ; ಹವ್ಯಕರ ಅಡಿಕೆ ತೋಟ-ಸಾಮಾಜಿಕ ಅಸ್ತಿತ್ವಕ್ಕೆ ಸಂಚಕಾರ ತರುವ ಸರ್ಕಾರಿ ಯೋಜನೆಗಳ ವಿರುದ್ಧವಷ್ಟೇ 'ಪರಿಸರ ವಾದಿ' ಮುಖವಾಡ ಹಾಕಿಕೊಂಡು ಹೋರಾಟಕ್ಕೆ ಇಳಿದ ಹುಕ್ಕಿಯ ಗಂಗಾಧರ ಹಿಂದೂಗಳು ಹೆಚ್ಚೆಚ್ಚು ಹುಡುಗರ ಹಡೆಯಬೇಕೆಂದು ಅಪ್ಪಣೆ ಕೊಡಿಸುವ ಪ್ರವಚನ ಮಾಡಲಾರಂಭಿಸಿದ. ಒಟ್ಟಿನಲ್ಲಿ ಎದುರಾಳಿ ಮಠಾಧಿಪತಿ ರಾಘವನಿಗಿಂತ ಹೆಚ್ಚು ಚಾಲ್ತಿಯಲ್ಲಿರಬೇಕೆಂಬ ಹಠ ಈ ಸರ್ವಸಂಗ ಪರಿತ್ಯಾಗಿಗೆ!!

ಈ 'ಧರ್ಮಸೂಕ್ಷ್ಮ' ಅರ್ಥಮಾಡಿಕೊಂಡ ಚಾಲಾಕಿ ರಾಘವ 'ರಾಮ ಕಥಾ'ದ ಅರ್ಭಟ ಜೋರು ಮಾಡಿಕೊಂಡು ಬಿಟ್ಟ! ಇದಕ್ಕೆ ಪ್ರತಿಯಾಗಿ ಗಂಗಾಧರನ 'ಗೀತಾ ಅಭಿಯಾನ'ದ ಗಲಾಟೆಗೂ ಬಿರುಸು ಬಂತು. ದುರಂತವೆಂದರೆ ಈ ಬ್ರಾಹ್ಮಣವಾದಿ ಮಠಾಧೀಶರ ರಾಮ ಕಥಾ V/s ಗೀತಾ ಅಭಿಯಾನ ಗುದ್ದಾಟದ ಅಡ್ಡ ಪರಿಣಾಮ ಅಮಾಯಕ ಅಬ್ರಾಹ್ಮಣರ ಮೇಲಾಗುತ್ತಿದೆ. ನೃತ್ಯೋನ್ಮಾದಕ್ಕೆ ಪ್ರಚೋದಿಸುವ ರಾಘವನ ರಾಮ ಕಥಾ ಮತ್ತು ವಿದ್ಯಾರ್ಥಿಗಳಲ್ಲಿ ಕೃಷ್ಣ ಲೀಲೆ ಬೆಳೆಸುವ ಗಂಗಾಧರನ ಗೀತಾ ಅಭಿಯಾನ ಶೂದ್ರ ಸಂಕುಲಕ್ಕೆ ಮಾರಕವಾಗಿ ಪರಿಣಮಿಸಿದೆ. ಈ ಎರಡೂ ಶತ್ರು ಸ್ವಾಮಿಗಳ ಮೇಲಾಟದ ಕತೆ-ಗೀತೆಯಿಂದ ಅಂತಿಮವಾಗಿ ಹಿಂದೂ ದೇವರು-ಧರ್ಮ ಮತ್ತದರ ಧರ್ಮಗ್ರಂಥಗಳಾದ ರಾಮಾಯಣ-ಭಗವದ್ಗೀತೆ ಮಾತ್ರ ಸರ್ವ ಶ್ರೇಷ್ಠ ಅದರ ವಾರಸುದಾರರಾದ ಬ್ರಾಹ್ಮಣರಷ್ಟೇ ಪರಮ ಪೂಜ್ಯರು-ಪವಿತ್ರರೆಂಬ ಮನುವಾದಿ ಸಂದೇಶ ಹೊರಬರುತ್ತಿದೆ; ಶೂದ್ರರು-ಕ್ರಿಸ್ತರು-ಸಾಬರೆಲ್ಲ ನಿಕೃಷ್ಟರೆಂಬ ವಿಭಜಕ ಧರ್ಮಸಾರ ಪ್ರಸಾರ ಮಾಡುತ್ತಿದೆ!

ಈಗ ರಾಮಚಂದ್ರಾಪುರ ಮಠಾಧೀಶ ಕತೆ ಹೇಳುವ 'ವರಸೆ' ಒಂಚೂರು ಬದಲಿಸಿಕೊಂಡಿದ್ದಾನೆ. ಆತ ರಾಮ ಕತೆ ನಿಲ್ಲಿಸಿ ಗೋಕತೆ ಆರಂಭಿಸಿದ್ದಾನೆ. ಇತ್ತ ಸ್ವರ್ಣವಲ್ಲಿ ಮಠಪತಿ ಭಗವದ್ಗೀತೆಯ 13ನೇ ಅಧ್ಯಾಯ ಆರಿಸಿಕೊಂಡು ಶಾಲೆ-ಕಾಲೇಜು-ಮಂದಿರ-ಸಭಾಭವನಗಳಲ್ಲಿ ಶ್ಲೋಕ ಪಠಣ ಮಾಡಿಸುತ್ತಿದ್ದಾನೆ. ಉತ್ತರ ಕನ್ನಡದ ಎಲ್ಲಾ 11 ತಾಲ್ಲೂಕುಗಳಲ್ಲಿ ಬರೋಬ್ಬರಿ 948 ಶ್ಲೋಕ ಪಠಣ ಕೇಂದ್ರಗಳನ್ನು ಸ್ವರ್ಣವಲ್ಲಿ ಸಂಸ್ಥಾನದ ಅನುಯಾಯಿಗಳು ತೆರೆದು ಕೂತಿದ್ದಾರೆ. ಈವರೆಗೆ ಒಟ್ಟು 508 ಉಪನ್ಯಾಸಗಳನ್ನು ಗೀತೆಯ ಗತ್ತಿನ ಮೇಲೆ ನಡೆಸಲಾಗಿದೆ. ಸ್ವರ್ಣವಲ್ಲಿ ಮಠಾಧೀಶರ ಒಳ ಉದ್ದೇಶ ಅರ್ಥಮಾಡಿಕೊಂಡಿರುವ 'ಪಂಡಿತೋತ್ತಮ'ರನ್ನೇ ಉಪನ್ಯಾಸಕಾರರಾಗಿ ನೇಮಿಸಲಾಗಿದೆ. ಇವರೆಲ್ಲ ಭಗವದ್ಗೀತೆಯನ್ನು ಉಳಿದ ಧರ್ಮ ಗ್ರಂಥದ ಜತೆ ತುಲನೆ ಮಾಡಿ ಪ್ರವಚನ ಬಿಗಿಯುತ್ತಿದ್ದಾರೆ. ಉಳಿದೆಲ್ಲ ಧರ್ಮ ಗ್ರಂಥಗಳು ಜೊಳ್ಳು- ಗೀತೆ ಮಾತ್ರ ಗಟ್ಟಿ ಎಂದು ಸುಳ್ಳುಗಳನ್ನು ಎಳೆಯ ಮಕ್ಕಳಲ್ಲಿ ಬಿತ್ತುತ್ತಿದ್ದಾರೆ. ಸಾಕ್ಷಾತ್ ಸ್ವರ್ಣವಲ್ಲಿ ಸ್ವಾಮಿಯೇ ಶಾಲೆ-ಕಾಲೇಜು ಅಥವಾ ಶ್ಲೋಕ ಪಠಣ ಅಡ್ಡೆಗಳಿಗೆ ಹೋಗಿ ಗೀತೆ ಓದಿದರೆ ಆರೋಗ್ಯ ಕೆಡುವುದಿಲ್ಲ; ಸಕ್ಕರೆ ಕಾಯಿಲೆ ನಿಯಂತ್ರಣವಾಗುತ್ತದೆ-ಎಂದೆಲ್ಲ 'ಗೀತಾರೋಗ್ಯ' ಬೋಧಿಸುತ್ತಿದ್ದಾರೆ. ಪ್ರತ್ಯಕ್ಷವಾಗಿ ಸ್ವಾಮಿ ಮತ್ತವನ ಉಪನ್ಯಾಸಕರು ಭಗವದ್ಗೀತೆಯನ್ನು ಹೊಗಳುತ್ತ-ಗೌರವಿಸುತ್ತ ಇತರ ಧರ್ಮಗ್ರಂಥಗಳನ್ನು ಪರೋಕ್ಷವಾಗಿ ತೆಗಳುತ್ತಿದ್ದಾರೆ; ಗೀತೆಯ ಪಾವಿತ್ರ್ಯ-ಮಹತ್ವ ಹೇಳುವಾಗ ಬೇರೆ ಧರ್ಮಗ್ರಂಥಗಳು ಅಪವಿತ್ರ-ಕನಿಷ್ಠ ಎಂಬ ಭಾವನೆ ಕೇಳುಗರಲ್ಲಿ -ವಿದ್ಯಾರ್ಥಿಗಳಲ್ಲಿ ಮೂಡುವಂತೆ ಕುತಂತ್ರ ಮಾಡುತ್ತಿದ್ದಾರೆ. ಬ್ರಾಹ್ಮಣಿಕೆ ಹಿಕಮತ್ತು ಎಲ್ಲ ಉಪನ್ಯಾಸ ಕೇಂದ್ರಗಳಲ್ಲಿ ಅಂತರ್ಗಾಮಿಯಾಗಿ ನಡೆದಿದೆ!



ಸ್ವರ್ಣವಲ್ಲಿ ಸ್ವಾಮಿಯ ಗೀತಾ ಗಲಾಟೆಯ ಹೈಲೈಟ್ ಎಂದರೆ, ಎಲ್ಲ ಜಾತಿ-ಧರ್ಮದ ವಿದ್ಯಾರ್ಥಿಗಳಿರುವ ಶಾಲೆ-ಕಾಲೇಜಿನಲ್ಲಿ ಹಿಂದೂ ಧರ್ಮದ ಗೀತಾ ಬೋಧೆ ಮಾಡಿ ಅಮಾಯಕ ವಿದ್ಯಾರ್ಥಿಗಳನ್ನು ದಿಕ್ಕೆಡಿಸುತ್ತಿರುವುದಾಗಿದೆ! ಸರ್ಕಾರಿ ಶಾಲೆ-ಕಾಲೇಜಿಗೂ ಸ್ವರ್ಣವಲ್ಲಿ ಸ್ವಾಮಿ ಗ್ಯಾಂಗ್ ಲಗ್ಗೆ ಇಟ್ಟಿದೆ. ಇಲ್ಲಿರುವ ಉಪನ್ಯಾಸಕರು ಶೂದ್ರ ವಿದ್ಯಾರ್ಥಿಗಳ ಮನಸ್ಸನ್ನು ಮಲಿನ ಮಾಡುತ್ತಿದ್ದಾರೆ. ಜತೆಗೆ ಒಂದೂ ಓತರ ವಿದ್ಯಾರ್ಥಿಗಳನ್ನು ... ಮುಗ್ಧ ಹೃದಯಗಳನ್ನು ಘಾಸಿಗೊಳಿಸುತ್ತಿದ್ದಾರೆ. ಪ್ರತ್ಯೇಕತಾ ಭಾವನೆ ಹಿಂದೂ ಮತ್ತು ಹಿಂದೂಯೇತರ ವಿದ್ಯಾರ್ಥಿಗಳಲ್ಲಿ ತುಂಬ ನಾಜೂಕಾಗಿ ಬಿತ್ತಲಾಗುತ್ತಿದೆ. ಶಿಕ್ಷಣ ಇಲಾಖೆಯ ಡಿಡಿಪಿಐಗಳಿಗೆ ಇದು ಗೊತ್ತಿಲ್ಲವಾ? ಶಿಕ್ಷಣ ಮಂತ್ರಿ ಕಿಮ್ಮನೆ ರತ್ನಾಕರ್ ಇನ್ನೂ ಸುಮ್ಮನಿರುವುದು ಸರಿಯಲ್ಲ.

ಯಾವ್ಯಾವ ಸರ್ಕಾರಿ ಅಥವಾ ಖಾಸಗಿ ಶಾಲೆಗಳಲ್ಲಿ ಗೀತಾ ಗಾಂಚಾಲಿಗೆ ಅವಕಾಶವಾಗಿಲ್ಲವೋ ಅಂಥ ಶಾಲೆ-ಕಾಲೇಜುಗಳ ಹತ್ತಿರದಲ್ಲೇ ಗೀತಾಪಠಣ-ಉಪನ್ಯಾಸ ಸೆಂಟರ್ ಆರಂಭಿಸಿ ವಿದ್ಯಾರ್ಥಿಗಳನ್ನು ಎಳೆದೊಯ್ಯಲಾಗಿದೆ ಎಂಬ ಕೂಗೂ ಎದ್ದಿದೆ. ಸ್ಥಳೀಯ ಪ್ರಭಾವಿ ಮುಖಂಡರ ಮೂಲಕ ಶಿಕ್ಷಕರ ಮೇಲೆ-ವಿದ್ಯಾರ್ಥಿಗಳ ಮೇಲೆ ಒತ್ತಡ ಹಾಕಿ 'ಗೀತಾ ಸೆಂಟರ್'ಗೆ ಹೋಗುವಂತೆ ಮಠ ಮಾಫಿಯಾ ಮಾಡಿದೆ. ಸರ್ಕಾರದಿಂದ ಅನುದಾನ ಪಡೆಯದ ಹಿಂದೂವಾದಿಗಳ ಯಜಮಾನಿಕೆಯ ಶಾಲೆಗಳಲ್ಲಂತೂ ಗೀತಾ ಅಭಿಯಾನದ ಅಬ್ಬರ ಪಾರಗಟ್ಟಲೆ ಮೊಳಗಿದೆ. ಸರ್ಕಾರ ಅನುದಾನ ಪಡೆಯುವ ಶಾಲೆಗಳ ವಿದ್ಯಾರ್ಥಿಗಳನ್ನು ವೇದಿಕೆ ನಿರ್ಮಾಣ ಮುಂತಾದ ಚಾಕರಿಗೆ ಬಳಸಿ 'ಜನಿವಾರ ದೀಕ್ಷೆ'ಗೆ ಮಾನಸಿಕ ಸಿದ್ಧತೆ ಮಾಡಲಾಗಿದೆ. ಹಿಂದುತ್ವದ ಉಪನ್ಯಾಸ ಆಲಿಸಿದ ಹಿಂದೂಯೇತರ ವಿದ್ಯಾರ್ಥಿಗಳ ಧರ್ಮಸಂಕಟ ಹೇಳತೀರದು; ಬ್ರಾಹ್ಮಣಿಕೆ ತಾರೀಫು ಮಾಡುವ ಈ ಗೀತಾ ಅಭಿಯಾನ ಶೂದ್ರ ವಿದ್ಯಾರ್ಥಿಗಳಲ್ಲಿ- ಅಬ್ರಾಹ್ಮಣ ಉಪನ್ಯಾಸ ಕೇಳುಗರಲ್ಲಿ ಒಂದೋ ಕೀಳರಿಮೆ ಹುಟ್ಟಿಸಿದೆ; ಅಥವಾ ಅನ್ಯ ಧರ್ಮದ ಮೇಲೆ ಅಸಹ್ಯ-ಆಕ್ರೋಶ ಬರುವಂತೆ ಮಾಡಿದೆ.

ಈ ಸ್ವರ್ಣವಲ್ಲಿ ಸ್ವಾಮಿ ಕೃಪಾಪೋಷಿತ ಗೀತಾ ಗಲಾಟೆ ಅಭಿಯಾನ ಪ್ರಸಂಗದಲ್ಲೊಂದು ತಮಾಷೆಯಿದೆ. ಧರ್ಮಾತೀತರು, ಜಾತ್ಯತೀತರು, ಮೂಢನಂಬಿಕೆ ಪ್ರತಿಬಂಧಕ ಕಾನೂನು ತರಲು ಹೊರಟವರೆಂದು ತಮಗೆ ತಾವೇ ತಾರೀಫು ಮಾಡಿಕೊಳ್ಳುವ ಕಾಂಗ್ರೆಸ್‌ನ ಜಿಲ್ಲಾ ಮಟ್ಟದ ಮುಂಚೂಣಿ ನಾಯಕರೇ ಮತಾಂಧ ಗೀತಾ ಅಭಿಯಾನದ ಮುಂಚೂಣಿಯಲ್ಲಿದ್ದಾರೆ. ಯಲ್ಲಾಪುರ ಮತ್ತಿತರೆಡೆ ಗೀತಾ ಅಭಿಯಾನದ ಪ್ರಚಾರವನ್ನು ಕಾಂಗ್ರೆಸ್ ಕಿಂಗ್‌ಗಳೇ ಮಾಡುತ್ತಿದ್ದಾರೆ. ಯಲ್ಲಾಪುರದ ಶಾಸಕ ಶಿವರಾಮ ಹೆಬ್ಬಾರ್, ನಿಗಮ-ಮಂಡಳಿ ಗೂಟದ ಕಾರಿಗೆ ಹಪಹಪಿಸುತ್ತಿರುವ ಮಾಜಿ ಡಿಸಿಸಿ ಅಧ್ಯಕ್ಷ-ಹಾಲಿ ಕೆಡಿಸಿಸಿ ಬ್ಯಾಂಕ್ ಪ್ರೆಸಿಡೇಂಟ್ ಶಾಂತಾರಾಮ ಹೆಗಡೆ ಎಂಬ ಜಿಲ್ಲಾ ಕಾಂಗ್ರೆಸ್ ವಕ್ತಾರ... ವಗೈರೆಗಳು ಚೆಡ್ಡಿ-ಬಿಜೆಪಿಗಳು ನಾಚುವಂತೆ ಸ್ವರ್ಣವಲ್ಲಿ ಸ್ವಾಮಿಯ ಗೀತೆಗೆ ತಾಳ ಹಾಕುತ್ತಿದ್ದಾರೆ.

ಇಡೀ ಗೀತಾ ಗಲಾಟೆ ಅಭಿಯಾನದಲ್ಲಿ ಒಂದು ಮಹತ್ವದ ಜಿಜ್ಞಾಸೆ ಎದ್ದಿದೆ. ಅದೆಂದರೆ, ಈ ಗೀತಾ ಅಭಿಯಾನ ಕುರಾನ್, ಬೈಬಲ್ ಬೆಂಬಲಿಗರನ್ನು ಅವರವರ ಧರ್ಮ ಗ್ರಂಥ ಅಭಿಯಾನಕ್ಕೆ ಪ್ರಚೋದಿಸಿದರೆ ಗತಿಯೇನು? ಧರ್ಮ ಸಂಘರ್ಷವಾಗದಾ? ಗೀತಾ ಅಭಿಯಾನದ ಅಧ್ವರ್ಯುಗಳು ತಮ್ಮ ಗೀತೆಗೆ ಜಾಗತಿಕ ಮನ್ನಣೆ ದೊರೆತಿದೆ ಎನ್ನುತ್ತಿದ್ದಾರೆ. ಹಾಗಿದ್ದರೆ ಅದಕ್ಕಿಂತಲೂ ಹೆಚ್ಚು ಜಾಗತಿಕ ಗೌರವ-ಮಹತ್ವ ಗಳಿಸಿರುವ ಕ್ರಿಶ್ಚಿಯನ್, ಮುಸ್ಲಿಮ್ ಧರ್ಮಗ್ರಂಥಗಳ ಪ್ರಸಾರಕ್ಕೆ ಆದ್ಯತೆ ನೀಡಬೇಡವಾ? ಶಾಲೆ-ಕಾಲೇಜಲ್ಲಿ ಈ ಧರ್ಮಗಳ ಹೆಗ್ಗಳಿಕೆ ಹೇಳಲು ಅವಕಾಶ ಕೊಟ್ಟರೆ ಸ್ವರ್ಣವಲ್ಲಿ ಸ್ವಾಮಿಯ ಚೆಡ್ಡಿ ಬುದ್ಧಿ ಸುಮ್ಮನಿರುತ್ತದಾ? ಆತನ ಹಿಂದಿರುವ ಬೆಂಕಿನವಾಬ 'ಕ್ಯಾತಿ'ಯ ಖತರ್‌ನಾಕ್ ಹಿಂದೂವಾದಿ ಸಂಸದ ಅನಂತ್ಕುಮಾರ್, ಕಾಗೇರಿ ಮಾಣಿ ವಗೈರೆಗಳು ಮತ್ತವರ ಕಟಿಬೈಸ್ತ ಸಹಿಸಿಕೊಂಡೀತಾ?

ಇಂಥ 'ಧರ್ಮ ಸೂಕ್ಷ್ಮ'ದ ಪ್ರಶ್ನೆಗಳೆಲ್ಲ ಜಿಲ್ಲಾಡಳಿತಕ್ಕೆ ಅರ್ಥವಾದೀತಾ? ಉತ್ತರ ಕನ್ನಡದ ನೆಮ್ಮದಿ ಕೆಡುವ ಮೊದಲೇ ಸಿದ್ದು ಸರ್ಕಾರ ಸ್ವರ್ಣವಲ್ಲಿ ಸ್ವಾಮಿ ಜನವಾರಕ್ಕೆ ಅಂಕುಶ ಇಟ್ಟೀತಾ? ಪ್ರಮೋದ್ ಹೆಗಡೆ, ಶಾಂತಾರಾಮ ಹೆಗಡೆ ಮುಂತಾದ ಸಮಯಸಾಧಕ ಜನಿವಾರವಾದಿ ಕಾಂಗಿಗಳಿಗೆ ಬುದ್ಧಿ ಕಲಿಸೀತಾ?!

■ ನಮುಹ

ನಾ.ಡಿಸೋಜ ಸಂದರ್ಶನ

02 ◀◀

20-30 ಮೈಲಿಯಿಂದಾಚೆಯ ಹೊಸೂರು ಕಾಲೋನಿಗೆ ರವಾನೆಯಾಗಬೇಕಾದಾಗ ಜನ ವುುಂಚಿತವಾಗಿ ದನಕರುಗಳನ್ನು ಓಡಿಸಿ ಮಿಕ್ಕ ವಸ್ತುಗಳನ್ನು ಲಾರಿ ಮೇಲೆ ಹೇರ್ಕೊಂಡು ಹೊರಟರು. 3-4 ದಿನಗಳಾಗ್ತಾ ಇದ್ದ ಹಾಗೆ ಓಡಿಸಿಕೊಂಡು ಹೋಗಿದ್ದ ದನಕರುಗಳೆಲ್ಲ ಹತಾಶೆಗೊಂಡಂತೆ ಮತ್ತೆ ಓಡೋಡಿ ತಮ್ಮ ಮುಂಚಿನ ಸ್ಥಳಕ್ಕೇ ವಾಪಸ್ಸಾಗಿ ಗೋಳಿಡಲು ಆರಂಭಿಸಿದವು. ಮೂಕಪ್ರಾಣಿಗಳಿಗೂ ಸ್ಥಳದ ಮೇಲಿರುವ ಅಟ್ಯಾಚ್‌ಮೆಂಟ್ ನೋಡಿ. ಮುಳುಗಡೆಯಲ್ಲಿ ಮನೆಮಾರು ಕಳ್ಕೊಂಡವರಿಗೆ ಸರ್ಕಾರ ಲಕ್ಷಾಂತರ ರೂಪಾಯಿ ಕೊಡ್ತು. ಆದರೆ ಜನ ಬೇರೆ ಬೇರೆ ರೀತೀಲಿ ಹಣಾನ ಕಳ್ಕೊಂಡರು. ನಿರ್ಗತಿಕರಾದರು. ನನ್ನ ಮನಸ್ಸು ಅಣೆಕಟ್ಟು ನಿರ್ಮಾಣದಿಂದಾಗಬಹುದಾದ ಪ್ರಗತಿಯ ಕಡೆ ಜಗ್ಗಲಿಲ್ಲ, ಜನರ ನೋವಿನ ಬಗ್ಗೆ ಪ್ರಾಣಿಗಳ ಸೆಂಟಿಮೆಂಟ್ ಬಗ್ಗೆ ಯೋಚಿಸಿತು. 'ಮುಳುಗಡೆ' ಕಾದಂಬರಿಯನ್ನು ಬರೆದು ನನ್ನ ಮನಸ್ಸಿನ ಧಾವಂತ, ಅಲ್ಲೋಲಕಲ್ಲೋಲವನ್ನು ಓದುಗರೊಂದಿಗೆ ಹಂಚಿಕೊಂಡೆ. ಕಾಳಿ ಪ್ರಾಜೆಕ್ಟ್ ಆದಾಗಲೂ ಇಂಥದ್ದೇ ಆಯಿತು. ನನ್ನನ್ನು ಪ್ರಗತಿ ವಿರೋಧಿ ಅಂತ ಕರೀಬಹುದು. ಆದರೆ ಉತ್ತರ ಹೇಳೋದು ನನ್ನ ಕೆಲಸ ಅಲ್ಲ. ನಮ್ಮಲ್ಲಿ ಬದುಕನ್ನು ಚಿತ್ರಿಸಲು ಸಾಕಷ್ಟು ಸಾಮಗ್ರಿ ಇದೆ. ಜನಾಂಗದ ಬದುಕು ನನಗೆ ತುಂಬಾ ಪ್ರಿಯವಾದ್ದು. ನನ್ನ 'ಕಡಲು ಕಾಯುವುದಿಲ್ಲ' ಮೀನುಗಾರರನ್ನು ಕುರಿತದ್ದು. 'ಮಂಜಿನ ಕಾನು', 'ಕುಂಜಾಲ ಕಣಿವೆಯ ಕೆಂಪು ಹೂವು' ಇವನ್ನು ಬರೆಯೋಕ್ಕೆ ಮುಂಚಿ ಸಾಕಷ್ಟು ಸ್ಟಡಿ ಮಾಡಿದೆ.

* ನೀವು 'ಗುಣವಂತೆ' ಧಾರಾವಾಹಿಯನ್ನು ಓದುಗರ ಅಭಿಪ್ರಾಯವನ್ನು ಆಧರಿಸಿ ಬರೆದಿರಿ. ಯಾವುದೋ ಒಂದು ನಿರ್ದಿಷ್ಟ ನಿಲುವನ್ನು ಇಟ್ಟುಕೊಂಡು ಬರೆಯೋ ಕಾದಂಬರಿಕಾರ ಇಂಥ ಗಿಮಿಕ್ಸ್‌ನ್ನು ಪ್ರದರ್ಶಿಸಬಾರದಲ್ವಾ?

ನನ್ನ ಮೂಲಭೂತ ಸ್ವಭಾವಕ್ಕೆ ಈ ಪ್ರಯೋಗ ಸರಿಹೊಂದಲಿಲ್ಲ ಅನ್ನೋದು ನಿಜ. ಸಾಮಾನ್ಯವಾಗಿ ನಾನು ಒಂದು ನಾಲ್ಕು ಲೈನು ಬರೆದಿಟ್ಟು ಮತ್ತೆ ಎಂದೋ ಅದರ ಕಡೆ ನೋಡ್ತೀನಿ. ಕ್ರಮೇಣ 5-6-7 ಹೀಗೆ ಪುಟಗಳು ಹೆಚ್ಚುತ್ತಾ ಹೋಗುತ್ತವೆ. ಪಾತ್ರಗಳು, ಸನ್ನಿವೇಶಗಳು ತಾವಾಗೇ ಬರುತ್ತವೆ. ಆದರ್ಶಗಳ ಬಗ್ಗೆ, ಅಂತ್ಯದ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳದೆ ಇದ್ರೂ ಪರಿಸರದ ನಾಶ ನನ್ನನ್ನು ಸದಾ ಕಂಗೆಡಿಸುತ್ತದೆ. ನನ್ನ ಅಭಿಪ್ರಾಯ, ದೃಷ್ಟಿಕೋನ ಬದಲಾಗಬಾರದು. ಹಸ್ತಪ್ರತಿ ಸಿದ್ಧವಾದ ನಂತರವೂ ಅದನ್ನು ಏಳೆಂಟು ಬಾರಿ ಓದ್ತೀನಿ. ಕೆಲವು ಪುಟಗಳನ್ನು ರೀರೈಟ್ ಮಾಡ್ತೀನಿ. ಆದರೆ 'ಗುಣವಂತೆ' ಬರೆದಾಗ ಇಂಥವನ್ನೆಲ್ಲ ಮಾಡಲಾಗಲಿಲ್ಲ, ಕರ್ನಾಟಕದ ಅನೇಕ ಓದುಗರಿಂದ ಸಲಹೆಗಳು ಬಂದವು. ಗುಣವಂತೇನ ಮುಳುಗಿಸಬೇಡಿ ಅಂತ ಕೋರಿಕೊಂಡು. ನಾನು ಈ ಕೃತೀನ ಒಂದು ಚಾಲೆಂಜ್ ಅಂತಲೇ ಬರೆದೆ. ನನ್ನ ಕಾದಂಬರಿ 'ಕಾಡಿನ ಬೆಂಕಿ' ಸಿನಿಮಾ ಆಗಿದ್ದರೂ, ಸಿನಿಮಾಕ್ಕೆ ಬರೆಯೋದು ಕೂಡ ಒಳ್ಳೆಯದು ಅಂತ ನನಗನ್ನಿಸಿಲ್ಲ, ಸಿನಿಮಾದಲ್ಲಿ ಹೀರೋಯಿನ್ ಸಾಯಬಾರದು, ಪರಿಹಾರವೇ ಇಲ್ಲ ಅನ್ನೋದು ಅಪಾಯ ಅಂದರು. ಅಂತ್ಯವನ್ನು ಬದಲಾಯಿಸಬೇಕಾಯಿತು. ನನ್ನ ದೃಷ್ಟಿಯಲ್ಲಿ ಯಾವುದೇ ಬರವಣಿಗೆ ದೌರ್ಬಲ್ಯಗಳನ್ನು, ಮೂಢನಂಬಿಕೆಗಳನ್ನು ವೈಭವೀಕರಿಸಕೂಡದು. ಓದುಗರನ್ನು ಅಳಿಸಲಿಕ್ಕಾಗಿಯೇ ಮೆಲೊಡ್ರಾಮ ಇರಕೂಡದು. ಓದುಗರ ಅನುಭವ ಜಾಸ್ತಿಯಾಗಬೇಕು.

* ಡಿಸೋಜ ಅವರೇ, ನೀವು ನಮ್ಮ ನಾಡಿನ ಹೆಸರಾಂತ ಪತ್ರಿಕೆಗಳಿಗೆ ಸತತವಾಗಿ ಬರೆಯುತ್ತ ಹೆಸರು ಮಾಡುತ್ತಿರುವವರು. 29 ಕಾದಂಬರಿಗಳು, 11 ಕಿರು ಕಾದಂಬರಿಗಳು, 3 ಐತಿಹಾಸಿಕ ಕಾದಂಬರಿ, 1 ಜಾನಪದ ಕೃತಿ, 6 ಕಥಾಸಂಕಲನ, 12 ನಾಟಕಗಳು, ಹತ್ತಾರು ಮಕ್ಕಳ ಪುಸ್ತಕಗಳು ಇವನ್ನೆಲ್ಲ ಹೊರತಂದವರು. ಕೃತಿ ರಚನೆಯಲ್ಲೇ ಮುಳುಗಿಹೋಗಿರೋ ನಿಮಗೆ ಸುತ್ತಲಿನ ಸಾಹಿತ್ಯ ಪರಿಸರವನ್ನು ಗಮನಿಸೋಕ್ಕೆ ವ್ಯವಧಾನವಿದೆಯೇ?


ಯಾಕಿಲ್ಲ? ಕನ್ನಡದಲ್ಲಿ ಎಷ್ಟೇ ಕೃತಿ ರಚನೆ ನಡೆದಿದ್ದರೂ ನನಗೆ ಮಲೆಯಾಳಿ ಕಾದಂಬರಿಗಳು ನಮ್ಮವಕ್ಕಿಂತ ಮೇಲಿದೆ ಅಂತ ಅನ್ನಿಸದೇ ಇಲ್ಲ, ತಮಿಳು, ತೆಲುಗು ಕೃತಿಗಳು ನಂಗೆ ಅಷ್ಟಾಗಿ ಹಿಡಿಸಿಲ್ಲ, ಆದರೆ ಕನ್ನಡದ ಕಥಾಪ್ರಪಂಚ ಕ..ಮೆ ಅಂತೇನಿಲ್ಲ, ಮಾಸ್ತಿಯವರಂಥ ವ್ಯಕ್ತಿತ್ವ ತುಂಬಾನೇ ದೊ.. ಶಿವರಾಮ ಕಾರಂತ, ಲಂಕೇಶ್, ಅನಂತಮೂರ್ತಿ, ತೇಜಸ್ವಿ ಮಹಾದೇವ ಇವರೆಲ್ಲ ತುಂಬಾ ಶ್ರೇಷ್ಠರು. ನಮಗೆ ಅಧ್ಯಯನಕ್ಕೆ, ಜೀವನಗ್ರಹಿಕೆಗೆ, ಭಾಷೆ ಶೈಲಿ ರೂಢಿಸಿಕೊಳ್ಳೋಕೆ ಸಾಕಷ್ಟು ಅವಕಾಶಗಳಿವೆ. ಮಿಕ್ಕ ಕೆಲವು ಲೇಖಕರನ್ನು ನೋಡಿದಾಗ ಅವರು ಬೇಗ ಎಕ್ಸಾಸ್ಟ್ ಆಗಿಬಿಡ್ತಿದಾರೆ ಅನ್ನಿಸುತ್ತೆ, ಕಂಡರಿಯದ ಪ್ರದೇಶಾನ ಕೃತಿಗಳಿಗಾಗಿ ಆಯ್ದುಕೋತಾರೆ. ನಮ್ಮ ಲೇಖಕರು ಯಾವುದೇ ಇಜಂಗಳನ್ನು ಬೆಳೆಸಿಕೊಳ್ಳದೆ ನಿರಾಳವಾಗಿ ಬರೆಯಬೇಕು.

ನಾನೆಲ್ಲ ಓದಿದೀನಿ, ನಾನು ಬರೆದದ್ದೆಲ್ಲ ಶ್ರೇಷ್ಠ ಅಂದ್ಕೊಂಡಾಗ ಗುಂಪುಗಾರಿಕೆ ಬೆಳೆಯುತ್ತೆ. ಒಂದು ಗುಂಪು ಮತ್ತೊಂದನ್ನು ಕನಿಷ್ಠವಾಗಿ ಕಾಣುತ್ತೆ. ಕನ್ನಡ ಸಾಹಿತ್ಯಕ್ಕಿರೋ ಒಳ್ಳೇ ಭವಿಷ್ಯ ಇಂಥದ್ದರಿಂದ ಹಾಳಾಗಬಾರದು.

* ತಾರುಣ್ಯದಲ್ಲೇ ನೀವು ಧರ್ಮದ ಸೀಮಿತ ಚೌಕಟ್ಟಿನಲ್ಲಿದ್ದಾಗ ನಿಮಗುಂಟಾದ ಕಸಿವಿಸಿಯನ್ನು ತೋಡಿಕೊಂಡೆ ಅಂತ ಸಂದರ್ಶನದ ಶುರುವಿನಲ್ಲೇ ಹೇಳಿದಿರಿ. ಸಾಮಾನ್ಯವಾಗಿ ವ್ಯಕ್ತಿಗೆ ವಯಸ್ಸಾಗ್ತಾ ಹೋದಹಾಗೆ ಧರ್ಮ, ಶ್ರದ್ಧೆ ಇಂಥವುಗಳ ಬಗ್ಗೆ ಮೃದುವಾಗ್ತಾ ಹೋಗ್ತಾನೆ. ಅವನ ಮನಸ್ಸು ಎಲ್ಲವರೊಂದಿಗೂ ರಾಜಿ ಮಾಡ್ಕೋತಾ ಹೋಗುತ್ತೆ. ಅದೂ ಸಂಸಾರಸ್ಥನಾಗಿ, ಕಷ್ಟನಷ್ಟಗಳನ್ನು ಕಂಡ ನಂತರ. ನಿಮ್ಮ ವಿಷಯದಲ್ಲಿ ಹೇಗೆ? ಅಂದ್ಹಾಗೆ ನೀವು ಎಲ್ಲಿ, ಹೇಗೆ ಮದುವೆಯಾದ್ರಿ; ನಿಮ್ಮ ಮೂವರು ಮಕ್ಕಳನ್ನು ಯಾವ ರೀತಿ ಬೆಳೆಸಿದಿರಿ?

ನನ್ನ ಬಗ್ಗೆ ಕ್ರಿಶ್ಚಿಯನ್ನರಿಗೆ ಒಂದು ರೀತಿ ಆಶ್ಚರ್ಯ ಇದೆ. ಕೀಳುಭಾವನೇನು ಇರಬಹುದು. ಫಾದರ್ ಬಾಬೂಸಾ ಅನ್ನೋರು ಭರತನಾಟ್ಯ ಮಾಡ್ತಾರೆ. ನಾನು ಕನ್ನಡ ಪರ, ಇಂಗ್ಲಿಷ್‌ನಲ್ಲಿ ಬರೆಯೋದನ್ನು ಬಿಟ್ಟು ಕನ್ನಡದಲ್ಲಿ ಬರೀತೀನಿ ಅಂತ ನನ್ನ ಹಿಂದುಗಡೆ ಮಾತಾಡ್ತಾರೆ. ಭರತನಾಟ್ಯ ಮಾಡೋ ಒಬ್ಬನೇ ಒಬ್ಬ ಬಾಬೂಸಾ ಇರೋ ಹಾಗೆ. ಈಗ ಕನ್ನಡದಲ್ಲಿ ವಿಪುಲವಾಗಿ ಬರೆಯುತ್ತಿರೋ ಕ್ರಿಶ್ಚಿಯನ್ ಪ್ರಾಯಶಃ ನಾನೊಬ್ಬನೇ. ಕ್ರಿಶ್ಚಿಯನ್ನರ ಪ್ರಕಾರ ನಾವು ಇಂಗ್ಲೆಂಡಿಗೆ ಸೇರಿದವರು. ಆದರಲ್ಲೂ ಗೋವಾದಿಂದ ಬಂದ ನಮ್ಮಂಥ ಕೊಂಕಣಿ ಕ್ಯಾತೋಲಿಕರ ಮನೆತನಗಳ ಮೇಲೆ ಇನ್ನೂ ಇಂಗ್ಲಿಷಿನವರ ಪ್ರಭಾವ ಇದೆ. ಅನೇಕ ಮನೆಗಳಲ್ಲಿ ಇನ್ನೂ ಎಡ್ವರ್ಡ್, ಎಲಿಜಬೆತ್, ಜಾರ್ಜ್, ವಿಕ್ಟೋರಿಯಾ ಇವರ ಚಿತ್ರಗಳನ್ನೇ ಗೋಡೆಗೆ ನೇತು ಹಾಕಿದಾರೆ. ಚರ್ಚ್‌ಗಳಲ್ಲಿನ ಮದುವೆಗಳಲ್ಲಿ ಇನ್ನೂ 'ರಿಂಗ್ ಸೆರಮೊನಿ' ನಡೆದೇ ಇದೆ. ಮೂಲ ಜನಾಂಗಗಳ ಮೇಲೆ ಪೋರ್ಚುಗೀಸರ ಪ್ರಭಾವವಿದೆ. ಇತ್ತೀಚಿನವರೆಗೆ ನಮ್ಮವರ ಮದುವೆ ಮನೆಗಳಲ್ಲಿ ಓಲಗ ಊದಿಸಿದರೆ ದಂಡ ತೆರಬೇಕಾಗಿತ್ತು, ರಂಗೋಲಿ ಹಾಕಿದರೆ, ಹಣೆಗೆ ಕುಂಕುಮವಿಟ್ಟರೆ ರಾದ್ಧಾಂತವಾಗ್ತಿತ್ತು.

ಇಂಕ್ವಿಜಿಶನ್-ಅಂದರೆ ಧಾರ್ಮಿಕ ವಿಚಾರಣೆ ಸಂದರ್ಭದಲ್ಲಿ ಗೋವಾದಲ್ಲಿ ಆದ ದುರ್ಘಟನೆ ಗೊತ್ತಿಲ್ಲ ನಿಮಗೆ. ಸಾರ್ವಜನಿಕವಾಗಿ ಕ್ರಿಶ್ಚಿಯನ್ ಕಟ್ಟುಪಾಡುಗಳಿಗೆ ತಲೆಬಾಗಿದರೂ ಮನೆಗಳಲ್ಲಿ ಖಾಸಗಿಯಾಗಿ ಹಿಂದೂ ಸಂಪ್ರದಾಯಗಳನ್ನು ಅಳವಡಿಸಿಕೊಂಡಿದ್ದವರನ್ನು



ಪೋರ್ಚುಗೀಸರು ಹುಡುಕಿ ಹಿಂಸೆ ಕೊಟ್ಟರು. ಕುತ್ತಿಗೆಗಳಿಗೆ ಬೋರ್ಡ್ ತೂಗುಹಾಕಿ ಅಂಥವರನ್ನು ಬಲಿಪಶುಗಳಾಗಿ ಮಾಡಿ ಸುಮಾರು ಐದಾರು ಸಾವಿರ ಜನರನ್ನು ಕೊಂದರು. ಗೋವಾದಲ್ಲಿದ್ದ ನಮ್ಮವರಲ್ಲಿ ಕೆಲವರು ಕರ್ನಾಟಕಕ್ಕೆ- ಅದೂ ಉತ್ತರ ಹಾಗೂ ದಕ್ಷಿಣ ಕನ್ನಡಕ್ಕೆ ಓಡಿಬಂದರು. ಇಕ್ಕೇರಿ ದೊರೆಗಳು ಅವರಿಗೆ ಆಶ್ರಯ ಕೊಟ್ಟು ಪ್ರಾಣ ಕಾಪಾಡಿದರು.

ನನ್ನ ಪ್ರಕಾರ ನಾವೆಲ್ಲೇ ಇದ್ದರೂ ಮೆಯಿನ್ ಕಲ್ಚರ್‌ನ ಅರ್ಥಮಾಡ್ಕೋಬೇಕು. ಚರ್ಚ್‌ಗಳಲ್ಲಿ ನಮ್ಮ ಭಾಷೆ ಬರಬೇಕು. 'ಕನ್ನಡದಲ್ಲಿ ಕರೆದರೆ ಓ ಎನ್ನನೇ ಏಸು' ಅಂತ ನಾನು ಬರೆದೆ. ನಾನೆಂದೂ ಧಾರ್ಮಿಕ ವಿಷಯದಲ್ಲಿ ಮತ್ತೊಬ್ಬರ ಮನಸ್ಸನ್ನು ನೋಯಿಸಿದವನಲ್ಲ.

ನನ್ನದು ನನ್ನಜ್ಜಿ ಮಾಡಿದ ಮದುವೆ. ತಾಯಿಯ ಅಣ್ಣನ ಮಗಳು. ಮದುವೆಯಾಗೋ ರೀತೀನ ಅವಳಿಗೇ ಬಿಟ್ಟೆ. ಮಕ್ಕಳಾದಾಗ ಕ್ರಿಶ್ಚಿಯನ್ ಕ್ಯಾಲೆಂಡರ್ ಪ್ರಕಾರ ಇಂತಿಂಥ ದಿನ ಹುಟ್ಟಿದವರಿಗೆ ಇಂತಿಂಥ ಹೆಸರೇ ಇಡಬೇಕು ಅಂದ್ರು. ಈಗ ಬದಲಾಗಿದೆ. ಕ್ರಿಶ್ಚಿಯನ್ ಹೆಸರುಗಳ ಅರ್ಥವನ್ನೇ ನೀಡುವಂಥ ಕನ್ನಡ ಹೆಸರುಗಳ ಸಣ್ಣದೊಂದು ಬುಕ್‌ಲೆಟ್‌ನೇ ಪ್ರಿಂಟ್ ಮಾಡಿಟ್ಟಿದ್ದಾರೆ. ಆದರೆ ನಾನು 18-20 ವರ್ಷಗಳ ಹಿಂದೆಯೇ ನನ್ನ ಮಕ್ಕಳಿಗೆ ಶೋಭಾ, ನವೀನ, ಸಂತೋಷ್ ಅಂತ ಕನ್ನಡದ ಹೆಸರುಗಳನ್ನಿಟ್ಟೆ. ಈಗ ನಮ್ಮವರ ಅನೇಕ ಮನೆಗಳಲ್ಲಿ ಧೈರ್ಯದಿಂದ ಮದುವೆಯ ದಿನ ಚಪ್ಪರ, ಕಂಬ ಹಾಕ್ತಾರೆ. ತಾಳಿ ಕಟ್ತಾರೆ. ಪಂಚಕನ್ಯೆಯರ ಸಂಕೇತವಾಗಿ ಐದು ಮುತ್ತೈದೆಯರನ್ನು ಕರೀತಾರೆ.

* ಸಾಮೂಹಿಕ ಪ್ರಾರ್ಥನೆಯಿಂದ ಮನಸ್ಸಿಗೆ ಸಂತಸ ದೊರೆಯುತ್ತೆ, ಒಗ್ಗಟ್ಟಿನ ಮನೋಭಾವ ಬೆಳೆಯುತ್ತೆ, ಕ್ರಿಶ್ಚಿಯನ್ನರಲ್ಲಿ ಇರೋ ಈ ಪದ್ಧತಿ ಎಲ್ಲ ಧರ್ಮೀಯರೂ ಅನುಸರಿಸಬೇಕು ಎಂಬುದಾಗಿ ಹಿಂದೊಮ್ಮೆ ಮನಶಾಸ್ತ್ರಜ್ಞರೊಬ್ಬರ ಬಾಯಿಂದ ಕೇಳಿದ್ದೆ. ಇದು ನಿಜಾಂತ ನಿಮಗನ್ನಿಸುತ್ತಾ?

ಸಾಮೂಹಿಕ ಪ್ರಾರ್ಥನೆ ಒಂದು ಸಂಪ್ರದಾಯ. ಅದರಲ್ಲಿ ಒಗ್ಗಟ್ಟಿದೆ ಅಂತ ನಾನು ನಂಬೊಲ್ಲ, ನನಗದು ಭಾವನಾತ್ಮಕವಾಗಿ ಕಾಣಿಸಿಲ್ಲ. ಕ್ರಿಶ್ಚಿಯನ್ನರಲ್ಲಿ ಬಡತನ ಜಾಸ್ತಿ ಕ್ರಿಶ್ಚಿಯನ್ನರು ಸೇವಾಮನೋಭಾವಕ್ಕೆ ಹೆಸರಾಗಿದ್ದರೂ, ಆ ಸೇವೆಯ ಹಿಂದೆ ಮತಾಂತರದ ಭಾವನೆ ಇದ್ದು, ಈ ಉದ್ದೇಶದಿಂದಾಗಿ ಆಯಾ ಪಂಗಡದ ಬಡವರಿಗೆ ಆ ಸೇವೆ ದೊರೆಯದೆ ಬೇರೆ ಪಂಗಡಗಳಿಗೆ ಅದು ದೊರೆಯುವ ಹಾಗಿದ್ದರೆ ನಾನು ಅದನ್ನು ವಿರೋಧಿಸ್ತೀನಿ. ಇಂಥ ಉದ್ದೇಶವಿದ್ದಾಗ ಸೇವೆಗೆ ಸಿಗಬೇಕಾದ ಸ್ಥಾನಮಾನಗಳು ಸಿಗೋಲ್ಲ. ಹಿಂದೆ ಈ ಬಗ್ಗೆ ಒಂದು ಕಥೇನೂ ಬರೆದಿದ್ದೆ. ಯಾವುದೇ ಸಮಸ್ಯೆಗೆ ಪರಿಹಾರವನ್ನು 2000 ವರ್ಷಗಳ ಹಿಂದೆ ಹುಟ್ಟಿದಂಥ ಧರ್ಮದಲ್ಲಿ ಹುಡುಕಬಾರದು. ಕ್ರಿಶ್ಚಿಯನ್ ಕಮ್ಯೂನಿಟೀನ ಈ ದೇಶದಲ್ಲಿ ಸ್ವೀಕರಿಸಿದಾರೆ. ನಂಗೆ ಎಲ್ಲ ಧರ್ಮಗಳ ಬಗ್ಗೆಯೂ ಅಪಾರ ಸಂತೋಷವಿದೆ. ಕ್ರಿಸ್‌ಮಸ್ ಸಂದರ್ಭದಲ್ಲಿ ವಿವಿಧ ಧರ್ಮಗಳಿಗೆ ಸೇರಿದ ಶೇ. 75ರಷ್ಟು ಜನರು ನಾನಿರುವ ಸಾಗರದಲ್ಲಿನ ತಮ್ಮ ಮನೆಗಳಲ್ಲಿ ಮೇಣದಬತ್ತಿ ಹಚ್ಚೋದನ್ನು ಕಂಡಾಗ ಮನಸ್ಸು ತುಂಬಿ ಬರುತ್ತೆ.

* ಮಹಿಳೆಯರನ್ನು ಕುರಿತಂತೆ ನಿಮ್ಮಲ್ಲಿಯೂ ವಿಲಕ್ಷಣವಾದ ಕಟ್ಟಳೆಗಳಿವೆ ಅಲ್ವಾ?


ಹೌದು. ಇಂಥವು ಮಹಿಳೆಯರ ವ್ಯಕ್ತಿತ್ವವನ್ನು ಕುಂದಿಸುವಂಥವು. "ಹೆಂಗುಸರ ಬುದ್ಧಿ ಮೊಳಕಾಲ ಕೆಳಗೆ" ಮುಂತಾದ ಮಾತು ಕೇಳಿದಾಗ ನಂಗೆ ಸಿಟ್ಟು ಬರುತ್ತೆ. ಯಾವುದೇ ಹೆಣ್ಣುಮಗಳು ಅರ್ಧತೆರೆದ ಬಾಗಿಲ ಹಿಂದೆ ನಿಂತ್ಕೊಂಡು ಮಾತಾಡೋದನ್ನು ಕಂಡಾಗ ಅಯ್ಯೋ ಅನ್ನಿಸುತ್ತೆ. ಯಾವ ಕಾರಣಕ್ಕೂ ಗಂಡಿಗಿಂತ ಹೆಣ್ಣು ಕೀಳಲ್ಲ, ಕಡಿಮೆಯಲ್ಲ. ಅವರು ಹಿಂದುಳಿದಿದ್ದರೆ ಅದಕ್ಕೆ ಸಮಾಜದ ಸೆಟ್‌ಅಪ್ ಕಾರಣವಷ್ಟೆ.

* ಮತ್ತೆ ಬರವಣಿಗೆಯತ್ತ... ಈಗೇನು ಬರೀತಿದೀರಿ?

ಕಾಗೋಡು ಸತ್ಯಾಗ್ರಹದ ಬಗ್ಗೆ ಕಾದಂಬರಿ ಬರೀಬೇಕು ಅಂತಿದೆ. 'ಜೇನು ಮನೆ' ಎಂಬ ಮಿನಿ ಕಾದಂಬರಿ ಬರ್ತಿದೆ.

ಬಹಳ ಸಂತೋಷ ಡಿಸೋಜ. ನಿಮಗೆ ಹೊಸವರ್ಷದ ಹಾರ್ದಿಕ ಶುಭಾಶಯಗಳು. ಸಾಧ್ಯವಾದರೆ ಯುಗಾದಿ ಸಂದರ್ಭದಲ್ಲಿ ಮತ್ತೆ ನಿಮಗೆ ಹೊಸ ವರ್ಷದ ಹಾರೈಕೆಯನ್ನು ತಿಳಿಸ್ತೀನಿ. ಬರಲಾ? ■

'ಭಾರತ ರತ್ನ' ವಿಜ್ಞಾನಿ ಪ್ರೊ. ಸಿ.ಎನ್.ಆರ್.ರಾವ್ ಅವರಿಗೆ ಅಭಿನಂದನೆಗಳು



ಸುಮಾರು ಹತ್ತು ವರ್ಷಗಳ ಹಿಂದೆ ಈ ಪ್ರೊ. ಸಿ.ಎನ್.ಆರ್. ರಾವ್ ಅವರನ್ನು ಉಡುಪಿಯ ಅದಮಾರು ಮಠದ ಹಿರಿಯ ಮಠಾಧಿಪತಿ ದಿವಂಗತ ವಿಬುಧೇಶ ತೀರ್ಥರು ತಮ್ಮ ಪರ್ಯಾಯದ ಸಂದರ್ಭದಲ್ಲಿ ಸನ್ಮಾನಿಸಿದ್ದರು. ಆಗ ಅವರ ಬಗ್ಗೆ ನನಗೆ ಅಷ್ಟೇನೂ ಗೌರವ ಉಂಟಾಗಲಿಲ್ಲ, ಮಾತ್ರವಲ್ಲ, ಸಂಕುಚಿತ ಮನಸ್ಸಿನ ಜಾತಿವಾದಿ ಆಗಿರಬಹುದು ಎನ್ನುವ ಅನುಮಾನ ಉಂಟಾಗಿತ್ತು.

ಆದರೆ, ಅವರಿಗೆ ಭಾರತ ರತ್ನ ಪ್ರಶಸ್ತಿ ಕೊಡಲ್ಪಟ್ಟ ಸಂದರ್ಭದಲ್ಲಿ ಸುದ್ದಿ ಮಾಧ್ಯಮಗಳಿಗೆ ಅವರು ನೀಡಿದ ಸಂದರ್ಶನಗಳನ್ನು ಓದಿದಾಗ ಅವರ ಬಗ್ಗೆ ತುಂಬಾ ಗೌರವ ಉಂಟಾಯಿತು. ಉದಯವಾಣಿಯಂತಹ ಪತ್ರಿಕೆಯಲ್ಲೂ ಅವರು ದಿಟ್ಟವಾಗಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

ಮುಖ್ಯವಾಗಿ ಅವರು ಹೇಳಿದ್ದಾರೆ "ನನಗೆ ದೇವರು, ಜ್ಯೋತಿಷ್ಯ ಇತ್ಯಾದಿಗಳಲ್ಲಿ ನಂಬಿಕೆಯಿಲ್ಲ." ಇದು ನನಗೆ ತುಂಬಾ ಮೆಚ್ಚುಗೆಯಾಯಿತು. ಅಲ್ಲಿಗೆ, ಅವರು ದೇವರು, ಜ್ಯೋತಿಷ್ಯಗಳಿಗೆ ಸಂಬಂಧಪಟ್ಟ ಮೂಢನಂಬಿಕೆಗಳನ್ನೆಲ್ಲಾ ಸಾರಾಸಗಟಾಗಿ ತಿರಸ್ಕರಿಸಿದಂತಾಯಿತು. ನಾವು ವಿಜ್ಞಾನಿಗಳಿಂದ ನಿರೀಕ್ಷಿಸುವುದು ಅದನ್ನೇ. ಕೆಲವೇ ದಿನಗಳ ಹಿಂದೆ ಇಸ್ರೋದ ಅಧ್ಯಕ್ಷ ಕೆ. ರಾಧಾಕೃಷ್ಣನ್ ಮಂಗಳ ಗ್ರಹಕ್ಕೆ ಕಳುಹಿಸಲಿರುವ ಬಾಹ್ಯಾಕಾಶ ನೌಕೆಯ ಪ್ರತಿಕೃತಿಯನ್ನು ತಿರುಪತಿಯ ವೆಂಕಟೇಶನ ಪದತಲದಲ್ಲಿಟ್ಟು ತನ್ನ ವಿಜ್ಞಾನಿಗಳ ಟೀಮ್ ಸಮೇತ ತಿಮ್ಮಪ್ಪನಿಗೆ ಶರಣಾಗಿದ್ದರು! ಅವರ ಈ ಮೂಢನಂಬಿಕೆ ನೋಡಿ ನಮಗೆ ಅಂತಹ ವಿಜ್ಞಾನಿಗಳ ಬಗ್ಗೆಯೇ ತಿರಸ್ಕಾರ ಉಂಟಾಗಿತ್ತು.

ನಾವು ಅಧ್ಯಾಪಕರು, ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ಉಂಟುಮಾಡಲು ಪ್ರಯತ್ನಿಸುತ್ತಿರುವವರು. ಅದು ನಮ್ಮ ಸಂವಿಧಾನಬದ್ಧ ಕರ್ತವ್ಯ ಕೂಡಾ. ಆದರೆ ಇಸ್ರೋದ ಅಧ್ಯಕ್ಷ ಕೆ. ರಾಧಾಕೃಷ್ಣನ್ ಥರಾನೇ ಎಲ್ಲಾ ವಿಜ್ಞಾನಿಗಳೂ ವರ್ತಿಸಿದರೆ ಏನಾಗಬಹುದು? ಅವರನ್ನೇ ಎಲ್ಲಾ ವಿಜ್ಞಾನದ ವಿದ್ಯಾರ್ಥಿಗಳೂ ಅನುಸರಿಸಿದರೆ ಏನಾಗಬಹುದು? ಆಗ ನಮ್ಮ ಶಿಕ್ಷಣ ಸಂಸ್ಥೆಗಳಲ್ಲಿ ವೈಜ್ಞಾನಿಕ ಸಂಶೋಧನೆಗಳು ನಡೆಯುವುದಿಲ್ಲ, ತಿರುಪತಿ, ಶಬರಿಮಲೆಗಳಿಗೆ ಹೋಗುವ ಭಕ್ತರ ಸಂಖ್ಯೆ ಜಾಸ್ತಿಯಾಗಬಹುದು; ಅಷ್ಟೆ!

ಆದರೆ ಭಾರತ ರತ್ನ ಸಿ.ಎನ್.ರಾಮಚಂದ್ರರಾವ್ ಹಾಗೆ ಮಾಡಿಲ್ಲ, ಧೈರ್ಯದಿಂದ ತಮಗೆ ದೇವರು, ಜ್ಯೋತಿಷ್ಯ ಇತ್ಯಾದಿಗಳಲ್ಲಿ ನಂಬಿಕೆ ಇಲ್ಲ ಎಂದು ಹೇಳುತ್ತಿದ್ದಾರೆ. ಮಾತ್ರವಲ್ಲ, ಇತ್ತೀಚೆಗೆ ವಿಜ್ಞಾನದ ಹೆಸರಿನಲ್ಲಿ ಬೆಳೆಯುತ್ತಿರುವ 'ಕಂಪ್ಯೂಟರ್ ಸನ್ನಿ'ಯನ್ನು ಕೂಡಾ ನಿರ್ಭಯವಾಗಿ ಟೀಕಿಸಿದ್ದಾರೆ. ನಮ್ಮ ಈಗಿನ ಯುವಜನತೆ ಹಾಳಾಗಿರುವುದೇ ಈ ಐಟಿ ಉದ್ದಿಮೆಯಿಂದ ಎಂದು ಹೇಳಿ, ಅದಕ್ಕೆ 'ಬೆಂಕಿ ಹಾಕಿ' ಎಂದೂ ಕ್ರಾಂತಿಕಾರಿಯಂತೆ ಕರೆ ನೀಡಿದ್ದಾರೆ.

"ವಿದ್ಯಾರ್ಥಿಗಳು ಇಷ್ಟಪಟ್ಟು ಮೂಲವಿಜ್ಞಾನ ವಿಷಯಗಳ ಅಧ್ಯಯನ ನಡೆಸಬೇಕು. ಅದು ಅವರಿಗೆ ಸಂತೋಷ ನೀಡುತ್ತದೆ. ನನಗೆ ಈ 80ನೇ ವಯಸ್ಸಿನಲ್ಲೂ ಸಂಶೋಧನಾ ಕೆಲಸ ಸಂತೋಷ ಕೊಡುತ್ತಿದೆ. ವಾರಕ್ಕೆ 6 ದಿನ ನಾನು ಸಂಶೋಧನಾ ಕೆಲಸದಲ್ಲಿ ತೊಡಗಿರುತ್ತೇನೆ. ಇನ್ನು ಹಲವು ವರ್ಷ ಬದುಕುವ ಆಶೆ ನನಗೆ. ಆದರೆ ಐಟಿ ಉದ್ದಿಮೆಯ ಯುವಕರು ಆತ್ಮಹತ್ಯೆ ಮಾಡಿಕೊಳ್ತಾ ಇದ್ದಾರೆ. ಅದರ ಅರ್ಥ ಏನು? ಅವರಿಗೆ ಆ ಚಟುವಟಿಕೆಯಲ್ಲಿ ಆತ್ಮತೃಪ್ತಿ ಸಿಕ್ಕಿಲ್ಲ ಎಂದು ತಾನೇ?"

ಪ್ರೊ. ಸಿ.ಎನ್.ಆರ್.ರಾವ್ ಅವರ ಈ ಮಾತುಗಳು ಅಕ್ಷರಶಃ ನಿಜ. ತುಂಬಾ ವಿನಯದಿಂದ ಅವರು ಹೇಳಿದ್ದಾರೆ 'ತನಗಿಂತ ಮೊದಲು ಬೆಂಗಳೂರಿನಲ್ಲಿ ಐಐಎಸ್‌ಸಿ (ಭಾರತೀಯ ವಿಜ್ಞಾನ ಸಂಸ್ಥೆಯ ಸ್ಥಾಪನೆಗೆ ಕಾರಣರಾದ ಹೋಮಿ ಭಾ ಭಾ ಅವರಿಗೆ ಭಾರತ ರತ್ನ ಸಿಗಬೇಕಾಗಿತ್ತು' ಎಂದು. (1940ರಲ್ಲಿ ಬೆಂಗಳೂರಿನಲ್ಲಿ ಭಾರತೀಯ ವಿಜ್ಞಾನ ಮಂದಿರ ಐಐಎಸ್‌ಸಿ ಮೂಲವಿಜ್ಞಾನ ವಿಷಯಗಳ ಸಂಶೋಧನೆಗಾಗಿಯೇ ಪ್ರಾರಂಭವಾಗಿತ್ತು, ಸಿ.ವಿ.ರಾಮನ್ ಅದರ ನಿರ್ದೇಶಕರಾಗಿದ್ದರು.)

ಇತ್ತೀಚೆಗೆ ನಮ್ಮ ಪದವಿ ಕಾಲೇಜುಗಳಲ್ಲಿ ಮೂಲವಿಜ್ಞಾನ ವಿಷಯಗಳಾದ ಸಸ್ಯಶಾಸ್ತ್ರ, ಭೌತಶಾಸ್ತ್ರ, ರಸಾಯನಶಾಸ್ತ್ರ, ಪ್ರಾಣಿಶಾಸ್ತ್ರ ಭೂಗರ್ಭಶಾಸ್ತ್ರಗಳನ್ನು ಆಯ್ಕೆ ಮಾಡುವ ವಿದ್ಯಾರ್ಥಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಕಡಿಮೆ ಆಗುತ್ತಿದೆ. ಕೆಲವು ಕಾಲೇಜುಗಳಲ್ಲಿ ವ್ಯವಸ್ಥಿತವಾದ ಪ್ರಯೋಗಾಲಯಗಳು ಇದ್ದೂ ಸಸ್ಯಶಾಸ್ತ್ರ ಪ್ರಾಣಿಶಾಸ್ತ್ರಗಳಂತಹ ವಿಭಾಗಗಳೇ ವಿದ್ಯಾರ್ಥಿಗಳಿಲ್ಲದೆ ಮುಚ್ಚಿಹೋಗುತ್ತಿವೆ. ಹೀಗಾದರೆ ನಮ್ಮ ವಿದ್ಯಾರ್ಥಿ ಸಮೂಹದಿಂದ ಸಿ.ವಿ.ರಾಮನ್, ಹೋಮಿ ಭಾಭಾರಂತಹಾ ವಿಜ್ಞಾನಿಗಳು ರೂಪುಗೊಳ್ಳುವುದು ಹೇಗೆ? ಐಟಿ/ಬಿಟಿ ಮತ್ತು ವಾಣಿಜ್ಯ ವಿಷಯಗಳು ನಮ್ಮ ಯುವಜನತೆಗೆ ಕೈ ತುಂಬಾ ಸಂಬಳ ಸಿಗುವ ನೌಕರಿ ಒದಗಿಸುತ್ತಿರಬಹುದು, ಆದರೆ ಅವರಿಗೆ ಸ್ವತಃ ಕೆಲಸದಿಂದಲೇ ಸಿಗುವ ತೃಪ್ತಿ ಸಿಗುತ್ತಿದೆಯೇ? ನಮ್ಮ ದೇಶ ವೈಜ್ಞಾನಿಕವಾಗಿ ಮುಂದುವರಿಯುವುದು ಹೇಗೆ?

ತಾನು ಕನ್ನಡ ಮಾಧ್ಯಮ ಶಾಲೆಯಲ್ಲಿ ಎಸ್.ಎಸ್.ಎಲ್.ಸಿ.ಯವರೆಗೆ ಕಲಿತು, ಇಂಗ್ಲಿಷ್ ಭಾಷೆಯ ಮೇಲೆ ಪ್ರಭುತ್ವ ಉಳ್ಳವನಾಗಿದ್ದೇನೆ ಎಂದು ಕೂಡಾ ರಾವ್ ಅವರು ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ. ಇಂಗ್ಲಿಷ್ ಭಾಷೆಯಿಂದಲೇ ಉದ್ಧಾರ ಸಾಧ್ಯವೆಂದು ನಂಬಿರುವ ಆಧುನಿಕ ಭಾರತೀಯರಿಗೆ ಇದು ಒಳ್ಳೆಯ ಸವಾಲು.


ಇಸ್ರೋದ ಅಧ್ಯಕ್ಷ ಕೆ. ರಾಧಾಕೃಷ್ಣನ್‌ರಂತಹ ವಿಜ್ಞಾನಿಗಳಿಂದ ಮೂಢನಂಬಿಕೆ ಹೆಚ್ಚುತ್ತದೆ ಅಷ್ಟೇ. ವೈಜ್ಞಾನಿಕ ಮನೋಭಾವ ಉಂಟಾಗುವುದಿಲ್ಲ.

ಆದರೆ ಭಾರತ ರತ್ನ ಸಿ.ಎನ್.ಆರ್.ರಾವ್ ಅಂತಹವರಿಂದ ನಮಗಿಂದು ಅಗತ್ಯ ಬೇಕಾಗಿರುವ ವೈಜ್ಞಾನಿಕ ಮನೋಭಾವ ವೃದ್ಧಿಯಾಗುವುದರಲ್ಲಿ ಸಂಶಯವಿಲ್ಲ.

ಆದ್ದರಿಂದ -


ಭಾರತ ರತ್ನ ಸಿ.ಎನ್. ರಾಮಚಂದ್ರ ರಾವ್ ಅವರಿಗೆ ನಮ್ಮ ಹೃತ್ಪೂರ್ವಕ ಅಭಿನಂದನೆಗಳು.

■ ಡಾ. ಹಯವದನ ಮೂಡುಸಗ್ರಿ
ಕುಂದಾಪುರ




8.3 ಲಕ್ಷ ನಿರುದ್ಯೋಗಿಗಳು

ನಮೋ ಶಿಷ್ಯಗಣಗಳು ಗುಜರಾತ್‌ನ ಅಭಿವೃದ್ಧಿ ಇಡೀ ದೇಶಕ್ಕೆ ಮಾದರಿ ಎಂದು ಪ್ರಚಾರದ ಮೇಲೆ ಪ್ರಚಾರ ಮಾಡುತ್ತಿರುವುದಕ್ಕೆ ಗುಜರಾತ್ ರಾಜ್ಯದ ನಿರುದ್ಯೋಗಿ ಯುವಜನರು ಸಿಟ್ಟಿಗೆದ್ದರೆ ಅದರಲ್ಲೇನೂ ಆಶ್ಚರ್ಯವಿಲ್ಲ, ಏಕೆಂದರೆ ...ನಾಗಿ ಅಲ್ಲಿನ 8.3 ಲಕ್ಷಕ್ಕೂ ಅಧಿಕ ಯುವಜನರು ಉದ್ಯೋಗವಿಲ್ಲದೆ ಪರದಾಡುತ್ತಿದ್ದಾರೆ. ...ಲ್ಲಿ ವಿದ್ಯಾವಂತರ ಸಂಖ್ಯೆಯೇ 7.69 ಲಕ್ಷ ಮೀರುತ್ತದೆ. ಇನ್ನುಳಿದ ನಿರುದ್ಯೋಗಿಗಳಲ್ಲಿ ...000 ಮಂದಿ ಅರೆ ವಿದ್ಯಾವಂತರು (2013ರ ಮಾರ್ಚ್ 31ರ ತನಕ ಉದ್ಯೋಗ ...ಮಯ ಕೇಂದ್ರಗಳಲ್ಲಿ ದಾಖಲಾಗಿರುವಂತೆ). ಅತ್ಯಧಿಕ ನಿರುದ್ಯೋಗಿಗಳಿರುವುದು ರಾಜ್ಯದ ...ಕ್ ರಾಜಧಾನಿ ಎಂದೇ ಪರಿಗಣಿತವಾಗಿರುವ ಅಹಮದಾಬಾದ್ ನಗರದಲ್ಲಿ, ಅಲ್ಲಿ ...ಮ ಲಕ್ಷಕ್ಕೂ ಅಧಿಕ ನಿರುದ್ಯೋಗಿಗಳಿದ್ದಾರೆ. ಆ ರಾಜ್ಯದಲ್ಲಿ ನಿರುದ್ಯೋಗ ಸಮಸ್ಯೆ ವರ್ಷದಿಂದ ...ಕ್ಕೆ ಏರುತ್ತಲೇ ಇದೆ. 2010-11ರ ಸಾಲಿನಲ್ಲಿ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ...ಮ ದಾಖಲಿಸಿದ ನಿರುದ್ಯೋಗಿಗಳಲ್ಲಿ 2.3 ಲಕ್ಷ ಜನರಿಗೆ ಉದ್ಯೋಗ ದೊರೆತಿದ್ದರೆ 2011-12ರಲ್ಲಿ ...ು 2.27 ಲಕ್ಷದಷ್ಟಿತ್ತು. 2012-13ರ ಸಾಲಿನಲ್ಲಿ ಕೇವಲ 2.05 ಲಕ್ಷ ಯುವಜನರಿಗೆ ...ದ್ಯೋಗ ಒದಗಿಸಲಾಗಿದೆ. ಉದ್ಯೋಗಾವಕಾಶಗಳು ಕಡಿಮೆಯಾಗುವುದು ಯಾವ ಮಾದರಿಯ ...ಭಿವೃದ್ಧಿ ಎಂದು ತಿಳಿಯದು. ((wttp://www.thehindu.com)




ಮೋದಿ ಮತ್ತು ರೂಪಾಯಿ ಮೌಲ್ಯ



ಚುನಾವಣಾ ಕಾಲದಲ್ಲಿ ವಿವಿಧ ರಾಜಕೀಯ ಪಕ್ಷಗಳ ನೇತಾರರು ತಮ್ಮ ಸಾರ್ವಜನಿಕ ಭಾಷಣಗಳಲ್ಲಿ ಆಡಳಿತಾರೂಢ ಸರ್ಕಾರದ ಲೋಪದೋಷಗಳನ್ನು ಎತ್ತಿತೋರುವುದು ಸಾಮಾನ್ಯ. ಆದರೆ ಸುಳ್ಳುಗಳ ಸರದಾರ ನರೇಂದ್ರ ಮೋದಿ ಇಳಿದಿರುವಷ್ಟು ಕೀಳುಮಟ್ಟಕ್ಕೆ ಇಷ್ಟರತನಕ ಯಾರೂ ಇಳಿದಿಲ್ಲ ಎಂದು ಖಚಿತವಾಗಿ ಹೇಳಬಹುದು. ಈ ತೆರನಾದ ಸುಳ್ಳುಗಳಿಗೆ ಮತದಾರರನ್ನು ಮೂರ್ಖರೆಂದು ಪರಿಗಣಿಸುವ ದುರಹಂಕಾರವೇ ಕಾರಣ. ಬಹುಶಃ ಬೇರೇನೂ ಬಂಡವಾಳವಿಲ್ಲದ ಆತನಿಗೆ ಇದು ಅನಿವಾರ್ಯವೂ ಹೌದು. ವಾಜಪೇಯಿ ನೇತೃತ್ವದ ಎನ್‌ಡಿಎ ಸರ್ಕಾರದ ಕಾಲದಲ್ಲಿ ದೇಶದಲ್ಲಿ ಸುಭಿಕ್ಷ ನೆಲೆಸಿತ್ತೆಂದು ಬಿಂಬಿಸಲೆತ್ನಿಸುವುದು ಮೋದಿಯ ನೂರಾರು ಸುಳ್ಳುಗಳಲ್ಲೊಂದು. ಇತ್ತೀಚೆಗೆ ರಾಜಸ್ತಾನದ ಖೇತ್ರಿಯಲ್ಲಿ ನಡೆದ ಚುನಾವಣಾ ರ್‍ಯಾಲಿಯೊಂದರಲ್ಲಿ ಎಂದಿನಂತೆ ಎನ್‌ಡಿಎ ಆಡಳಿತವನ್ನು ಹೊಗಳುತ್ತಾ "ಅಟಲ್‌ಜೀ ಪರಮಾಣು ಬಾಂಬು ಪರೀಕ್ಷೆಗಳನ್ನು ನಡೆಸಿದವರು... ಅವರು ಆರ್ಥಿಕ ನಿರ್ಬಂಧಗಳನ್ನು ಎಳ್ಳಷ್ಟೂ ಲಕ್ಷಿಸದೆ ಎರಡು ದಿನ ಕಳೆದು ಮತ್ತೊಂದು ಪರೀಕ್ಷೆ ನಡೆಸಿದರು... ಆರ್ಥಿಕ ನಿರ್ಬಂಧಗಳಿದ್ದಾಗಲೂ ರೂಪಾಯಿ ಮೌಲ್ಯ ಕುಸಿಯದಂತೆ ನೋಡಿಕೊಂಡರು...." ಎಂದು ಭಾಷಣ ಬಿಗಿದಾಗ ಚಪ್ಪಾಳೆಗಳ ಸುರಿಮಳೆ ಸುರಿಯಿತು. ವಾಸ್ತವವೇನು? 1998ರಲ್ಲಿ ಎನ್‌ಡಿಎ ಸರ್ಕಾರ ಆಡಳಿತಕ್ಕೆ ಬಂದಾಗ ರೂಪಾಯಿ ಬೆಲೆ ಡಾಲರಿಗೆ 39.49ರಷ್ಟಿತ್ತು, ನಂತರ ಕೆಳಗಿಳಿಯುತ್ತಾ 1999ರ ಮೇ ತಿಂಗಳಲ್ಲಿ ರೂ 42.84ಕ್ಕೆ ತಲುಪಿತ್ತು, 2004ರ ಚುನಾವಣೆಗಳಲ್ಲಿ ಎನ್‌ಡಿಎ ಸೋಲನುಭವಿಸಿದ ಸಂದರ್ಭದಲ್ಲಿ ರೂಪಾಯಿ ಮೌಲ್ಯ 45.33ಕ್ಕೆ ಇಳಿದಿತ್ತು! (wttp://www.thehindubusinessline.com)

ಮೀಸಲಾತಿ V/s ಮೆರಿಟ್

ಜಾತಿಯಾಧಾರಿತ ಮೀಸಲಾತಿ ಎನ್ನುವುದು ...ಮ್ಮ ದೇಶದ ಸಾಮಾಜಿಕ ಮತ್ತು ಸಾಂಸ್ಕೃತಿಕ ...ಲಯಗಳಲ್ಲಿ ಅನೇಕ ಬಗೆಯ ಗೊಂದಲಗಳಿಗೆ ...ರಣವಾಗಿದೆ. ಮೀಸಲಾತಿ ಪಡೆಯುವವರ ಬಗೆಗೆ ...ಮ ಬಗೆಯ ಆರೋಪಿತ ನಾಮಗಳು, ...ರ್ವಾಗ್ರಹಗಳು ಸೃಷ್ಟಿಯಾಗಿವೆ. ಜಾತಿಯಾಧಾರಿತ ...ಸಲಾತಿ ಎನ್ನುವುದು ನಮ್ಮಲ್ಲಿ 1882 ರ ...ದರ್ಭದಲ್ಲಿ ಹಂಟರ್ ಕಮಿಷನ್‌ನ ಶಿಫಾರಸುಗಳ ...ಮೂಲಕ ಶೈಕ್ಷಣಿಕ ವಲಯದಲ್ಲಿ ...ಂತಿಕವಾಗಿ ಹಿಂದಿರುವ, ...ತಿನಿಧಿಕತೆ ಬಿಲ್ಕುಲ್ ಇಲ್ಲ ...ದ್ದವಂತಹ ಅಲ್ಪಸಂಖ್ಯಾತ ...ಮುದಾಯಗಳ ಹಿನ್ನೆಲೆಯಲ್ಲಿ ...ಚಯಿಸಲಾಯಿತಾದರೂ ಕೆಲ ...ಶೇಷವಾದ ನಿಯಮಾವಳಿಗಳ ...ಮೂಲಕ ಹಿಂದುಳಿದ ...ಮುದಾಯಗಳನ್ನೂ ಈ ಕಕ್ಷೆಗೆ ...ಲಾಯಿತು. ಕ್ರಮೇಣವಾಗಿ ...ದ್ಯೋಗ ಮತ್ತು ಶೈಕ್ಷಣಿಕ ...ಯಗಳಲ್ಲಿ ಜಾತಿಯಾಧಾರಿತ ...ೀಸಲಾತಿ ಆರಂಭವಾಯಿತು. ...ಕ್ಷಣಿಕ ವಲಯದೊಂದಿಗಿನ ...ಂಭದ ರಿಯಾಯತಿಗಳ ...ಮೂಲಕವೇ ಜಾತಿಯಾಧಾರಿತ ಮೀಸಲಾತಿಯನ್ನು ...ರಿತು ಚರ್ಚಿಸುವ ಅಗತ್ಯವಿದೆ. ಮಹಿಳೆಯರು, ...ಶೂದ್ರರು, ಆದಿವಾಸಿಗಳು 19ನೇ ಶತಮಾನದಲ್ಲಿ ...ಕ್ಷಣ ಪಡೆಯುವಂಥಾದದ್ದು ಬ್ರಿಟಿಷ್ ...ದಾರವಾದಿಗಳು ಮತ್ತು ಭಾರತೀಯ ಸಾಮಾಜಿಕ ...ಸುಧಾರಣಾ ಆಂದೋಲನಾವಾದಿಗಳ ಪ್ರಯತ್ನದಿಂದ ...ಎಂದು ಹೇಳಬಹುದು.



ನಮ್ಮ ದೇಶದಲ್ಲಿ ಪರಿಶಿಷ್ಟ ಜಾತಿಯ ...ವಿದ್ಯಾರ್ಥಿಯೊಬ್ಬ ಶಿಕ್ಷಣ ಸಂಸ್ಥೆಯಲ್ಲಿ ಪ್ರವೇಶಕ್ಕಾಗಿ ...ರ್ಜಿ ಸಲ್ಲಿಸಿದ್ದು ಜೂನ್ 1856 ರಲ್ಲಿ, ಆಗಿನ ...ಂಬೈ ಕರ್ನಾಟಕದ ಭಾಗವಾಗಿದ್ದ ಧಾರವಾಡದ ...ಸರ್ಕಾರಿ ಶಾಲೆಯೊಂದರಲ್ಲಿ ಎನ್ನುವದನ್ನು ...ಚಲಂ ಅವರು ಉಲ್ಲೇಖಿಸುತ್ತಾರೆ. ಆಗಿನ ...ಸಂಪ್ರದಾಯಿಕ ಸಾಂಸ್ಕೃತಿಕ ಪರಿಸರದಲ್ಲಿ ಒಂದು ಬಗೆಯ ...ಕೋಲಾಹಲವನ್ನೇ ಅದು ಉಂಟುಮಾಡಿತು. 1872 ರವರೆಗೆ ಬ್ರಿಟಿಷರು ಕೂಡಾ ಈ ಬಗ್ಗೆ ...ರವಾಗಿ ಯೋಚಿಸಿರಲಿಲ್ಲ, ಅಲ್ಲಿಯವರೆಗೆ ಶಿಕ್ಷಣ ...ವುದು ಕೇವಲ ಸಮಾಜದ ಮೇಲಿನ ಸ್ತರಗಳಿಗೆ ...ಮಾತ್ರ ಸಾಧ್ಯವಿತ್ತು, ಈ ಬಗೆಯ ಸ್ಥಿತಿ ಮುಕ್ತವಾಗಿತ್ತು ...ದು ಕರೆಯಿಸಿಕೊಳ್ಳುವ ವರ್ಣ ವ್ಯವಸ್ಥೆಯಲ್ಲಿಯೂ ...ಷ್ಟು ಅಲ್ಲಿಯೂ ಶೂದ್ರರಿಗೆ ಶಿಕ್ಷಣ ಪಡೆಯುವ ...ಹಕ್ಕನ್ನು ನಿರಾಕರಿಸಲಾಗಿತ್ತು, ಭಗವಂತನಿಂದಲೇ ...ಸೃಷ್ಟಿಸಲಾದ ವರ್ಣಗಳಲ್ಲಿಯೂ ತಾರತಮ್ಯಗಳಿದ್ದವು. ...ಮಹಾತ್ಮ ಜ್ಯೋತಿಬಾ ಫುಲೆ ಅವರು ಹಂಟರ್ ...ಆಯೋಗದ ಎದುರು ಈ ತಾರತಮ್ಯಗಳನ್ನು ಕುರಿತು ...ಇಟ್ಟಿದ್ದ ಪರಿಣಾಮವಾಗಿ 1872 ರಲ್ಲಿ ಜಾತಿ ...ಆಧಾರಿತ ಕಾಯ್ದೆಯನ್ನು ಜಾರಿಗೊಳಿಸಲಾಯಿತು. ...ಕೆಳಜಾತಿಗಳಿಗೆ ಜಾತಿಯಾಧಾರಿತ ಮೀಸಲಾತಿಯು ...ಮೂಲಕ ಶಿಕ್ಷಣ ಪಡೆಯುವಲ್ಲಿ ನೆರವಾಯಿತು. ...ಗಳು ಗುರು, ಜ್ಯೋತಿಬಾ ಫುಲೆ ಮತ್ತು ಬಸ್ಸ... ನಾಯ್ಡು ಮುಂತಾದವರ ಧೋರಣೆಯಿಂದಾಗಿ ಮೊಟ್ಟ ಮೊದಲಬಾರಿಗೆ ಜೂನ್ 21-1895 ರಲ್ಲಿ ಆಗಿನ ಮೈಸೂರು ಸರಕಾರ ದಲಿತರಿಗಾಗಿ ಶಿಕ್ಷಣ ಹಾಗೂ ಉದ್ಯೋಗಗಳಲ್ಲಿ ಮೀಸಲಾತಿಯನ್ನು ಘೋಷಿಸಿತು. 25 ಜುಲೈ 1921 ರಲ್ಲಿ ಮುಂಬೈ ಶಾಸನಸಭೆಯ ಸದಸ್ಯ ಡಿ.ಡಿ.ಗೊಲಾಪ ದಲಿತರಿಗಾಗಿ ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕನ್ನು ಜಾರಿಗೊಳಿಸಿದರು. ಅದೇ ಸಂದರ್ಭದಲ್ಲಿ ಸಿ.ಕೆ.ಬೋಲೆ ಎನ್ನುವವರು ದಲಿತರಿಗೆ, ಅಸ್ಪೃಶ್ಯರಿಗೆ ಎಲ್ಲ ಸಾರ್ವಜನಿಕ ಸ್ಥಳಗಳಲ್ಲಿ ಮುಕ್ತವಾದ ಪ್ರವೇಶವನ್ನು ಆಗ್ರಹಪಡಿಸಿದರು. ಇದು ಮುಂದೆ ಪಂಜಾಬಿನ ಅಧರ್ಮ ಚಳವಳಿ (1926), ಅಂಬೆಡ್ಕರ್ ಮಹಾರಾಷ್ಟ್ರದಲ್ಲಿ ಹಮ್ಮಿಕೊಂಡ ಚಳವಳಿ (1924-25) ಬೆಂಗಾಳದಲ್ಲಿ ಆರಂಭವಾದ ನಾಮಶೂದ್ರ ಚಳವಳಿ, ತಮಿಳುನಾಡಿನ ಆದಿ ದ್ರಾವಿಡ ಚಳವಳಿ, ಆಂಧ್ರಪ್ರದೇಶದ ಆದಿಆಂದ್ರ ಚಳವಳಿಗಳಿಗೆ ಕಾರಣವಾಯಿತು.

ಜಾತಿಯಾಧಾರಿತ ಮೀಸಲಾತಿಯ ಬಗ್ಗೆ ಮಾತನಾಡುವುದಾದರೆ 1926 ರ ಸಂದರ್ಭದಲ್ಲಿ ಮೊಟ್ಟ ಮೊದಲ ಬಾರಿಗೆ ಜಸ್ಟಿಸ್ ಪಾರ್ಟಿ ಎನ್ನುವುದು ಅದಕ್ಕೆ ಎಡೆಮಾಡಿಕೊಟ್ಟಿತು. ಅದು ಈ ಕೆಳಗಿನಂತೆ ಜಾತಿಯಾಧಾರಿತ ಮೀಸಲಾತಿಯನ್ನು ಒದಗಿಸಿತು.

ಜಸ್ಟಿಸ್ ಪಾರ್ಟಿ ಒದಗಿಸಿದ್ದ ಮೀಸಲಾತಿಯ ವಿವರ


ಅ. ನಂ	ಮೀಸಲಾತಿ ಪಡೆದ ಸಮೂಹಗಳು	ಪ್ರಮಾಣ %
1	ಬ್ರಾಹ್ಮಣೇತರ ಹಿಂದೂಗಳು	43%
2	ಹಿಂದುಳಿದ ಹಿಂದೂಗಳು	14%
3	ಬ್ರಾಹ್ಮಣರು	14%
4	ದುರ್ಬಲ ಜಾತಿಗಳು	14%
5	ಆಂಗ್ಲೋ ಇಂಡಿಯನ್‌ಕ್ರಿಶ್ಚಿಯನ್ ಜಾತಿಗಳು	7%
	ಒಟ್ಟು	100%

(ಆಧಾರ ಕೆ.ಎಸ್.ಚಲಂ 1988)

1943 ರ ಸಂದರ್ಭದಲ್ಲಿ ಅಂಬೇಡ್ಕರ್ ಅಸ್ಪೃಶ್ಯರಿಗಾಗಿ 8.3 ಪ್ರತಿಶತ ಮೀಸಲಾತಿ ಕಲ್ಪಿಸಲು ಯತ್ನಿಸಿದರು. 1952 ರ ಸಂದರ್ಭದಲ್ಲಿ ಜಮ್ಮು ಕಾಶ್ಮೀರ ಪ್ರಾಂತ ಮೀಸಲಾತಿ ನೀತಿಯನ್ನು ಜಾರಿಗೊಳಿಸಿತು. ಜಾತಿಯಾಧಾರಿತ ಮೀಸಲಾತಿಗೆ ಸಂಬಂಧಿಸಿ ಕಾಕಾ ಕಾಲೇಲಕರ್ ನೇತೃತ್ವದಲ್ಲಿ ಸಮಿತಿಯೊಂದನ್ನು ನೇಮಿಸಲಾಯಿತು. ಆದರೆ ಅದು ನಿರೀಕ್ಷಿತ ಪರಿಣಾಮವನ್ನುಂಟುಮಾಡಲಿಲ್ಲ. 1978 ರ ಸಂದರ್ಭದಲ್ಲಿ ಜನತಾ ಸರಕಾರ ಬಿಂದೇಶ್ವರ ಪ್ರಸಾದ ಮಂಡಲ ಅವರ ನೇತೃತ್ವದಲ್ಲಿ ಒಂದು ಆಯೋಗವನ್ನು ನೇಮಿಸಿತು ಅದು 1980 ರಲ್ಲಿ ತನ್ನ ವರದಿಯನ್ನು ಸಲ್ಲಿಸಿತು. ಸಾಕಷ್ಟು ವಾದವಿವಾದಗಳನ್ನು ಹುಟ್ಟು ಹಾಕಿದ ಆ ಮಂಡಲ ವರದಿಯನ್ನು 1990 ರಲ್ಲಿ ಭಾರತ ಸರಕಾರ ಜಾರಿಗೊಳಿಸಿತು. ಮೊದಲೇ ಏಣಿ ಶ್ರೇಣಿಯನ್ನಾಧರಿಸಿದ ಜಾತಿಪದ್ಧತಿಯಲ್ಲಿ ಇನ್ನಷ್ಟು ಅಸಮಾನತೆಗಳನ್ನು ಹುಟ್ಟುಹಾಕುವಲ್ಲಿ ಈ ಮೀಸಲಾತಿ ಕಾರಣವಾಯಿತು ಎನ್ನುವ ವಾದವೂ ಇದೆ.

ಮೀಸಲಾತಿ ಹಾಗೂ ಮೆರಿಟ್

ಜಾತಿಯಾಧಾರಿತ ಮೀಸಲಾತಿಯ ಪ್ರಶ್ನೆ ಬಂದಾಗಲೆಲ್ಲಾ ಮೀಸಲಾತಿಗೆ ಒಳಪಡದ ಜಾತಿಗಳು, ಮೀಸಲಾತಿ ಪಡೆಯುವ ಜಾತಿಗಳನ್ನು ತಾತ್ಸಾರದಿಂದ ನೋಡುವುದಿದೆ. ತಮ್ಮಲ್ಲಿ ಮೆರಿಟ್ ಇಲ್ಲದಿರುವಾಗಲೂ ಮೆರಿಟ್ ಉಳ್ಳವರ ಹಕ್ಕುಗಳನ್ನು ಇವರು ಕಸಿಯುತ್ತಾರೆ ಎಂದು ಒಮ್ಮುಖವಾಗಿ ಯೋಚಿಸುವ ಇವರಿಗೆ ಅವರ ತಲೆತಲಾಂತರದ ಶೋಷಣೆಯಾಗಲಿ, ಅವರ ಕುಟುಂಬದ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಶೈಕ್ಷಣಿಕ ಹಿನ್ನೆಲೆಯಾಗಲಿ ಇವರ ದೃಷ್ಟಿಗೆ ಗೋಚರವಾಗದು. ಮನೆಯಲ್ಲಿ ಒಂದು ವಿಕಲಚೇತನ ಮಗುವಿಗೆ ಸಿಗುವ ವಿಶೇಷ ಕಾಳಜಿಯಿಂದ ಇನ್ನೊಂದು ಮಗು ಅಸೂಯೆಪಡುವಷ್ಟೇ ಇದು ಯಥಾರ್ಥವಾಗಿರುತ್ತದೆ. ಅಷ್ಟಕ್ಕೂ ಯಾರ ಹಕ್ಕು ಯಾರೂ ಕಸಿಯುವದಿಲ್ಲ. ತಲೆತಲಾಂತರದಿಂದಲೂ ಅಕ್ಷರವಂಚಿತ ಸಮುದಾಯಕ್ಕೆ ಮೀಸಲಾತಿಯನ್ನು ಶಿಕ್ಷಣ ಮತ್ತು ಉದ್ಯೋಗದಲ್ಲಿ ಒದಗಿಸುವ ಕ್ರಮ ಇವರ ಮೆರಿಟ್‌ಗೆ ಧಕ್ಕೆ ತರುತ್ತದೆ ಎನ್ನುವ ಮಾತು ಅರ್ಧಸತ್ಯವೇ ಹೌದು. ಈ ಮೀಸಲಾತಿ ಮೆರಿಟ್‌ಅನ್ನು ವಂಚಿಸುತ್ತಿದೆ ಎಂದು ಕೂಗುವವರಿಗೆ ಸಮಾಧಾನವಾಗುವ ಹಾಗೆ ಪರ್ಯಾಯ ಮಾರ್ಗವನ್ನು ಕಲ್ಪಿಸಬಹುದಾಗಿದೆ. ಮೀಸಲಾತಿ ಪಡೆಯುವ ಮತ್ತು ಪಡೆಯದಿರುವ ಸಮುದಾಯಗಳ ನಡುವೆ ಪ್ರತ್ಯೇಕವಾದ ಮೆರಿಟ್ ಆಧಾರಿತ ಸೌಲಭ್ಯಗಳನ್ನು ಒದಗಿಸಬೇಕು. ದೊಡ್ಡ ದೊಡ್ಡ ಅಖಾಡಾಗಳಲ್ಲಿ ಕುಸ್ತಿ ಆಡುವವನ ಜೊತೆಯಲ್ಲಿ ಹೀಗೇ ಅಪರೂಪಕ್ಕೊಮ್ಮೆ ಕುಸ್ತಿ ಹಿಡಿಯುವವನ್ನು ಆಡಿಸುವುದು ಸರಿಯಲ್ಲ. ಆಯಾ ಗಡಿಗಳ ಸಾಮರ್ಥ್ಯಕ್ಕೆ ತಕ್ಕಂತೆ ಸ್ಪರ್ಧೆ ಇರಬೇಕು. ಹುಟ್ಟುತ್ತಲೇ ಅಕ್ಷರ ಸಹವಾಸ ಇರುವ ಸಂಸ್ಕೃತಿಯವನನ್ನು ಒಟ್ಟಾರೆ ಹತ್ತಾರು ತಲೆಮಾರುಗಳವರೆಗೆ ಅಕ್ಷರವಂಚಿತ ಸಂಸ್ಕೃತಿ ಇರುವವನೊಡನೆ ಮೀಸಲಾತಿಯಾಧರಿಸಿ ಸ್ಪರ್ಧೆ ಏರ್ಪಡಿಸುವುದು ತಪ್ಪಲ್ಲವಾದರೂ ಇದು ಅನ್ಯಾಯ, ಮೆರಿಟ್ ಮೇಲಿನ ಆಕ್ರಮಣ ಎಂದು ಕೂಗುವವರಿಗೆ ಪ್ರತ್ಯೇಕವಾದ ಮೆರಿಟ್ ಆಧಾರಿತ ಸ್ಪರ್ಧೆ ಮತ್ತು ಮೀಸಲಾತಿಯನ್ನು ಒದಗಿಸುವಂತಾಗಬೇಕು.



ಮೀಸಲಾತಿ ಮತ್ತು ದಕ್ಷತೆ

ಈ ದಕ್ಷತೆ ಇಲ್ಲವೇ ಸಾಮರ್ಥ್ಯ ಎನ್ನುವುದು ಅತಿಮುಖ್ಯವಾಗಿ ಎರಡು ಸಂಗತಿಗಳನ್ನು ಆಧರಿಸಿರುತ್ತದೆ. ಒಂದನೆಯದು ಆತ ಹೊಂದಿರುವ ಸಾಮಾಜಿಕ, ಆರ್ಥಿಕ ಸಾಂಸ್ಕೃತಿಕ ಹಿನ್ನೆಲೆ. ಇನ್ನೊಂದು ಆತನ ಬುದ್ಧಿಮತ್ತೆ. ಇವೆರಡೂ ಒಂದಕ್ಕೊಂದು ಪೂರಕ ಪರಿಪೂರಕ. ಸಾಂಪ್ರದಾಯಿಕವಾಗಿ ಶೈಕ್ಷಣಿಕ ಪರಿಸರವಿರುವ, ತಂದೆ-ತಾಯಿ ಓದು ಬರಹ ಬಲ್ಲವರಾಗಿರುವ, ಶಿಷ್ಟ ಭಾಷೆಯ ಜೊತೆಗೆ ಸಹವಾಸವಿರುವ ಹಿನ್ನೆಲೆಯಿಂದ ಬಂದವನು ಒಳ್ಳೆಯ ಸಾಮರ್ಥ್ಯವನ್ನು ಹೊಂದಿರುವುದು ಸ್ವಾಭಾವಿಕ. ಇವೆಲ್ಲವುಗಳಿಂದ ವಂಚಿತನಾಗಿರುವಾತ ಸಹಜವಾಗಿ ಕಡಿಮೆ ದಕ್ಷತೆಯನ್ನು ಹೊಂದಿರಲಿಕ್ಕೆ ಸಾಧ್ಯ. ಜಾತಿಯಾಧಾರಿತ ಸಾಮಾಜಿಕ ಪರಿಸರದಲ್ಲಿ ಹುಟ್ಟಿದಾರಭ್ಯದಿಂದ ಬರುವ ಸ್ಥಾನಮಾನಗಳನ್ನು ಇದ್ದಕ್ಕಿದ್ದಂತೆ ಅದಲು ಬದಲು ಮಾಡಿದಾಗ ಆಗುವ ಗೊಂದಲಗಳಷ್ಟೇ ಸಹಜವಾಗಿ ಕೆಳಸ್ತರದ ವ್ಯಕ್ತಿಯೊಬ್ಬ ಉನ್ನತ ಹುದ್ದೆಗೆ ಏರಿದಾಗ ಆಗುವುದಿದೆ. ಅದೇ ಒಂದೊಮ್ಮೆ ಆ ಕೆಳಸ್ತರದ ವ್ಯಕ್ತಿ ಎರಡು ಮೂರು ತಲೆಮಾರುಗಳವರೆಗೆ ಸುಶಿಕ್ಷಿತನಾಗಿದ್ದು, ತನ್ನ ಮಕ್ಕಳಿಗೆ ಶಿಕ್ಷಣವನ್ನು ಒದಗಿಸಿ ಉನ್ನತ ಹುದ್ದೆಗೆ ಕಳುಹಿಸಿದರೆ ಅವರು ಅತ್ಯಂತ ಸಮರ್ಥವಾಗಿ ಕಾರ್ಯನಿರ್ವಹಿಸುವ ಉದಾಹರಣೆಗಳೂ ಇವೆ. ಆಗ ಮೀಸಲಾತಿ ದಕ್ಷತೆಯ ಮೇಲೆ ಮಾರಕ ಪರಿಣಾಮವನ್ನು ಬೀರುವದಿಲ್ಲ.


ಜಾತಿಯಾಧಾರಿತ ಮೀಸಲಾತಿ ಮತ್ತು ಧರ್ಮನಿರಪೇಕ್ಷತೆ

ಮೀಸಲಾತಿ ಎನ್ನುವುದು ಜಾತಿಯನ್ನು ನಿರಂತರವಾಗಿ ಪೋಷಿಸಿಕೊಂಡು ಬರುವ ಜೊತೆಗೆ ಜಾತ್ಯತೀತತೆಯ ಗುಣಕ್ಕೆ ಪೆಟ್ಟು ಕೊಡುತ್ತದೆ ಎಂದು ವಾದ ಮಾಡುವವರೂ ಇದ್ದಾರೆ. ಭಾರತೀಯ ಸಮಾಜ ಮೂಲಭೂತವಾಗಿ ಜಾತಿಯಾಧಾರಿತ ಏಣಿಶ್ರೇಣಿಕೃತ ಸಮೂಹ. ಬೇರೆ ರಾಷ್ಟ್ರಗಳ ಸಮೂಹಗಳಲ್ಲಿ ಅಂತರಸಮೂಹಗಳ ಸಂಚಲನೆಗೆ ಅವಕಾಶವಿದೆ. ನಮ್ಮಲ್ಲಿದ್ದದ್ದು ಕೇವಲ ಸಮಾನಾಂತರ ಸಂಚಲನೆ ಮಾತ್ರ. ತಲೆತಲಾಂತರದಿಂದಲೂ ಮೇಲಿನ ಜಾತಿಯ ಜನರು ಮಾತ್ರ ಎಲ್ಲ ಬಗೆಯ ಹಕ್ಕು ಮತ್ತು ಸೌಲಭ್ಯಗಳನ್ನು ಅನುಭವಿಸುತ್ತಿರುವದಿತ್ತು. ಅದಕ್ಕೆ ಪೆಟ್ಟು ಬಿದ್ದದ್ದೇ ಈ ಮೀಸಲಾತಿಯಿಂದ. ಮೀಸಲಾತಿಯ ಮೂಲಕ ಕೆಳಸ್ತರದ ಸಮೂಹಗಳು ಮುಖ್ಯವಾಹಿನಿಗೆ ಬರುವ ಮೂಲಕ ಅಲ್ಲಿರುವ ನಿರ್ಬಂಧಗಳನ್ನು ಮೀರುವಂತಾದದ್ದು ಈ ಮೀಸಲಾತಿಯ ಮೂಲಕವೇ.. ಜೊತೆಗೆ ಸಾವಿರಾರು ವರ್ಷಗಳಿಂದ ಈ ಕೆಳಜಾತಿಗಳ ಬಗೆಗಿರುವ ಪೂರ್ವಾಗ್ರಹಗಳು ಕೂಡಾ ಸಡಿಲಗೊಳ್ಳಲು ಈ ಮೀಸಲಾತಿ ನೆರವಾಯಿತು. ಮೀಸಲಾತಿ ಎನ್ನುವುದು ಹಕ್ಕು ಮತ್ತು ಅವಕಾಶಗಳ ಸಮಾನ ಹಂಚಿಕೆಯನ್ನು ಕುರಿತು ಮಾತನಾಡುತ್ತದೆಯೇ ಹೊರತು ಜಾತ್ಯತೀತತೆಯ ವಿರೋಧ ನೆಲೆಯನ್ನಲ್ಲ, ಮೇಲಿನ ಸ್ತರಗಳು ಕೆಳಗಿನ ಸ್ತರಗಳನ್ನು ಅವು ಪಡೆಯುವ ಮೀಸಲಾತಿಯ ಕಾರಣಕ್ಕೆ ಅವುಗಳನ್ನು ದ್ವೇಷಿಸುವ ಗುಣವೇ ಜಾತ್ಯತೀತ ಮನೋಭಾವನೆಗೆ ಧಕ್ಕೆ ತರುವಂಥದಾಗಿದೆ.


■ ಡಾ.ಎಸ್.ಬಿ.ಜೋಗುರ

ರೈತರೊಬ್ಬರ ಆತ್ಮಹತ್ಯೆ ಸಂದರ್ಭದಲ್ಲಿ ಒಂದು ಅಡ್ಡ ಮಾತು

ಅಂಚಿನಿಂದ.....



ವಿಠ್ಠಲ ಅರಭಾವಿ ಬೆಳಗಾವಿಯ ಸುವರ್ಣಸೌಧದ ಮುಂದೆ ವಿಷ ಕುಡಿದಿದ್ದಾರೆ. ಈ ರೀತಿ ಅವರ ಜೀವ ಕೊನೆಗೊಂಡದ್ದರ ಹಿಂದೆ ಏನೋ ಸಂಚಿರಬಹುದೆಂದು ಸರ್ಕಾರ ನ್ಯಾಯಾಂಗ ತನಿಖೆಗೂ ಆದೇಶಿಸಿದೆ. ಈ ಸಾವಿನ ಸುತ್ತ ನಡೆದ ಎಲ್ಲಾ ಬೆಳವಣಿಗೆಗಳ ಪರಿಣಾಮವೆಂದರೆ,



ಸರ್ಕಾರವು ಸಕ್ಕರೆ ಕಾರ್ಖಾನೆಗಳು 2,500 ರೂ. ಕೊಡಲೇಬೇಕೆಂದು ಸ್ಪಷ್ಟ ಮಾತುಗಳಲ್ಲಿ ಹೇಳಲಾರಂಭಿಸಿದೆ ಮತ್ತು ತಾನು ಟನ್‌ಗೆ 150 ರೂ. ಸೇರಿಸಿ ಕೊಡುತ್ತೇನೆಂದು ವಾಗ್ದಾನ ಮಾಡಿದೆ. ಈ ಬಗ್ಗೆ ಅಬ್ಬರಿಸುತ್ತಿದ್ದ ಬಿಜೆಪಿಯಲ್ಲಿ ಹಲವು ಸಕ್ಕರೆ ಕಾರ್ಖಾನೆ ಮಾಲೀಕರು ಇರುವುದರಿಂದ ಹೋರಾಟ ಸದ್ಯಕ್ಕೆ ನಿಂತಿದೆ.

ಆದರೆ 2,500 ರೂ. ಕೊಡುವುದು ಸಾಧ್ಯವೇ ಇಲ್ಲ ಎಂದು ಸಕ್ಕರೆ ಕಾರ್ಖಾನೆ ಮಾಲೀಕರ ಸಂಘ ನಿನ್ನೆ ಸ್ಪಷ್ಟಪಡಿಸಿದೆ. ಒಂದು ವೇಳೆ 2,500 ರೂ. ಕೊಡಲ್ಲ ಎಂದು ಕಾರ್ಖಾನೆಗಳು ಹೇಳಿ, ಅರೆಯುವುದನ್ನು ನಿಲ್ಲಿಸಿದರೆ ಏನಾಗುತ್ತದೆ? ಈ ಕಾರ್ಖಾನೆಗಳನ್ನು ಸರ್ಕಾರ ವಶಕ್ಕೆ ತೆಗೆದುಕೊಂಡು ನಡೆಸಬೇಕು ಅಥವಾ ಕಬ್ಬು ಬೆಳೆಗಾರರ ವಶಕ್ಕೆ ಕೊಟ್ಟು ಸಹಕಾರಿ ನೀತಿಯಡಿ ನಡೆಸಬೇಕು ಎಂದು ಕೆಲವರು ಹೇಳಿದ್ದಾರೆ. ವಿಪರ್ಯಾಸವೆಂದರೆ ಒಂದು ಸಹಕಾರಿ ಸಕ್ಕರೆ ಕಾರ್ಖಾನೆಯ ಮತ್ತು ಒಂದು ಖಾಸಗಿ ಕಾರ್ಖಾನೆಯ ಮಾಲೀಕರಾದ (ಹೌದು ಸಹಕಾರೀ ಕಾರ್ಖಾನೆಗಳೂ ಸುದೀರ್ಘ ಅವಧಿಗೆ ಕೆಲವರದ್ದೇ ಖಾಸಗಿ ಆಸ್ತಿಯಂತೆ ಇರುತ್ತವೆ) ಉಮೇಶ್ ಕತ್ತಿ ಸಹಾ 'ಬೇಕಿದ್ದರೆ ಸರ್ಕಾರ ವಶಕ್ಕೆ ತೆಗೆದುಕೊಂಡು ನಡೆಸಲಿ' ಎಂದಿದ್ದಾರೆ. ಸರ್ಕಾರ ತೆಗೆದುಕೊಳ್ಳುವುದಿಲ್ಲ ಎಂದು ಅವರಿಗೆ ಖಾತ್ರಿಯಿದೆ.

ಏಕೆಂದರೆ ಸರ್ಕಾರದ ವಶದಲ್ಲಿರುವ ಐತಿಹಾಸಿಕ ಮಹತ್ವ ಹೊಂದಿರುವ ಮಂಡ್ಯದ ಮೈಷುಗರ್ ಕಾರ್ಖಾನೆಯು 200 ಕೋಟಿಗೂ ಹೆಚ್ಚು ನಷ್ಟದಲ್ಲಿದೆ. ಇಡೀ ರಾಜ್ಯದಲ್ಲಿ ಟನ್ ಕಬ್ಬಿಗೆ ಅತ್ಯಂತ ಕಡಿಮೆ ಇಳುವರಿ ಬರುವ ಕಾರ್ಖಾನೆಗಳಲ್ಲಿ ಇದೂ ಒಂದಾಗಿದೆ. ಐಎಎಸ್ ಅಧಿಕಾರಿಯೊಬ್ಬರ ನಿರ್ದೇಶನದಲ್ಲಿ ನಡೆಯುವ ಒಂದು ಸರ್ಕಾರೀ ಕಾರ್ಖಾನೆಯ ಸ್ಥಿತಿ ಹೀಗಿರುವಾಗ, ಸರ್ಕಾರದ ಮುಂದಿನ ಆಯ್ಕೆಗಳು ಸುಲಭವಿಲ್ಲ. ಕಬ್ಬು ಬೆಳೆಗಾರರ ಲಾಬಿಯು ಶಕ್ತಿಶಾಲಿಯಾದುದೇನೋ ಹೌದು. ಆದರೆ ಅದು ಸಕ್ಕರೆ ಕಾರ್ಖಾನೆ ಮಾಲೀಕರ ಲಾಬಿಗಿಂತ ಶಕ್ತಿಶಾಲಿಯಲ್ಲ. ಇದೇ ಕಬ್ಬು ಬೆಳೆಗಾರರೇ ಓಟು ಹಾಕಿ, ಕಾರ್ಖಾನೆ ಮಾಲೀಕರನ್ನು ಶಾಸಕರನ್ನಾಗಿಸುತ್ತಿದ್ದಾರೆ. ಈ ಮಾಲೀಕರಲ್ಲಿ ಕೆಲವರು ರಾಜ್ಯದಲ್ಲೇ ಅತ್ಯಂತ ಹೆಚ್ಚು ಮತಗಳ ಅಂತರದಿಂದ ಗೆದ್ದು ಬಂದಿದ್ದಾರೆ.




ಸುವರ್ಣಸೌಧ ಮತ್ತು ಕಬ್ಬು ಕುಳಗಳು

ಬೆಳಗಾವಿ ಜಿಲ್ಲೆಯಿಂದಲೇ ಗೆದ್ದು ಬಂದಿರುವ ಪ್ರಕಾಶ್ ಹುಕ್ಕೇರಿ ಸಕ್ಕರೆ ಮಂತ್ರಿ. ಇವರದ್ದೇ ಒಂದು ಸಕ್ಕರೆ ಕಾರ್ಖಾನೆಯೂ ಇದೆ. ಬೆಳಗಾವಿ ಮತ್ತು ಬಾಗಲಕೋಟೆ ಜಿಲ್ಲೆಗಳ ನೀರಾವರಿಯ ಪ್ರಮುಖ ಫಲಾನುಭವಿಗಳು ಇವರೇ ಆಗಿದ್ದಾರೆ. ಒಂದು ರೀತಿ ನೋಡಿದರೆ, ಸುವರ್ಣ ವಿಧಾನಸೌಧ ಇವರ ಶಕ್ತಿಸೌಧವೇ. ಒಂದು ರಾಜ್ಯದ ಆರ್ಥಿಕತೆಯು ಈ ರೀತಿ ಪ್ರದೇಶವಾರು ಹಂಚಿಹೋಗಿ, ಅಲ್ಲಲ್ಲಿನ ಸ್ಥಳೀಯ ಉದ್ದಿಮೆದಾರರು ತಮ್ಮ ತಿಜೋರಿಯನ್ನು ಕಾಯುವ ಪ್ರತ್ಯೇಕ ಸೌಧದ ನಿರ್ಮಾಣ ಮಾಡಿಕೊಳ್ಳಲು ಸಾಧ್ಯವೆಂದು ಇದರರ್ಥವಲ್ಲ. ಆದರೆ ಯಡಿಯೂರಪ್ಪನವರ ಕಾಲದಲ್ಲಿ ಮತ್ತಷ್ಟು ಪ್ರವರ್ಧಮಾನಕ್ಕೆ ಬಂದ ಲಿಂಗಾಯತ ರಾಜಕಾರಣಿ-ಉದ್ದಿಮೆದಾರರ ಪಾಲಿಗೆ ಸುವರ್ಣಸೌಧ ಪಕ್ಕದ ಎರಡೂ ಜಿಲ್ಲೆಗಳು ಬಂಗಾರವಾಗಿವೆ. ಆ ಕಾಲದಲ್ಲಿ ಕಟ್ಟಲ್ಪಟ್ಟ ಸುವರ್ಣಸೌಧದಲ್ಲಿ ತಾನು ಮಾತ್ರ ರಾರಾಜಿಸಬೇಕೆನ್ನುವ ಒಳಾಸೆ ಯಡಿಯೂರಪ್ಪನವರಲ್ಲಿ ಢಾಳಾಗಿ ಎದ್ದು ಕಾಣುತ್ತದೆ. ಹಾಗಾಗಿಯೇ ತನಗಿಂತ ಜಾತಿಯಲ್ಲಿ ಬೇರೆಯಾದ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿ ಅಲ್ಲಿ ಅಧಿವೇಶನ ನಡೆಸುತ್ತಿರುವುದು 'ಅನಿಷ್ಟ' ಎಂದು ಬಹಿರಂಗವಾಗಿ ಹೇಳುವ ಧಾರ್ಷ್ಟ್ಯವನ್ನು ಯಡ್ಡಿ ತೋರಿದರು.

ಇಲ್ಲಿನ ಕಬ್ಬು ಕುಬೇರರಲ್ಲಿ ಕೇವಲ ಬಿಜೆಪಿಯವರು ಮಾತ್ರವಿಲ್ಲ. ಆ ಪಟ್ಟಿಯಲ್ಲಿ ಕಾಂಗ್ರೆಸ್‌ನವರೂ ಸಮಪಾಲು ಹೊಂದಿದ್ದಾರೆ. ಜಮಖಂಡಿ ಷುಗರ್ಸ್ - ಸಿದ್ದು ನ್ಯಾಮಗೌಡ, ಬದಾಮಿ ಷುಗರ್ (ಈಗ ಮುಚ್ಚಿದೆ) - ಚಿಮ್ಮನಕಟ್ಟಿ, ಬೀಳಗಿ ಷುಗರ್ಸ್ -ಎಸ್.ಆರ್.ಪಾಟೀಲ್, (ಈ ಮೂರೂ ಮಾಜಿ ಕಾಂಗ್ರೆಸ್ ಶಾಸಕರ ಸಕ್ಕರೆ ಕಾರ್ಖಾನೆಗಳಲ್ಲಿ ಬಿಜೆಪಿ ನಾಯಕ ಮುರುಗೇಶ್ ನಿರಾಣಿಯ ಕುಟುಂಬದ ಪಾಲಿದೆ), ಪ್ರಭುಲಿಂಗೇಶ್ವರ ಷುಗರ್- ಜಗದೀಶ ಗುಡಗುಂಟಿ (ಕಾಂಗ್ರೆಸ್), ಕೃಷ್ಣ ಸಕ್ಕರೆ ಕಾರ್ಖಾನೆ - ಲಕ್ಷ್ಮಣ ಸವದಿ (ಸಹಕಾರಿ ವಲಯದಲ್ಲಿದ್ದರೂ ಇವರದ್ದೇ ಪಾರುಪತ್ಯ, ಜೊತೆಗೆ ಕೃಷ್ಣಾ ಮಿಲ್‌ನ ಒಡೆತನವೂ ಇವರದ್ದೇ), ಸತೀಶ್ ಷುಗರ್ಸ್ - ಜಾರಕಿಹೊಳಿ, ಬೋರಗಾಂವ್ ಹತ್ತಿರದ ಸಕ್ಕರೆ ಕಾರ್ಖಾನೆ- ಪ್ರಭಾಕರ ಕೋರೆ, (ಇದರ ಜೊತೆಗೆ ಚಿಕ್ಕೋಡಿ ಹತ್ತಿರ ದೂದಗಂಗಾ ಸಹಕಾರಿ ಸಕ್ಕರೆ ಕಾರ್ಖಾನೆ ಹಿಡಿತವಲ್ಲದೇ, ಬೆಳಗಾವಿಯ ಪ್ರತಿಷ್ಠಿತ ಕೆ.ಎಲ್.ಇ. ಸಂಸ್ಥೆಯ ಹಿಡಿತ ಕೋರೆಯದ್ದು). ಬೆಲ್ಲದ ಬಾಗೇವಾಡಿ ವಿಶ್ವನಾಥ ಷುಗರ್ - ಉಮೇಶ್ ಕತ್ತಿ (ಸಂಕೇಶ್ವರದ ಹತ್ತಿರ ಹಿರಣ್ಯಕೇಶಿ ಸಹಕಾರಿ ಕಾರ್ಖಾನೆಯ ಹಿಡಿತ ಇವರ ಕೈಲೇ), ರಾಯಭಾಗ ಷುಗರ್ಸ್ ಒಡೆತನ ಹೊಂದಿದ್ದವರು ವಿ.ಎಲ್.ಪಾಟೀಲ್ (ಈಗ ರೇಣುಕಾ ಷುಗರ್‌ಗೆ ಮಾರಿದ್ದಾರೆ). ಇವರೆಲ್ಲಾ ಒಟ್ಟಾದರೆ, ಸರ್ಕಾರಕ್ಕೆ ಕಬ್ಬು ಬೆಳೆಗಾರರ ಹಿತ ಕಾಯಲು ಸಾಧ್ಯವಾಗುವುದೇ?

ಕೇಂದ್ರ ಸರ್ಕಾರಕ್ಕೆ ಒಂದು ನಿಯೋಗವನ್ನು ಕೊಂಡೊಯ್ಯುವುದಾಗಿಯೂ ರಾಜ್ಯ ಸರ್ಕಾರ ಹೇಳಿದೆ. ಕೇಂದ್ರದಲ್ಲಿ ಇದಕ್ಕೆ ಸಂಬಂಧಿಸಿದ ಸಚಿವ ಸಂಪುಟ ಸಮಿತಿಯ ಅಧ್ಯಕ್ಷ ಶರದ್ ಪವಾರ್. ಸಕ್ಕರೆ ಲಾಬಿಯ ಅತ್ಯಂತ ಶಕ್ತಿಶಾಲಿ ನೇತಾರ ಶರದ್ ಪವಾರ್. ಆತನಿಂದ



ಇನ್ನೇನು ನಿರೀಕ್ಷಿಸಲು ಸಾಧ್ಯ? ಕಬ್ಬು ಬೆಳೆ, ಸಕ್ಕರೆ ಕಾರ್ಖಾನೆ, ಬೆಲೆ ನಿಗದಿಯೆಂಬ ವಿದ್ಯಮಾನದ ಸುತ್ತ ಒಂದು ಬಲವಾದ ರಾಜಕೀಯಾರ್ಥಿಕ ಸನ್ನಿವೇಶ ನಿರ್ಮಾಣವಾಗಿದೆ. ಅದರ ಅಪಾಯಗಳ ಕುರಿತ ಕನಿಷ್ಠ ಯೋಚನೆ ರೈತರಿಗಿರಲಿ, ರೈತ ನಾಯಕರಿಗೂ ಇಲ್ಲ. ಏಕೆಂದರೆ ಇಂದು ಈ ರಾಜ್ಯದ ಅತ್ಯಂತ ದೊಡ್ಡ ರೈತ ಸಂಘಟನೆ ಎಂದರೆ ಅದು ಕಬ್ಬು ಬೆಳೆಗಾರರ ಸಂಘಟನೆಯೇ. ಅದು ಕಬ್ಬು ಬೆಳೆಗಾರರ ಸಂಘ ಮಾತ್ರವಲ್ಲ, ಎರಡೂ ರೈತ ಸಂಘಗಳೂ ಪ್ರಧಾನವಾಗಿ ಕಬ್ಬು ಬೆಳೆಗಾರರ ಹಿತಾಸಕ್ತಿಯನ್ನು ಮುಖ್ಯವಾಗಿ ಪ್ರತಿನಿಧಿಸುತ್ತವೆ.

ನಮ್ಮ ನೀರಾವರಿ ಪ್ರದೇಶದಲ್ಲಿ ದಿನೇದಿನೇ ಹೆಚ್ಚೆಚ್ಚು ವ್ಯಾಪಿಸುತ್ತಿರುವ ಕಬ್ಬು ಬೆಳೆಯ ಸುತ್ತಲಿನ ಇಡೀ ವಿದ್ಯಮಾನ 'ರೈತರ ಆತ್ಮಹತ್ಯೆ'ಯನ್ನೂ ವ್ಯಾಪಕವಾಗಿಸಲಿದೆ. ಕಾಫಿ, ಅಡಿಕೆ ಬಿಟ್ಟರೆ ಅತ್ಯಂತ ಹೆಚ್ಚಿನ ಕಾಸು ತರುವ ಸಾಧ್ಯತೆ ಇರುವ ಕಬ್ಬು 2007ರಲ್ಲಿ ಹಲವು ರೈತರ ಆತ್ಮಹತ್ಯೆಗೆ ಕಾರಣವಾಗಿತ್ತು, ಹೆಚ್ಚೆಚ್ಚು ಮಾರುಕಟ್ಟೆ ಹಿತಾಸಕ್ತಿಗಳ ಅಂದರೆ ಉದ್ದಿಮೆಪತಿಗಳ ವಶಕ್ಕೆ ಯಾವ ವಸ್ತು ಹೋಗುತ್ತದೆಯೋ ಆ ಉದ್ದಿಮೆಯ ಅತ್ಯಂತ ಕೆಳಗಿನ ಪಾಲುದಾರರು (stake holder) ಒಂದು ಚಕ್ರವ್ಯೂಹದೊಳಗೆ ಸಿಲುಕಿ ಅಪಾಯಕ್ಕೆ ಸದಾ ಸಿದ್ಧರಿರಬೇಕಾಗುತ್ತದೆ. ಅಂತಹ ಚಕ್ರವ್ಯೂಹವು ನಮ್ಮ ಕಬ್ಬು ಬೆಳೆಗಾರರನ್ನು ಸುತ್ತಿಕೊಳ್ಳುತ್ತಿದೆ.

ರೈತ ಸಂಘಟನೆಗಳು ಈಚೀಚೆಗೆ ಎ... ರೈತರ - ಅಂದರೆ, ಒಣ ಪ್ರದೇಶದ ರೈ... ಮತ್ತು ವಿವಿಧ ಬೆಳೆಗಳ ರೈತರ - ಹಿತಾಸಕ್ತಿ... ಕುರಿತು ಮಾತನಾಡುತ್ತಿವೆ. ಆದರೆ ಎ... ರೈತರನ್ನೂ ಆವರಿಸುತ್ತಿರುವ ಆರ್ಥಿಕ ನೀತಿ... ವಿರುದ್ಧ ಎಲ್ಲರನ್ನೂ ಒಟ್ಟುಗೂಡಿಸುವ... ವಿಫಲವಾಗುತ್ತಿವೆ. ಬದಲಿಗೆ ರೈ... ಸಂಘವೆಂಬುದು ವಿವಿಧ ಬೆಳೆಗಳನ್ನು ಬೆಳೆಯು... ರೈತರ ಒಕ್ಕೂಟದಂತೆ ಕೆಲಸ ನಿರ್ವಹಿಸಬೇಕಾ... ಸಮಸ್ಯೆಯಲ್ಲಿ ಸಿಕ್ಕಿಕೊಂಡಿದೆ. ಆಗ ಬಲಾಢ್ಯವಾ... ಬೆಳೆ ಬೆಳೆಯುವ ಬಲಾಢ್ಯ ರೈತರ ಹಿತಾ... ಆ ಒಕ್ಕೂಟದ ಹೆಚ್ಚಿನ ಗಮನ, ಶಕ್ತಿ ಮತ್ತು ಸಮಯವ... ತೆಗೆದುಕೊಳ್ಳುತ್ತದೆ. ಉಳಿದ ಬೆಳೆಗಾರರು ಇದರ ವ... ಬಸವಳಿಯುತ್ತಾರೆ. ಅಂತಿಮ ಸರದಿ ಬಲಾಢ್ಯರ... ಆಗಿರುತ್ತದೆ. ಏಕೆಂದರೆ ಬಲಾಢ್ಯ ರೈತರಿಗಿಂತ, ಬಲ... ಉದ್ದಿಮೆದಾರರ ಹಿಡಿತವೇ ಸರ್ಕಾರದ ಮೇಲೆ ಹೆಚ್ಚಿರು...

ಕಬ್ಬು ಬೆಳೆ, ಅದರ ಉಪ ಉತ್ಪನ್ನಗಳು - ಎಥೆನಾ... ವಿದ್ಯುತ್ - ಎಲ್ಲವೂ ಬೇಕು ನಿಜ. ಆದರೆ ಅದು ನೆಲದ ಸತ್ವವನ್ನು, ಸುತ್ತಲಿನ ಗಾಳಿಯ... ಮಲಿನಗೊಳಿಸಬಾರದು. ಉದ್ದಿಮೆಯು ಗ... ಹಿರಿದಾದಂತೆಲ್ಲಾ ಉದ್ದಿಮೆದಾರರ ಪಾತ್ರ ಹಿರಿದಾಗು... ಆಗ ಸಾಮಾನ್ಯರನ್ನು ರಕ್ಷಿಸುವ ಸಮಾಜವಾದಿ ಸಕ... ಈ ದೇಶದಲ್ಲಿ ಆಡಳಿತ ನಡೆಸುತ್ತಿಲ್ಲ ಎಂಬುದ... ಮರೆಯಲಾದೀತೇ? ಇದನ್ನು ನಾವೆಲ್ಲರೂ ... ಅರಿತುಕೊಳ್ಳದಿದ್ದರೆ, ಮತ್ತಷ್ಟು ವಿಠ್ಠಲ ಅರಭಾವಿಗಳು ಕುಡಿಯುವ ಪರಿಸ್ಥಿತಿ ನಿರ್ಮಾಣವಾಗುತ್ತದೆ.

ಬಯಲುಸೀಮೆಯ ಶಾಶ್ವತ ನೀರಾವರಿ ಹೋರಾಟ ಮತ್ತು ಶಾಶ್ವತ ಪರಿಹಾರ

ಬಯಲುಸೀಮೆಯ ಬರಪೀಡಿತ ಜಿಲ್ಲೆಗಳಿಗೆ ಪಶ್ಚಿಮಾಭಿಮುಖಿ ನದಿ ನೀರಿನ ಒಂದು ಭಾಗವನ್ನು ತಿರುಗಿಸುವ ಯೋಜನೆ ಬಹುಕಾಲದಿಂದ ಚರ್ಚೆಯಲ್ಲಿದೆ. ಈ ವಿಚಾರ ಬಂದಾಗ, ಮೊದಲು ತಲೆ ಕೆಡಿಸಿಕೊಳ್ಳಬೇಕಾದ್ದು, ಇಲ್ಲಿನ ಕೆರೆಗಳ ಪುನಶ್ಚೇತನದ ಬಗ್ಗೆ, ಅಂತರ್ಜಲದ ಮಟ್ಟ ಹೆಚ್ಚಿಸುವ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುವ ಬಗ್ಗೆ ಎಂದು ಯಾರಾದರೂ ಹೇಳಿದರೆ, ಅದನ್ನೂ ಅಡ್ಡ ಮಾತು ಎಂದೇ ಬಗೆಯುವ ಸಾಧ್ಯತೆಗಳಿವೆ. ಸಾಮಾನ್ಯ ಜನರನ್ನೂ ಅವಾಸ್ತವ ಸಂಗತಿಗಳ ಮೇಲೆ ರೊಚ್ಚಿಗೆಬ್ಬಿಸಿದಾಗ, ಸತ್ಯವನ್ನು ಮಾತಾಡುವುದು ಕಷ್ಟದ ಸಂಗತಿ. ಅದು ನಂತರದ ಕಾಲದಲ್ಲಿ ಸತ್ಯವಾದಾಗ ಮಾತ್ರ ಈ ಸತ್ಯಕ್ಕೆ ಬೆಲೆ ಬರುತ್ತದೆ.

ಶಾಶ್ವತ ನೀರಾವರಿ ಯೋಜನೆಯ ವಿಚಾರದಲ್ಲೂ ಅದೇ ಆಗುತ್ತಿದೆ. ಜಿ.ಎಸ್.ಪರಮಶಿವಯ್ಯನವರ ವರದಿಯ ಪ್ರಕಾರ ನೇತ್ರಾವತಿ ನದಿಗೆ ಸೇರಿಕೊಳ್ಳುವ ಹಳ್ಳಗಳ ನೀರನ್ನು ತಿರುಗಿಸುವ ಮಾತು ದೂರವೇ ಉಳಿಯಿತು. ಅದರ ಕುರಿತು ಬಲವಾಗಿ ವಾದ ಮಂಡಿಸುತ್ತಿದ್ದವರೇ, ಈಗ ಆ ಯೋಜನೆ ಸಾಧ್ಯವಾಗದು ಎನ್ನುತ್ತಿದ್ದಾರೆ. ಆ ಕಡೆ ಗುಂಡ್ಯ ವಿದ್ಯುತ್ ಯೋಜನೆ ಯೋಜಿಸಿದ್ದನ್ನು ಮರೆತಂತೆ, ಅದೇ ನೀರನ್ನು ಈ ಕಡೆಗೆ ತಿರುಗಿಸುವ ಎತ್ತಿನಹೊಳೆ ಯೋಜನೆ ರೂಪಿಸಿ ನಗೆಪಾಟಲಿಗೀಡಾಗಿದ್ದಾರೆ.

ಈ ಮಧ್ಯೆ ತ್ಯಾಗರಾಜ್ ವರದಿ ಮತ್ತು ಡಾ.ಮಧು ಸೀತಪ್ಪ ವರದಿ(?!)ಗಳೂ ಸರ್ಕಾರದ ಮುಂದಿವೆ. ಬೆಳಗಾವಿ ಅಧಿವೇಶನಕ್ಕೆ ಮುಂಚೆ ಸಿದ್ದರಾಮಯ್ಯನವರು ನಡೆಸಿದ ಸಭೆಯಲ್ಲಿ ಎತ್ತಿನಹೊಳೆಯನ್ನೇ ಮಾಡಿಬಿಡೋಣ ಎಂದು ತೀರ್ಮಾನಿಸಿರುವ ಸುದ್ದಿಗಳಿವೆ. ಅಂತಿಮವಾಗಿ ಲೋಕಸಭಾ ಚುನಾವಣೆಗೆ ಮುಂಚೆ ಅದರದ್ದೊಂದು ಶಂಕುಸ್ಥಾಪನೆ ಮಾಡಿ, ಚುನಾವಣೆಯಲ್ಲಿ ಮುಖ ಉಳಿಸಿಕೊಳ್ಳುವುದು; ನಂತರ ಯಾರಾದರೂ ಉನ್ನತ ನ್ಯಾಯಾಲಯಗಳಲ್ಲಿ ಅದಕ್ಕೊಂದು ತಡೆಯಾಜ್ಞೆ ತರುವಂತೆ ನೋಡಿಕೊಂಡು ಇನ್ನೊಂದು ದಶಕ ಎಳೆಯುವುದು ಇಷ್ಟೇ ನಡೆಯುವ ಸಾಧ್ಯತೆ ಇದೆ.


ಹಾಗಾಗಿ 'ಅಡ್ಡ ಮಾತು' ಆಡಿದವರು ಮುಂದಿಟ್ಟಿರುವ ಸ್ಥಳೀಯ ಜನಸಂಪನ್ಮೂಲಗಳ ಸದ್ಬಳಕೆಯ ಕುರಿತು ಮೊದಲ ಆದ್ಯತೆಯನ್ನು ನೀಡಿ, ಒಂದು ತಾತ್ಕಾಲಿಕ ಪರಿಹಾರವಾಗಿ ಪಶ್ಚಿಮಾಭಿಮುಖಿ ನೀರನ್ನೂ ತಂದುಕೊಳ್ಳುವ ಸಾಧ್ಯಾಸಾಧ್ಯತೆ ಪರಿಶೀಲಿಸಿದರೆ ಮಾತ್ರ 'ಶಾಶ್ವತ ನೀರಾವರಿ' ಸಾಧ್ಯ.

ಕಬ್ಬು, ಭತ್ತ, ಮುಸುಕಿನ ಜೋಳ, ಅಡಿಕೆ, ಕಾಫಿ: ಇವಿಷ್ಟರಿಂದ ನಮ್ಮ ಹೊಟ್ಟೆ ತುಂಬಬಲ್ಲದೇ?

ಹೊಸದಾಗಿ ನೀರಾವರಿಯಾಗುವ ಎಲ್ಲಾ ಕಡೆಗಳಲ್ಲೂ ಕಬ್ಬು ಅಥವಾ ಭತ್ತವನ್ನೇ ಹೆಚ್ಚೆಚ್ಚು ಬೆಳೆಯಲಾಗುತ್ತದೆ. ಇಡೀ ಮಲೆನಾಡು ಕಾಫಿ ಅಥವಾ ಅಡಿಕೆಯ ತೋಟವಾಗುವ ಕಡೆಗೆ ನಡೆದಿದೆ. ಇನ್ನು ಒಣ ಪ್ರದೇಶಗಳಲ್ಲೆಲ್ಲಾ ಮುಸುಕಿನ ಜೋಳ ಆವರಿಸುತ್ತಿದೆ. ಬೇಳೆ ಕಾಳುಗಳು, ಎಣ್ಣೆ ಕಾಳುಗಳು, ತರಕಾರಿ, ರಾಗಿಯಂತಹ ಕಿರುಧಾನ್ಯಗಳು ಇವ್ಯಾವಕ್ಕೂ ನಮ್ಮ 'ಕೃಷಿ ಪದ್ಧತಿ'ಯಲ್ಲಿ ಆಸ್ಪದವಿಲ್ಲದಂತೆ ಆಗಿದೆ. ಮುಸುಕಿನ ಜೋಳದ್ದೊಂದೇ ಉದಾಹರಣೆ ತೆಗೆದುಕೊಳ್ಳುವುದಾದರೆ, ಈ ಬೆಳೆ ವಾರ್ಷಿಕ ಶೇ.8ರ ದರದಲ್ಲಿ ಬೆಳೆಯುತ್ತಿದೆ. (1960-0.11, 1970-0.63, 1980-1.57, 1990-2.50, 2000-6.69, 2010-12.87 - ಲಕ್ಷ ಹೆಕ್ಟೇರುಗಳಲ್ಲಿ) ಇದೇ ರೀತಿಯ ಅಂಕಿ ಅಂಶಗಳನ್ನು ಕಬ್ಬು ಭತ್ತ ಅಡಿಕೆ ಮತ್ತು ಕಾಫಿಯ ವಿಚಾರದಲ್ಲೂ ನೋಡಬಹುದು.

ಮನೆಯ ಸುತ್ತ ಕಿರುತೋಟ, ಹಿತ್ತಲ ತೋಟಗಳು ಮಲೆನಾಡಿನಲ್ಲೂ ಕಣ್ಮರೆಯಾಗುತ್ತಿರುವ ಸಂದರ್ಭದಲ್ಲಿ ಬಹುವೈವಿಧ್ಯದ ಬೆಳೆಗಳ ನಾಶವು ಸಾಮಾನ್ಯ ಜನರ ಆಹಾರ ಸ್ವಾವಲಂಬನೆಯ ಮೇಲೆ ಉಂಟು ಮಾಡುವ ಪರಿಣಾಮಗಳು ಹಲವು. ಅದು ಆಹಾರದ ವೈವಿಧ್ಯವನ್ನಷ್ಟೇ ಕಸಿಯುವುದಿಲ್ಲ; ಅದರ ಪೌಷ್ಟಿಕಾಂಶಗಳನ್ನೂ ಸೀಮಿತಗೊಳಿಸುತ್ತದೆ. ಆ ಪೌಷ್ಟಿಕಾಂಶಗಳನ್ನು ತುಂಬಿಕೊಳ್ಳಲು ಬಹುರಾಷ್ಟ್ರೀಯ ಕಂಪೆನಿಗಳು ಉತ್ಪಾದಿಸುವ ಫ್ಲೇವರ್ಡ್ ಪುಡಿಗಳು, ಮಾತ್ರೆಗಳನ್ನು ಕೊಳ್ಳಬೇಕಾಗುತ್ತದೆ. ಡಾಕ್ಟರುಗಳು ಜನರು ಮತ್ತು ಕಂಪೆನಿಗಳೆರಡರ ಕಡೆಯಿಂದಲೂ ದುಡ್ಡು ದುಡಿದುಕೊಳ್ಳುತ್ತಾರೆ.

ಈ ರೀತಿ ನಮ್ಮ ಬೆಳೆಗಳನ್ನು ನಿರ್ಧರಿಸುತ್ತಿರುವವರು ಯಾರು? ರೈತರಾ? ಈ ರಾಜ್ಯದ ಬೆಳೆಗಾರರ, ಗ್ರಾಹಕರ, ನಿಸರ್ಗದ ದೂರಗಾಮಿ ಹಿತಾಸಕ್ತಿಯಾ? ಅಲ್ಲ, ಅದು ಮಾರುಕಟ್ಟೆಯ ತಕ್ಷಣದ ಹಿತಾಸಕ್ತಿ ಮಾತ್ರ. ಇದರ ದೂರಗಾಮಿ ಪರಿಣಾಮಗಳೇನೇ ಇರಬಹುದಾದರೂ, ಅದು ಈ ನೆಲದ ಮಕ್ಕಳ ಮತ್ತು ನೆಲದ ವಿರುದ್ಧವಾಗಿ ಇರುತ್ತದೆಂಬುದನ್ನು ಊಹಿಸಲು ಪಾಂಡಿತ್ಯದ ಅಗತ್ಯವೇನೂ ಇಲ್ಲ.




ಯೋಗೇಶ್ ಮಾಸ್ಟರ್ ಪುರಾಣದ ಹೂರಣ

ಭಾಗ್ಯದ ಲಕ್ಷ್ಮಿ ಬಾರಮ್ಮ

ಲಕ್ಷ್ಮಿಯ ಪರಿಕಲ್ಪನೆಯೇ ಅಮೋಘವಾದುದು ಮತ್ತು ಬಹುಕಾಲವಾದುದು. ತೀರಾ ಸಾಮಾನ್ಯರಿಂದ ಹಿಡಿದು ಪಂಡಿತ, ಅಧ್ಯಾತ್ಮ ಸಾಧಕರವರೆಗೂ ಎಲ್ಲಾ ಬಗೆಯ ವಿವರಣೆಗಳಿಗೂ ಈಕೆ ವಸ್ತು, ಇವಳನ್ನು ಪ್ರತಿಮಾರೂಪದಲ್ಲಿ ಕಾಣುವುದು ಸಂಪತ್ತಿನ ಸಂಕೇತವಾಗಿಯಾದರೂ ಅವಳ ಮೂಲವೇ ಆಸೆ ಮತ್ತು ಭಯ. ಸುಖ-ಸಂಪತ್ತಿನ ಆಸೆ ಮತ್ತು ಅದನ್ನು ಕಳೆದುಕೊಳ್ಳುವ ಭಯ. ಹಾಗಾಗಿ ಮೂಢನಂಬಿಕೆಯ ಮಹಾಗ್ರಾಸ ಈ ಲಕ್ಷ್ಮಿ ಎಂಬ ವಸ್ತು.

ಲಕ್ಷ್ಮಿ ಎಂಬ ಹೆಸರಿನ ಜೊತೆಜೊತೆಗೆ ಅವಳ ಅಕ್ಕ ಎನಿಸಿಕೊಳ್ಳುವ ಜ್ಯೇಷ್ಠ ಲಕ್ಷ್ಮಿ (ಅಲಕ್ಷ್ಮಿ ಅಥವಾ ದರಿದ್ರಲಕ್ಷ್ಮಿ) ನಕಾರಾತ್ಮಕ ಪ್ರಭಾವ ಉಂಟು ಮಾಡುವವಳು ಎಂದಾದರೆ, ಮಹಾಲಕ್ಷ್ಮಿ, ಭಾಗ್ಯಲಕ್ಷ್ಮಿ, ಅಷ್ಟ ಲಕ್ಷ್ಮಿಯರು ಇತ್ಯಾದಿಗಳ ಪರಿಕಲ್ಪನೆಯು ಸಕಾರಾತ್ಮಕವಾದ ಪ್ರಭಾವವನ್ನು ಉಂಟು ಮಾಡುವವಳು. ಯಾರಿಗೆ ಬೇಕು ದರಿದ್ರ? ಹಾಗಾಗಿ ಅಲಕ್ಷ್ಮಿಯನ್ನು ಕಂಡರೆ ಅಲಕ್ಷ್ಯ ಅಥವಾ ಭೀತಿ. ಅವಳು ಬೇಡವಾದವಳು. ಎಲ್ಲರಿಗೂ ಸುಖ-ಸಂಪತ್ತು ಬೇಕು. ಹಾಗಾಗಿ ಭಾಗ್ಯದ ಲಕ್ಷ್ಮಿ ಬಾರಮ್ಮ ಎಂದು ಹಾಡಿ, ಕೊಂಡಾಡಿ ಕರೆಯುವುದು.

ಜನ ಜೀವನದಲ್ಲಿ ಹಾಸುಹೊಕ್ಕಾಗಿ ಹೋಗಿರುವ ನಂಬಿಕೆಯ ಸಾಂಕೇತಿಕ ನಡವಳಿಕೆಗಳಲ್ಲಿ ಲಕ್ಷ್ಮಿಯದೇ ಸಿಂಹಪಾಲು. ಅಂಗಡಿ ಅಥವಾ ಮನೆಗಳಲ್ಲಿ ಸಂಜೆ ದೀಪ ಹೊತ್ತಿಸಿದ ನಂತರ ಉಪ್ಪು, ಸೂಜಿ ಇತ್ಯಾದಿ ವಸ್ತುಗಳನ್ನು ಕೊಡದಿರುವುದು, ಸಂಜೆಯ ಹೊತ್ತು ಮಲಗಬಾರದು, ವ್ಯಾಪಾರದ ಹೊತ್ತಲ್ಲಿ ತಲೆಯ ಮೇಲೆ ಕೈಯಿಟ್ಟುಕೊಂಡು ಕುಳಿತುಕೊಳ್ಳುವುದು ಅಥವಾ ಕಾಲುಗಳನ್ನು ಮಡಿಸಿ, ಅವುಗಳನ್ನು ಕೈಗಳಿಂದ ಬಂಧಿಸಿಕೊಂಡು ಕುಳಿತುಕೊಳ್ಳಬಾರದು, ಎಡಗೈಯಿಂದ ಕೊಡಬಾರದು, ಹಣವನ್ನು ತೋರುಬೆರಳು ಮತ್ತು ಮಧ್ಯದ ಬೆರಳುಗಳಿಂದ ಕತ್ತರಿಯಂತೆ ಮಾಡಿ ಕೊಡಬಾರದು, ಶುಕ್ರವಾರ ಹಣ ಕೊಡಬಾರದು, ದೇವರಿಗೆ ದೀಪ ಹೊತ್ತಿಸಿದ ತಕ್ಷಣ ಹಣ ಕೊಡಬಾರದು; ಈ ಬಗೆಯ ನಂಬುಗೆಗಳು ಲಕ್ಷ್ಮಿಯನ್ನು ಕಳೆದುಕೊಳ್ಳುವ ಭಯದಿಂದ ಹುಟ್ಟಿಕೊಂಡವಾದರೆ, ಅವಳನ್ನು ಬರಮಾಡಿಕೊಳ್ಳಲು ಮತ್ತು ಉಳಿಸಿಕೊಳ್ಳುವ ಆಸೆಯಿಂದ ಮತ್ತಷ್ಟು ನಂಬಿಕೆಗಳು ಹುಟ್ಟಿಕೊಂಡಿವೆ. ದೇವರಿಗೆ ದೀಪ ಹಚ್ಚಿದ್ದೇನೆ ಅಥವಾ ಇಂದು ಶುಕ್ರವಾರ ಹಣ ಕೊಡುವುದಿಲ್ಲ ಎಂದು ನಿರ್ದಾಕ್ಷಿಣ್ಯವಾಗಿ ಮುಖಭಂಗ ಮಾಡಿರುವ ಎಷ್ಟೋ ಅಮಾನವೀಯ ಸಂಗತಿಗಳನ್ನು ನಾನು ನೇರವಾಗಿ ನೋಡಿದ್ದೇನೆ. ತೀರಾ ಅಚ್ಚರಿಯೆನಿಸುವಷ್ಟು, ಕೆಲವೊಮ್ಮೆ ಅಸಹನೀಯವಾಗುವಷ್ಟು ಕೆಲವರು ಲಕ್ಷ್ಮಿಯ ವಿಷಯದಲ್ಲಿ ತುಂಬಾ ಪೊಸೆಸಿವ್ ಆಗಿ ಜನ ವರ್ತಿಸುತ್ತಾರೆ.



ಲಕ್ಷ್ಮಿಯ ವಿಷಯದಲ್ಲಿ ನನಗೆ ತುಂಬಾ ಆಶ್ಚರ್ಯ ಮತ್ತು ತಮಾಷೆ ಎನಿಸುವಂತಹದ್ದು ಎಂದರೆ, ಆಕೆಯ ಕ್ಯಾಲೆಂಡರ್ ಆರ್ಟ್ ಅಭಿವ್ಯಕ್ತಿಯಲ್ಲಿ ಅದು ಕಾಲದಿಂದಕಾಲಕ್ಕೆ ಬದಲಾಗುತ್ತಾ ಬಂದದ್ದು. ಹಳೆಯ ಚಿತ್ರಗಳಲ್ಲಿ ಸ್ವರ್ಣಾಭರಣಗಳನ್ನು, ಚಿನ್ನದ ನಾಣ್ಯಗಳನ್ನು ಸುರಿಸುತ್ತಿದ್ದರೆ, ನಂತರ ಕೆಲವು ಚಿತ್ರಗಳಲ್ಲಿ ಮೂರು ಮುಖದ ಸಿಂಹದ ನಾಣ್ಯಗಳನ್ನು ಸುರಿಸುತ್ತಿದ್ದಳು. ನಂತರದ ಇತ್ತೀಚಿನ ಕಾಲದ ಚಿತ್ರಗಳಲ್ಲಂತೂ ಕರೆನ್ಸಿಗಳನ್ನೂ ಸುರಿಸುತ್ತಿದ್ದಳು. ಲಕ್ಷ್ಮಿ-ಸಂಪದವೆಂದರೆ ಹಣ ಎಂಬ ತಪ್ಪು ಕಲ್ಪನೆಯ ಪರಮಾವಧಿಯದು. ಪತ್ರಿಕೆಗಳ ಪ್ರಬಂಧಗಳಲ್ಲಿ ವರ ಲಕ್ಷ್ಮಿ ಹಬ್ಬದಲ್ಲಿ ಐವತ್ತು, ನೂರು, ಐನೂರು, ಸಾವಿರದ ನೋಟುಗಳನ್ನು ವಿನ್ಯಾಸವಾಗಿ ಜೋಡಿಸಿ ಕಲಶದ ಮುಂದಿಟ್ಟು ಪೂಜೆ ಮಾಡುತ್ತಾರೆ ಎಂದೆಲ್ಲಾ ಹಬ್ಬದ ವಿವರಗಳನ್ನು ಈಗ ಬರೆಯುವುದು ನನ್ನ ಲೇಖನದ ಉದ್ದೇಶಕ್ಕೆ ಅಷ್ಟೇನೂ ಹೊಂದುವುದಿಲ್ಲ.

ಲಕ್ಷ್ಮಿಯ ಪರಂಪರೆ

ನಮ್ಮಲ್ಲಿ ಲಕ್ಷ್ಮಿ ಎಂದಾಕ್ಷಣ ಕೆಂದಾವರೆಯ ಪೀಠದಲ್ಲಿ ಕುಳಿತಿರುವ ಅಥವಾ ಬಣ್ಣದ ವಸ್ತ್ರವನ್ನು ಹೊದ್ದ ಅಥವಾ ಕ್ಷೀರಸಾಗರದಲ್ಲಿ ಶೇಷಶಾಯಿಯಾಗಿರುವ ವಿಷ್ಣುವಿನ ಪದತಲದಲ್ಲಿ ಕುಳಿತು ಕಾಲನ್ನು ಒತ್ತುತ್ತಿರುವ ಸುಂದರ ಸ್ತ್ರೀದೇವತೆಯ ಕಲ್ಪನೆ ಬರುವುದು. ಅದೇ ಚಿತ್ರಗಳನ್ನು ನಾವು ನೋಡಿರುವುದು ಕೂಡ. ಈ ಲಕ್ಷ್ಮೀಪತಿ-ವಿಷ್ಣುವಿನ ಸತಿಯಾಗಿರುವ ಈ ಸಿರಿದೇವತೆಯು ಜನಸಾಮಾನ್ಯರಿಗೆ ತಿಳಿದಿರುವಂತಹ ಸಾಧಾರಣ ಕಥಾ ನಾಯಕಿ. ಆದರೆ, ಪುರಾಣಗಳ ಕಥೆಗಳನ್ನು ಗಮನಿಸಿದರೆ, ಹಲವಾರು ಲಕ್ಷ್ಮಿಯರಿದ್ದು ಅವರ ಕಥೆಗಳ ಆಧಾರದಿಂದ ಹಲವು ಕಲ್ಪಿತಸತ್ಯಗಳನ್ನು ನಿರೂಪಿಸಲು ಆಸಕ್ತಿ ಉಂಟಾಗುತ್ತದೆ.

ಸಮುದ್ರ ಮಂಥನದಲ್ಲಿ ಹುಟ್ಟಿದ ಲಕ್ಷ್ಮಿ ಎಂದರೆ ಅದು ತೀರಾ, ಕಟ್ಟ ಕಡೆಯ ಕಲಿಗಾಲದ ಲಕ್ಷ್ಮಿ ಎನ್ನಬಹುದೇನೋ. ಅವಳ ಹಿಂದಕ್ಕೆ ಲಕ್ಷ್ಮಿಯರ ಪರಂಪರೆಯನ್ನು ಗಮನಿಸಿದರೆ, ಪುಲೋಮಿ ಎಂಬ ಅಸುರರ ಸಹೋದರಿ, ಅಸುರರ ಗುರು ಶುಕ್ರಾಚಾರ್ಯನ ಮಗಳು ಭಾರ್ಗವಿಯಾಗಿಯೂ ಗುರುತಿಸಿದರೆ, ಭೃಗು ಮಹರ್ಷಿಯ ಪತ್ನಿಯಾದ ಖ್ಯಾತಿ ಎಂಬುವಳ ಮಗಳಾಗಿಯೂ ಗುರುತಿಸುತ್ತಾರೆ. ಇಂದ್ರನ ಹೆಂಡತಿ ಶಚಿಯಾಗಿ, ದುಸ್ಸಹನೆಂಬ ಬ್ರಹ್ಮರ್ಷಿಯ ಪತ್ನಿಯಾಗಿ, ಪರಶುರಾಮನ ಕಾಲದಲ್ಲಿ ಭೂದೇವಿ ಎಂದೂ, ರಾಜಾ ಅಂಬರೀಷನ ಮಗಳು ಶ್ರೀಮತಿಯಾಗಿಯೂ, ರಾಮಾಯಣದಲ್ಲಿ ಸೀತಾದೇವಿಯಾಗಿ, ಕೃಷ್ಣಾವತಾರದಲ್ಲಿ ರುಕ್ಮಿಣಿಯಾಗಿ, ದಕ್ಷಪ್ರಜಾಪತಿಯ ಹಲವು ಪುತ್ರಿಯರಲ್ಲಿ ಒಬ್ಬಳಾಗಿ ಲಕ್ಷ್ಮಿಯನ್ನು ಗುರುತಿಸುತ್ತಾರೆ.

ಈ ಲಕ್ಷ್ಮಿಯರಿಗಾಗಿ ನಡೆದಂತಹ ಅಥವಾ ಅವಳ ಸುತ್ತಲೂ ನಡೆದಂತಹ ಕೃತ್ಯಗಳನ್ನು ಗಮನಿಸೋಣ. ಶ್ರೀಮತಿಗಾಗಿ ನಾರದ ಮತ್ತು ಪರ್ವತರ ಪೈಪೋಟಿ, ಸೀತೆಯನ್ನು ವರಿಸಲು ಸ್ಪರ್ಧೆ, ಸೀತೆಯ ಅಪಹರಣ, ರುಕ್ಮಿಣಿಯ ಅಪಹರಣ, ಭೂದೇವಿಯ ಅಪಹರಣ, ದೂರ್ವಾಸನ ಶಾಪಕ್ಕೆ ತುತ್ತಾಗಿ ಇಂದ್ರನು ತನ್ನ ರಾಜ್ಯ ಲಕ್ಷ್ಮಿಯನ್ನು ಕಳೆದುಕೊಳ್ಳುವುದು ಇತ್ಯಾದಿ. ದೇವತೆಗಳಲ್ಲೂ ಮತ್ತು ಅಸುರರಲ್ಲೂ ಲಕ್ಷ್ಮಿಯ ಇರುವಿಕೆಯ ಉಲ್ಲೇಖ ನೇರವಾಗಿದೆ ಮತ್ತು ಸ್ಪಷ್ಟವಾಗಿದೆ.

ಪೈಪೋಟಿ, ಅಪಹರಣ, ಕಳೆದುಕೊಳ್ಳುವುದು, ಉದ್ದೇಶಪೂರ್ವಕ ಹೋರಾಟಗಳೆಲ್ಲಾ ನಡೆಯುವುದು ಸಂಪತ್ತಿಗಾಗಿ ಅಥವಾ ಯಾವುದೇ ಸಂಪತ್ತುಗಳ ಮೇಲಿನ ಒಡೆತನಕ್ಕಾಗಿ. ಹೀಗೆ ಸಂಪತ್ತುಗಳ ಅಧಿದೇವತೆಯಾಗಿ ಲಕ್ಷ್ಮಿಯು ಕಂಡರೆ, ಹೋರಾಟದ ಸಂಕೇತವಾಗಿ ರಕ್ತವರ್ಣದ ವಸ್ತ್ರ ಅವಳನ್ನು ಅಪ್ಪಿತು. ಯಾವುದ್ಯಾವುದಕ್ಕೆ ಹೋರಾಟಗಳು ನಡೆಯುತ್ತಿದ್ದವು ಎಂಬುದನ್ನು ಗಮನಿಸಲು ಅಷ್ಟ ಲಕ್ಷ್ಮಿಯರನ್ನು ನೋಡಿ. ಆದಿ, ಧಾನ್ಯ, ಧನ, ವಿಜಯ, ಸಂತಾನ, ವಿದ್ಯಾ, ಗಜ ಮತ್ತು ವೀರ ಲಕ್ಷ್ಮಿಯರು. ಧಾನ್ಯ, ಧನ, ವಿಜಯ, ಸಂತಾನ ಇತ್ಯಾದಿಗಳಿಗೆ ಹೋರಾಟವಾಗುತ್ತಿದ್ದುದರ ಜೊತೆಗೆ, ವಿದ್ಯೆಗಾಗಿಯೂ ದೇವತೆಗಳ ಮತ್ತು ಅಸುರರ ನಡುವೆ ಹೋರಾಟವಾಗುತ್ತಿತ್ತು. ಅಸುರರ ಬೇಷಜರಿಗೆ ತಿಳಿದಿದ್ದು ದೇವತೆಗಳಿಗೆ ತಿಳಿದಿರದಿದ್ದ ಸಂಜೀವಿನಿ ವಿದ್ಯೆಯ ಮರ್ಮಕ್ಕಾಗಿ ತಾಕಲಾಟಗಳು ನಡೆದಿದ್ದವು. ಸಂಜೀವಿನಿ ವಿದ್ಯೆಯು ಸತ್ತವರನ್ನು ಉಳಿಸುವಂತಹ ಅಥವಾ ಮೃತ್ಯುಮುಖದಲ್ಲಿರುವವರನ್ನು ಉಳಿಸುವಂತಹದ್ದಾದರೆ, ಅಮೃತವೆಂಬ ದಿವ್ಯೌಷಧವು ಮೃತ್ಯುವನ್ನೇ ತಡೆಯುವಂತಹ ಔಷಧದ ಸಂಶೋಧನೆ. ಅಮೃತಕ್ಕಾಗಿ ನಡೆಯುವ ಸಮುದ್ರಮಂಥನವು ಬಹುಶಃ ಸಂಜೀವಿನಿ ವಿದ್ಯೆಗಿಂತಲೂ ಮುಂದುವರಿದ ಯಾವುದೋ ಔಷಧಿ ಸಂಶೋಧನೆಯ ಯೋಜನೆ. ಈ ಅಮೃತದ ಸಂಶೋಧನೆಗೆ ಆಗತ್ಯವಿರುವಂತಹ ಮೂಲ ಪರಿಕರಗಳು ಸಮುದ್ರದಲ್ಲಿರುವುದನ್ನು ಕಂಡುಕೊಂಡಿದ್ದು, ಹಾಗೂ ಸಂಜೀವಿನಿ ವಿದ್ಯೆಯಲ್ಲಿ ಮೇಲುಗೈ ಸಾಧಿಸಿದ್ದ ಅಸುರರ ಸಹಾಯವಿಲ್ಲದೇ ಈ ಸಂಶೋಧನೆ ಸಾಧ್ಯವಿಲ್ಲದೇ ಅವರನ್ನೂ ಮನವೊಲಿಸಿ ತಮ್ಮ ಯೋಜನೆಯಲ್ಲಿ ಪಾಲುದಾರರನ್ನಾಗಿ ಮಾಡಿಕೊಂಡಿರುವ ಸಾಧ್ಯತೆಗಳಿವೆ. ಇದೇ ಹೈಪೋಥಿಸಿಸ್‌ಅನ್ನು ಗಮನಿಸಿದರೆ ಅಮೃತೌಷಧವನ್ನು ತಯಾರು ಮಾಡುವಂತಹ ಹಂತದಲ್ಲಿ ನಾನಾಬಗೆಯ ವಿವಿಧ ರೀತಿಯ ಉಪವಸ್ತುಗಳು ಲಭ್ಯವಾಗಿದ್ದು, ಯಾವುದೋ ಒಂದು ಬಗೆಯ ವಿಷೌಷಧವನ್ನು ರುದ್ರನ ಮೇಲೆ ಪ್ರಯೋಗವಾಗಿದ್ದಿರಬಹುದು. ಕೊನೆಗೆ ಧನ್ವಂತರಿಯೆಂಬ ವೈದ್ಯನು ಅಮೃತ ಸಂಶೋಧನೆಯು ಫಲ ನೀಡಿತೆಂಬ ಘೋಷದೊಡನೆ ಫಲಿತ ಔಷಧಿಯನ್ನು ಪ್ರಸ್ತುತಪಡಿಸಿದ್ದಾನೆ.

ಆ ಅಮೃತಕ್ಕಾಗಿ ದೇವತೆಗಳು ಕುಯುಕ್ತಿ ಮಾಡಿದ್ದು, ಅಸುರರನ್ನು ವಂಚಿಸಲು ನೋಡಿದ್ದು ಈಗ ನಮ್ಮ ವಿಷಯವಲ್ಲ, ಆದರೆ, ಆ ಅಮೃತವು ಬಹುಶಃ ವಿಫಲವಾಗಿದ್ದಿರಬಹುದು ಅಥವಾ ಗೋಪ್ಯವಾಗಿಟ್ಟ ವಿದ್ಯೆಗಳೆಷ್ಟೋ ನಮಗಿಂದು ಸಿಗದೇ ಹೋಗಿರುವ ಪೈಕಿ ಅದೂ ಒಂದಿರಬಹುದು. ಉಚ್ಚೈಶ್ರವಸ್ಸು ಎಂಬ ಕುದುರೆಯೋ ಅಥವಾ ಕುದುರೆಯ ವೈದ್ಯಕ್ಕೆ ಲಭ್ಯವಾದ ಉಪೌಷಧವೋ. ಹಾಗೆಯೇ ಉಪೌಷಧಗಳು ಗೋವುಗಳಿಗಾಗಿ (ಕಾಮಧೇನು), ವೃಕ್ಷಗಳಿಗಾಗಿ (ಕಲ್ಪವೃಕ್ಷ), ಮದಿರೆಗಾಗಿ (ಸೋಮ), ಆನೆಗೆ ಸಂಬಂಧಿಸಿದ ಔಷಧ (ಐರಾವತ)ಗಳೆಲ್ಲಾ ಲಭ್ಯವಾದಂತೆ, ಆ ಬೃಹತ್ ಅಮೃತ ಯೋಜನೆಯ ಸಮಯದಲ್ಲಿ ಬ್ರಹ್ಮರ್ಷಿ ದುಸ್ಸಹನ ಪತ್ನಿ ಅತ್ಯಂತ ರಿಸೋರ್ಸ್ ಪರ್ಸನ್ ಆಗಿದ್ದ ಲಕ್ಷ್ಮಿಯನ್ನು ಆರ್ಯರ ವಿಷ್ಣುವು ತನ್ನವಳನ್ನಾಗಿ ಮಾಡಿಕೊಂಡನೇ? ಅತ್ಯಂತ ಉಪಯುಕ್ತವಾದ ಸಂಪನ್ಮೂಲ ವ್ಯಕ್ತಿಯಾಗಿದ್ದ ಲಕ್ಷ್ಮಿಯನ್ನು ದೇವತೆಗಳು ವಿಷ್ಣುವಿನ ಮೂಲಕ ತಮ್ಮವಳನ್ನಾಗಿ ಮಾಡಿಕೊಂಡರೇ? ಅವಳು ವಿಷ್ಣುವಿನ ಕಾಲಬುಡದಲ್ಲಿ ಕುಳಿತುಕೊಳ್ಳುವಂತಹ ದಾಸಿಯಂತೇಕೆ ಇರಿಸಿಕೊಂಡರು? ಇವೆಲ್ಲಾ ಮತ್ತಷ್ಟು ಮಥಿಸಬೇಕಾಗಿರುವ ವಿಚಾರಗಳು.

ಧನ, ಧಾನ್ಯ, ಗಜ (ಪ್ರತಿಷ್ಠೆ), ಪೌರುಷ, ಭೂಮಿ, ಸಂತಾನಗಳಂತಹ ಸಂಪನ್ಮೂಲಗಳಿಗೆ ಸ್ತ್ರೀಯರು ಸಾಮಾಜಿಕವಾಗಿ ಕಾರಣರು ಅಥವಾ ಆ ಸಂಪನ್ಮೂಲಗಳಿಗೆ ತಾತ್ವಿಕವಾಗಿ ಸ್ತ್ರೀ ದೇವತೆಯನ್ನು ಸಂಕೇತಿಸಿದರು. ಏನೇ ಆದರೂ ಅಂದಿನಿಂದ ಇಂದಿನವರೆಗೂ ಅವಳು ಹೋರಾಟದಿಂದಲೇ ಸುತ್ತುವರಿದಿದ್ದಾಳೆ ಎಂಬುದಂತೂ ನಿಜ.

ಶ್ರೀಲಕ್ಷ್ಮಿಯ ಬೌದ್ಧ ಮೂಲ

ಗಜಲಕ್ಷ್ಮಿಯನ್ನು ಅಥವಾ ಲಕ್ಷ್ಮಿಯನ್ನು ಬುದ್ಧನ ತಾಯಿಯಾಗಿ ನೋಡಿದ ಅಧ್ಯಯನಗಳು ನಮಗೆ ಕಾಣಸಿಗುತ್ತವೆ. ಇಪ್ಪತ್ತನೆಯ ಶತಮಾನದ ಆದಿಯಲ್ಲಿ ಫೌಚರ್ ಪಂಡಿತನು ಲಕ್ಷ್ಮಿಯ ಮೂಲವನ್ನು ಹುಡುಕುತ್ತಾ ಬುದ್ಧನ ಜನ್ಮದ ವಿಷಯಕ್ಕೆ ಬಂದು ನಿಲ್ಲುತ್ತಾನೆ. ಗಜಗಳೆರಡು ಮಹಾಮಾತೆಯೊಬ್ಬಳನ್ನು ಎರಡೂ ಕಡೆಗಳಿಂದ ಅಭಿಷೇಕಿಸುವುದು ಬುದ್ಧನ ತಾಯಿಯ ದಿವ್ಯಾನುಭವದ ಚಿತ್ರಣ. ಆನಂದ ಕುಮಾರಸ್ವಾಮಿ ಮತ್ತು ಅನೇಕ ಪಂಡಿತರು ಈ ಮಾಹಿತಿಯನ್ನು ಅಧಿಕೃತವೆಂದು ಒಪ್ಪುತ್ತಾರೆ.

ಲಕ್ಷ್ಮಿಯ ಇನ್ನೊಂದು ಬಗೆಯ ಮೂಲವನ್ನು ಹುಡುಕಿದರೆ, ಸಿರಿಮಾ ದೇವತೆಯು ನ್ಯಾಗ್ರೋಧಪರಿಮಂಡಲದ ಯಕ್ಷ ಅಥವಾ ದೇವತೆಗಳಲ್ಲಿ ಒಬ್ಬಳು. ಅವಳನ್ನು ಸಿರಿ, ಶ್ರೀ ಎಂದು ಲಕ್ಷ್ಮಿಯ ಪ್ರತಿಮೆಗಳಾಗಿ ಕಾಣಬಹುದು. ಗಜಗಳಿಂದ ಅಭಿಷೇಕಗೊಳ್ಳುವ ಬುದ್ಧನ ತಾಯಿಯ ಚಿತ್ರಣ ಅಥವಾ ಸಿರಿಮಾ ದೇವತೆಯ ಚಿತ್ರಗಳು ಸ್ತೂಪಗಳ ಸಾಲು ಕಂಭಗಳಲ್ಲಿ ಅಥವಾ ದ್ವಾರದ ತೋರಣ ಭಾಗದಲ್ಲಿ ಕಾಣಬಹುದು. ಬೌದ್ಧರ ಸಿರಿ-ಲಚ್ಛಿಯ ಸಮಾನಾರ್ಥವಾಗಿ ಬಳಸಿರುವ ಸಲಿಕೆದಸ, ಧಜವಿಹೇತ ಮತ್ತು ಸಿರಿ ಕಾಲಕನ್ನಿ ಜಾತಕ; ಸಮೃದ್ಧಿ ಸಂಪದ, ಜ್ಞಾನ, ಮೌಲ್ಯಕ್ಕೆ ಅಧಿದೇವತೆಗಳನ್ನಾಗಿ ಗುರುತಿಸಿದ್ದಾರೆ. ಬೌದ್ಧರ ಅನೇಕ ಜಾತಕ ಪರಿಕಲ್ಪನೆಗಳು ಮತ್ತು ಪ್ರತಿಮೆಗಳು ಕಾಲಕ್ರಮೇಣ ಹಿಂದೂ ದೇವತೆಗಳಾಗಿ ಬದಲಾಗಿರುವ ಹಲವಾರು ಸಂಶೋಧನೆಗಳಿವೆ. ಇವುಗಳಲ್ಲಿ ಉಡುಪಿಯ ಕೃಷ್ಣನೂ ಒಂದು. ದಂಡವನ್ನು ಹಿಡಿದಿರುವ ಬೌದ್ಧರ ಯಕ್ಷ ಅಥವಾ ದೇವತೆ ಕೃಷ್ಣನನ್ನಾಗಿ ಪರಿವರ್ತಿಸಿದ್ದಾರೆಂದು ಕೆಲವು ಸಂಶೋಧನೆಗಳು ತಿಳಿಸುತ್ತವೆ.



ವಿಗ್ರಹಗಳ ಪರಂಪರೆ ಮತ್ತು ಸಂಸ್ಕೃತಿಯನ್ನು ಹೊಂದಿರದ ಆರ್ಯ ಸಮಾಜವು ಬೌದ್ಧ ಕಥೆಗಳನ್ನು ಮತ್ತು ತಾತ್ವಿಕ ಪರಿಕಲ್ಪನೆಗಳನ್ನು ಪ್ರತಿಮೆಗಳ ಮೂಲಕ ಪ್ರಸ್ತುತಪಡಿಸುತ್ತಿದ್ದ ಸುಂದರ ಬೌದ್ಧರ ವಿಗ್ರಹ ವಿನ್ಯಾಸಗಳು ಮುಂದಿನ ನಮ್ಮ ಪೌರಾಣಿಕ ದೇವತೆಗಳ ಚಿತ್ರಣಕ್ಕೆ ಕಾರಣವಾಯಿತು. ಕೆಲವೊಂದವುಗಳು ನೇರವಾಗಿಯೇ ಪರಿವರ್ತಿಸಲಾಯಿತು.

ಬೌದ್ಧರ ಮತ್ತು ಬ್ರಾಹ್ಮಣ ಗ್ರಂಥಗಳೆರಡರಲ್ಲೂ ಶ್ರೀಲಕ್ಷ್ಮಿಯನ್ನಾಗಲಿ ಅಥವಾ ದುಗ್ಧಧಾರಿಣಿ (ಗಜಲಕ್ಷ್ಮಿಯ ಕುಂಭ ಸಮೇತದ ಚಿತ್ರಣ); ಇವರನ್ನು ಸಂಪತ್ತಿಗೆ ಮತ್ತು ಸಮೃದ್ಧಿಗೇ ಸಂಕೇತಿಸುತ್ತಾರೆ. ಮೊದಲು ಇವಳನ್ನು ಸಂಪತ್ತಿನ ಅಧಿಪತಿಯಾದ ಕುಬೇರನ ಜೊತೆಗೆ ತಳುಕು ಹಾಕಿದ್ದು ನಂತರ ವಿಷ್ಣುವಿನ ಜೊತೆಗೆ ಕೂರಿಸಿದರು. ಅಸುರನಾಗಿದ್ದ ಕುಬೇರನಿಂದ ಸಂಪತ್ತನ್ನು ಅಥವಾ ಸಂಪನ್ಮೂಲದ ಸ್ತ್ರೀಯನ್ನು ಆರ್ಯರ ವಿಷ್ಣು ಪಡೆದಿರಲೋ ಅಥವಾ ಅಪಹರಿಸಿರಲೋ ಅಥವಾ ಹೋರಾಡಿಪಡೆದಿರಲೋ ಇರುವ ಸಾಧ್ಯತೆಗಳನ್ನು ಅಲ್ಲಗಳೆಯಲಾಗುವುದಿಲ್ಲ.

ಲಕ್ಷ್ಮಿಯ ಸ್ಥಾನ

ಲಕ್ಷ್ಮಿಯು ವಿಷ್ಣುವಿನ ವಕ್ಷಸ್ಥಲದಲ್ಲಿ ನೆಲಸಿದ್ದಾಳೆಂದು ಅದೆಷ್ಟು ಪೌರಾಣಿಕವಾಗಿ ಬಿಂಬಿತವಾದರೂ, ಯಜುರ್ವೇದದ ತೈತ್ತರೀಯ ಸಂಹಿತದಲ್ಲಿ ಅದಿತಿಯು ಲಕ್ಷ್ಮಿಯ ಸ್ಥಾನಕ್ಕೆ ಬಂದಿರುತ್ತಾಳೆ. ಈ ಅದಿತಿಯನ್ನು ದಕ್ಷಪ್ರಜಾಪತಿಯ ಮಗಳೆಂದೂ, ಕಶ್ಯಪ ಮುನಿಯ ಪತ್ನಿಯೆಂದೂ ಗುರುತಿಸುವುದಲ್ಲದೇ ಈಕೆಯೇ ಇಂದ್ರನೇ ಮೊದಲಾದ ದೇವತೆಗಳಿಗೆ ತಾಯೆಂದು ಪುರಾಣಗಳು ತಿಳಿಸುತ್ತವೆ.

ಮಹಾಲಕ್ಷ್ಮಿಯು ಹದಿನೆಂಟು ಬಗೆಯ ಸಂಪತ್ತುಗಳನ್ನೂ, ಎಂಟು ಬಗೆಯ ಸಿದ್ಧಿಗಳನ್ನೂ ಗುರುತಿಸಿದರೂ, ನಮ್ಮ ಜನರಿಗೆ ಲಕ್ಷ್ಮಿಯ ಕಟಾಕ್ಷದ ಆಸೆಗಿಂತ ಅಲಕ್ಷ್ಮಿಯ ಭಯವೇ ಹೆಚ್ಚಾಗಿರುವುದು ಕಾಣುತ್ತದೆ. ಲಕ್ಷ್ಮಿ ಹೊರಟುಹೋಗ್ತಾಳೆ. ನಮ್ಮ ಸಾಂಪ್ರದಾಯಕ ಮನೋಭಾವದ ಜನರಲ್ಲಿ ಮೌಢ್ಯವನ್ನು ಬಿತ್ತಲು ಇದೇ ಅತ್ಯಂತ ಹೆಚ್ಚಿನ ಕೊಡುಗೆಯನ್ನು ನೀಡಿರುವುದು ಎನಿಸುತ್ತದೆ. ನಮ್ಮವರು ಅದೆಷ್ಟು ಧನದಾಹಿಗಳು ಎಂದೂ ತೋರುತ್ತದೆ.

ಸಂಜೆಯ ಹೊತ್ತು ದೀಪ ಹಚ್ಚಿದ ಮೇಲೆ ಮನೆ ಗುಡಿಸಬಾರದು; ಲಕ್ಷ್ಮಿ ಹೊರಟುಹೋಗುತ್ತಾಳೆ ಎಂಬುದರ ಬಗ್ಗೆ ನಮ್ಮ ಅಜ್ಜಿ ಹೇಳುತ್ತಿದ್ದ ಮಾತನ್ನಿಲ್ಲಿ ಉಲ್ಲೇಖಿಸಲೇಬೇಕು. "ಹಿಂದೆ, ಎಲೆಕ್ಟ್ರಿಕ್ ಲೈಟು ಇರಲಿಲ್ಲ, ಸಂಜೆಯ ಹೊತ್ತು ದೀಪದ ಬೆಳಕು ಚೆನ್ನಾಗಿ ನೋಡಲು ಸಾಕಾಗುತ್ತಿರಲಿಲ್ಲ. ಮನೆಯಲ್ಲಿರುವ ಮಕ್ಕಳು, ಹೆಂಗಸರು ನತ್ತು, ವಾಲೆ, ತಿರುಪದಂತಹ ಸಣ್ಣ ಸಣ್ಣ ಬೆಲೆಯುಳ್ಳ ವಸ್ತುಗಳನ್ನು ಅಲ್ಲಲ್ಲಿ ಬೀಳಿಸಿಕೊಂಡಿರುತ್ತಿದ್ದರು. ದೀಪದ ಬೆಳಕಿನಲ್ಲಿ ಸರಿಯಾಗಿ ಕಾಣದೇ ಗುಡಿಸಿ ಹಾಕಿಬಿಟ್ಟರೆ ಅವು ಹಾಗೇ ಕಳೆದುಹೋಗುತ್ತಿದ್ದವು. ಅದಕ್ಕೇ ಸಂಜೆಯ ಹೊತ್ತು ದೀಪ ಹೊತ್ತಿಸುವ ಸಮಯದಲ್ಲಿ ಗುಡಿಸಬಾರದು, ಲಕ್ಷ್ಮಿ ಹೋಗಿಬಿಡುತ್ತಾಳೆ ಎನ್ನುತ್ತಿದ್ದರು. ಈಗ ಸಂಜೆ ಕಸಗುಡಿಸುವಾಗ ಎಲೆಕ್ಟ್ರಿಕ್ ಲೈಟನ್ನು ಹಾಕ್ಕೊಂಡು, ಒಳ್ಳೆಯ ಬೆಳಕಲ್ಲಿ ಸರಿಯಾಗಿ ನೋಡಿಕೊಂಡೇ ಗುಡಿಸಬಹುದು. ದಡ್ಡರು ಕತ್ತಲಾದರೂ, ದೀಪ ಹಚ್ಚಿದ ಮೇಲೆ ಗುಡಿಸಬಾರದು ಎಂದು ಕತ್ತಲಲ್ಲೇ ಗುಡಿಸಿ ಆಮೇಲೆ ದೀಪ ಹಾಕುವವರು."

ಪ್ರತಿದಿನ ಲೈಟ್ ಹಾಕಿದಾಗ ದೇವರನ್ನು ನೆನೆದು, ನಮಸ್ಕರಿಸುವ ಪಾಡಿಕೆಯಿರುವವರ ಮಧ್ಯೆ ದೇವರನ್ನು ನೆನೆಯುವ ಬದಲು "ಯಾರು ಕಂಡುಹಿಡಿದರೋ ಇಂಥಾ ಬೆಳಕು ಕೊಡೋ ಕರೆಂಟ್ ಲೈಟನ್ನ" ಎಂದು ಕೃತಜ್ಞತೆಯಿಂದ ವಿದ್ಯುತ್ ದೀಪದ ಸಂಶೋಧನಾಕಾರರನ್ನು ನೆನೆಯುವ ನನ್ನ ಅಜ್ಜಿ ಈ ಮೇಲಿನ ಮಾತುಗಳನ್ನು ಹೇಳಿದ್ದರಲ್ಲಿ ಯಾವ ಆಶ್ಚರ್ಯವೂ ಇಲ್ಲ. ■

ಸ್ವಾಮೀಜಿಗಳೆ ತಾವು ಯಾವತ್ತು ಸಾಯ್ತಿರಿ ಹೇಳ್ತಿರಾ?

ಥೂತ್ತೇರಿ

● ಯಾಹು

ಕಾಲಜ್ಞಾನಿ ಕೋಡಿಮಠದ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮಿಗಳನ್ನು ಮಾತನಾಡಿಸಬೇಕೆನಿಸಿತಲ್ಲಾ. ಆ ಕೂಡಲೇ ಮಾಜಿ ಸ್ವಾಮಿ ಋಷಿಕುಮಾರನಿಂದ ಫೋನ್ ನಂಬರ್ ಪಡೆದು ಕಾಲ್ ಮಾಡಿದ ಕೂಡಲೇ ರಿಂಗಾಯ್ತು.

ರಿಂಗ್‌ಟೋನ್: 'ಅರ್ಚಿತ ಪ್ರಾರ್ಚತೇ', 'ತ್ರಿಯಂಬಕಂ ಯಜಾಮಹೇ'

"ಹಲೋ ಯಾರು?"

"ಬುದ್ಧಿಯವರೆ ನಾನು, ಯಾಹು ಅಂತ, ಪತ್ರಕರ್ತ."

"ಪತ್ರಕರ್ತರಾ? ಏನು ವಿಷಯ ಹೇಳಿ?"

"ಹೇಳೊದಲ್ಲ ಬುದ್ಧಿ, ಏನೋ ಕೇಳಬೇಕಾಗಿದೆ."

"ಯಾವ ವಿಷಯ ಕೇಳಬೇಕಾಗಿದೆ?"

"ನನ್ನ ಹೆಂಡತಿ ಬಸುರಿಯಾಗಿದಾಳೆ ಬುದ್ಧಿ. ಆದರೆ ಯಾವಾಗ ಆದೆ ಅನ್ನದನ್ನ ಮರತುಬಿಟ್ಟಿದ್ದಾಳೆ. ಅದಕ್ಕೆ ಯಾವ ತಿಂಗಳಲ್ಲಿ ಡಿಲವರಿ ಆಗಬಹುದು ಬುದ್ಧಿ?"

"ಅದನ್ನ ನಾನು ಹೆಂಗೆ ಹೇಳಕ್ಕಾಗತ್ರೀ?"

"ಸುಮಾರು ಜನ ನೀವು ತುಂಬ ಕರಾರುವಾಕ್ಕಾಗಿ ಹೇಳ್ತಿರಿ ಅಂತ ಹೇಳಿದ್ರು ಸ್ವಾಮಿ. ಅದ್ಕೆ ಫೋನು ಮಾಡಿದೆ."

"ಡಾಕ್ಟರನ್ನ ಭೇಟಿ ಮಾಡಿ ಕೇಳಿ."

"ತುಂಬ ಫೀಜು ಕೇಳ್ತರೆ ಬುದ್ಧಿ. ಡಾಕ್ಟರು ಅಂದಕೂಡ್ಲೆ ಹೊಟ್ಟೆಲಿರೊ ಮಕ್ಕಳೂ ಹೆದರತವೆ."

"ಹೊಟ್ಟೆಲಿರೊ ಮಕ್ಕಳೂ ಹೆದರತವ?"

"ಹೌದು ಬುದ್ಧಿ. ತಾಯಿಯ ಹೊಟ್ಟೆಯಿಂದ ಹೊರಟ ಮಕ್ಕಳನ್ನ ತಡೆದು, ತಾಯಿ ಹೊಟ್ಟೆ ಕುಯ್ದು ಹೊರತಗಿಯೋ ಡಾಕ್ಟರ್ ಕಂಡು ಅವು ಹೆದರತವೆ. ಆದ್ರಿಂದ ನನ್ನ ಮಗು ಹೇಗೆ ಹುಟ್ಟುತ್ತೆ, ಎಷ್ಟು ದಿನಕ್ಕೆ ಹುಟ್ಟುತ್ತೆ ಅಂತ ವಸಿ ಹೇಳಿ ಬುದ್ಧಿ."

"ಯಾವ ಸೀಮೆ ಪತ್ರಕರ್ತನಯ್ಯ ನೀನು. ಈ ತರ ಮಾತನಾಡ್ತಿ. ನಿನ್ನ ಮಗು ಯಾವಾಗ ಹುಟ್ಟುತ್ತೆ ಅಂತ ನಾನು ಹೇಳಕ್ಕಾಗುತ್ತ? ಶುದ್ಧ ಮೂರ್ಖ ಪ್ರಶ್ನೆ."

"ಅದ್ಯಾಕಾಗಲ್ಲ ಬುದ್ಧಿ? ಇನ್ನು ಒಂಬತ್ತು ತಿಂಗಳಲ್ಲಿ ಸಿದ್ದರಾಮಯ್ಯನ ಸರಕಾರ ಬೀಳುತ್ತೆ ಅಂತ ಹೇಳಿದ್ದಿರಿ. ಅದೇ ತರ ನನ್ನ ಮಗು ಹುಟ್ಟೊದನ್ನೂ ಹೇಳಕ್ಕಾಗಲ್ವ?"

"ಈಗಿನ ಪರಿಸ್ಥಿತಿ ಮುಂದುವರಿದರೆ ಸರಕಾರ ತಾನಾಗಿಯೇ ಬೀಳುತ್ತೆ ಅಂತ ಹೇಳಿದ್ದಿವಿ."

"ಇದೇ ಪರಿಸ್ಥಿತಿ ಅಂದ್ರೆ?"

"ಶಾದಿಭಾಗ್ಯ, ಕಬ್ಬಿನ ಗಲಾಟೆ, ಅಕ್ಕಿ ಗಲಾಟೆ... ಇಂತ ಗಲಾಟೆಗಳ ಕಾರಣಕ್ಕೆ ಸರಕಾರ ತಾನಾಗೆ ಬೀಳುತ್ತೆ."

"ಈ ಸರಕಾರ ಬೀಳಬೇಕು ಅನ್ನದು ನಿಮ್ಮ ಆಶಯ ಇದ್ದಂಗಿದೆ."

"ಹಾಗೇನೂ ಇಲ್ಲ."

"ಮತ್ತೆ ನಾನು ಭವಿಷ್ಯ ಹೇಳಲ್ಲ, ಭವಿಷ್ಯವನ್ನೆ ರೂಪುಸ್ತಿನಿ ಅಂತೂ ಹೇಳಿದ್ದಿರಂತೆ?"

"ಹೌದು, ನಮ್ಮ ಕಾಲಜ್ಞಾನದ ಗ್ರಂಥ ನೋಡಿ ಭವಿಷ್ಯ ರೂಪಿಸಿ ಹೇಳ್ತೀನಿ."

"ಭವಿಷ್ಯವನ್ನೆ ರೂಪಿಸಿ ಹೇಳೋ ತಾವು ನಿಜಕ್ಕೂ ದೇವರಿಗೆ ಸಮನಾದ ಸ್ವಾಮಿಗಳು ಬುದ್ಧಿ. ಈಗ ಆಗಿ ಹೋದದ್ದೆಲ್ಲಾ ನೀವೇ ರೂಪಿಸಿದ್ದಾ?"

"ಅಂದರೆ?"


"ಅಂದರೆ, ಕಾಂಗ್ರೆಸ್‌ಗೆ 121 ಸ್ಥಾನ ಬಂತು. ಎಡೂರಪ್ಪನಿಗೆ 6, ಬಿಜೆಪಿ, ಜೆಡಿಎಸ್‌ಗೆ ತಲಾ ನಲವತ್ತು ಸೀಟು ಬಂದು, ಸಿದ್ದರಾಮಯ್ಯ ಕಂಬಳಿ ಹಾಸಿಕೊಂಡು ಕುಂತರಲ್ಲಾ, ಈ ಸ್ಥಿತಿ ನೀವು ರೂಪಿಸಿದ್ದಾ ಅಂತ?"

"ಇಲ್ಲ.... ನಾನು ಹೇಳಿದ್ದು..."

"ಸಿದ್ದರಾಮಯ್ಯ ಕುರುಬರ ಪೈಕಿ, ಆದ್ರಿಂದ ಕಂಬಳಿ ಹಾಸುತ್ತೆ ಅಂದ್ರಿ. ಒಂದು ವೇಳೆ ಪರಮೇಶ್ವರ್ ಅಥವಾ ಖರ್ಗೆ ಆಗೋಗಿದ್ರೆ ಏನನ್ನ ಹಾಸಕ್ಕೇಳತಿದ್ರಿ?"

"ಅದೆಲ್ಲಾ ಈಗೇಕೆ? ಮುಂದೆ ಆಗೋದಿದ್ರೆ ತಯಾರಿಸ್ತೀನಿ."

"ಸ್ಫೋಟಕ ಸುದ್ದಿ ಬರುತ್ತೆ ಅಂದಿದ್ರಿ. ಅದೇತರ ಬಿಜೆಪಿ ಕಚೇರಿ ಹತ್ರ ಸ್ಫೋಟ ಆಯ್ತು. ಮುಂದೆ ಎಲ್ಲೆಲ್ಲಿ ಸ್ಫೋಟ ಆಗಬಹುದು ಹೇಳ್ತಿರಾ ಬುದ್ಧಿ?"



"ಭವಿಷ್ಯ ರೂಪಿಸಿದ ಮೇಲೆ ಹೇಳ್ತಿನಿ."

"ಅದಕಿಂತಲೂ, ಉಗ್ರಗಾಮಿಗಳ ಕಾಂಟ್ಯಾಕ್ಟ್ ಮಾಡಿಕೊಂಡ್ರೆ ಈಜಿಯಾಗಿ ಹೇಳಬಹುದಲ್ಲ ಬುದ್ಧಿ."

"ಅದರ ಅಗತ್ಯ ನಮಗಿಲ್ಲ."

"ಇನ್ನೊಂದು ವಿಷಯ ಬುದ್ಧಿ. ಸ್ಫೋಟದ ಸಮಯ, ಜಾಗ ಹೇಳಿದ್ರೆ ಪೊಲೀಸನೋರು, ಜನಗಳು ಎಚ್ಚೆತ್ತುಕೊಂಡು ಜೀವಹಾನಿ ತಡಿಬವುದಲ್ವ?"

"ಅದು ನಮ್ಮ ಜವಾಬ್ದಾರಿಯಲ್ಲ."

"ಹಾಗಿದ್ರೆ ಹಾದಿಬೀದಿ ಜನ ಹೇಳೋ ಭವಿಷ್ಯನ ನೀವು ಹೇಳ್ತಿರಿ ಅಂದಂಗಾಯ್ತು."

"ಹಾದಿಬೀದಿ ಜನ ಹೇಳೊ ಭವಿಷ್ಯ ನಾವೇಳಲ್ಲ."

"ಬುದ್ದಿ, ಚಿಕ್ಕಮಗಳೂರು ಚುನಾವಣೆಗೆ ಇಂದ್ರಾಗಾಂಧಿ ಬಂದು ನಿಂತಿದ್ದಾಗ ಅವರಿಗೆ 'ನೀವೇ ಗೆಲ್ತಿರಿ, ಹೋಗಿ' ಅಂದಿದ್ರಿ. ವೀರೇಂದ್ರ ಪಾಟೀಲರಿಗೂ ಅಂಗೇ ಹೇಳಿದ್ರಿ."

"ನಾವೇಳಿದ್ದು ನಿಜ ಆಯ್ತಲ್ಲಾ, ಇಂದ್ರಾಗಾಂಧಿನೂ ಗೆದ್ರು, ವೀರೇಂದ್ರ ಪಾಟೀಲರು ಕಾಂಗ್ರೆಸ್ ಸೇರಿ ಗೆದ್ದು ಕೇಂದ್ರದಲ್ಲಿ ಪೆಟ್ರೋಲಿಯಂ ಸಚಿವರಾದ್ರು."

"ಒಹೊಹೊ ಈ ತರ ಅನ್ನಿ. ಆಮೇಲೆ ಎಡೂರಪ್ಪ ಅಧಿಕಾರ ಕಳಕೊಂಡು ಒಬ್ಬ ಹೆಣ್ಣು ಮಗಳು ಮುಖ್ಯಮ ಆಗ್ತಳೆ ಅಂದಿದ್ರಿ. ಅದ್ರೆ ನಿಮ್ಮ ಭವಿಷ್ಯ ಸುಳ್ಳಾಯ್ತು"

"ಎಡೂರಪ್ಪನವರಿಗೆ ಶಾಸಕರ ಸಪೋರ್ಟ್ ಇ ಮಾಡೇ ಮಾಡ್ತಿದ್ರು."

"ಅಂದ್ರೆ, ನೀವು ಹೇಳೋ ಭವಿಷ್ಯ ಆಗಬಹುದ ಹೋಗಬಹುದು."

"ಹಾಗೇನು ಇಲ್ಲ, ಆಗೇ ಆಗತ್ತೆ"

"ಅಂದ್ರೆ, ಸಿದ್ದರಾಮಯ್ಯನ ಸರಕಾರ ಹೋ ಹೋಗತ್ತೆ?"

"ಈಗಿನ ಪರಿಸ್ಥಿತಿ ಮುಂದುವರಿದರೆ ಅಂತ ಹೇಳಿದ್ದಿ"

"ಹೋಗ್ಲಿ ಸರಕಾರ ಯಾವ ತರ ಹೋಗತ್ತೆ ಅಂತನಾ ಹೇಳ್ತಿರಾ."

"ಯಾವ ತರ ಅಂದ್ರೆ ಏನು?"

"ರಾಜಕೀಯದ ವಿಶ್ಲೇಷಣೆ ಮಾಡಿ, ಶಾಸ ವಿಭಾಗಗಳನ್ನ ಮಾಡಿ, ಆಪಾದನೆಗಳ ಪಟ್ಟಿ ಮಾಡಿ, ಭ್ರ ಕೆಲಸ ಇದ್ರೆ ಅದನ್ನ ಪರಿಗಣಿಸಿ, ಪತನದ ಕಾರ ಕೊಡಕ್ಕಾಗಲ್ವ?"

"ಅದು ರಾಜಕೀಯದ ವಿಶ್ಲೇಷಕರ ಕೆಲ ನಮ್ಮದೇನಿದ್ರು ಭವಿಷ್ಯವಾಣಿ ಅಷ್ಟೆ."

"ಇನ್ನೊಂದು ವಿಷಯ ಬುದ್ಧಿ, ಬೇಜಾರಾಗಬೇಡಿ"

"ಕೇಳಿ."

"ತಾವು ಯಾವತ್ತು ಸಾಯ್ತಿರ ಹೇಳ್ತಿರಾ?"

"ಅದನ್ನು ಹೇಳಕ್ಕಾಗಲ್ಲ, ಶಿವ ಕರದಾಗ ಕೈಲಾ ಹೊರಡತಿವಿ."

"ನಿಮ್ಮ ಸಾವೇ ಗೊತ್ತಿಲ್ಲದವರು ಸುಖಾಸುಮ ಜನರಿಗೆಲ್ಲಾ ಭವಿಷ್ಯ ಹೇಳ್ತರಲ್ರೀ. ನೋಡಿ ಬುದ್ಧಿ, ನ ಸಾಮಾನ್ಯ ತಿಳಿವಳಿಕೆ ಪ್ರಕಾರ, ನಾಳೆಯನ್ನು ತಡೆಯಕ್ಕಾ ನಾಳೆಯನ್ನ ರೂಪಿಸಕ್ಕೂ ಆಗಲ್ಲ. ಇಂಥ ಡೊಂಗಿ ಭ ಬಿಟ್ಟು, ಭಕ್ತಾದಿಗಳ ನಂಬಿಕೆ ಉಳಿಸಿಕೊಂಡು ಬದ ಎಷ್ಟೇ ಆಗಲಿ, ತಾವು ಋಷಿಕುಮಾರನ ಗುರುಗಳ ಅದಕ್ಕೆ ಇಂತ ಭವಿಷ್ಯ ಹೇಳದು."

ಥೂತ್ತೇರಿ!!!

ತಾವೇ ಸ್ವತಃ ಬೆನ್ನಿಗೆ ಚೂರಿ ಹಾಕಿಕೊಂಡ ತೇಜ್‌ಪಾಲ್

ತರುಣ್ ತೇಜ್‌ಪಾಲ್ ಹಗರಣದ ಬಗೆಗೆ ಗೌರಿಯ ಪ್ರತಿಕ್ರಿಯೆ ಹೇಗಿರುತ್ತದೆಂಬ ಕುತೂಹಲವಿತ್ತು. ಡಿಸೆಂಬರ್ 11, 2013ರ ಸಂಚಿಕೆಯಲ್ಲಿ 'ಕಂಡಹಾಗೆ'ಯಲ್ಲಿನ ಸಮಚಿತ್ತದ ನುಡಿಗಳನ್ನು ಓದಿ ಸಮಾಧಾನವಾಯಿತು. ಒಬ್ಬ ಮಿತ್ರನನ್ನು ಹತ್ತಿರದಿಂದ ನೋಡಿಬಲ್ಲ ಗೌರವದ ಅಭಿವ್ಯಕ್ತಿಯೂ-ಅದೇ ಮಿತ್ರ ವಿಕೃತಿಯ ದಾರಿ ತುಳಿದಾಗ ಖಂಡಿಸುವ ನಿಷ್ಪಕ್ಷಪಾತ ನಿಲುವೂ ಅವರ ಲೇಖನದಲ್ಲಿ ಅಡಕವಾಗಿದೆ.



"ಆತ ಮನಸಾರೆ ಮಹಿಳಾಪರ ಇದ್ದರೆ ಆತ ಕನಸುಮನಸಿನಲ್ಲೂ ಇಂಥ ಅಪರಾಧ ಎಸಗುತ್ತಿರಲಿಲ್ಲ" ಎಂಬ ಗೌರಿಯ ಅಂತಃಕರಣದ ಮಾತು ನನ್ನದೂ ಕೂಡ. ಈ ಮಾತು ನಡೆ-ನುಡಿ ಒಂದಾಗಿ ಬದುಕದೆ-ಮಹಿಳೆಯೆಡೆಗೆ ಕಾಮುಕತೆಯ ದೌರ್ಜನ್ಯವೆಸಗುವ ಎಲ್ಲ ಪುರುಷರಿಗೂ ಅನ್ವಯಿಸುತ್ತದೆ.

ಅದೂ ತರುಣ್ ತೇಜ್‌ಪಾಲ್‌ನ ಹಗರಣ ಅತ್ಯಂತ ಆಘಾತಕಾರಿ ವಿಚಾರ. ಪತ್ರಿಕೋದ್ಯಮದ ಆದರ್ಶದ ಗಾಂಭೀರ್ಯಕ್ಕೆ ಕೊರಳು ಕೊಯ್ದಿರುವಂಥ ದ್ರೋಹ. ಜೊತೆಗೆ ವಿವೇಕ ಕಳೆದುಕೊಳ್ಳುವ ಬುದ್ಧಿಜೀವಿಯೊಬ್ಬ ಭ್ರಷ್ಟತೆ-ಕ್ರೌರ್ಯ ಮನಸ್ಸು ಯಾವ ಮಟ್ಟದಲ್ಲಿ ಇರುತ್ತದೆ ಎಂಬ ವಾಸ್ತವವನ್ನು ಈ ಪ್ರಕರಣ ಬಿಂಬಿಸುತ್ತದೆ.

ತಂದೆಯ ಸ್ಥಾನದಲ್ಲಿರುವವರು ತನ್ನ ಮಗಳ ಸ್ಥಾನದಲ್ಲಿರುವ ಹೆಣ್ಣನ್ನು ತಂದೆತನದ ವಾತ್ಸಲ್ಯದ ಕಣ್ಣಿಂದ ನೋಡಲಾಗದಿದ್ದರೆ ಕಣ್ಣನ್ನು ಬೇರೆಡೆಗೆ ತಿರುಗಿಸಿ ಸಂಯಮದ ಅಂತರ ಕಾಯ್ದುಕೊಳ್ಳುವ ಮನೋಬಲವಾದರೂ ಇರಬೇಕು. ಇಲ್ಲದಿದ್ದರೆ ಎಂಥ ಆದರ್ಶವಾದ ಮಹಿಳಾಪರ ವೈಚಾರಿಕ ಲೇಖನ ಬರೆದರೂ ಅಂತರಾಳದಿಂದ ಬೇರು ಸಮೇತ ಮೂಲೋತ್ಪಾಟನವಾದ ಕಾಮುಕತೆಯ ವಿಕೃತಿ ತೇಜ್‌ಪಾಲ್‌ನಂಥ ಧಿಕ್ಕರಿಸಲೇಬೇಕಾದ 'ಹಿರಿಯ ಪಂಕ್ತಿ'ಯನ್ನು ಸೃಷ್ಟಿಸಿಬಿಡುತ್ತದೆನಿಸುತ್ತದೆ. ವಿಚಾರವಂತರ ಪೋಸ್ ಕೊಟ್ಟು ನಂಬಿಸಿ ಒಳಗೊಳಗೇ ಭ್ರಷ್ಟರಾಗುವ ಹೀನ ಮನಸ್ಥಿತಿಯವರಿಂದಲೇ ಇಂದು ನಮ್ಮ ಸಾಮಾಜಿಕ ಪರಿಸ್ಥಿತಿಯಾಗಲಿ-ದೇಶದ ಸಮಗ್ರತೆಯಾಗಲೀ ಊನಗೊಂಡು ಅಂಗವಿಕಲತೆಯಿಂದ ನರಳುತ್ತಿರುವಂತಿದೆ.

ಒಬ್ಬ ಖಳ ಕೆಟ್ಟ ಕೆಲಸ ಮಾಡಿ ಸುದ್ದಿಯಾಗುವುದು ವಿಶೇಷವೆನಿಸುವುದಿಲ್ಲ, ಆದರೆ ತರುಣ್ ತೇಜ್‌ಪಾಲ್‌ರಂಥ ನಾಯಕಪಟ್ಟದ ನಂಬಿಕೆ ಸೃಷ್ಟಿಸುವ ಜನ ತಮ್ಮ 'ವಾಣಿ'ಗೆ ಲೇಖನಿಗೆ ತಾವೇ ಸ್ವತಃ ಬೆನ್ನಿಗೆ ಚೂರಿ ಹಾಕಿ ಅಸಹಾಯಕ ಹೆಣ್ಣನ್ನು ಕಾಮದಾಹಕ್ಕೆ ಬಯಸುವುದು ದೇಶದ ಅತ್ಯಂತ ದೊಡ್ಡ ದುರಂತವೆನಿಸುತ್ತದೆ.

- ಜ್ಯೋತಿ ಗುರುಪ್ರಸಾದ್, ಕಾರ್ಕಳ

ಪ್ರಮೋದ್ ಮುತಾಲಿಕನ ಮೂರ್ಖತನ

ಬಾಗಲಕೋಟೆಯ ನಿರ್ಜನ ಪ್ರದೇಶದಲ್ಲಿ ಶ್ರೀ ರಾಮಸೇನೆಯ ಏಳು ದಿನಗಳ ಶಸ್ತ್ರಾಸ್ತ್ರ ತರಬೇತಿ ಶಿಬಿರ ನಡೆದಿರುವುದು ನಿಜಕ್ಕೂ ಈ ನಾಡಿನ ದುರಂತ. ಶ್ರೀ ರಾಮಸೇನೆಯ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ಮಾಧ್ಯಮಗಳೊಂದಿಗೆ ಮಾತನಾಡುತ್ತಾ "ಅಂಬೇಡ್ಕರ್ ಹೇಳಿದ ಹಾದಿಯಲ್ಲಿ ನಾವು ಅಸ್ಪೃಶ್ಯತೆ ಹೋಗಲಾಡಿಸಲು ಈ ತರಬೇತಿ ನೀಡುತ್ತಿದ್ದೇವೆ" ಎಂದಿದ್ದಾನೆ. ಈ ಅಯೋಗ್ಯನಿಗೆ ಅಂಬೇಡ್ಕರ್ ಹೆಸರೆತ್ತುವ ಯೋಗ್ಯತೆ ಕೂಡ ಇಲ್ಲ. ತಲವಾರು ತರಬೇತಿ ಸೇರಿದಂತೆ ಹಲವಾರು ಉಗ್ರ ತರಬೇತಿಗಳ ಮೂಲಕ ಅದ್ಯಾವ ಅಸ್ಪೃಶ್ಯತೆಯನ್ನು ಹೋಗಲಾಡಿಸುತ್ತಾನೆ ಎನ್ನುವುದು ಮೂರ್ಖತನ. ಇದರ ಬದಲಿಗೆ ಇಲ್ಲಿನ ಕೋಮು ಸೌಹಾರ್ದತೆ ಕದಡುವುದೇ ಈತನ ಪ್ರಮುಖ ಉದ್ದೇಶವಾಗಿದೆ.

- ಇಶ್ರದ್ ಮೊಹಮ್ಮದ್, ಮಂಗಳೂರು

ಮಹಾನ್ ದಿವ್ಯಜ್ಞಾನಿಗಳ ಕಾಮಿಡಿ ಟೈಮ್

ಮಹಾನ್ ಭವಿಷ್ಯಕಾರರಿಗೆ ಅವರ ಬುಡದಲ್ಲೇ ಏನಾಗುತ್ತಿದೆ ಎಂದು ಗೊತ್ತಿರುವುದಿಲ್ಲ, ಆದರೂ ತಾವು ಎಲ್ಲವನ್ನೂ ಬಲ್ಲವರೆಂಬಂತೆ ಪೋಸ್ ಕೊಡುವುದಕ್ಕೇನೂ ಕೊರತೆಯಿಲ್ಲ. ಕಳೆದ ವಾರ ಟಿವಿ 9 ಹಾಗು ಸುವರ್ಣ 24x7 ಛಾನೆಲ್‌ನಲ್ಲಿ ಎರಡು ಕಾರ್ಯಕ್ರಮ ಪ್ರಸಾರವಾಗಿತ್ತು. ಒಂದು ಮುದ್ರಣ ಹಾಗು ಎಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ ಮಹಾನ್ ಜ್ಯೋತಿಷಿ ಹಾಗು ವಾಸ್ತು ತಜ್ಞನಾಗಿ ಖ್ಯಾತರಾಗಿ ಮಿಂಚುತ್ತಿರುವ ನಾಜೂಕಯ್ಯ ದೈವಜ್ಞ ಕೆ.ಎಸ್.ಸೋಮಯಾಜಿಯವರ ದೇವತಾ ವಿಗ್ರಹ ಅಮೆರಿಕಾದಲ್ಲಿ ಮಿಸ್ ಆದ ಪ್ರಕರಣವಾದರೆ ಇನ್ನೊಂದು ಬೇರೇನು ಮರೆತರೂ ಕೂದಲಿಗೆ ಡೈ ಹಾಕಲು ಮರೆಯದ ಡಾಕ್ಟರ್ ಹಾಗು ಮಹರ್ಷಿ ಎಂಬ ಪ್ರಾಚೀನ ಹಾಗು ಆಧುನಿಕ ಬಿರುದುಗಳನ್ನು ಏಕಕಾಲಕ್ಕೆ ಹೊಂದಿರುವ ಮಹರ್ಷಿ ಡಾ.ಆನಂದ ಗುರೂಜಿ ಕೊರಟಗೆರೆಯ ಗೊರವನಹಳ್ಳಿ ಜಾತ್ರೆಯಲ್ಲಿ ಮಾಡಿಕೊಂಡ ಎಡವಟ್ಟಿಗೆ ಸಮರ್ಥನೆ ಕೊಡಲು ಹೂಗಾರರೊಂದಿಗೆ ಒದ್ದಾಡಿದ ಕಥೆ. ಇವೆರಡೂ ನೋಡುಗರಿಗೆ ಒಂಥರಾ ಚಾರ್ಲಿ ಚಾಪ್ಲಿನ್ ಫಿಲಮ್‌ನಂತೆ ಮಜಾ ಕೊಟ್ಟಿತ್ತು.

ಇಂಥಾ ರಾಶಿಯವರಿಗೆ ಹೀಗಾಗುತ್ತೆ ಮತ್ತೊಂದು ಹಾಗಾಗುತ್ತೆ ಎಂದು ಖಡಾಖಂಡಿತವಾಗಿ ನುಡಿಯುವ ಭವಿಷ್ಯಕಾರ ಸೋಮಯಾಜಿಯವರ ವಸ್ತುಗಳು ವಿಮಾನ



ನಿಲ್ದಾಣದಲ್ಲಿ ಮಿಸ್ ಆಗುವ ಸಂಗತಿ ಮಾತ್ರ ಅವರಿಗೆ ಮುಂಚಿತವಾಗಿ ಹೊಳೆಯಲೇ ಇಲ್ಲವಂತೆ. ಹೋಗಲಿ ಉಳಿದವರ ಭವಿಷ್ಯ ಹೇಳುವ ಅವಸರದಲ್ಲಿ ತಮ್ಮ ಭವಿಷ್ಯ ನೋಡುವುದು ಮರೆತರೆನ್ನೋಣ. ಕೊನೇ ಪಕ್ಷ ಮಿಸ್ಸಾದ ಆ ಅಮೂಲ್ಯ ಪೂಜಾ ಸಾಮಗ್ರಿಗಳು ಏನಾದವು ಎಂಬ ಅರಿವು ಅವರ ದಿವ್ಯ ಜ್ಞಾನಕ್ಕೆ ನಂತರವೂ ಗೊತ್ತಾಗದೇ ಇದ್ದದ್ದಾದರೂ ಹೇಗೆ? ಅದು ಎಲ್ಲಿಯೂ ಹೋಗಿಲ್ಲ ಸೆಕ್ಯುರಿಟಿ ಚೆಕ್ಕಿಂಗನಲ್ಲೇ ಏನೋ ಆಗಿದೆ. ಅವರ ದಿವ್ಯ ಜ್ಞಾನದಿಂದ ಅಥವ ಕವಡೆ ಭವಿಷ್ಯದಿಂದ ಅದನ್ನು ತಿಳಕೊಳ್ಳುವ ಬದಲು ಟಿವಿ ಮುಂದೆ ಕೂತು ನಮ್ಮಂತಹ ಅಲ್ಪಜ್ಞಾನಿಗಳ ತರಹ ರೋದಿಸುವುದೆಲ್ಲಾ ಬೇಕಿತ್ತೇ?

ಅವನ್ಯಾರೋ ಪಿಂಡಾಂಡ ಬ್ರಹ್ಮಾಂಡ ಪ್ರಚಂಡನೊಬ್ಬ ಪ್ರಳಯಾಂತಕನಾಗಿಯೂ ಇನ್ನೂ ಚಾಲ್ತಿಯಲ್ಲಿದ್ದಾನೆ. ಚಕ್ರವರ್ತಿ ವಿದ್ಯೆಯ ಡಾ.ಮಹರ್ಷಿ ಆನಂದ ಗುರೂಜಿಗಳ ಅದ್ಭುತ ಚಕ್ರವರ್ತಿಗೆ ಗೊರವನಹಳ್ಳಿಯಲ್ಲಿ ತಮ್ಮಿಂದಾಗಿ ಲಕ್ಷಾಂತರ ಜನ ಹೆಂಗಸರು ಮಕ್ಕಳು ನಾಯಿ ಪಾಡು

ಹೊಗಳಿಕೆ ತೆಗಳಿಕೆ


ಅನುಭವಿಸುವ ವಿಷ ಹೊಳೆಯದೇ ಹೋಗಿದ್ದು ವಿ ತಮ್ಮ ದಿವ್ಯಜ್ಞಾನದಿಂದ ಕಂಡಕಂಡ ಪೂರ್ವಾಪರ ವಿಶ್ಲೇಷಿಸುತ್ತಾ ಭ ಹೇಳುವ ಇವರಿಗೆ ಈ ಸಾವ ಜ್ಞಾನವೂ (ಬೆಳ್ಳಿ ನಾಣ್ಯ, ಹ ಸೀರೆಯ ಆಮಿಷಕ್ಕೆ ಮುಗಿಬೀಳುತ್ತಾರೆನ್ನುವ ವಿಚಾರ) ಹೊಳೆಯದಿದ ಆಶ್ಚರ್ಯಕರ. ಕೇವಲ ಅಕ್ಕಿ ಕೊಡುತ್ತಾರೆಂದರೇ ಸೇರುತ್ತಾರೆ. ಇನ್ನು ಬೆಳ್ಳಿನಾಣ್ಯ ಕೊಡುತ್ತಾರೆಂದರೆ ಸೇರದಿರುತ್ತಾರೆಯೇ? (ಕೊಟ್ಟದ್ದು ಕೋಟೆಡ್ ಬೆಳ್ಳಿನ ಎಂಬುದು ಬೇರೆ ಮಾತು) ಇಷ್ಟೂ ಈ ಮೂಖ ತಿಳಿಯದಿದ್ದರಿಂದ ಈತನನ್ನು 'ಮಹರ್ಷಿ' ಎಂದ 'ಬೇವರ್ಷಿ' (ಬೇವಾರಿಸ್ ಅಂದರೆ ಅನಾಥ ಅಥವಾ ಗತಿ ಎಂದರ್ಥವಷ್ಟೆ ಬೇರೇನಲ್ಲ) ಎಂದು ಗೊರವನಹಳ್ಳಿ ಹೆಂಗಸರು ಮತ್ತು ಮಕ್ಕಳು ಉಗಿದಿದ್ದು ತಮಾಷೆಯಾ

ಇನ್ನು ಯೋಗೀಶ್ ಮಾಸ್ಟರ್ ಅವರ ಅಂಕಣ ಕು ಡಾ.ರಾಜೇಗೌಡ ಹಾಗು ಪ್ರೊ.ಶಿವರಾಮಯ್ಯನವರ ಆಕ್ಷೇ ಓದಿದೆ. ನಾನು ಗಮನಿಸಿದಂತೆ ಯೋಗೀಶ್ ಮಾ ತುಂಬಾ ಅಧ್ಯಯನ ಮಾಡಿ ಇದನ್ನು ಬರೆದಿದ್ದಾರೆ ವಿನಹ ತಮ್ಮ ಚಾಯ್ಚಪಲ ತೀರಿಸಲು ಇವನ್ನೆಲ್ಲ ಬರೆದ ನಮ್ಮ ಪುರಾಣಗಳಲ್ಲಿನ ಕಥಾಹಂದರದ ಯಥಾವತ್ ಗ್ರೀಕ್‌ನ ಪುರಾಣಗಳಲ್ಲೂ ಇದೆ. ಅವರ ಕಥೆಗಳ ಕೂಡ ಇದೇ ರೀತಿಯ ಕಾಮ ಕ್ರೋಧ ಮತ್ಸರ ಇತ್ಯಾ ಸಂದರ್ಭಗಳು ಯಾವ ಮುಲಾಜೂ ಇಲ್ಲದೇ ಸೇರಿಕೊ ಕೆಲ ಐತಿಹಾಸಿಕ ಕಾರಣಗಳಿಂದ (ಸನಾತನವಾದಿ ಹೇಳುವಂತೆ ಹಿಂದೂತ್ವವೇ ಗ್ರೇಟ್ ಎಂಬ ಕಾರ ಎಲ್ಲಾ ಸಂಸ್ಕೃತಿಗಳೂ ಗ್ರೇಟೆ. ಗ್ರೇಟ್ ಸಂಸ್ಕೃತಿ ಉಳಿಯುತ್ತವೆ ಎಂಬ ನಿಯಮ ಇದ್ದಿದ್ದರೆ ಮಾಯನ್ನ ತೊಡಗಿ ಎಂತೆಂಥಾ ಸಂಸ್ಕೃತಿಗಳು ಇಂದೂ ಇರಬೇ ಹಿಂದೂ ಸಂಸ್ಕೃತಿ ಉಳಿದಿದ್ದರೆ ಗ್ರೀಸ್ ಸಂಸ್ಕೃತಿ ಮೊದಲಿನಂತಿಲ್ಲ. ಹಾಗಂತ ಗ್ರೀಕ್ ಪುರಾಣಗ ಕಡೆಗಣಿಸಲಾದೀತೆ? ಖಂಡಿತಾ ಇಲ್ಲ. ಅದಕ್ಕೆ ಅದ ಆದ ಸತ್ವ ಪ್ರಭಾವ ಎಲ್ಲಾ ಇದೆ. ಆದರೆ ಈ ಪುರಾಣಗಳೆಲ್ಲ ಒಂದು ಪುರಾಣದ ಮಿತಿಯೊಳಗಿದ್ದ ಚಂದ. ಆದರೆ ಕೆಲ ಸಮಯಸಾಧಕರು ಕಾರ್ಯಸಾಧನೆಗಾಗಿ ಇಂತಹ ಪುರಾಣವನ್ನು ಅಸ್ತ್ರವನ್ನಾಗಿ ಬಳಸಿಕೊಂಡು ಜನರ ಹಾದಿ ತಪ್ಪಿಸುತ್ತಿ ಅಂತವರ ಓಟಕ್ಕೆ ಬ್ರೇಕ್ ಹಾಕಲು ಹಾಗು ಮೌಢ್ಯವನ್ನು ಎಚ್ಚರಿಸಲು ಯೋಗೀಶ್ ಮಾಸ್ಟರ್‌ರ

'ಸಿನಿಮಾದಲ್ಲಿ ಏನಾದರು ಸಾಧಿಸಬೇಕು'

- ಹೀರೋ ಸತ್ಯ

ರಂಗಭೂಮಿ ಹಿನ್ನೆಲೆಯಿಂದ ಬಂದು ನಂತರ 'ಆ ದಿನಗಳು', 'ಎ.ಕೆ.56', 'ಸ್ಲಂ ಬಾಲ', 'ತಮಸ್ಸು' ಚಿತ್ರಗಳ ಮೂಲಕ ಗಮನ ಸೆಳೆದು 'ಗುಂಡ್ರುಗೋವಿ' ಹಾಗೂ ಬಿಡುಗಡೆಯಾಗಬೇಕಿರುವ 'ಬೀರ' ಚಿತ್ರಗಳ ಮೂಲಕ ಹೀರೋ ಆಗಿ ಬಡ್ತಿ ಪಡೆದು, ಇದೇ ವಾರ ತೆರೆಕಾಣುತ್ತಿರುವ 'ದ್ಯಾವ್ರೇ' ಚಿತ್ರದಲ್ಲಿ ಪ್ರಮುಖ ಪಾತ್ರವೊಂದರಲ್ಲಿ ಕಾಣಿಸಿಕೊಳ್ಳುತ್ತಿರುವ ನಟ ಸತ್ಯ ಇಲ್ಲಿ ತಮ್ಮ ಮಾತುಗಳನ್ನು ಹಂಚಿಕೊಂಡಿದ್ದಾರೆ.



ಸಂದರ್ಶನ

*ನಿಮ್ಮ ಊರು, ಕುಟುಂಬ, ವಿದ್ಯಾಭ್ಯಾಸದ ಬಗ್ಗೆ ಹೇಳ್ತೀರಾ?

ಚಾಮರಾಜನಗರ ನನ್ನೂರು. ಅಪ್ಪ ಮೂಲತಃ ರೈತರಾಗಿದ್ದರೂ, ಆನಂತರ ಹೋಟೆಲ್ ಬಿಸಿನೆಸ್ ಶುರುಮಾಡಿದರು. ಅಮ್ಮ, ಅಪ್ಪನಿಗೆ ಎಲ್ಲಾ ಕೆಲಸಗಳಲ್ಲಿಯೂ ನೆರವಾಗುತ್ತಿದ್ದರು. ಅಪ್ಪನಿಗೆ ಒಳ್ಳೆ ಶಾರೀರ ಇತ್ತು, ಘಂಟಸಾಲ, ಪಿ.ಬಿ.ಶ್ರೀನಿವಾಸ್ ಅವರ ಹಾಡುಗಳನ್ನು ಏರುಧ್ವನಿಯಲ್ಲಿ ಹಾಡುತ್ತಿದ್ದರು. ಅಮ್ಮನೂ ಅಷ್ಟೇ. ವೀಣೆ ನುಡಿಸುವುದರ ಜೊತೆಗೆ, ಶಾಸ್ತ್ರೀಯ ಸಂಗೀತವನ್ನು ಅಭ್ಯಾಸ ಮಾಡಿದ್ದರು. ನಾನೋದಿದ್ದು ಬಿ.ಕಾಂ.

*ಕಲೆಯ ಬಗ್ಗೆ ನಿಮ್ಮಲ್ಲಿ ಆಸಕ್ತಿ ಹುಟ್ಟಿದ್ದು ಯಾವಾಗ?

ನನ್ನ ಶಾಲಾದಿನಗಳಲ್ಲಿ ಡಾನ್ಸ್ ಎಂದರೆ ನನಗೆ ಪ್ರಾಣ. ಅದರಲ್ಲೂ ಮೈಕಲ್ ಜಾಕ್ಸನ್, ಚಿರಂಜೀವಿ ಡಾನ್ಸ್ ಅಂದರೆ ಬಹಳ ಇಷ್ಟ. ಅವರನ್ನು ಅನುಕರಿಸಿ ಡಾನ್ಸ್ ಮಾಡಲು ಪ್ರಯತ್ನಿಸುತ್ತಿದ್ದೆ. ಮನೆಗೆ ಯಾರಾದರೂ ನೆಂಟರು ಬಂದರೆ, ಊಟೋಪಚಾರಗಳು ಮುಗಿದ ನಂತರ ಅವರೆದುರು ಡಾನ್ಸ್ ಮಾಡುವಂತೆ ಅಪ್ಪ ಹೇಳುತ್ತಿದ್ದರು. ನಾನು ಯಾವುದೇ ಅಳುಕಿಲ್ಲದೆ ಮಾಡುತ್ತಿದ್ದೆ. ಹಾಗೇನೆ, ಹೊಲಗದ್ದೆಗಳಲ್ಲಿ ಕೆಲಸ ಮಾಡುವ ಹೆಂಗಸರು ಹಾಡುತ್ತಿದ್ದ ಜನಪದಗೀತೆಗಳು ನನ್ನನ್ನು ಬಹಳವಾಗಿ ಆಕರ್ಷಿಸಿದ್ದವು. ಹಾಗಾಗಿ, ಶಾಲಾಸಮಾರಂಭಗಳಲ್ಲಿ ಕೋಲಾಟ ಸೇರಿದಂತೆ ಜನಪದ ನೃತ್ಯಗಳಲ್ಲಿ ಭಾಗವಹಿಸುತ್ತಿದ್ದೆ. ಜೊತೆಗೆ, ಅಪ್ಪ 'ಸಂಪತ್ತಿಗೆ ಸವಾಲ್' ಸಿನಿಮಾದ ಕ್ಯಾಸೆಟ್ ಹಾಕ್ತಿದ್ರು. ಅದನ್ನು ಕೇಳುತ್ತಾ ಆಲೆಮನೆಯಲ್ಲಿ ಕಾಲ ಕಳೆಯುತ್ತಿದ್ದೆ. ಆ ಕಾಲಕ್ಕೆ ರಾಜಕುಮಾರ್ ಅವರ ಸಿನಿಮಾಗಳನ್ನು ಚಿತ್ರಮಂದಿರಗಳಲ್ಲಿ ನೇರವಾಗಿ ನೋಡುವ ಸೌಭಾಗ್ಯ ನನಗಿರಲಿಲ್ಲ. ನಾವಿದ್ದದ್ದು ಒಂದು ಹಳ್ಳಿಯಲ್ಲಿ. ಮುಂದೆ ಪರದೆಯ ಮೇಲೆ ಅವರ ಸಿನಿಮಾಗಳನ್ನು ನೋಡಿದಾಗ ಪುಳಕಿತನಾದೆ ಬಿಡಿ.

*ಸಿನಿಮಾ ಬಗ್ಗೆ ಸೆಳೆತ ಯಾವಾಗ ಶುರುವಾಯ್ತು?

ಹತ್ತನೇ ತರಗತಿಯಲ್ಲಿದ್ದಾಗ ನಮ್ಮ ಶಾಲೆಯಿಂದ ಊಟಿ ಟ್ರಿಪ್ ಹಾಕಿದ್ರು. ಅಲ್ಲಿ ಅರ್ಜುನ್ ಸರ್ಜಾ-ಖುಷ್ಬೂ ಅವರ 'ಪ್ರತಾಪ್' ಸಿನಿಮಾದ ಚಿತ್ರೀಕರಣ ನಡೆಯುತ್ತಿತ್ತು. ನಾನು ನೇರವಾಗಿ ನೋಡಿದ ಮೊದಲ ಸಿನಿಮಾ ಚಿತ್ರೀಕರಣವದು. ನಾನೂ ಕೂಡ ಸಿನಿಮಾರಂಗದಲ್ಲಿ ಏನಾದರು ಸಾಧಿಸಬೇಕು ಅನ್ನಿಸಿದ್ದು ಆವಾಗಲೇ. ಆ ಮೊದಲು ಖುಷ್ಬೂ ಅವರ ಮಧುರಧ್ವನಿಯನ್ನು ಕ್ಯಾಸೆಟ್‌ಗಳಲ್ಲಿ ಕೇಳಿದ್ದೆ. ನೇರವಾಗಿ ಕೇಳಿದಾಗಲೇ ಗೊತ್ತಾಗಿದ್ದು ಅವರ ಧ್ವನಿ ಬಹಳ ಕರ್ಕಶ ಅಂತ! ಸಿನಿಮಾ ಬಗ್ಗೆ ಆಸಕ್ತಿ ಹುಟ್ಟಲು ಮತ್ತೊಂದು ಕಾರಣವೆಂದರೆ, ಚಾಮರಾಜನಗರದಲ್ಲಿದ್ದಾಗ ನನಗೆ ಕೆಲವು ಗೆಳೆಯಗೆಳತಿಯರಿದ್ದರು. ನಾವೆಲ್ಲಾ ಒಟ್ಟಾಗಿ ಸಿನಿಮಾ ನೋಡಲು ಹೋಗುತ್ತಿದ್ದೆವು. ಶಾರುಖ್ ಖಾನ್ ಅವರ 'ಡಿಡಿಎಲ್‌ಜೆ' ಯಿಂದ ಹಿಡಿದು, ಉಪೇಂದ್ರರ 'ಎ'ವರೆಗೆ ಯಾವುದೇ ಸಿನಿಮಾವನ್ನು ತಪ್ಪದೆ ನೋಡಿದ್ದೆವು. ಹಾಗೇನೆ, ನಾನು ಆಗಾಗ ತಮಿಳುನಾಡಿಗೆ ಹೋಗಿ ಬರುತ್ತಿದ್ದುದರಿಂದ ಹೆಚ್ಚಾಗಿ ತಮಿಳು ಸಿನಿಮಾಗಳನ್ನು ನೋಡುವ ಅವಕಾಶ ಸಿಕ್ಕಿತ್ತು. ಅವುಗಳಲ್ಲಿ ಮುಖ್ಯವಾಗಿ ರಜನಿಕಾಂತ್ ಅವರ 'ಅಣ್ಣಾಮಲೈ' ತುಂಬಾ ಕಾಡಿದ ಸಿನಿಮಾ.

*ನಿಮ್ಮ ಕಲಾಬದುಕು ರಂಗಭೂಮಿಯ ಮೂಲಕ ಶುರುವಾಯ್ತು ಅಂತ ಕೇಳಿದ್ದೀನಿ. ಆ ಕುರಿತು ಹೇಳ್ತೀರಾ?

ಚಾಮರಾಜನಗರದಲ್ಲಿದ್ದಾಗ, ಒಬ್ಬರ ಬಳಿ ಇಂಗ್ಲಿಷ್ ಕಲಿಯಲು ಹೋಗ್ತಿದ್ದೆ. ಅಲ್ಲಿ ರಂಗಭೂಮಿಯ ನಂಟಿದ್ದ ಒಂದು ಹುಡುಗಿ ಪರಿಚಯವಾಯಿತು. ಆಕೆ, ನಾನು ಡಾನ್ಸರ್ ಅಂತ ಗೊತ್ತಾಗಿದ್ದೇ ಅವರು ತಂಡ ಪ್ರಸ್ತುತಪಡಿಸಬೇಕಿದ್ದ 'ಹೂ ಹುಡುಗಿ' ಅನ್ನುವ ನಾಟಕದ ಹಾಡೊಂದಕ್ಕೆ ನೃತ್ಯ ಸಂಯೋಜನೆ ಮಾಡುವಂತೆ ಕೇಳಿಕೊಂಡರು. ನಾನು ಓಕೆ ಅಂದೆ. ನೃತ್ಯ ಸಂಯೋಜನೆ ಮಾಡಿದೆ. ಜೊತೆಗೊಂದು ಸಣ್ಣ ಪಾತ್ರ ಕೊಟ್ಟರು. ಅದನ್ನೂ ಮಾಡಿದೆ. 'ಹೂ ಹುಡುಗಿ'ಯಲ್ಲಿ ನನ್ನ ಬಾಡಿ ಲಾಂಗ್ವೇಜ್, ಡೈಲಾಗ್ ಡೆಲಿವರಿಯನ್ನು ಗಮನಿಸಿದ್ದ ನಿರ್ದೇಶಕ ನಾ.ಶ್ರೀನಿವಾಸ್ ಅವರು ತಮ್ಮ 'ದೇಸಿಡ ಗಿರಳಿಲ್ಲ' ನಾಟಕದಲ್ಲಿ ನನಗೆ ಪ್ರಮುಖ ಪಾತ್ರ ಕೊಟ್ಟರು. ನನ್ನ ವೃತ್ತಿರಂಗಭೂಮಿಯ, ಚಟುವಟಿಕೆಗಳು ಅಲ್ಲಿಂದ ಶುರುವಾದವು. ಆನಂತರ ಚಾಮರಾಜನಗರದಲ್ಲಿ ಮೂರು ವರ್ಷ ರಂಗನಟನಾಗಿ ಬ್ಯುಸಿಯಾದೆ. 'ಪೋಲಿ ಕಿಟ್ಟಿ', 'ಗಿಳಿಯು ಪಂಜರದೊಳಿಲ್ಲ' ಸೇರಿದಂತೆ ಅನೇಕ ನಾಟಕಗಳಲ್ಲಿ ಪಾತ್ರ ಮಾಡಿದೆ.

*ಬೆಂಗಳೂರಿಗೆ ಬಂದಿದ್ದು ಹೇಗೆ? ಬಂದನಂತರ ಇಲ್ಲಿಯ ನಾಟಕ, ಧಾರಾವಾಹಿ ಬದುಕು ಹೇಗಿತ್ತು ಅಂತ ಹೇಳ್ತೀರಾ?

ಬೆನಕ ಕಿಟ್ಟಿ ಅಂತ ನನ್ನ ತಂದೆಯ ಕ್ಲಾಸ್‌ಮೇಟ್ ಒಬ್ರಿದ್ರು. ಅವರಿಗೆ ಕೆ.ವೆಂಕಟರಾಜು ಅನ್ನುವ ರಂಗನಿರ್ದೇಶಕರೊಬ್ಬರು ಫ್ರೆಂಡ್ ಇದ್ರು. ಅವರ ನಿರ್ದೇಶನದ 'ಪೋಲಿ ಕಿಟ್ಟಿ' ನಾಟಕದ ಮೂಲಕ ಬೆಂಗಳೂರಿಗೆ ಬಂದೆ. ಮತ್ತೆ, ಕಿಟ್ಟಿಯವರ ಮೂಲಕ ಬಿ.ಸುರೇಶ ಅವರ ಪರಿಚಯವಾಗಿ 'ಸಾಧನೆ' ಸೀರಿಯಲ್‌ನಲ್ಲಿ ಪಾತ್ರ ಮಾಡಿದೆ. ಯೋಗರಾಜ ಭಟ್ಟರು, ಸೂರಿ, ಗಡ್ಡ ವಿಜಿ, ಪ್ರೀತಂ ಗುಬ್ಬಿ ಇವರೆಲ್ಲರ ಪರಿಚಯ ಅಲ್ಲೇ ಆಗಿದ್ದು ನನಗೆ. ಹಾಗೇನೆ, ಬಿ.ಸುರೇಶ ಅವರು ತಮ್ಮ 'ಹತ್ತು ಹೆಜ್ಜೆಗಳು' ಅನ್ನುವ ಡಾಕ್ಯುಮೆಂಟ್ರಿಯಲ್ಲಿ ನನಗೆ ನಾಯಕನ ಪಾತ್ರ ಕೊಟ್ಟರು. ಜೊತೆಗೆ, 'ಬೆನಕ' ಮೂಲಕ 'ರಂಗಾಯಣ', 'ನೀನಾಸಂ'ಗೆ ಹೋದೆ. ಅಲ್ಲಿಗೆ ಕರೆದೊಯ್ದವರು, ರಘುನಂದನ್ ಅಂತ ನನ್ನ ಗುರುಗಳು. ದರ್ಶನ್ ಅವರಿಗೂ ಕೂಡ ಇವರೇ ಗುರುಗಳು. ಜೊತೆಗಿವರು, 'ಎನ್.ಎಸ್.ಡಿ'ಯಲ್ಲೂ ಪಾಠ ಮಾಡ್ತಿದ್ರು. ಅಲ್ಲಿ ಶಾರುಖ್ ಖಾನ್ ಕೂಡ ಇವರ ಬಳಿ ಅಭಿನಯ ಕಲಿಯಲು ಬರುತ್ತಿದ್ದರು ಅನ್ನುವುದು ವಿಶೇಷ.

*ಸಿನಿಮಾದಲ್ಲಿ ಅಭಿನಯಿಸುವ ಅವಕಾಶ ಹೇಗೆ ಬಂತು?

'ನೀನಾಸಂ'ಗೆ ಬಂದನಂತರ, ಕುವೆಂಪು ಅವರ 'ಚಂದ್ರಹಾಸ' ನಾಟಕದ ದುಷ್ಟಬುದ್ಧಿ ಪಾತ್ರ ಮಾಡಿದೆ. ಆ ಪಾತ್ರವನ್ನು ನೋಡಿ ಮೆಚ್ಚಿಕೊಂಡ ಸುಮನಾ ಕಿತ್ತೂರ್ ಅವರು 'ಆ ದಿನಗಳು' ಚಿತ್ರದಲ್ಲಿ ಪಾತ್ರ ಕೊಡಿಸಿದ್ರು. ಆನಂತರ ಅವರ ನಿರ್ದೇಶನದ 'ಸ್ಲಂ ಬಾಲ'ದಲ್ಲೂ, ಅಗ್ನಿ ಶ್ರೀಧರ್ ಅವರ ನಿರ್ದೇಶನದ 'ತಮಸ್ಸು'ವಿನಲ್ಲೂ ಪಾತ್ರ ನಟಿಸಲು ಅವಕಾಶ ಮಾಡಿಕೊಟ್ಟರು. ಆನಂತರವೇ 'ಗುಂಡ್ರುಗೋವಿ' ಚಿತ್ರದಲ್ಲಿ ನಾಯಕನಾಗಿ ನಟಿಸುವ ಅವಕಾಶ ಒದಗಿಬಂತು. 'ಗುಂಡ್ರುಗೋವಿ' ಚಿತ್ರದ ಅಭಿನಯಕ್ಕಾಗಿ ಸುವರ್ಣ ಟಿವಿಯವರು 'ಬೆಸ್ಟ್ ಆಕ್ಟರ್ ಡೆಬ್ಯೂಟ್ ಅವಾರ್ಡ್' ಕೊಟ್ಟಿದ್ರು ಅನ್ನುವ ವಿಷಯವನ್ನಿಲ್ಲಿ ನೆನೆಯುತ್ತೇನೆ. ಅಲ್ಲಿಂದಾಚೆಗೆ 'ಇಜ್ಜೋಡು', 'ಎ.ಕೆ. 56', 'ರಾಜಧಾನಿ' ಚಿತ್ರಗಳಲ್ಲಿ ಪ್ರಮುಖ ಪಾತ್ರಗಳನ್ನೂ ಮಾಡಿದೆ. ಬಿಡುಗಡೆಯಾಗಬೇಕಿರುವ 'ಬೀರ'ದಲ್ಲಿ ಹೀರೋ ಪಾತ್ರ ಮಾಡಿದ್ದೇನೆ.

*ಈ ವಾರ ಬಿಡುಗಡೆಯಾಗುತ್ತಿರುವ 'ದ್ಯಾವ್ರೇ' ಚಿತ್ರದಲ್ಲಿ ನಿಮ್ಮದು ಪ್ರಮುಖ ಪಾತ್ರವಂತೆ. ಅದರ ಬಗ್ಗೆ ಸ್ವಲ್ಪ ಹೇಳ್ತೀರಾ?

ನನ್ನ ಮಗನ ಬರ್ತ್‌ಡೇಗೆ ಕರೆಯಲು ಯೋಗರಾಜ ಭಟ್ಟರಿಗೆ ಕರೆಮಾಡಿದ್ದೆ. ಆಫೀಸಿಗೆ ಬರಲು ಹೇಳಿದ್ರು. ಹೋದೆ. ತಮ್ಮ ಶಿಷ್ಯ 'ಗಡ್ಡ ವಿಜಿ'ಯವರಿಗೆ ಹೇಳಿ 'ದ್ಯಾವ್ರೇ' ಚಿತ್ರದಲ್ಲಿ ಪಾತ್ರ ಕೊಡಿಸಿದರು. 'ದ್ಯಾವ್ರೇ' ಚಿತ್ರದಲ್ಲಿ ನಾನೊಬ್ಬ ಎನ್‌ಕೌಂಟರ್ ಸ್ಪೆಷಲಿಸ್ಟ್. ಎ.ಸಿ.ಪಿ ಸಾವಂತ್ ಅಂತ ನನ್ನ ಪಾತ್ರದ ಹೆಸರು. ಯೋಗರಾಜ್ ಭಟ್ಟರು ನಿರ್ವಹಿಸಿರುವ ಜೈಲರ್ ಪಾತ್ರದ ಕ್ಲಾಸ್‌ಮೇಟ್ ಪಾತ್ರ ನನ್ನದು. ನಾನು ನಿಜಜೀವನದಲ್ಲಿ ಪೊಲೀಸ್ ಆಫೀಸರ್ ಆಗಬೇಕೆಂದುಕೊಂಡಿದ್ದೆ. ಕಾರಣಾಂತರಗಳಿಂದ ಅದು ಸಾಧ್ಯವಾಗಲಿಲ್ಲ. ಆ ಆಸೆ ಈಗ ಸಿನಿಮಾ ಮೂಲಕ ನೆರವೇರಿದೆ ಅಂತ ಭಾವಿಸುತ್ತೇನೆ.

*ಪರಭಾಷಾ ಚಿತ್ರಗಳಲ್ಲಿ ಅಭಿನಯಿಸಲು ಅವಕಾಶಗಳು ಬಂದರೆ ಒಪ್ಪಿಕೊಳ್ಳುತ್ತೀರಾ?

ನನಗೆ ಹೊಂದುವ ಪಾತ್ರವಿದ್ದರೆ ಖಂಡಿತವಾಗಿ ಮಾಡುತ್ತೇನೆ. ಹಾಗೆ ನೋಡಿದ್ರೆ, ಪ್ರಭು ಸೋಲೊಮನ್ ಅವರ 'ಕುಮ್ಕಿ' ಚಿತ್ರದಲ್ಲಿ ನಾನು ಹೀರೋ ಆಗಿ ನಟಿಸಬೇಕಿತ್ತು. ನಲವತ್ತೈದು ದಿನ ಕಾಲ್‌ಶೀಟ್ ಕೇಳಿದ್ರು. ಅದೇ ವೇಳೆಗೆ ಇಲ್ಲಿ 'ಬೀರ' ಚಿತ್ರದಲ್ಲಿ ಬ್ಯುಸಿ ಇದ್ದ ಕಾರಣ ಒಪ್ಪಿಕೊಳ್ಳಲಾಗಲಿಲ್ಲ. ನಂತರ, 'ಕುಮ್ಕಿ'ಯ ಆ ಪಾತ್ರವನ್ನು ಶಿವಾಜಿ ಪ್ರಭು ಅವರ ಮಗ ಮಾಡಿದರು. ನನಗೆ ಕನ್ನಡದ ಜೊತೆಗೆ ತಮಿಳು, ತೆಲುಗು, ಹಿಂದಿ, ಇಂಗ್ಲಿಷ್ ಭಾಷೆಗಳು ಬರುತ್ತವೆ. ಮುಂದೆ ಪರಭಾಷೆಗಳಿಂದ ಒಳ್ಳೆಯ ಅವಕಾಶಗಳು ಬಂದರೆ ಖಂಡಿತ ಮಾಡುತ್ತೇನೆ. ಯಾವತ್ತಿಗೂ ನನ್ನ ಮೊದಲ ಆದ್ಯತೆ ಇಲ್ಲಿವರೆಗೂ ನನ್ನನ್ನು ಪ್ರೋತ್ಸಾಹಿಸಿ, ಅನ್ನ ನೀಡಿದ ಮಾತೃಭಾಷೆಯಾದ ಕನ್ನಡಕ್ಕೇನೆ.



ಸಂದರ್ಶಕ
ಹೃದಯಶಿವ

ಲೇಖನದ ಅಗತ್ಯತೆ ಖಂಡಿತಾ ಇದೆ. ನಾವೆಲ್ಲ ರಾಮಾಯಣ ಮಹಾಭಾರತ ಅಮರ ಚಿತ್ರಕಥೆ ಚಂದಮಾಮಗಳನ್ನೆಲ್ಲ ಓದಿ ಬೆಳೆದವರು. ನಮ್ಮ ಮಕ್ಕಳಿಗೂ ಅದು ಬೇಕು. ಆದರೆ ಅವೆಲ್ಲ ಕೇವಲ ಕಥೆಯಾಗಿದ್ದರಷ್ಟೇ ಚಂದ. ಯೋಗೀಶ್ ಅವರು ಪುರಾಣದ ವಾಸ್ತವತೆಯನ್ನ ಯಥಾವತ್ತಾಗಿ ಮಂಡಿಸುತ್ತಿದ್ದಾರೆಯೇ ವಿನಹ ಎಲ್ಲೂ ಅತಿರೇಕಕ್ಕೆ ಹೋದಂತೆ ಕಾಣಿಸುತ್ತಿಲ್ಲ.

- ಶಶಿ ಪುತ್ತೂರು, ದಕ

'ಅಂಚಿನಿಂದ' ಅಂಕಣದಲ್ಲಿ ವಾಸು ಅವರು ಹೇಳಿರುವುದು ಅಕ್ಷರಶಃ ಸತ್ಯ. ಸಮಾನ ಶಿಕ್ಷಣ ಪದ್ಧತಿ ಏಕಾಏಕಿ ಆಗುವಂತಹದ್ದಲ್ಲ. ಅದಕ್ಕಾಗಿ ಹಲವು ಪುಟ್ಟ ನಿವಾರಣೆಗಳನ್ನು ಮಾಡುತ್ತಾ ಗುರಿ ಮುಟ್ಟಬೇಕಿದೆ. ಇಲ್ಲವಾದರೆ ಪಠ್ಯದ ಮೂಲಕ ಬ್ರಾಹ್ಮಣಶಾಹಿ ಖಾಸಗೀಕರಣದ ಮೂಲಕ ಬಂಡವಾಳಶಾಹಿ ನಮ್ಮ ಮಕ್ಕಳನ್ನು ಕೂಲಿಗಳಂತೆ ಮತ್ತು ಸರಕುಗಳಂತೆ ಮಾಡಿಕೊಂಡು ಬಿಡುತ್ತವೆ.

- ವಿ.ಆರ್.ಮೌರ್ಯ, ಬೆಂಗಳೂರು

ಕೋಡಿಮಠದ ಸ್ವಾಮಿಯನ್ನು ಜೈಲಿಗೆ ಕಳಿಸಬೇಕು!

'ಶುಭ ನುಡಿಯೇ ಶಕುನದ ಹಕ್ಕಿ ಅಂದರೆ ನನಗೆ ಅಶುಭ ನುಡಿದೇ ಗೊತ್ತು' ಎಂದೆನ್ನುವಂತೆ ಕೋಡಿಮಠದ ಸ್ವಾಮಿ ಎಂಬ ಆಸಾಮಿ ಯಾವಾಗಲೂ ಅಶುಭವನ್ನು ನುಡಿಯುತ್ತಲೇ ಇರುತ್ತಾನೆ. "ಇನ್ನು ಹತ್ತು ತಿಂಗಳೊಳಗಾಗಿ ಸಿದ್ದರಾಮಯ್ಯನವರ ಸರಕಾರ ಬಿದ್ದು ಹೋಗುತ್ತದೆ" ಎಂದು ಭವಿಷ್ಯ ನುಡಿದಿದ್ದಾನೆ. ಪಿಂಜರಾಪೋಲು ಪತ್ರಕರ್ತರು ಇದೊಂದು ಮಹತ್ವದ ಸುದ್ದಿ ಎಂಬಂತೆ ತಮ್ಮ ವಾಹಿನಿಗಳಲ್ಲಿ ಪ್ರಸಾರ ಮಾಡಿದರು.

ಸಿದ್ದರಾಮಯ್ಯನವರು ಕರ್ನಾಟಕ ಸರಕಾರದ ಮುಖ್ಯಮಂತ್ರಿಯಾದ ಸಂಗತಿಯನ್ನು ರಾಜ್ಯದ ಪುರೋಗಾಮಿ-ಪಟ್ಟಭದ್ರಶಕ್ತಿಗಳಿಗೆ ಅರಗಿಸಿಕೊಳ್ಳಲು ಆಗುತ್ತಿಲ್ಲ. ಸದಾ ಮೇಲ್ವರ್ಗದವರ ಜೊತೆ ತಮ್ಮ ಸಂಬಂಧವನ್ನು ಕುದುರಿಸಿಕೊಂಡು ಹುಲ್ಲುಗಾವಲನ್ನು ಸೃಷ್ಟಿಸಿಕೊಂಡಿದ್ದ ತೋಳಗಳಿಗೆ ಸಿದ್ದರಾಮಯ್ಯನವರ ಜಾಣ ನಡೆ ನುಂಗಲಾಗದ ತುತ್ತಾಗಿದೆ. ಹೇಳಿಕೇಳಿ ಸಿದ್ದರಾಮಯ್ಯ ಜೋತಿಷ್ಯ-ಭವಿಷ್ಯವನ್ನು ನಂಬದವರು. ಇವರು ಅಧಿಕಾರದಲ್ಲಿ ಇರುವವರೆಗೂ ತಮಗೆ ಉಳಿಗಾಲವಿಲ್ಲ ಎಂಬುದು ಮನದಟ್ಟಾಗಿದ್ದರಿಂದ ಒಂದೇ ಸಮ ಇವರೆಲ್ಲರೂ ಪತರಗುಟ್ಟುತ್ತಿದ್ದಾರೆ.

ಅಧಿಕಾರದ ಚುಕ್ಕಾಣಿ ಹಿಡಿದುಕೊಂಡವರಿಗೆ ಸದಾ ತಗುಲು ಬಿದ್ದು ಯಾವುದ್ಯಾವುದೋ ನೆಪಗಳಿಗಾಗಿ ಅವರಿಂದ ಪೂಜೆ- ಪುನಸ್ಕಾರಗಳನ್ನು ಮಾಡಿಸಿ, ಹೋಮ-ಹವನಗಳನ್ನು ಮಾಡಿ ತಮ್ಮ ಭರ್ಜರಿ ವ್ಯಾಪಾರ ಕುದುರಿಸಿಕೊಳ್ಳುತ್ತಿದ್ದರು. ಕರ್ನಾಟಕದಲ್ಲಿ ಇದುವರೆಗೆ ಅಧಿಕಾರಕ್ಕೆ ಬಂದ ಬಹುತೇಕ ಮುಖ್ಯಮಂತ್ರಿಗಳು ಇಂಥ ಜೋತಿಷಿಗಳ ಹಿಂದೆ, ಮಂತ್ರವಾದಿಗಳ ಹಿಂದೆ ಬೆನ್ನುಬಿದ್ದವರೆ ಆಗಿದ್ದರಿಂದ ಇವರ ಕೂದಲು ಕೊಂಕಿಸಲು ಆಗಿರಲಿಲ್ಲ. ಆದರೆ ಸಿದ್ದರಾಮಯ್ಯ ಎಂಬ 'ಎಡಪಟ್ಟು ಗಿರಾಕಿ' ಮಾತ್ರ 2013 ರ ಮೌಢ್ಯ ವಿರೋಧಿ ಮಸೂದೆಯನ್ನು ಮಂಡಿಸುವುದಾಗಿ ಹೇಳಿ ಪುರೋಹಿತಶಾಹಿಗಳ ಅಂಡಿನ ಕೆಳಗಡೆ ನೀರು ಹಾಯಿಸುವುದನ್ನು ಇವರಿಂದ ಸಹಿಸಲು ಸಾಧ್ಯವೆ? ಒಮ್ಮಿಂದೊಮ್ಮೆ ಎರಗಿದ ಸುನಾಮಿ ಅಲೆಗೆ ಇವರು ತತ್ತರಗೊಂಡಿದ್ದಾರೆ. ಹೇಗಾದರೂ ಸೈ ಸಿದ್ದರಾಮಯ್ಯ ಅಧಿಕಾರದಲ್ಲಿ ಇರಬಾರದು ಎಂಬುದು ಇವರ ಮುಖ್ಯ ಅಜೆಂಡವಾಗಿದೆ.

ಒಂದು ವೇಳೆ ಕೋಡಿಮಠದ ಸ್ವಾಮಿ ಹೇಳುವ ಭವಿಷ್ಯಗಳು ನಿಜವೇ ಆಗಿದ್ದಲ್ಲಿ ಅವರಿಗೆ ಕರ್ನಾಟಕ ಸರಕಾರವೆ ಪ್ರಮುಖವಾದ ಖಾತೆಯೊಂದನ್ನು ಕೊಟ್ಟು ಇಡೀ ರಾಜ್ಯದ-ರಾಷ್ಟ್ರದ ಹಿತವನ್ನು ಕಾಪಾಡುವಂತೆ ನೋಡಿಕೊಳ್ಳಬೇಕಿತ್ತು.

ತೀರಾ ಇತ್ತೀಚೆಗೆ ರಾಜ್ಯದ ಕೆಲವು ಕಡೆ ಬಸ್‌ಗಳಲ್ಲಿ ಸಾರ್ವಜನಿಕರು ಸುಟ್ಟು ಕರಕಲಾಗಿ ಹೋದರು. ಬೆಳಗಾವಿಯಲ್ಲಿ ರೈತ ಅರಭಾವಿ ವಿಷ ಕುಡಿದು ಸತ್ತು ಹೋದರು. ನಿತ್ಯವು ರಸ್ತೆ ಅಪಘಾತದಲ್ಲಿ ನೂರಾರು ಜನ ತಮ್ಮ ಪ್ರಾಣವನ್ನು ಕಳೆದುಕೊಳ್ಳುತ್ತಿದ್ದಾರೆ. ದೇಶದ ಹಲವು ಕಡೆ ಬಾಂಬ್‌ಗಳು ಸ್ಫೋಟಗೊಳ್ಳುತ್ತಿವೆ.

ಇವೆಲ್ಲವುಗಳು ಸಂಭವಿಸುವ ಮುಂಚೆಯೇ ಇವುಗಳ ಬಗ್ಗೆ ಕೋಡಿಮಠದ ಢೋಂಗಿ ಸ್ವಾಮಿಗಳು ಹೇಳಿದ್ದರೆ ಅದೆಷ್ಟೋ ಜನರನ್ನು ಬಚಾವು ಮಾಡಿದ ಕೀರ್ತಿ ಅವರಿಗೆ ಸಲ್ಲುತ್ತಿತ್ತು. ಸರಣಿ ಸರಣಿ ರಸ್ತೆ ಅಪಘಾತಗಳು, ಬಾಂಬ್ ಸ್ಫೋಟಗಳು ಜರುಗುತ್ತಿರುವಾಗ ಅವುಗಳ ಬಗೆಗೆ ತುಟಿ ಎರಡು ಮಾಡದ ಕೋಡಿಮಠದ ಸ್ವಾಮಿ ರಾಜಕೀಯ ವಿಷಯ ಬಂದಾಗ ಮಾತ್ರವೆ ಬಾಯಿ ತೆರೆಯುವುದೇಕೆ?

ಹಿಂದೆಯೂ ರಾಮಕೃಷ್ಣ ಹೆಗಡೆಯವರ ಸರಕಾರವಿದ್ದಾಗ ಮಳೆ ಇಲ್ಲದೆ ರಾಜ್ಯದ ಜನ ಬರಗಾಲದಿಂದ ಕಂಗಾಲಾಗಿದ್ದರು. ಆಗ ಶಿವಬಾಲಯೋಗಿ ಎಂಬ ಕಳ್ಳ ತಪಸ್ವಿಯೊಬ್ಬ ತಾನು ತಿಪ್ಪಗೊಂಡನಹಳ್ಳಿಯ ಕೆರೆಯಲ್ಲಿ ಕುಳಿತು ತಪಸ್ಸು ಮಾಡಿದರೆ ರಾಜ್ಯಕ್ಕೆ ಮಳೆಬರುವುದಾಗಿ ನಂಬಿಸಿದ. ಸರಕಾರವೂ ಆತನ ಬುರುಡೆ ಮಾತಿಗೆ ತಲೆದೂಗಿ ಅವಕಾಶ ಮಾಡಿಕೊಟ್ಟಿತು. ಆದರೆ ವಾಸ್ತವದಲ್ಲಿ ಮಳೆ ಬರುವುದಿರಲಿ, ಆಕಾಶದಲ್ಲಿ ಕಪ್ಪಾದ ಮೋಡಗಳೂ ಸುಳಿಯಲಿಲ್ಲ; ತಣ್ಣನೆಯ ಗಾಳಿಯೂ ಬೀಸಲಿಲ್ಲ. ಸ್ವತಃ ಶಿವಬಾಲಯೋಗಿ ಮಾತ್ರ ವಿಚಾರವಾದಿಗಳ ಮಾತಿಗೆ ಹೆದರಿ ಆತನ ಮೈತುಂಬಾ ಬೆವರು ಮತ್ತು ನಡುಕ ಉಂಟಾಯಿತಷ್ಟೆ.

ತೀರಾ ಇತ್ತೀಚೆಗೆ ಕೇಂದ್ರ ಸರಕಾರವೂ ಉತ್ತರ ಪ್ರದೇಶದ ದೌಂಡಿಯಾಖೇಡ ಎಂಬ ಗ್ರಾಮದ ಶೋಭನ ಸರ್ಕಾರ ಎಂಬ ಸಾಧುವೊಬ್ಬನ ಮಾತು ಕೇಳಿ ಕೋಟ್ಯಂತರ ಬೆಲೆಯ ಚಿನ್ನ- ವಜ್ರ-ವೈಢೂರ್ಯಗಳ ನಿಧಿ ಉತ್ಖನನವನ್ನು ನಡೆಸಿ ತೀವ್ರಮುಖಭಂಗಕ್ಕೆ ಒಳಗಾಯಿತು.

ಭವಿಷ್ಯ ಹೇಳುತ್ತೇನೆನ್ನುವ ಕೋಡಿಮಠದ ಸ್ವಾಮಿಗೆ ಸರಕಾರವೆ ಚಂಡಮುದ್ದಕೆ ಬಾರಿಸುತ್ತ ಜೈಲಿಗೆ ಅಟ್ಟಬೇಕಾಗಿದೆ. ಏಕೆಂದರೆ ಭಾರತ ಸಂವಿಧಾನವು ಮೂಢನಂಬಿಕೆಗಳನ್ನು ಹಬ್ಬಿಸುವುದು ಹಾಗೂ ಅದನ್ನು ಪೋಷಿಸಿ ಬೆಳೆಸಿಕೊಂಡು ಬರುವುದು ಅಪರಾಧವೆಂದು ಹೇಳಿದೆ.

- ವಿಶ್ವಾರಾಧ್ಯ ಸತ್ಯಂಪೇಟೆ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.



Registered No.KA/RNP/BGS/2036/2011-13 Posted at : GPO, Bangalore-01. Friday R B P LANKESH, Kannada Weekly



ಹೆಣ್ಮಕ್ಕೆ ಸ್ಟ್ರಾಂಗು ಗುರು

[illegible]

'ವಿಶ್ವರೂಪಂ- 2' ಫೆಬ್ರವರಿಯಲ್ಲಿ ತೆರೆಗೆ

ಕಮಲ್ ಹಾಸನ್ ಅವರ 'ವಿಶ್ವರೂಪಂ-2' ಬಿಡುಗಡೆಗೆ ಸಿದ್ಧವಾಗಿದೆ. ಬರುವ ಸಂಕ್ರಾಂತಿಗೆ ಬಿಡುಗಡೆಯಾಗಿ ಕಮಲ್ ಅಭಿಮಾನಿಗಳನ್ನು ರಂಜಿಸಬೇಕಿದ್ದ ಈ ಚಿತ್ರದ ಬಿಡುಗಡೆ ಕಾರ್ಯಕ್ರಮ ಫೆಬ್ರವರಿಗೆ ಹೋಗಿದೆ. ಅಜಿತ್ ಅಭಿನಯದ 'ವೀರನ್' ಹಾಗೂ ವಿಜಯ್ ನಟಿಸಿರುವ 'ಜಿಲ್ಲಾ' ಚಿತ್ರಗಳು ಸಂಕ್ರಾಂತಿಗೆ ತೆರೆ ಕಾಣುತ್ತಿರುವುದು ಈ ಮುಂದೂಡಿಕೆಗೆ ಕಾರಣವಂತೆ. ಈ ಚಿತ್ರದ ವಿತರಣೆಗೆ ಭಾರೀ ಪೈಪೋಟಿ ನಡೆದಿದ್ದು ದೊಡ್ಡಮೊತ್ತದ ಹಣ ನೀಡಲು ಅನೇಕರು ಮುಂದೆ ಬಂದಿದ್ದು ಕರ್ನಾಟಕದಲ್ಲಿ 'ಗಣೇಶ್ ಪಿಕ್ಚರ್ಸ್' ವಿತರಣೆ ಮಾಡುತ್ತಿದ್ದು ಈಗಾಗಲೇ ಚಿತ್ರಮಂದಿರಗಳ ಬುಕ್ಕಿಂಗ್ ಕಾರ್ಯಗಳು ಶುರುವಾಗಿವೆಯಂತೆ.

ಸ್ವತಃ ಕಮಲ ಹಾಸನ್ ಅವರೇ ನಿರ್ದೇಶಿಸಿರುವ 'ವಿಶ್ವರೂಪಂ-2' ಚಿತ್ರ ಹೊಸದೊಂದು ಕ್ರೇಜ್ ಹುಟ್ಟುಹಾಕುವ ಬಗ್ಗೆ ಅನುಮಾನಗಳಿವೆ. ಏಕೆಂದರೆ ಕಳೆದ ವರ್ಷ ಬಿಡುಗಡೆಯಾಗಿ ಭರ್ಜರಿ ಪ್ರಚಾರ ಪಡೆದರೂ ವಿಶ್ವರೂಪಂ ಗೆಲ್ಲಲಿಲ್ಲ, ಆಗ 'ವಿಶ್ವರೂಪಂ' ಚಿತ್ರವು ಭಾರೀ ವಿವಾದವನ್ನೂ ಸೃಷ್ಟಿಸಿದ್ದರ ಜೊತೆಗೆ, ತಮಿಳುನಾಡು ಸರ್ಕಾರದಿಂದ ನಿಷೇಧಕ್ಕೂ ಒಳಗಾಗಿತ್ತು ಎಂಬುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಸದಾ ಹೊಸತನಕ್ಕೆ ತುಡಿಯುವ ಅದ್ಭುತ ಪ್ರತಿಭೆ ಕಮಲ ಹಾಸನ್ ಅವರು ತಮ್ಮ 'ವಿಶ್ವರೂಪಂ- 2' ಮೂಲಕ ಯಾವ ಬಗೆಯ ಪರಿಣಾಮ ಸೃಷ್ಟಿಸಲಿದ್ದಾರೆಂದು ಕಾದುನೋಡಬೇಕಿದೆ. ಈ ಸಿನಿಮಾಗಳಿಗೆ ಕಮಲ್ ತನ್ನೆಲ್ಲಾ ದುಡಿಮೆ ಹಾಗೂ ಆಸ್ತಿಯನ್ನೇ ಪಣಕ್ಕಿಟ್ಟಿರುವುದು ನಿಮಗೆ ನೆನಪಿರಬಹುದು.

ನಿರ್ಮಲಾ... ನಿರ್ಮಲಾ...

ಈ ವಾರ ತೆರೆ ಕಾಣುತ್ತಿರುವ 'ತಲ್ಲಣ' ಚಿತ್ರದಲ್ಲಿ ನಿರ್ಮಲಾ ಅವರದು ಪ್ರಮುಖ ಪಾತ್ರ. ರಂಗಭೂಮಿಯ ಗಟ್ಟಿ ಹಿನ್ನೆಲೆಯುಳ್ಳ ಇವರು ರಂಗಾಯಣ, ನೀನಾಸಂ, ಬೆನಕಗಳ ಮೂಲಕ ಅನೇಕ ನಾಟಕಗಳಲ್ಲಿ ನಟಿಸಿದ್ದಾರೆ. ಅವುಗಳಲ್ಲಿ ಮುಖ್ಯವಾಗಿ, ಗೋಕುಲ ನಿರ್ಗಮನ, ಧರೆಯೊಳಗಣ ರಾಜಕಾರಣ, ಹರಿಣ ಅಭಿಸರಣ, ನೀನಾದರೆ ನಾ ನೀನೇನಾ, ಆಕಾಶ ಬುಟ್ಟಿ, ಜೋಕುಮಾರ ಸ್ವಾಮಿ, ಆಲ್ ದಿ ಬೆಸ್ಟ್, ಸತ್ತವರ ನೆರಳು, ಆಷಾಢದ ಒಂದು ದಿನ, ಹಿಟ್ಟಿನ ಹುಂಜ, ರೋಮಿಯೋ ಜೂಲಿಯೆಟ್ ಒಳಗೊಂಡಂತೆ ಇನ್ನೂ ಹಲವು. ರಂಗಭೂಮಿಗಷ್ಟೇ ಸೀಮಿತವಾಗದ ಇವರು ಕಿರುತೆರೆಯ ಅನೇಕ ಧಾರಾವಾಹಿಗಳಲ್ಲಿ ನಟಿಸಿದ್ದಾರೆ. ಪ್ರಮುಖವಾಗಿ, ಮುತ್ತಿನ ತೋರಣ, ಕಿಚ್ಚು, ಅಗ್ನಿಶಿಖೆ, ರಂಗೋಲಿ, ಕದನ, ಪಾರ್ವತಿ ಪರಮೇಶ್ವರ ಧಾರಾವಾಹಿಗಳನ್ನು ಇಲ್ಲಿ ಹೆಸರಿಸಬಹುದು. ಇನ್ನು ಹಿರಿತೆರೆಯ ವಿಷಯಕ್ಕೆ ಬರುವುದಾದರೆ, 'ತಲ್ಲಣ'ದ



ಜೊತೆಗೆ ಕವಿತಾ ಲಂಕೇಶರ 'ಕರಿಯ ಕಣ್ಬಿಟ್ಟ', ಹಾಗೂ 'ಜಯ' ಚಿತ್ರಗಳಲ್ಲಿ ನಿರ್ಮಲಾ ಅಭಿನಯಿಸಿದ್ದಾರೆ. 'ತಲ್ಲಣ' ಚಿತ್ರದಲ್ಲಿನ ಇವರ ಅಭಿನಯಕ್ಕಾಗಿ ಸಿಗಬೇಕಿದ್ದ 'ರಾಷ್ಟ್ರ ಪ್ರಶಸ್ತಿ' ಸ್ವಲ್ಪದರಲ್ಲಿ ಕೈಜಾರಿತ್ತು, ಇನ್ನು 'ಪಾರ್ವತಿ ಪರಮೇಶ್ವರ' ಧಾರಾವಾಹಿಯ ಪಾತ್ರಕ್ಕಾಗಿ ಮಾಧ್ಯಮದವರು 'ಅತ್ಯುತ್ತಮ ಹಾಸ್ಯ ನಟಿ' ಪ್ರಶಸ್ತಿ ನೀಡಿ ಗೌರವಿಸಿದ್ದಾರೆ. ಅಂದಹಾಗೆ, 'ಆ ದಿನಗಳು', 'ಗುಂಡ್ರುಗೋವಿ', 'ದ್ಯಾವ್ರೇ' ಖ್ಯಾತಿಯ ನಟ ಸತ್ಯ ಇವರ ಜೀವನ ಸಂಗಾತಿ.

ಸುದರ್ಶನ್ 'ತಲ್ಲಣ'

ನಿರ್ದೇಶಕ ಸುದರ್ಶನ್ ಅವರ 'ತಲ್ಲಣ' ಚಿತ್ರ ಈವಾರ ತೆರೆಗೆ ಬರುತ್ತಿದೆ. ಇನ್ನೇನು ರಾಷ್ಟ್ರ ಪ್ರಶಸ್ತಿ ಬಂದೆ ಬಿಟ್ಟಿತು ಅನ್ನುವಷ್ಟರಲ್ಲಿ ಪ್ರಶಸ್ತಿಯಿಂದ ವಂಚಿತವಾದ ಈ ಚಿತ್ರ ಎಂದಿನ ವ್ಯಾಪಾರಿ ಮನೋಧರ್ಮದ ಚಿತ್ರಗಳಿಗಿಂತ ಭಿನ್ನವಾಗಿದ್ದು ಬಿಡುಗಡೆ ಪೂರ್ವದಲ್ಲಿ ಈಗಾಗಲೇ ಚಿತ್ರ ನೋಡಿದ ಹಿರಿಯ ಸಿನಿಮಾ ಮಂದಿಯ ಮನ ಕಲಕಿದೆ. ಸುದರ್ಶನ್ ಅವರು ಆಯ್ಕೆ ಮಾಡಿಕೊಂಡಿರುವ ಕಥಾವಸ್ತು ನಿರೂಪಣಾ ಶೈಲಿಯಲ್ಲಿನ ವಿಭಿನ್ನತೆ ಚಿತ್ರದ ಪ್ಲಸ್ ಪಾಯಿಂಟ್. ತನ್ನ ಹನ್ನೆರಡು ವರ್ಷದ ಮಗಳು ಕಾಣೆಯಾದಾಗ ತಾಯಿಯೊಬ್ಬಳ ಚಡಪಡಿಕೆ, ಹುಡುಕಾಟದಲ್ಲಿನ ಹೃದಯಸ್ಪರ್ಶಿ ಸಂಗತಿಗಳು ಚಿತ್ರದ ಹೈಲೈಟ್ ಎನ್ನುವುದು ನಿರ್ದೇಶಕರ ಅಭಿಪ್ರಾಯ. ಪ್ರಸ್ತುತ ಬದುಕನ್ನು ಯಥಾವತ್ತಾಗಿ ತೆರೆಯ ಮೇಲೆ ತರುವ ಪ್ರಯತ್ನದಲ್ಲಿ ನಾಟಕೀಯತೆಯನ್ನು ಆದಷ್ಟು ಅವಾಯ್ಡ್ ಮಾಡಲು ಸುದರ್ಶನ್ ಪ್ರಯತ್ನಿಸಿದ್ದಾರಂತೆ. ಹೆಣ್ಣುಮಕ್ಕಳ ಬದುಕಿನ ಭದ್ರತೆ, ಅವರ ಆಂತರಿಕ ತೊಳಲಾಟಗಳಿಗೆ ಸೂಕ್ತ ಪರಿಹಾರ ಹುಡುಕುವಲ್ಲಿ ಈ ಚಿತ್ರ ಕಥಾವಸ್ತು ಚಿಂತನೆಗೆ ಹಚ್ಚುವುದರಲ್ಲಿ ಯಾವುದೇ ಸಂಶಯವಿಲ್ಲ ಅನ್ನೋದು ನಿರ್ದೇಶಕರ ಮಾತು. ನಿರ್ಮಲಾ, ಅನಿಲ್, ಶ್ರೀಧರ್, ನಾಗೇಂದ್ರ ಷಾ ಪ್ರಮುಖ ತಾರಾಗಣದಲ್ಲಿರುವ ಈ ಚಿತ್ರ ಪ್ರಯೋಗಾತ್ಮಕ ಚಿತ್ರವಾಗಿದ್ದು, ಕನ್ನಡ ಪ್ರೇಕ್ಷಕರಿಗೆ ಬೇರೆ ತರನಾದ ಸಿನಿಮಾವಾಗಿ ಅನ್ನಿಸುವುದರಲ್ಲಿ ಯಶಸ್ವಿಯಾಗುತ್ತದೆಂಬ ಮಾತುಗಳು ಕೇಳಿಬರುತ್ತಿವೆ. ಅಂದಹಾಗೆ, ನಿರ್ದೇಶಕ ಸುದರ್ಶನ್ ಈ ಮೊದಲು 'ಮುಖಾಮುಖಿ' ಎನ್ನುವ ಚಿತ್ರವನ್ನು ನಿರ್ದೇಶಿಸಿ ಆ ಚಿತ್ರದ ತಮ್ಮ ಸಂಭಾಷಣೆಗಾಗಿ ರಾಜ್ಯ ಪ್ರಶಸ್ತಿ ಗಳಿಸಿದ್ದರು.

ಸದ್ದಿಲ್ಲದೇ 'ಶ್ವೇತ'ಯಾನ

ಫಣಿ ರಾಮಚಂದ್ರ ಅವರ 'ಬೀದಿಗೆ ಬಿದ್ದವರು' ಧಾರಾವಾಹಿ ಮೂಲಕ ಪ್ರಸಿದ್ಧಿ ಪಡೆದು ನಂತರ 'ಸಿರಿವಂತ', 'ಸಂತ', 'ಸೇವಂತಿ ಸೇವಂತಿ', 'ಸ್ವಾಮಿ' ಸೇರಿದಂತೆ ಅನೇಕ ಸಿನಿಮಾಗಳಲ್ಲಿ ನಟನಾಗಿ ತಮ್ಮ ಪ್ರತಿಭೆ ತೋರಿಸಿರುವ ರಾಜೇಶ್ ಬಲಿಪ ಎನ್ನುವ ಯುವಕ ಸದ್ದಿಲ್ಲದೇ ತಮ್ಮ ಚೊಚ್ಚಲ ನಿರ್ದೇಶನದ 'ಶ್ವೇತ' ಚಿತ್ರದ ಶೂಟಿಂಗ್‌ನಲ್ಲಿ ತೊಡಗಿಸಿಕೊಂಡಿದ್ದಾರೆ. ಕೆ.ಆರ್.ಪುರಂನ ಸ್ಟುಡಿಯೋವೊಂದರಲ್ಲಿ ಬಿಡುವಿಲ್ಲದೆ ಚಿತ್ರೀಕರಣಗೊಳ್ಳುತ್ತಿರುವ ಈ ಚಿತ್ರ ಹಾರರ್ ಬೇಸ್ಡ್ ಕಥೆಯಾಗಿದ್ದು ಕನ್ನಡಕ್ಕೆ ವಿಭಿನ್ನ ಪ್ರಯೋಗವೆನಿಸಲಿದೆ ಎನ್ನುವುದು ನಿರ್ದೇಶಕರ ಅಂಬೋಣ. ಒಬ್ಬ ಹುಡುಗಿಯ ಸುತ್ತ ನಡೆಯುವ ಈ ಸಿನಿಮಾದಲ್ಲಿ ಕ್ಷಣಕ್ಷಣಕ್ಕೂ ಕುತೂಹಲ ಕೆರಳಿಸುವ ಚಿತ್ರಕಥೆ ಇದ್ದು ಪ್ರೇಕ್ಷಕರ ಮನಸಿನಲ್ಲಿ ಹೊಸಬಗೆಯ ಥ್ರಿಲ್ ಉಂಟು ಮಾಡಲಾಗುವುದು ಎಂಬುದಾಗಿಯೂ ನಿರ್ದೇಶಕರು ಮಾತು ಸೇರಿಸಿದರು. ಅಂದಹಾಗೆ, ಈ ಚಿತ್ರದಲ್ಲಿ ಅಕ್ಷತಾ ಮಾರ್ಲಾ, ಜಯಶೀಲ ಗೌಡ, ಪ್ರಣವ್ ಪ್ರಮುಖ ಪಾತ್ರಗಳಲ್ಲಿ ನಟಿಸುತ್ತಿದ್ದು, ಹೊಸೂರಿನ ಬಿಲ್ಡರ್ ರಾಮಚಂದ್ರ ರೆಡ್ಡಿಯವರು ಹಣ ಹಾಕುತ್ತಿದ್ದಾರೆ. ಇನ್ನು, ಸುಂದರನಾಥ ಸುವರ್ಣ ಅವರ ಬಳಿ ಅನೇಕ ಚಿತ್ರಗಳಲ್ಲಿ ಕೆಲಸ ಮಾಡಿದ ನಾಗರಾಜ್ ಎನ್ನುವವರು ಈ ಚಿತ್ರದ ಕ್ಯಾಮೆರಾಮ್ಯಾನ್. ಇವರು ಈಗಾಗಲೇ 'ಪ್ರೇಮ ಪಲ್ಲಕ್ಕಿ' ಎನ್ನುವ ಸಿನಿಮಾಗೂ ಕ್ಯಾಮೆರಾ ಹಿಡಿದಿದ್ದಾರೆ. ಇಷ್ಟು ಕಾಲ ನಟನಾಗಿದ್ದು ಈಗ ನಿರ್ದೇಶಕನಾಗುವ ಮೂಲಕ ತಮ್ಮ ಅದೃಷ್ಟ ಪರೀಕ್ಷಿಸಿಕೊಳ್ಳಲು ಹೊರಟಿರುವ ರಾಜೇಶ್ ಬಲಿಪ ಅವರಿಗೆ ಈ ಮೂಲಕ ಶುಭಾಶಯ ಹೇಳೋಣ.






'ಕರಿಯ ಕಣ್ಬಿಟ್ಟ' ಚಿತ್ರದ ವಿಜೆ, ಲೂಸ್ ಮತ್ತು ...

[illegible]

ಈ ಮೂವರು ಹೀರೋಗಳಲ್ಲದೆ ಖ್ಯಾತ ನಟ [illegible] ಪ್ರಕಾಶ್ ಕೂಡ ಈ ಚಿತ್ರದಲ್ಲಿ ನಟಿಸಿದ್ದಾರೆ.

[illegible]



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com